# 18ನೇ ವಾರ್ಷಿಕ ವರದಿ

# 2016-17

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

CIN : U40109KA1999SGC025521

# ಪರಿವಿಡಿ


1. ನಿರ್ದೇಶಕರ ವರದಿ ........................................................................ 5

2. ಲೆಕ್ಕ ಪರಿಶೋಧಕರ ವರದಿ
   1. ಶಾಸನಬದ್ಧ ಲೆಕ್ಕ ಪರಿಶೋಧಕರು ................................................... 122
   2. ಸೆಕ್ರೆಟರಿಯಲ್ ಆಡಿಟರ್ಸ್ ......................................................... 144

3. ಭಾರತ ಸರ್ಕಾರದ ನಿಯಂತ್ರಕರು ಮತ್ತು
   ಮಹಾಲೇಖಪಾಲರ ಅಭಿಪ್ರಾಯಗಳು .................................................. 149

4. ಆಯವ್ಯಯ ಪಟ್ಟಿ ............................................................................ 152

5. ವರ್ಷಾಂತ್ಯದ ಲಾಭ ಮತ್ತು ನಷ್ಟಗಳ ಲೆಕ್ಕ ................................................ 153

6. ಟಿಪ್ಪಣಿಗಳು ................................................................................ 157

# ನಿರ್ದೇಶಕ ಮಂಡಳಿ

**ನಿರ್ದೇಶಕರುಗಳ ಪಟ್ಟಿ (ವಾರ್ಷಿಕ ಸಾಮಾನ್ಯ ಸಭೆಯಂದು ಇದ್ದಂತೆ)**

| ಕ್ರಮ ಸಂಖ್ಯೆ | ಹೆಸರು | ಪದನಾಮ |
|---|---|---|
| 1. | ಶ್ರೀ ಡಿ.ಕೆ. ಶಿವಕುಮಾರ್ | ಅಧ್ಯಕ್ಷರು |
| 2. | ಶ್ರೀ ಜಾವೇದ್ ಅಖ್ತರ್, ಭಾ.ಆ.ಸೇ., | ವ್ಯವಸ್ಥಾಪಕ ನಿರ್ದೇಶಕರು |
| 3. | ಶ್ರೀ ಪಿ. ರವಿಕುಮಾರ್, ಭಾ.ಆ.ಸೇ., | ಸ್ವಾಯತ್ತ ನಿರ್ದೇಶಕರು |
| 4. | ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ., | ಸ್ವಾಯತ್ತ ನಿರ್ದೇಶಕರು |
| 5. | ಶ್ರೀ ಜಿ. ಕುಮಾರ್ ನಾಯಕ್, ಭಾ.ಆ.ಸೇ., | ಸ್ವಾಯತ್ತ ನಿರ್ದೇಶಕರು |
| 6. | ಶ್ರೀ ಎಲ್.ಕೆ.ಅತಿಕ್, ಭಾ.ಆ.ಸೇ., | ಸ್ವಾಯತ್ತ ನಿರ್ದೇಶಕರು |
| 7. | ಶ್ರೀ ಟಿ.ಎಚ್.ಎಂ. ಕುಮಾರ್, ಭಾ.ಆ.ಸೇ., | ಸ್ವಾಯತ್ತ ನಿರ್ದೇಶಕರು |
| 8. | ಡಾ॥ ಅದಿತಿ ರಾಜ | ನಿರ್ದೇಶಕರು (ಹಣಕಾಸು) |
| 9. | ಶ್ರೀ ಆರ್. ಶ್ರೀಧರ | ನಿರ್ದೇಶಕರು ಹಾಗೂ ಕಂಪನಿ ಕಾರ್ಯದರ್ಶಿ |
| 10. | ಶ್ರೀ. ಹೆಚ್. ನಾಗೇಶ್ | ನಿರ್ದೇಶಕರು (ಪ್ರಸರಣ) |
| 11. | ಶ್ರೀ ಎಂ. ರಾಮಕೃಷ್ಣ | ನಿರ್ದೇಶಕರು (ಆ ಮತ್ತು ಮಾ.ಸಂ) |
| 12. | ಶ್ರೀ ಎಸ್.ಪಿ. ಸಕ್ಕರಿ | ನಿರ್ದೇಶಕರು |
| 13. | ಶ್ರೀ ಎ.ಎನ್. ಜಯರಾಜ್ | ನಿರ್ದೇಶಕರು |
| 14. | ಶ್ರೀ ಟಿ.ಆರ್.ರಾಮಕೃಷ್ಣಯ್ಯ | ನಿರ್ದೇಶಕರು |
| 15. | ಶ್ರೀ ಶ್ರೀನಿವಾಸ್ ಎಂ.ಎನ್. | ಸ್ವಾಯತ್ತ ನಿರ್ದೇಶಕರು |
| 16. | ಶ್ರೀ ಎ.ಎಮ್. ಮಹಾದೇವ ಪ್ರಸಾದ್ | ಸ್ವಾಯತ್ತ ನಿರ್ದೇಶಕರು |
| 17. | ಶ್ರೀ ದೀಪಕ್ ರಾಜಾರಾಂ ಹೆಗ್ಗಡೆ | ನಿರ್ದೇಶಕರು |
| 18. | ಶ್ರೀ ಬಿ.ವಿ.ಮುನೇಗೌಡ | ನಿರ್ದೇಶಕರು |
| 19. | ಶ್ರೀ ಕೆ.ಪಿ.ಸಂಪತ್ ಕುಮಾರ್ | ನಿರ್ದೇಶಕರು |
| 20. | ಶ್ರೀ ಶಿವಶಂಕರ ಸೋಮಲಿಂಗಪ್ಪ ಮಲಗಳಿ | ನಿರ್ದೇಶಕರು |
| 21. | ಶ್ರೀ ಮರ್ಘೂರ್ ಅಲಂ ಖಾನ್ | ನಿರ್ದೇಶಕರು |
| 22. | ಶ್ರೀ ಎನ್. ಜ್ಯೋತಿ ಪ್ರಕಾಶ್ | ನಿರ್ದೇಶಕರು |
| 23. | ಶ್ರೀ ಎಸ್. ಆನಂದ ಪ್ರಸಾದ್ | ನಿರ್ದೇಶಕರು |
| 24. | ಶ್ರೀ ಟಿ.ಎನ್.ರಮೇಶ್ | ನಿರ್ದೇಶಕರು |
| 25. | ಶ್ರೀ ಎಸ್. ಶ್ರೀನಿವಾಸ ರಾಜು | ನಿರ್ದೇಶಕರು |

## ಶಾಸನಬದ್ಧ ಲೆಕ್ಕ ಪರಿಶೋಧಕರು

**ಮೆ॥ ಬಿ.ಪಿ. ರಾವ್ ಅಂಡ್ ಕಂಪನಿ,**

**ಸನ್ನದಿತ ಲೆಕ್ಕಿಗರು, ಬೆಂಗಳೂರು**

## ವೆಚ್ಚ ಲೆಕ್ಕ ಪರಿಶೋಧಕರು

**ಮೆ॥ ಎನ್.ಎಸ್. ಅಂಡ್ ಅಸೋಸಿಯೇಟ್ಸ್,**

**ವೆಚ್ಚ ಲೆಕ್ಕ ಪರಿಶೋಧಕರ, ಬೆಂಗಳೂರು**

## ಸೆಕ್ರೆಟೇರಿಯಲ್ ಆಡಿಟರ್ಸ್

**ಶ್ರೀ.ಎಸ್. ವಿಶ್ವನಾಥನ್,**

**ಅಭ್ಯಾಸ ನಿರತ ಕಂಪನಿ ಕಾರ್ಯದರ್ಶಿ, ಬೆಂಗಳೂರು**

# ನಿರ್ದೇಶಕರ ವರದಿ

ಆತ್ಮೀಯ ಸದಸ್ಯರೆ,

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮನಿಯಮಿತದ ನಿರ್ದೇಶಕರ ಮಂಡಳಿಯು ದಿನಾಂಕ: 31 ಮಾರ್ಚ್ 2017 ಕ್ಕೆ ಅಂತ್ಯಗೊಂಡ 18ನೆಯ ವಾರ್ಷಿಕ ವರದಿ ಹಾಗೂ ಪರಿಶೋಧಿತ ಆರ್ಥಿಕ ನಿರೂಪಣಾ ವರದಿಗಳನ್ನು ಅಪಾರ ಸಂತಸದಿಂದ ಪ್ರಸ್ತುತ ಪಡಿಸುತ್ತದೆ.

**ಆರ್ಥಿಕ ಸ್ಥಿತಿ:**

31 ಮಾರ್ಚ್, 2017ರಂದಿಗೆ ಅಂತ್ಯಗೊಂಡಂತೆ, ಹಿಂದಿನ ಮೂರು ವರ್ಷಗಳ ಕಂಪನಿಯ ಆರ್ಥಿಕ ಸ್ಥಿತಿ ಹೀಗಿದೆ:

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವಿವರಗಳು | 2014-15 | 2015-16 | 2016-17 |
|---|---|---|---|---|
| | **ಆಸ್ತಿಗಳು** | | | |
| ಎ) | ಒಟ್ಟು ಆಸ್ತಿ | 13 12 273.92 | 14 09 278.13 | 15 05 191.81 |
| ಬಿ) | ಕಳೆದು: ಸವಕಳಿ | 4 72 279.44 | 5 36 631.87 | 6 01 321.91 |
| ಸಿ) | ನಿವ್ವಳ ಆಸ್ತಿ | 8 39 994.48 | 8 72 646.26 | 9 03 869.90 |
| ಡಿ) | ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 1 71 491.62 | 2 13 555.88 | 3 16 216.60 |
| ಇ) | ಇತರ ಪ್ರಸಕ್ತ, ಪ್ರಸಕ್ತೇತರ ಆಸ್ತಿಗಳು, ಅಲ್ಪಾವಧಿ, ದೀರ್ಘಾವಧಿ ಸಾಲಗಳು ಹಾಗೂ ಮುಂಗಡಗಳು, ವ್ಯವಹರಣೆ ಸ್ವೀಕೃತಿಗಳು ಮತ್ತು ನಗದು ಸಮಾನ ರೂಪ | 2 31 559.55 | 2 43 515.93 | 2 07 643.11 |
| ಎಫ್) | ಇತರೆ ಖರ್ಚುಗಳು | | | |
| | ಒಟ್ಟು | **12 43 045.65** | **13 29 718.07** | **14 27 729.61** |
| | **ಹೊಣೆಗಾರಿಕೆಗಳು** | | | |
| (ಜಿ) | ಸಂದಾಯಿತ ಬಂಡವಾಳ(ಷೇರು ಠೇವಣಿಯನ್ನೂ ಒಳಗೊಂಡು) | 2 09 532.25 | 2 18 232.25 | 2 18 232.25 |
| (ಎಚ್) | ಮೀಸಲು ಮತ್ತು ಅಧಿಕ್ಯ | 40 680.73 | 58 492.16 | 1 88 155.76 |
| (ಐ) | ಸಾಲ | | | |
| | ಕರ್ನಾಟಕ ಸರ್ಕಾರ | 534.19 | 356.44 | 297.04 |
| | ಸಾರ್ವಜನಿಕ ಬಾಂಡುಗಳು | | | |
| | ಖಾಸಗಿ ಬಾಂಡುಗಳು | | | |
| | ಆರ್ಥಿಕ ಸಂಸ್ಥೆಗಳು ಹಾಗೂ ಬ್ಯಾಂಕುಗಳು | 4 29 018.29 | 4 20 264.31 | 4 36 220.03 |
| | ಬ್ಯಾಂಕುಗಳಿಂದ ನಗದು ಕ್ರೆಡಿಟ್ | | | |
| | ಇತರೆ ನಿಧಿ | | | |
| ಜೆ) | ಇತರ ದೀರ್ಘಾವಧಿ, ಇತರ ಪ್ರಸಕ್ತ ಹೊಣೆಗಾರಿಕೆಗಳು, ಅಲ್ಪಾವಧಿ, ದೀರ್ಘಾವಧಿ ಅವಕಾಶಗಳು ಹಾಗೂ ಇತರ ಹೊಣೆಗಾರಿಕೆಗಳು (ಸಂಚಿತ ಬಡ್ಡಿ ಹಾಗೂ ಬಾಕಿಯನ್ನೂ ಒಳಗೊಂಡು) | 5 63 280.19 | 6 32 372.91 | 5 84 824.53 |
| | ಒಟ್ಟು | **12 43 045.65** | **13 29 718.07** | **14 27 729.61** |
| | ಹೂಡಿದ ಬಂಡವಾಳ | 7 34 951.99 | 7 40 902.70 | 10 00 222.94 |
| | ನಿವ್ವಳ ಮೌಲ್ಯ | **2 50 204.18** | **2 76 724.41** | **4 06 388.01** |

ಟಿಪ್ಪಣಿ:

1) ಹೂಡಿದ ಬಂಡವಾಳವು, ಪ್ರಗತಿಯಲ್ಲಿರುವ ಬಂಡವಾಳ ಹಾಗೂ ಕಾರ್ಯಶೀಲ ಬಂಡವಾಳವನ್ನೂ ಒಳಗೊಂಡ ನಿವ್ವಳ ಸ್ಥಿರಾಸ್ತಿಗಳನ್ನು ಪ್ರತಿನಿಧಿಸುತ್ತದೆ.

2) ನಿವ್ವಳ ಮೌಲ್ಯವು, ಅಗೋಚರ ಆಸ್ತಿಗಳ ಮೌಲ್ಯವನ್ನು ಕಡೆದ/ಕಡಿಮೆಗೊಳಸಿದ ಸಂದಾಯಿತ ಬಂಡವಾಳ, ಮೀಸಲು ಮತ್ತು ಅಧಿಕ್ಯವನ್ನು ಪ್ರತಿನಿಧಿಸುತ್ತದೆ.

**ಕಾರ್ಯಶೀಲ ಫಲಿತಾಂಶ:**

31 ಮಾರ್ಚ್, 2017ರಂದಿಗೆ ಅಂತ್ಯಗೊಂಡಂತೆ, ಹಿಂದಿನ ಮೂರು ವರ್ಷಗಳ ಕಂಪನಿಯ ಕಾರ್ಯಶೀಲ ಫಲಿತಾಂಶ ಹೀಗಿದೆ:

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವಿವರಗಳು | 2014-15 | 2015-16 | 2016-17 |
|---|---|---|---|---|
| i) | ಪ್ರಸಕ್ತ ವರ್ಷಕ್ಕೆ ಲಾಭ(+) / ನಷ್ಟ(–) | 15 603.36 | 25 898.90 | 1 81 650.93 |
| ii) | ಪೂರ್ವಾವಧಿ ಹೊಂದಾಣಿಕೆಗಳು | - 5 500.43 | - 2 945.67 | 9 857.14 |
| iii) | ತೆರಿಗೆಗೆ ಮುಂಚಿನ ಲಾಭ(+) / ನಷ್ಟ(–) | 10 102.93 | 22 953.23 | 1 91 508.07 |
| iv) | ತೆರಿಗೆಯ ಹವಣಿಕೆ | 2 186.26 | 5 141.80 | 61 844.47 |
| v) | ತೆರಿಗೆಯ ನಂತರದ ಲಾಭ(+) / ನಷ್ಟ(–) | 7 916.68 | 17 811.43 | 1 29 663.60 |
| vi) | ಕೆಳಕಂಡವುಗಳಿಗೆ, ತೆರಿಗೆಗೆ ಮುಂಚಿನ ಶೇಕಡಾ ಲಾಭ | | | |
| | ಎ) ಮಾರಾಟ | 4.35 | 8.45 | 59.75 |
| | ಬಿ) ಒಟ್ಟು ಸ್ಥಿರ ಆಸ್ತಿಗಳು | 0.77 | 1.63 | 12.72 |
| | ಸಿ) ಹೂಡಿದ ಬಂಡವಾಳ | 1.37 | 3.10 | 19.15 |
| vii) | ಕೆಳಕಂಡವುಗಳಿಗೆ, ತೆರಿಗೆಯ ನಂತರದ ಶೇಕಡಾ ಲಾಭ | | | |
| | ಎ) ನಿವ್ವಳ ಮೌಲ್ಯ | 3.16 | 6.44 | 31.91 |
| | ಬಿ) ಸ್ವಾಮ್ಯ ಬಂಡವಾಳ | 3.78 | 8.16 | 59.42 |
| | ಸಿ) ಹೂಡಿದ ಬಂಡವಾಳ | 1.08 | 2.40 | 12.96 |

**ಸ್ವಾಮ್ಯ:** (ರೂ. ಕೋಟಿಗಳಲ್ಲಿ)

| ವಿವರ | 31.03.2016ರಂದಿಗೆ | 31.03.2017ರಂದಿಗೆ |
|---|---|---|
| ಸ್ವಾಮ್ಯ ಷೇರು ಬಂಡವಾಳ | 2182.32 | 2182.32 |
| ಸಾಲ | 4825.53 | 4968.20 |
| ಸಾಲ ಸ್ವಾಮ್ಯ ಅನುಪಾತ | 2.21 : 1 | 2.28 : 1 |

**ಲೆಕ್ಕ ಪದ್ಧತಿ ತತ್ವಗಳು:**

ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯವು ತನ್ನ ಅಧಿಸೂಚನೆ ದಿನಾಂಕ:16.02.2015ರ ಮೂಲಕ ಅಂತರಾಷ್ಟ್ರೀಯ ಆರ್ಥಿಕ ವರದಿ ಮಾನದಂಡ (International Financial Reporting Standards -IFRS) ದೊಂದಿಗೆ ಹೊಂದಾಣಿಕೆಯಾಗುವ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು (Ind-AS) ಹೊರಡಿಸಿತು. ಮೊದಲ ಹಂತದಲ್ಲಿ, ಷೇರುಪಟ್ಟಿಯಲ್ಲಿ ನೊಂದಾಯಿಸಲ್ಪಟ್ಟ ಎಲ್ಲಾ ಅಥವಾ ನೊಂದಾಯಿಸಲ್ಪಡದ ಕಂಪನಿಗಳು ದಿನಾಂಕ:31.03.2014ರಲ್ಲಿದ್ದಂತೆ 500 ಕೋಟಿ ಅಥವಾ ಅದಕ್ಕಿಂತ ಹೆಚ್ಚು ನಿವ್ವಳ ಮೌಲ್ಯ ಹೊಂದಿರುವ (ಅವುಗಳ ಹಿಡುವಳಿಗಳು, ಅಂಗಸಂಸ್ಥೆಗಳು, ಜಂಟಿ ಉದ್ಯಮಗಳು ಅಥವಾ ಸಂಯೋಜಿತ ಕಂಪನಿಗಳೊಂದಿಗೆ ಸೇರಿ) ಎಲ್ಲಾ ಕಂಪನಿಗಳು 1.4.2016ರಂದು ಅಥವಾ ಆನಂತರ ಪ್ರಾರಂಭವಾಗುವ ಲೆಕ್ಕಪತ್ರದ ಅವಧಿಗಳಿಗಾಗಿ Ind-AS ಅನ್ನು ಮತ್ತು 31.03.2016ರಂದು ಮುಕ್ತಾಯಗೊಳ್ಳುವ ವರ್ಷಕ್ಕೆ Ind-ASನಡಿ ಪ್ರಸ್ತುತ ತುಲನಾತ್ಮಕ ಆರ್ಥಿಕ ಮಾಹಿತಿಯನ್ನು ಅಳವಡಿಸಿಕೊಳ್ಳುವುದು ಅಗತ್ಯ. ದಿನಾಂಕ:31.03.2014ರಲ್ಲಿದ್ದಂತೆ ಕವಿಪ್ರನಿನಿಯಲ್ಲಿ ರೂ.1575 ಕೋಟಿಗಳ ಷೇರು ಬಂಡವಾಳವನ್ನು ಹೊಂದಿದ್ದು ಹಾಗೂ ರೂ.351 ಕೋಟಿಗಳ ಮೀಸಲು ಮತ್ತು ಅಧಿಕ್ಯವನ್ನು ಹೊಂದಿರುತ್ತದೆ. ಆದುದರಿಂದ, ಕವಿಪ್ರನಿನಿಯು 01.04.2016ರಿಂದ ಜಾರಿಗೆ ಬರುವಂತೆ Ind-ASನ್ನು ಅಳವಡಿಸಿಕೊಳ್ಳಬೇಕಾದದ್ದು ಕಡ್ಡಾಯ. Ind-ASನ

ಅನುಷ್ಠಾನದ ಪರಿಣಾಮವಾಗಿ ಲೆಕ್ಕಪತ್ರ ತತ್ವಗಳ ಮೇಲೆ ಆಗುವ ಸೇರ್ಪಡೆ/ಮಾರ್ಪಾಡುಗಳು ಈ ಕೆಳಕಂಡಂತಿವೆ.

**1.1 ಆರ್ಥಿಕ ಪಟ್ಟಿ ತಯಾರಿಕೆಯ ಮೂಲ:**

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS) ಅನುಗುಣವಾಗಿ ಐತಿಹಾಸಿಕ ವೆಚ್ಚ (Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ) ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3 ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ತಿದ್ದುಪಡಿ ನಿಯಮಗಳು, 2016ರಂತೆ, ಅಧಿನಿಯಮದ ಪ್ರಕರಣ 133ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. 31.03.2016ಕ್ಕೆ ಅಂತ್ಯಗೊಂಡಂತಹ ಅವಧಿಯ ಆರ್ಥಿಕ ಪಟ್ಟಿಗಳನ್ನು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ (ಹಿಂದಿನ ಭಾರತೀಯ ಜಿಎಎಪಿ) ನಿಯಮ 7ರೊಂದಿಗೆ ಓದಲಾದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರಡಿಯಲ್ಲಿ ಅಧಿಸೂಚಿತವಾದ ಲೆಕ್ಕಪತ್ರ ಮಾನದಂಡಗಳಿಗನುಗುಣವಾಗಿ ಸಿದ್ಧಪಡಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯವು ಅಧಿಸೂಚಿಸಿದಂತೆ, ಕಡ್ಡಾಯ ಅವಶ್ಯಕತೆಗನುಸಾರವಾಗಿ, ಕಂಪನಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳ) ನಿಯಮಗಳು, 2015ರಡಿಯಲ್ಲಿ ಅಧಿಸೂಚಿತವಾದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS 101– ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆ) ಅನುಗುಣವಾಗಿ 31.03.2017ಕ್ಕೆ ಅಂತ್ಯವಾಗುವ ವರ್ಷಕ್ಕೆ ತನ್ನ ಆರ್ಥಿಕ ಪಟ್ಟಿಗಳನ್ನು ಸಿದ್ಧಪಡಿಸಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳಲ್ಲಿ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಪುನಃಸ್ಥಾಪಿಸಿ ಮಂಡಿಸಲಾಗಿದೆ. ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳಿಂದ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಸಹ ತಿಳಿಸಲಾಗಿದೆ. ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವುದರಿಂದ, ಮೊದಲನೇ ದಿನಾಂಕದಿಂದ (ವ್ಯವಹಾರದ ಮೊದಲ ದಿನಾಂಕವಾದ 1ನೇ ಏಪ್ರಿಲ್, 2015ನ್ನು ಪರಿವರ್ತನ ದಿನಾಂಕವೆಂದು ಪರಿಗಣಿಸಿದೆ) ತುಲನಾತ್ಮಕ ಆಯವ್ಯಯ ಪಟ್ಟಿ ಭಾರತೀಯ ಲೆಕ್ಕಪತ್ರ ಮಾನದಂಡಗಳಡಿ ಸಿದ್ಧಪಡಿಸಲಾಗಿದೆ.

ಸಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅದೃಶ್ಯವಿರುವ ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳಿಗೆ ಪುನರಾವರ್ತನೆಯಾಗಿದೆಯೋ ಅಂತಹ ಸ್ಥಳಗಳನ್ನು ಬಿಟ್ಟು ಉಳಿದಿರುವೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಡಿ. ನಿಗಮದ ಕಾರ್ಯಾಚರಣೆ ಕಾಲಚಕ್ರವನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

**1.2 ಅಂದಾಜು ಪಟ್ಟಿಗಳ ಉಪಯೋಗ:**

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜು ಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ

ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಸುವಿಕೆಗೆ ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳಲ್ಲಿ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

ಲೆಕ್ಕ ಶೀರ್ಷಿಕೆ "ಸಾಮಗ್ರಿಗಳ ಸರಬರಾಜಿನಲ್ಲಿ ಹಕ್ಕುಬಾಧ್ಯತೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ನಿಯಂತ್ರಣ ಲೆಕ್ಕಪತ್ರ"ದಡಿಯಲ್ಲಿ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, ಯಾವುದೇ ಕ್ಲೇಮು ಮಾಡಿಲ್ಲದ ಹಕ್ಕುಬಾಧ್ಯತೆ/ಚಾಲ್ತಿಯಲ್ಲಿರುವ ಹಕ್ಕುಬಾಧ್ಯತೆಗಳು, ಯಾವುದೇ ವಿವಾದವಿಲ್ಲದೇ 10 ವರ್ಷಗಳಗೂ ಮೀರಿದ ಅವಧಿಗೆ ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದಲ್ಲಿದ್ದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವುದು ಮುಂದುವರಿದರೆ, ಅವುಗಳನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗುವುದು.

**1.3 ದಾಸ್ತಾನುಗಳ ಮೌಲ್ಯೀಕರಣ:**

**ಎ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ. ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.**

**ಬಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.**

ಸಿ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ ೯೦ರ ದರದ ಪ್ರಕಾರ ಇಳತಗೊಳಸಿ, ಉಳದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

ಡಿ. ಬಳಕೆಯಲ್ಲಿಲ್ಲದ ಸ್ವತ್ತುಗಳ ತಗ್ಗಿದ ಮೌಲ್ಯದ ಮೇಲೆ ೮೦%ರಷ್ಟು ದರದಂತೆ, ಬಳಕೆಯಲ್ಲಿಲ್ಲದ/ನಿರುಪಯುಕ್ತ ಸ್ವತ್ತುಗಳ ಮೇಲೆ, ನಿರ್ಧಿಷ್ಟವಲ್ಲದ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗಿದೆ.

**1.4 ನಗದು ಹರಿವಿನ ವಿವರಣಾ ಪಟ್ಟಿ:**

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು –ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಗೆ, ಯಾವುದೇ ಮೂಂದೂಡಲ್ಪಡದ ಬಹುದಾದ ಅಥವಾ ಹಿಂದಿನ ಅವಧಿಯ ಸಂಚಯನಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಹೊಂದಿರುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

**1.5 ಹಿಂದಿನ ಅವಧಿಯ ಬಾಬ್ತುಗಳು:**

**ಕಂಪನಿಯು,–ಹಿಂದಿನ ಅವಧಿಯ ಗಣನೀಯವಾದ ತಪ್ಪುಗಳನ್ನು ಅವಿಷ್ಕಾರಗೊಂಡಾಗ ಅವುಗಳನ್ನು ಪೂರ್ವಾನ್ವಯವಾಗಿ ಮೊದಲ ಆರ್ಥಿಕ ವಿವರಣಾ ಪಟ್ಟಿಯ ಅನುಮೋದನೆ ನೀಡುವಾಗ ಈ ಕೆಳಕಂಡಂತೆ ಸರಿಪಡಿಸಲಾಗುವುದು.**

ಎ) ತಪ್ಪು ಸಂಭವಿಸಿದ ಅವಧಿಯ/ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು ಅಥವಾ

ಬಿ) ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳೂ, ಬಾಧ್ಯತೆಗಳು ಮತ್ತು ಸ್ವಾಮ್ಯಗಳ ಪ್ರಾರಂಭಿಕ ಉಳಿಕೆಗಳನ್ನು ಪುನ: ಮಂಡಿಸುವುದು.

**1.6 ಆದಾಯ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ**

ಪ್ರಸ್ತುತ ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ. ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ. ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳಲಾಭದಿಂದ ಕಂಡುಹಿಡಿಯಲಾಗುತ್ತದೆ. ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಃಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ ಕಂಡುಹಿಡಿಯಲಾಗುತ್ತದೆ. ವರದಿ ಮಾಡುವ ಪ್ರತೀ ದಿನಾಂಕದಂದು ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳನ್ನು ಪುನರ್ ಪರಿಶೀಲನೆ ಮಾಡಲಾಗುತ್ತದೆ ಮತ್ತು ಅದನ್ನು ಸಂಬಂಧಪಟ್ಟ ತೆರಿಗೆ ಲಾಭವನ್ನು ಅರಿಯುವ ಸಂಭವವಿಲ್ಲ ಎಂಬುವಷ್ಟರ ಮಟ್ಟಿಗೆ ಕಡಿಮೆಗೊಳಿಸಲಾಗುತ್ತದೆ. ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಬ್ಯಾಲೆನ್ಸ್ ಶೀಟ್‌ನ ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತಿ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತಿ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ. ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರಮಟ್ಟಿಗೆ ಕಂಡುಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ. ಇದಕ್ಕೆ ಪ್ರತಿಯಾಗಿ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

**1.7 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)**

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿ ಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ. ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ,ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಬೃಹತ್ ಕಾಮಗಾರಿ ವಿಭಾಗದ ಸಿಬ್ಬಂದಿ ವೆಚ್ಚ ಮತ್ತು ಸವಕಳಿ ವೆಚ್ಚಗಳು ನೇರವಾಗಿ ಸದರಿ ವಿಭಾಗದಲ್ಲಿ ನಿರ್ವಹಿಸಿದ ಬಂಡವಾಳ ಕಾಮಗಾರಿಗಳಿಗೆ ಸಂಬಂಧಪಟ್ಟಿರುತ್ತದೆ. ಗುತ್ತಿಗೆದಾರರಿಗೆ ನೀಡಿದ ಕಾಮಗಾರಿಯನ್ನು ನಿಗಧಿತ ಅವಧಿಗಿಂತ ಮುಂಚಿತವಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆ ದಾರರಿಗೆ ನೀಡುವ ಪ್ರೋತ್ಸಾಹ ಧನವನ್ನು ಸದರಿ ಬಂಡವಾಳ ಕಾಮಗಾರಿಯ ವೆಚ್ಚಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಸಿ. ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ಅಂದಾಜು ಮೌಲ್ಯದ ಪ್ರಕಾರ ಲೆಕ್ಕಪುಸ್ತಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚು ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತ'ವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ. ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ'ಯಡಿಯಲ್ಲಿ ತೋರಿಸಲಾಗುತ್ತದೆ.

ಎಫ್. ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳು ಸದರಿ ವೆಚ್ಚದಿಂದ ಪಿಪಿಇಯ ಭವಿಷ್ಯದಲ್ಲಿ ಆರ್ಥಿಕ ಲಾಭವನ್ನು ಹೆಚ್ಚಿಸುವಂತಿದ್ದಲ್ಲಿ ಸದರಿ ವೆಚ್ಚವನ್ನು ವಿಶ್ವಾಸನೀಯವಾಗಿ ಲೆಕ್ಕ ಹಾಕಬಹುದಾದಾಗ ಮಾತ್ರ ಸದರಿ ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

ಜಿ. ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಃಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್. ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯಗೊಳಿಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೆ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ)ವೂ ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿ ಸ್ಥಗಿತಗೊಳಿಸುವ ಪ್ರಸ್ತುತ ವೆಚ್ಚವನ್ನು ಆಸ್ತಿ ಅಂದಾಜು ವೆಚ್ಚದ ಮೌಲ್ಯದಲ್ಲಿ ಪರಿಗಣಿಸಿ ಪಿ.ಪಿ.ಇ.ಗೆ ಆಸ್ತಿ ಸ್ಥಗಿತಗೊಳಿಸುವ ವೆಚ್ಚವನ್ನು ಬಂಡವಾಳೀಕರಣ ಮಾಡಲಾಗುವುದಿಲ್ಲ.

ಜೆ. **Ind ASಗೆ ಬದಲಾವಣೆ:**

**IND-AS**ಗೆ ಬದಲಾವಣೆಯಾಗುವಾಗ, ಕಂಪನಿಯು ದಿನಾಂಕ 1ನೇ ಏಪ್ರಿಲ್, 2015ರಲ್ಲಿದ್ದಂತೆ, ಹಾಗೂ ಹಿಂದಿನ **GAAP**ರನುಸಾರ ಲೆಕ್ಕ ಹಾಕಿದಂತೆ ತನ್ನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಯುವ ಮೌಲ್ಯವನ್ನು ಆರಿಸಿಕೊಂಡಿದ್ದು ಮತ್ತು ಆ ಮುಂದುವರಿಸಿದ ಮೌಲ್ಯವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ಭಾವಿತ ವೆಚ್ಚವೆಂದು ಪರಿಗಣಿಸಿ ಉಪಯೋಗಿಸಿ ಕೊಳ್ಳಲಾಗುವುದು.

**1.8 ಸವಕಳಿ:–**

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ. ಆಯೋಗವು ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯನುಸಾರ, ಸವಕಳಿ ದರಗಳು ಈ ಕೆಳಗಿನಂತಿವೆ:

| ಕ್ರಮ ಸಂಖ್ಯೆ | ವಿವರಗಳು | ಸವಕಳಿದರಗಳು |
|---|---|---|
| 1. | ಕಟ್ಟಡಗಳು ಮತ್ತು ರಸ್ತೆಗಳು | 3.34% |
| 2. | ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಾಗ್ರಿಗಳು, ಪೀಠೋಪಕರಣಗಳು ಮತ್ತು ಅಳಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ರಿಜಿಸ್ಟ್ರೆಕ್ಸ್ ಯಂತ್ರಗಳು, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು | 6.33% |
| 3. | ಟ್ರಕ್‌ಗಳು, ಟೆಂಪೋಗಳು, ಟ್ರಕ್ಕರ್‌ಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು ಮತ್ತು ಇತರೆ ವಾಹನಗಳು | 9.50% |
| 4. | ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು | 15.00% |
| 5. | ಮರದ ರಚನೆಗಳಂತಹ ತಾತ್ಕಾಲಿಕ ರಚನೆ | 100.00% |
| 6. | ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು | 5.28% |

ಬಿ. ಆಸ್ತಿಗಳ ಮೌಲ್ಯದ ಶೇ.90ರ ವರೆಗೆ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 1.4.2007ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.3.2007ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ. ವಿಸರ್ಜಿಸಿದ/ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.500/-ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಎಫ್. (1) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರ ಆಸ್ತಿ, ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ90ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(2) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100ರ ಪ್ರಮಾಣಾದಂತೆ, ಅಥವಾ ಭೋಗ್ಯಾಧಾರಿತ ಅವಧಿ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಕಾರ್ಯವಿಮುಕ್ತಿಗೊಳಿಸಿದ ಆಸ್ತಿಗಳ (ಬಳಕೆಯಲ್ಲಿಲ್ಲದ ಆಸ್ತಿಗಳು) ಹಾಗೂ ದುರಸ್ತಿಗಾಗಿ ಬಿಡುಗಡೆಗೊಳಿಸಿದ ಆಸ್ತಿಗಳ ಸವಕಳಿಯನ್ನು, ಅಂತಹ ಆಸ್ತಿಗಳ ಇಳಿತಗೊಂಡ ಮೌಲ್ಯದ ಮೇಲೆ ಸಾಮಾನ್ಯ ದರದ ಪ್ರಕಾರ ಒದಗಿಸಲಾಗಿದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೇವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣಿ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರ ಲಾಭ/(ನಷ್ಟ)ಗಳೊಳಗೆ ಲಾಭ ಅಥವಾ ನಷ್ಟದಲ್ಲಿ ಸೇರುತ್ತವೆ.

**1.9 ಕಂದಾಯ ಮಾನ್ಯತೆ:**

ಎ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಫಲಿತವಾಗಿರುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ. ಆಯೋಗ) ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣೆಯ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಬಿ. ದಕ್ಷಿಣ ಪ್ರಾಂತೀಯ ವಿದ್ಯುತ್ ಸಮಿತಿಯು ಪ್ರಕಟಪಡಿಸುವ ಪ್ರಾಂತೀಯ ವಿದ್ಯುಚ್ಛಕ್ತಿ ಲೆಕ್ಕವನ್ನು ಆಧರಿಸಿದ ಸಂಚಿತ ಆಧಾರದ ಪ್ರಕಾರ ಅಂತರ ರಾಜ್ಯ ವಿದ್ಯುತ್ ಸಾಗಣೆ ಶುಲ್ಕದ ಕಂದಾಯವನ್ನು ಗೊತ್ತುಪಡಿಸಿಕೊಳ್ಳಲಾಗುತ್ತದೆ.

ಸಿ. ಕಾರ್ಯಾನುಷ್ಠಾನಗೊಂಡ ಕಾಮಗಾರಿಗಳು/ ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ಮೂರನೇ ಪಕ್ಷಕಾರರು ನೀಡಿದ ವಂತಿಗೆಯಿಂದ ನಿರ್ಮಿಸಿ ನಿಗಮದ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು ಅವುಗಳ ಪೂರ್ಣ ಮೌಲ್ಯದ ಪ್ರಕಾರ ಲೆಕ್ಕಪುಸ್ತಕದಲ್ಲಿ ಒಳಪಡಿಸಲಾಗಿದೆ. ಬಂಡವಾಳ ಅನುದಾನ/ನಿರ್ದಿಷ್ಟ ಆಸ್ತಿಗಳಿಗೆ ಸಂಬಂಧಿಸಿದ ಅನುದಾನ ಹಾಗೂ ಬಂಡವಾಳ ಆಸ್ತಿಗಳ ವೆಚ್ಚದ ಪ್ರಯುಕ್ತ ಗ್ರಾಹಕರಿಂದ ಕೊಡುಗೆ ಇವುಗಳನ್ನು ಆಸ್ತಿಗಳ ಮೌಲ್ಯದ ವೆಚ್ಚದಿಂದ ಕಡಿಮೆಗೊಳಿಸಿಲ್ಲ, ಆದರೆ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, "ವಂತಿಗೆ ಮತ್ತು ಬಂಡವಾಳ ಆಸ್ತಿಗಳ ನಿಮಿತ್ತ ಅನುದಾನ"ವೆಂದು ವರ್ಗೀಕರಿಸಿ, ನಂತರದಲ್ಲಿ ವಂತಿಗೆ/ ಅನುದಾನದಿಂದ ಗಳಿಸಿದ ಆಸ್ತಿಗಳಿಗೆ ಕಲ್ಪಿಸುವ ಸವಕಳಿಗೆ ಸಮನಾದ ಆದಾಯ ಎಂದು ಹೊಂದಾಣಿಕೆ ಮಾಡಲಾಗಿದೆ.

ಡಿ. ನಗದು ಆಧಾರದಲ್ಲಿ ಲೆಕ್ಕಿಕರಿಸುವ ಮೇಲ್ವಿಚಾರಣ ಶುಲ್ಕಗಳು, ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು ಮತ್ತು ಮಂಡಪ ಕೀಪ್‌ರ್ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಿಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಇ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ ಕಂಡು ಹಿಡಿಯಲಾಗುವುದು.

**1.10 ಗುತ್ತಿಗೆಗಳು**

**ಗುತ್ತಿಗೆದಾರರಾಗಿ**

ಕಂಪನಿಯು ಸ್ವತಂತ್ರವಾಗಿ ಮಾಲೀಕತ್ವದ ಎಲ್ಲಾ ಹೊಣೆಗಳನ್ನು ಮತ್ತು ಪ್ರತಿಫಲಗಳನ್ನು ಪಡೆದಿರುವ ಗುತ್ತಿಗೆಗಳನ್ನು ಆರ್ಥಿಕ ಗುತ್ತಿಗೆಗಳೆಂದು ವರ್ಗೀಕರಿಸಲಾಗುವುದು. ಸ್ವಾಧೀನ ಪಡಿಸಿಕೊಂಡಾಗ ಅಂತಹ ಸ್ವತ್ತುಗಳನ್ನು ನ್ಯಾಯಯುತ ಮೌಲ್ಯ ಅಥವಾ ಗುತ್ತಿಗೆಯ ಪ್ರಾರಂಭದಲ್ಲಿ ಕಡಿಮೆ ಗುತ್ತಿಗೆ ಪಾವತಿಯ ಪ್ರಸ್ತುತ ಮೌಲ್ಯದ ಆಧಾರಿತ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೂಲಧನವನ್ನಾಗಿ ಪರಿವರ್ತಿಸಲಾಗುವುದು.

ಕಾರ್ಯಪ್ರವೃತ್ತ ಗುತ್ತಿಗೆಗಳಡಿಯಲ್ಲಿನ ಗುತ್ತಿಗೆ ಪಾವತಿಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುತ್ತಿಗೆಯ ಅವಧಿಯ ಮೇಲೆ ನೇರಗೆರೆ ಆಧಾರಿತವಾದ ವೆಚ್ಚವೆಂಬಂತೆ ಅಂಗೀಕರಿಸಲಾಗುವುದು.

ಗುತ್ತಿಗೆ ಸ್ವತ್ತುಗಳಿಗೆ ಮಾಡಲಾದ ಅಭಿವೃದ್ಧಿ ವೆಚ್ಚವನ್ನು ಸ್ವತ್ತಿನ ಉಳಿದ ಗುತ್ತಿಗೆಯ ಅವಧಿಯಲ್ಲಿ ಸಮಾನ ಕಂತಿನಲ್ಲಿ ತೀರಿಸಲಾಗುವುದು.

**ಗುತ್ತಿಗೆ ನೀಡುವವರಾಗಿ**

ಕಂಪನಿಯು ಗುತ್ತಿಗೆ ನೀಡುವವರಾಗಿದ್ದಾಗ, ಗುತ್ತಿಗೆ ಪ್ರಾರಂಭವಾದಾಗಿನಿಂದ, ಗುತ್ತಿಗೆ ಆದಾಯವನ್ನು, ನಿರೀಕ್ಷಿತ ಹಣದುಬ್ಬರ ವೆಚ್ಚ ಏರಿಕೆಗಳನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ, ಅಲ್ಲಿಯೇ ಹೆಚ್ಚಲು ರಚನೆಗೊಂಡಿಲ್ಲದ ಹೊರತಾಗಿ, ನೇರಗೆರೆ ಆಧಾರದ ಮೇಲೆ ಆದಾಯವೆಂದು ಅಂಗೀಕರಿಸಲಾಗುವುದು.

**1.11 ಅನುದಾನ ಲೆಕ್ಕೀಕರಣ:–**

ಎ) ಅನುದಾನವನ್ನು ಪರಿಗಣಿಸುವಲ್ಲಿ ಎಲ್ಲಾ ಸಂಯೋಜಿತ ಷರತ್ತುಗಳನ್ನು ಅನುಸರಿಸಲಾಗುತ್ತಿದೆ ಎಂಬ

ಯುಕ್ತ ಆಶ್ವಾಸನೆ ಇದ್ದಾಗ ಅನುದಾನವನ್ನು ಪರಿಗಣಿಸಿ ಅಂಗೀಕರಿಸಲಾಗುತ್ತಿದೆ. ಆದಾಯ ಸಂಬಂಧಿಸಿದ ಅನುದಾನವನ್ನು ಉದ್ದೇಶಿಸಲಾಗಿರುವ ಸಂಬಂಧಿತ ವೆಚ್ಚಕ್ಕೆ ಖರ್ಚು ಮಾಡಲಾದ ಅವಧಿಗಳ ವ್ಯವಸ್ಥಿತ ಆಧಾರದ ಅನ್ವಯ ಆದಾಯವೆಂದು ಪರಿಗಣಿಸಿ ಅಂಗೀಕರಿಸಲಾಗಿರುತ್ತದೆ. ಒಂದು ಆಸ್ತಿಗೆ ಸಂಬಂಧಿಸಿದ ಅನುದಾನವನ್ನು ಸಂಬಂಧಿಸಿದ ಆಸ್ತಿಯ ನಿರೀಕ್ಷಿತ ಉಪಯುಕ್ತ ಬಳಕೆಯ ಮೇಲಿನ ಆದಾಯದ ಅವಧಿಯ ಸಮಾನ ಮೊತ್ತಕ್ಕೆ ಪರಿಗಣಿಸಿ ಅಂಗೀಕರಿಸಲಾಗುತ್ತದೆ.

ಬಿ) ತೆರಿಗೆ/ಸಂಯುಕ್ತ ಅನುದಾನಗಳನ್ನು ಅವುಗಳಿಗೆ ಲಗತ್ತಿಸಿದ ಬಾಧ್ಯತೆಗಳನ್ನು ಪೂರೈಸಿದ ಮೇಲೆ ಆದಾಯವೆಂದು ಪರಿಗಣಿಸಬೇಕು ಮತ್ತು ಅದನ್ನು ಸ್ವೀಕರಿಸುವುದು ನಿರ್ದಿಷ್ಟವಾದ ಮೇಲೆ ಆದಾಯವೆಂದು ಪರಿಗಣಿಸುವುದು.

**1.12 ಉದ್ಯೋಗಿ ಸೌಲಭ್ಯಗಳು:**

**ಎ. ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳು:**

ಅಲ್ಪಾವಧಿಯ ಉದ್ಯೋಗಿ **ಸೌಲಭ್ಯಗಳಾದ** ವೇತನ ಕೂಲಿ ಮತ್ತು ಇತರೆ **ಸೌಲಭ್ಯಗಳನ್ನು** ಸೇವೆ ಸಲ್ಲಿಸಿದ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಖ್ತೆಃಯಲ್ಲಿ ರಿಯಾಯಿತಿ ನೀಡದ ಮೊತ್ತದ ಆಧಾರದಲ್ಲಿ ವೆಚ್ಚವೆಂದು ಪರಿಗಣಿಸಿ ಅಂಗೀಕರಿಸಲಾಗುತ್ತದೆ. ಸದರಿ ಅಲ್ಪಾವಧಿಯ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದ ಅವಧಿಗೆ ಅಂಗೀಕರಿಸಿ ಸಂಬಂಧಿಸಿದ ಅವಧಿಯ ಲಾಭ ಮತ್ತು ನಷ್ಟ ತಖ್ತೆಃಯಲ್ಲಿ ಲೆಕ್ಕೀಕರಿಸಲಾಗಿದೆ.

**ಬಿ. ಉಪದಾನ ಪಿಂಚಣಿ ಯೋಜನೆ**

ದಿನಾಂಕ 01.04.2006ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳು **"ನೂತನ ವ್ಯಾಖ್ಯಾನಿತ ಉಪದಾನ ಪಿಂಚಣಿ ಯೋಜನೆ"** ಹಾಗೂ ಕಂಪನಿಯು, ಸಂಬಳದ ಮೇಲೆ ಪಾವತಿಸುವ/ಒದಗಿಸುವ ನಿರ್ದಿಷ್ಟ ದರದ ಕೊಡುಗೆಯ ಯೋಜನೆಗೆ ಒಳಪಡುತ್ತಾರೆ.

**ಸಿ. ವ್ಯಾಖ್ಯಾನಿಸಿದ ಸೌಲಭ್ಯಗಳ ಯೋಜನೆಗಳು**

ದಿನಾಂಕ 31.3.2006ರವರೆಗೆ ಕೆಲಸಕ್ಕೆ ಸೇರಿದ ಉದ್ಯೋಗಿಗಳನ್ನು ಒಳಪಡುವ ವಿವರಿತ ಉಪದಾನ ಹಾಗೂ ಪಿಂಚಣಿ ಸೌಲಭ್ಯ ನಿಮಿತ್ತದ ವೆಚ್ಚವನ್ನು, IND-AS–19ರ ಪ್ರಕಾರ ಕಾಲಕಾಲಕ್ಕೆ ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ನ್ಯಾಸವು(ಕೆ.ಇ.ಪಿ.ಜಿ.ಟಿ) ಸೂಚಿಸುವ ವಾಸ್ತವಿಕ ಮೌಲ್ಯಮಾಪನವನ್ನು ಆಧರಿಸಿದ ದರ/ಮೊಬಲಗಿನ ಪ್ರಕಾರ ಒದಗಿಸಲಾಗುತ್ತದೆ.ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಡಿ. ರಜೆ ನಗದೀಕರಣ**

ದೀರ್ಘಾವಧಿ ಸೌಲಭ್ಯ: ಗಳಿಕೆ ರಜೆ ನಗದೀಕರಣವನ್ನು ಯೋಜಿತ ಯೂನಿಟ್ ಕ್ರೆಡಿಟ್ ಕ್ರಮಬದ್ಧತೆ ಲೆಕ್ಕಾಚಾರದ ಪ್ರಕಾರ ವಾಸ್ತವಿಕ ಮೌಲ್ಯಾಧಾರದಂತೆ ಗೊತ್ತುಪಡಿಸಿಕೊಂಡು IND-AS–19 ಯು ಅಗತ್ಯಪಡಿಸುವಂತೆ ಪ್ರತಿ ಆರ್ಥಿಕ ವರ್ಷಾಂತ್ಯದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಇ. ಕುಟುಂಬ ಹಿತ ನಿಧಿ:–**

'ನೌಕರರ ಕುಟುಂಬ **ಹಿತ ನಿಧಿ**' ಯೋಜನೆಯನ್ನು ದಿನಾಂಕ: 01.07.1978 ರಿಂದ ಜಾರಿಗೆ ಬರುವಂತೆ ಪರಿಚಯಿಸಲಾಗಿದೆ. ಪ್ರತಿಯೊಬ್ಬ ನೌಕರನಿಂದ 200/– ರೂ.ಗಳನ್ನು ಕಡಿತಗೊಳಿಸಿ, ಈ ನಿಧಿಗೆ ಸಂದಾಯ ಮಾಡಲಾಗುತ್ತದೆ. ನೌಕರನು ಸೇವಾವಧಿಯಲ್ಲಿದ್ದಾಗಲೇ ಮರಣ ಹೊಂದಿದರೆ, ಅವನು ಕನಿಷ್ಠ 12 ತಿಂಗಳುಗಳು ಮಾತ್ರ 2,400/– ಹಣವನ್ನು ಸಂದಾಯಮಾಡಿದ್ದರೆ, ಅವನ ನ್ಯಾಯಸಮ್ಮತ ಉತ್ತರಾಧಿಕಾರಿಗೆ ರೂ.2,00,000/–ಗಳನ್ನು ನೀಡಲಾಗುತ್ತದೆ. ಯೋಜನೆಯನುಸಾರ, ಕಂಪನಿಯು, ನೌಕರರ ಸಾವು/ನಿವೃತ್ತಿಯಾದ ಪಕ್ಷದಲ್ಲಿ, ಯೋಜನೆಯ ಷರತ್ತುಗಳನುಸಾರವಾಗಿ ಈ ನಿಧಿಗೆ ಕೊಡುಗೆ ನೀಡುತ್ತದೆ. ವಿಮಾ ಕಂತಿನ ಸಂಪಾದನೆಗಳು ಅಥವಾ ನಷ್ಟಗಳನ್ನು ಅವುಗಳು ಕಂಡುಬರುವ ಅವಧಿಯ ಇತರೆ ಸಮಗ್ರ ಆದಾಯದಲ್ಲಿ

ಗುರುತಿಸಲಾಗುತ್ತದೆಹಾಗೂ ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಎಫ್. ಪಿಂಚಣಿ ಸುರಕ್ಷಾ ನಿಧಿ:**

"ಕೆಇಬಿ ಪಿಂಚಣಿದಾರರ ಕುಟುಂಬ ಲಾಭ/ಸುರಕ್ಷಾನಿಧಿ"ಯನ್ನು ದಿನಾಂಕ:08.10.1998ರಂದು ಸ್ಥಾಪಿಸಲಾಯಿತು. ಈ ಯೋಜನೆಯ ಅನುಸಾರ, ಪ್ರತಿಯೊಬ್ಬ ಪಿಂಚಣಿದಾರ/ಕುಟುಂಬ ಪಿಂಚಣಿದಾರ ಈ ನಿಧಿಗೆ ರೂ.100/-ಗಳ ಮಾಸಿಕ ದೇಣಿಗೆಯನ್ನು ನೀಡಬೇಕು. ನಿಧಿಯ ಸದಸ್ಯ ಕನಿಷ್ಠ 12 ತಿಂಗಳುಗಳಿಗೆ ದೇಣಿಗೆ ನೀಡಿ ನಂತರ, ತೀರಿಕೊಂಡಾಗ ನಾಮನಿರ್ದೇಶಿತ/ರಿಗೆ ನಿಧಿಯಿಂದ ಒಟ್ಟು ಹಣವಾದ 30,000 ರೂ.ಗಳನ್ನು ನೀಡಲಾಗುತ್ತದೆ. ಕಂಪನಿಯು ಈ ನಿಧಿಗೆ ಯಾವುದೇ ದೇಣಿಗೆಯನ್ನು ನೀಡುವುದಿಲ್ಲ.

**1.13 ವಿದೇಶಿ ವಿನಿಮಯ ವ್ಯವಹಾರಗಳು**

**ಎ. ಕಾರ್ಯಪ್ರವೃತ್ತ ವಿನಿಮಯ**

ಕಂಪನಿಯ ಕಾರ್ಯಪ್ರವೃತ್ತ ಕರೆನ್ಸಿಯೆಂದರೆ ಭಾರತೀಯ ರೂಪಾಯಿ, ಈ ಆರ್ಥಿಕ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗುತ್ತದೆ.

**ಬಿ ವ್ಯವಹಾರಗಳು ಮತ್ತು ಬದಲಾವಣೆಗಳು**

ವಿದೇಶಿ ಕರೆನ್ಸಿ ವರ್ಗದ ಆರ್ಥಿಕ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿರುವಂತೆ ಪರಿಣಾಮಕಾರಿಯಾಗಿ ಯುಕ್ತ ಕಾರ್ಯ ಪ್ರವೃತ್ತ ಕರೆನ್ಸಿಗೆ ಬದಲಾಯಿಸಲಾಗುವುದು. ಈ ಇಂತಹ ಬದಲಾವಣೆಗಳಿಂದ ದೊರೆಯುವ ಲಾಭಗಳು ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ನಿವ್ವಳ ಲಾಭದಲ್ಲಿ ಸೇರಿಸಲಾಗುವುದು.

ವಿದೇಶಿ ಕರೆನ್ಸಿ ಬದಲಾವಣೆಯಿಂದ ಇತ್ಯರ್ಥಗೊಳಸಿದ ವ್ಯವಹಾರಿಕ ಲಾಭ ಅಥವಾ ನಷ್ಟಗಳನ್ನು, ವ್ಯವಹಾರವು ಇತ್ಯರ್ಥವಾದ ಅವಧಿಯಲ್ಲಿನ ನಿವ್ವಳ ಲಾಭವನ್ನು ಕಂಡುಹಿಡಿಯುವುದರಲ್ಲಿ ಪರಿಗಣಿಸ'ಲಾಗುತ್ತದೆ. ಕಂದಾಯ, ವೆಚ್ಚ ಮತ್ತು ವಿದೇಶಿ ಕರೆನ್ಸಿ ವರ್ಗಗಳಲ್ಲಿರುವ ಹಣದ ಹರಿವಿನ ಬಾಬ್ತುಗಳನ್ನು ವ್ಯವಹಾರ ನಡೆಸಿದ ದಿನಾಂಕದಂದು ಜಾರಿಯಲ್ಲಿರುವ ಬಂದಿರುವಂತೆ ವಿನಿಮಯ ದರವನ್ನು ಉಪಯೋಗಿಸಿಕೊಂಡು ಯುಕ್ತ ಕಾರ್ಯಪ್ರವೃತ್ತ ಕರೆನ್ಸಿಗಳಿಗೆ ಬದಲಾವಣೆ ಮಾಡಬೇಕು.

**1.14 ಸಾಲದ ವೆಚ್ಚಗಳು**

ನಿರ್ಮಿತ/ಅರ್ಜಿತ ಅರ್ಹತಾದಾಯಕ ಆಸ್ತಿಗಳಿಗೆ ಸಂಬಂಧಿಸಿದ ಸಾಲದ ವೆಚ್ಚಗಳನ್ನು, ಅಂತಹ ಆಸ್ತಿಗಳ ಮೌಲ್ಯದ ಭಾಗವೆಂದು ಬಂಡವಾಳೀಕರಿಸಲಾಗುತ್ತದೆ. ಅರ್ಹತಾದಾಯಕ ಆಸ್ತಿ ಎಂದರೆ, ಉದ್ದೇಶಿತ ಬಳಕೆಗಾಗಿ ಸಿದ್ಧವಾಗಲು ಸಾಕಷ್ಟು ಅವಶ್ಯಕ ಅವಧಿಯನ್ನು ತೆಗೆದುಕೊಳ್ಳುವಂತಹದ್ದು.

ಸಾಲ ಪಡೆಯುವ ವೆಚ್ಚಗಳೆಂದರೆ ತನ್ನ ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸ್ವತ್ತಿನ ವೆಚ್ಚದ ಭಾಗವಾಗಿ ಬಂಡವಾಳವಾಗುವ ಅರ್ಹದಾಯ ಸ್ವತ್ತಿನ ಆರ್ಜನೆ, ನಿರ್ಮಾಣ, ತಯಾರಿಕೆಗೆ ನೇರವಾಗಿ ಕಾರಣವಾಗುವ ಯೋಗ್ಯವಾದ ವೆಚ್ಚಗಳು, ಕಂಪನಿಯು ಅಂತಹ ಖರ್ಚಿನ ಮೇಲೆ ಉಂಟಾಗುವ ವೆಚ್ಚಕ್ಕೆ ಬಂಡವಾಳೀಕರಣದ ದರವನ್ನು ಅನ್ವಯಿಸುವುದರ ಮೂಲಕ ಮೂಲಧನೀಕರಣಕ್ಕೆ ಅರ್ಹವಾದ ಸಾಲಪಡೆಯುವ ವೆಚ್ಚದ ಮೊತ್ತವನ್ನು ಕಂಡುಹಿಡಿಯಲಾಗುತ್ತದೆ. ಮೂಲಧನೀಕರಣದ ದರವನ್ನು ಅರ್ಹದಾಯಕ ಸ್ವತ್ತಿನ ಖರೀದಿಗೆ ನಿರ್ದಿಷ್ಟವಾಗಿ ಮಾಡಲಾದ ಸಾಲ ಪಡೆಯುವಿಕೆಯನ್ನು ಹೊರತುಪಡಿಸಿ, ಆ ಅವಧಿಯಲ್ಲಿ ಬಾಕಿಯಿರುವ ಕಂಪನಿಯ ಸಾಲಗಳಿಗೆ ಅನ್ವಯಿಸುಬಹುದಾದ ಸಾಲ ವೆಚ್ಚದ ಅಂದಾಜು ದರವನ್ನು ಆಧರಿಸಿ ಕಂಡುಹಿಡಿಯಲಾಗುವುದು. ಕಂಪನಿಯು ಆ ಅವಧಿಯಲ್ಲಿ ಬಂಡವಾಳೀಕರಣಗೊಳಸುವ ಸಾಲದ ವೆಚ್ಚದ ಮೊತ್ತವು ಅವಧಿಯಲ್ಲಿ ಉಂಟಾಗುವ ಸಾಲದ ವೆಚ್ಚದ ಮೊತ್ತವನ್ನು ಮೀರಬಾರದು. ಇತರ ಎಲ್ಲಾ ಸಾಲದ ವೆಚ್ಚಗಳನ್ನು, ಅವುಗಳು ಸಂಭವಿಸದ ಅವಧಿಯಲ್ಲಿ ಖರ್ಚು ಮಾಡಲಾಗುವುದು.

### 1.15 ಪ್ರತೀ ಷೇರಿನ ಸಂಪಾದನೆ

**ಪ್ರತೀ ಷೇರಿನ ಮೂಲ ಸಂಪಾದನೆ**

ಪ್ರತೀ ಷೇರಿನ ಮೂಲ ಸಂಪಾದನೆಯನ್ನು ಆರ್ಥಿಕ ವರ್ಷದ ಅವಧಿಯಲ್ಲಿ ಬಾಕಿಯಿರುವ ಸ್ವಾಮ್ಯ ಷೇರುಗಳ ವೇಯಿಟೆಡ್ ಸರಾಸರಿ ಸಂಖ್ಯೆಯಿಂದ ಕಂಪನಿಯ ಸ್ವಾಮ್ಯ ಷೇರುದಾರರಿಗೆ ಆರೋಪಯೋಗ್ಯವಾದ ಲಾಭವನ್ನು ಭಾಗಿಸುವುದರಿಂದ ಲೆಕ್ಕ ಹಾಕಲಾಗುತ್ತದೆ.

**ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆ**

ಪ್ರತೀ ಷೇರಿನ ಗುಣತಗ್ಗಿದಸಂಪಾದನೆಯು ಎಲ್ಲಾ ಗುಣತಗ್ಗಿದ ಸಾಮರ್ಥ್ಯ ಸ್ವಾಮ್ಯ ಷೇರುಗಳ ಬದಲಾವಣೆಯನ್ನು ಪರಿಭಾವಿಸಿ, ಬಾಕಿಯಿರುವ ಆರ್ಥಿಕ ಸ್ವಾಮ್ಯ ಷೇರುಗಳು ಒಳಗೊಂಡಂತೆ, ಸ್ವಾಮ್ಯ ಷೇರುಗಳ ವೇಹಿಟೆಡ್ ಸರಾಸರಿ ಸಂಖ್ಯೆ ಮತ್ತು ಅನಂತರದ ಆದಾಯದ ಬಡ್ಡಿಯ ತೆರಿಗೆಯ ಪರಿಣಾಮ ಮತ್ತು ಗುಣತಗ್ಗಿದ ಸಾಮರ್ಥಿಕ ಸ್ವಾಮ್ಯ ಷೇರುಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತೀ ಷೇರಿನ ಮೂಲ ಸಂಪಾನದಯ ನಿರ್ಧರಣೆಯಲ್ಲಿ ಉಪಯೋಗಿಸುವ ಸ್ವಾಮ್ಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಲಾಗುತ್ತದೆ.

### 1.16 ಪಿ.ಪಿ.ಇ. ಮತ್ತು ಸ್ವರ್ಶಾತೀತ ಆಸ್ತಿಗಳ ದುರ್ಬಲತೆ: (Impairment of PPE and Intangible Assets)

ಕಂಪನಿಯ ಸ್ವತ್ತುಗಳನ್ನು ಮುಂದುವರಿಸುವ ಮೊತ್ತದ ಯಾವುದೇ ದುರ್ಬಲತೆಯ ಸೂಚನೆಗಳವೆಯೇ ಎಂಬುದನ್ನು ನಿರ್ಧರಿಸಲು ಪ್ರತಿ ಆಯವ್ಯಯ ದಿನಾಂಕದಲ್ಲಿ ಪಿ.ಪಿ.ಇ.ಗಳ ಮತ್ತು ಸ್ವರ್ಶಾತೀತ ಆಸ್ತಿಗಳನ್ನು ಮುಂದುವರಿಸು ಮೌಲ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಸೂಚನೆಗಳು ಅಸ್ತಿತ್ವದಲ್ಲಿದ್ದಲ್ಲಿ, ಸ್ವತ್ತುಗಳನ್ನು ಮರುಪಡೆದುಕೊಳ್ಳುವ ಮೊತ್ತವನ್ನು ಅಂದಾಜಿಸಲಾಗಿದೆ. ಆಸ್ತಿಯನ್ನು ಸಾಗಿಸುವ ಮೊತ್ತವು ಮರುಪಡೆದುಕೊಳ್ಳುವ ಮೊತ್ತವನ್ನು ಮೀರಿದ ಸಂದರ್ಭಗಳಲ್ಲಿ ದುರ್ಬಲ ನಷ್ಟವನ್ನು ಗುರುತಿಸಲಾಗುತ್ತದೆ. ಮರುಪಡೆಯಬಹುದಾದ ಮೊತ್ತವು ನಿವ್ವಳ ಮಾರಾಟ ದರ ಮತ್ತು ಅವುಗಳ ಬಳಕೆಯ ಮೌಲ್ಯಕ್ಕಿಂತ ಹೆಚ್ಚಾಗಿದೆ. ಸೂಕ್ತ ರಿಯಾಯಿತಿ ಅಂಶದ ಆಧಾರದ ಮೇಲೆ ಅವುಗಳ ಪ್ರಸ್ತುತ ಮೌಲ್ಯಕ್ಕೆ ಭವಿಷ್ಯದ ನಗದು ಹರಿವುಗಳನ್ನು ರಿಯಾಯಿತಿ ಮಾಡುವ ಮೂಲಕ ಬಳಕೆಯಲ್ಲಿರುವ ಮೌಲ್ಯವನ್ನು ನಿಗದಿ ಮಾಡಲಾಗುತ್ತದೆ. ಹಿಂದಿನ ಲೆಕ್ಕಪತ್ರ ಅವಧಿಗಳಲ್ಲಿ ಒಂದು ಸ್ವತ್ತಿಗಾಗಿ ಗುರುತಿಸಲ್ಪಟ್ಟ ದುರ್ಬಲ ನಷ್ಟವು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಅಥವಾ ಕಡಿಮೆಯಾಗಬಹುದೆಂಬ ಸೂಚನೆಯಿರುವಾಗ, ದುರ್ಬಲ ನಷ್ಟದ ಅಂತಹ ಹಿಮ್ಮುಖವು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲ್ಪಟ್ಟಿದೆ.

### 1.17 ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರುಆಸ್ತಿಗಳು:

**(ಎ)** ಹಿಂದಿನ ವ್ಯವಹರಣೆಗಳ ನಿಮಿತ್ತ ನಿಗಮವು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ತವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು, ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು, ಆ ಮಟ್ಟಿಗೆ ಒಂದು ಭರವಸಾಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಆಸ್ತಿ–ಹೊಣೆ ಪಟ್ಟಿ ದಿನಾಂಕದಂದಿಗೆ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವಾಗುವಂತೆ ಅತ್ಯುತ್ತಮ ಅಂದಾಜನ್ನು ಆಧರಿಸಿ ಅವಕಾಶವನ್ನು ಗೊತ್ತುಪಡಿಸಲಾಗಿದೆ. ಇವನ್ನು ಪ್ರತಿ ಆಸ್ತಿ–ಹೊಣೆ ಪಟ್ಟಿ ದಿನಾಂಕದಂದು ಪರಿಶೀಲನೆಗೊಳಪಡಿಸಿ, ವ್ಯವಸ್ಥೆಯ ಪ್ರಸಕ್ತ ಅಂದಾಜನ್ನು ಬಿಂಬಿಸಲು ಹೊಂದಾಣಿಕೆ ಮಾಡಲಾಗುತ್ತದೆ.

**(ಬಿ)** ಸಾದಿಲ್ವಾರು ಹೊಣೆಗಾರಿಕೆಗಳನ್ನು ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಬಿಂಬಿಸಿಲ್ಲ, ಆದರೆ ಟಿಪ್ಪಣಿಗಳಲ್ಲಿ ಬಿಂಬಿಸಲಾಗಿದೆ.ಹಿಂದಿನ ಘಟನೆಗಳಿಂದ ಉಂಟಾದ ಸಂಭವನೀಯ ಬಾಧ್ಯತೆ ಸಾದಿಲ್ವಾರು ಹೊಣೆಗಾರಿಕೆಯಾಗಿದೆ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದು

ಗುರುತಿಸಿರುವುದಿಲ್ಲ, ಏಕೆಂದರೆ (1) ಆರ್ಥಿಕ ಪ್ರಯೋಜನಗಳನ್ನು ಹೊಂದುವಂತಹ ಸಂಪನ್ಮೂಲಗಳ ಹೊರಹರಿವು ಬಾಧ್ಯತೆಯನ್ನು ಇತ್ಯರ್ಥಗೊಳಸಲು ಅಗತ್ಯವಿರುತ್ತದೆ ಎಂಬುದು ಸಂಭಾವ್ಯವಲ್ಲ ಅಥವಾ (2) ಹೊಣೆಗಾರಿಕೆಯ ಪ್ರಮಾಣವನ್ನು ಸಾಕಷ್ಟು ವಿಶ್ವಾಸಾರ್ಹತೆಯಿಂದ ಅಳೆಯಲಾಗುವುದಿಲ್ಲ.

(ಸಿ) ಸಾದಿಲ್ವಾರು ಆಸ್ತಿಗಳ ಹಿಂದಿನ ಕಾರ್ಯಕ್ರಮಗಳಂದ ಉದ್ಭವಿಸುವ ಒಂದು ಸಂಭವನೀಯ ಆಸ್ತಿ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದನ್ನು ಆರ್ಥಿಕ ವಿವರನಾ ಪಟ್ಟಿಯಲ್ಲಿ ಗುರುತಿಸಿರುವುದಿಲ್ಲ, ಆರ್ಥಿಕ ಪ್ರಯೋಜನಗಳ ಒಳಹರಿವು ಸಾಧ್ಯವಾದಾಗ ಸಾದಿಲ್ವಾರು ಆಸ್ತಿಗಳ ವಿವರಗಳನ್ನು ಟಿಪ್ಪಣಿಗಳಲ್ಲಿ ಬಹಿರಂಗಗೊಳಸಲಾಗುತ್ತದೆ.

(ಡಿ) ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ವಿವರಣ ಪಟ್ಟಿಯಲ್ಲಿ ಸೂಕ್ತವಾಗಿ ಬಹಿರಂಗಪಡಿಸಲು/ಗುರುತಿಸಲು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

**1.18 ಸ್ಪರ್ಶಾತೀತ ಆಸ್ತಿಗಳು**

ಸ್ಪರ್ಶಾತೀತ ಆಸ್ತಿಗಳ ವೆಚ್ಚವು ಸಂಚಿತ ಋಣಮುಕ್ತತೆಯನ್ನು ಕಳೆದ ಮತ್ತು ನಿವ್ವಳ ದುರ್ಬಲತೆ ಯಾವುದಾದರೂ ಇದ್ದರೆ ಸಮೀಕರಿಸಿ ತೋರಿಸಿದೆ. ನಿರೀಕ್ಷಿತ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ಕಂಪನಿಗೆ ಹರಿಯುವ ಸಾಧ್ಯತೆ ಇದ್ದಲ್ಲಿ ಸ್ಪರ್ಶಾತೀತ ಮತ್ತು ಅದರ ವೆಚ್ಚವನ್ನು ವಿಶ್ವಾಸಾರ್ಹವಾಗಿ ಮಾಪನ ಮಾಡಬಹುದು ಎಂದಾದಲ್ಲಿ ಆಸ್ತಿಗಳನ್ನು ಗುರುತಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಗಳನ್ನು (ಪರವಾನಗಿಯ ಒಪ್ಪಂದದಡಿ ಹಕ್ಕುಗಳನ್ನು ಒಳಗೊಂಡಿದೆ ಮತ್ತು ತಂತ್ರಾಂಶ ಪರವಾನಗಿಗಳನ್ನು) ನೇರ ಸಾಲಿನ ವಿಧಾನದಲ್ಲಿ ಮೂರು ವರ್ಷಗಳಗೊಮ್ಮೆ ಋಣಮುಕ್ತತೆ ಮಾಡಲಾಗುತ್ತದೆ.

**1.19 ಆರ್ಥಿಕ ಸಾಧನಗಳು:**

ಒಂದು ಆರ್ಥಿಕ ಸಾಧನವು ಒಂದು ಘಟಕದ ಆರ್ಥಿಕ ಆಸ್ತಿಯ ಉಗಮವಾಗಿಸುವ ಒಂದು ಒಪ್ಪಂದ ಮತ್ತುಆರ್ಥಿಕ ಹೊಣೆಗಾರಿಕೆ ಅಥವಾ ಮತ್ತೊಂದು ಘಟಕದ ಸ್ವಾಮ್ಯ ಸಾಧನವಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಸರಿದೂಗಿಸಲ್ಪಟ್ಟಿವೆ ಮತ್ತು ನಿವ್ವಳ ಮೊತ್ತ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಗುರುತಿಸಲಾದ ಮೊತ್ತವನ್ನು ಸರಿದೂಗಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಸ್ವತ್ತುಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಸಲು ಉದ್ದೇಶಿಸಿದೆ.

ಆರ್ಥಿಕ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗೀಕರಣವನ್ನು ಕಂಪನಿಯು ಆರಂಭದಲ್ಲಿ ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಗಳಗಾಗಿ ಯಾವುದೇ ಮರುವರ್ಗೀಕರಣವನ್ನು ಮಾಡಲಾಗುವುದಿಲ್ಲ ಇದನ್ನು FVTOCI ನಲ್ಲಿ ಸ್ವಾಮ್ಯ ಸಾಧನಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ಆರ್ಥಿಕ ಆಸ್ತಿಗಳು/ಹೊಣೆಗಾರಿಕೆಗಳನ್ನು FVTPL ನಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸಿದೆ. ಆದಾಗ್ಯೂ, ಇತರ ಆರ್ಥಿಕ ಆಸ್ತಿಗಳನ್ನು ಕಂಪನಿಯ ವ್ಯಾಪಾರಿ ಮಾದರಿಯಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ ಮರುವರ್ಗೀಕರಿಸ ಬಹುದಾಗಿದೆ. ಕಂಪನಿಯು ಆರ್ಥಿಕ ಆಸ್ತಿಗಳನ್ನು ಮರುವರ್ಗೀಕರಿಸಿದಾಗ, ಅಂತಹ ಮರುವರ್ಗೀಕರಣಗಳನ್ನು ಮುಂದಿನ ವರದಿ ಅವಧಿಯ ಮೊದಲ ದಿನದಿಂದ ನಿರೀಕ್ಷಿತವಾಗಿ ಮಾಡಲಾಗುತ್ತದೆ. ಕಂಪನಿಯು ಹಿಂದೆ ಗುರುತಿಸಲಾದ ದುರ್ಬಲತೆ ಗಳಕೆಗಳು ಅಥವಾ ನಷ್ಟಗಳನ್ನೊಳಗೊಂಡಂತೆ ಯಾವುದೇ ಗಳಕೆಗಳು, ನಷ್ಟಗಳನ್ನು ಪುನರಾವರ್ತಿಸುವುದಿಲ್ಲ.

ಎ. **ಆರ್ಥಿಕ ಸ್ವತ್ತುಗಳು/ಆಸ್ತಿಗಳು**

ಆರ್ಥಿಕ ಸ್ವತ್ತುಗಳು ಸ್ವಾಮ್ಯ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳು, ವ್ಯಾಪಾರ ಸ್ವೀಕೃತಿಗಳು, ನಗದು ಮತ್ತು ನಗದು ಸಮಾನ ಮತ್ತು ಇತರ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತವೆ.

ಆ ಹಣಕಾಸಿನ ಸ್ವತ್ತುಗಳು ಮತ್ತು ಅದರ ಒಪ್ಪಂದದ ನಗದು ಹರಿವಿನ ಗುಣಲಕ್ಷಣಗಳನ್ನು ನಿರ್ವಹಿಸಲು ವ್ಯವಹಾರ ಮಾದರಿ (ಅಂದರೆ) ವ್ಯವಹಾರಗಳ ಸ್ವಭಾವವನ್ನು ಅವಲಂಬಿಸಿ, ಆರ್ಥಿಕ ಸ್ವತ್ತುಗಳನ್ನು ಮೊದಲಿಗೆ ನ್ಯಾಯೋಚಿತ ಮೌಲ್ಯದಲ್ಲಿ ಅಳೆಯಲಾಗುತ್ತದೆ ಮತ್ತು ತದನಂತರ ಈ ಕೆಳಗಿನವುಗಳಲ್ಲಿ ಅಳತೆ ಮತ್ತು ವರ್ಗೀಕರಣ ಮಾಡಲಾಗುತ್ತದೆ.

ಎ) ಋಣಮುಕ್ತತೆಯ ವೆಚ್ಚ; ಅಥವಾ

ಬಿ) ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ (Fair Value Through Other Comprehensive Income (FVTOCI) ); ಅಥವಾ

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL)

ಮಿತವ್ಯಯದ ವೆಚ್ಚವು ಪ್ರಾರಂಭದಲ್ಲಿ ಗುರುತಿಸಲಾದ ನ್ಯಾಯೋಚಿತ ಮೌಲ್ಯದ ವ್ಯವಹಾರ ವೆಚ್ಚದ ಹೊರೆಯ ಮೊತ್ತವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುತ್ತದೆ.

IND-AS ವಹಿವಾಟಿನ ದಿನಾಂಕದಂದು ಕಂಪನಿಯು ಆರ್ಥಿಕ ಸ್ವತ್ತುಗಳ ವರ್ಗೀಕರಣ ಮತ್ತು ಮಾಪನ ಉದ್ದೇಶಕ್ಕಾಗಿ ಸತ್ಯ ಮತ್ತು ಸನ್ನಿವೇಶಗಳನ್ನು ಮೌಲ್ಯಮಾಪನ ಮಾಡಿದೆ. ಆ ಪ್ರಕಾರವಾಗಿ, ಆ ಹಣಕಾಸಿನ ಆಸ್ತಿಗಳನ್ನು ಹೊರತುಪಡಿಸಿ ಅದರ ಒಪ್ಪಂದದ ನಿಶ್ಚಿತ ದಿನಾಂಕಗಳಲ್ಲಿ ನಿರ್ದಿಷ್ಟ ನಗದು ಹರಿವು ಹೆಚ್ಚಳವಾಗಿಸುವುದನ್ನು ಹೊರತುಪಡಿಸಿ ಹಣಕಾಸಿನ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಮಾಪನ ಮಾಡಲಾಗುತ್ತದೆ, ಕೇವಲ ಅಸಲು ಮತ್ತು ಬಡ್ಡಿಯ ಮೇಲಿನ ಪಾವತಿಗಳನ್ನು ಮಾತ್ರ ಪ್ರತಿನಿಧಿಸುವದನ್ನು ವ್ಯವಹಾರದ ಮಾದರಿಯನ್ನು ಅವಲಂಬಿಸಿ ಈ ಕೆಳಗೆ ವಿವರಿಸಿದಂತೆ ಅಳೆಯಲಾಗುತ್ತದೆ.

| **ವರ್ಗೀಕರಣ** | **ವ್ಯವಹಾರ ಮಾದರಿ** |
|---|---|
| ಋಣಮುಕ್ತತೆಯ ವೆಚ್ಚ | ಕಂಪನಿಯ ಉದ್ದೇಶವು ಒಪ್ಪಂದದ ನಗದು ಹರಿವುಗಳನ್ನು ಅವಧಿ ಮುಕ್ತಾಯ/ಪರಿಪಕ್ವದ ದಿನಾಂಕದ ವರೆಗೆ ಹಿಡಿದಿಟ್ಟುಕೊಳ್ಳುವುದು ಮತ್ತು ಸಂಗ್ರಹಿಸುವುದು ಆಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಂಪನಿಯು ತನ್ನ ಒಪ್ಪಂದದ ಪರಿಪಕ್ವತೆಯ ಮುಂಚೆ ಅದರ ನ್ಯಾಯಯುತ ಮೌಲ್ಯ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧನಗಳನ್ನು ಮಾರಾಟ ಮಾಡಲು ಉದ್ದೇಶಿಸುವುದಿಲ್ಲ. |
| FVTOCI | ಕಂಪನಿಯ ಉದ್ದೇಶವು ತನ್ನ ಒಪ್ಪಂದದ ನಗದು ಹರಿವುಗಳನ್ನು ಅವಧಿ ಸಂಗ್ರಹಿಸುವುದು ಮತ್ತು ಆರ್ಥಿಕ ಸ್ವತ್ತುಗಳನ್ನು ಮಾರಾಟ ಮಾಡುವುದಾಗಿದೆ. |

ಅಂಗಸಂಸ್ಥೆಗಳ ಸ್ವಾಮ್ಯ ಹೂಡಿಕೆಯನ್ನು ಸಾಗಿಸುವ ವೆಚ್ಚದಲ್ಲಿ ತೆಗೆದುಕೊಳ್ಳಲಾಗುತ್ತದೆ (ಅಂದರೆ) ಹಿಂದಿನ GAAP ನ ಮುಂದುವರಿದ ವೆಚ್ಚವನ್ನು IND-AS ಪರಿವರ್ತನೆಯ ದಿನಾಂಕದಂದು ಇತರ ಸ್ವಾಮ್ಯ ಹೂಡಿಕೆಗಳ FVTOCI ದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಬದಲಾವಣೆಯನ್ನು ಅಳೆಯಲು ಕಂಪನಿಯು

ಆರಂಭಿಕ ಗುರುತಿಸುವಿಕೆ ಸಮಯದಲ್ಲಿ ಒಂದು ಮಾರ್ಪಡಿಸಲಾಗದ ಆಯ್ಕೆಯನ್ನು ಬಳಸಿದೆ. ಅದರ ಪ್ರಕಾರವಾಗಿ, ಕಂಪನಿಯು ತನ್ನ ಆರ್ಥಿಕ ಸ್ವತ್ತುಗಳ ಮಾಪನಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸುತ್ತದೆ.

| **ವರ್ಗೀಕರಣ** | **ಆರ್ಥಿಕ ಸ್ವತ್ತುಗಳ ಹೆಸರು** |
|---|---|
| ಋಣಮುಕ್ತತೆಯ ವೆಚ್ಚ | ವ್ಯಾಪಾರ ಸಂದಾಯಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬಹುದಾದ ಬಡ್ಡಿ, ತುಂಬದ ಆದಾಯ ಮತ್ತು ನಗದು ರೂಪದಲ್ಲಿ ವಸೂಲು ಮಾಡಬಹುದಾದ ಮುಂಗಡಗಳು. |
| FVTOCI | ಆರಂಭಿಕ ಗುರುತಿಸುವಿಕೆಯ ಸಮಯದಲ್ಲಿ ಒಂದು ಆಯ್ಕೆಯ ಚಲಾವಣೆಯಾಗಿ ಅಂಗಸಂಸ್ಥೆಗಳನ್ನು ಹೊರತುಪಡಿಸಿ ಕಂಪನಿಗಳಲ್ಲಿ ಸ್ವಾಮ್ಯ ಸಾಧನ. |
| FVTPL | ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ, ಮುಂದಿನ ವಿನಿಮಯ ಒಪ್ಪಂದಗಳು |

ನಗದು ಹರಿವುಗಳಿಗೆ ಒಪ್ಪಂದದ ಹಕ್ಕುಗಳ ಅವಧಿ ಮೀರಿದಾಗ ಅಥವಾ ಸದರಿ ಸ್ವತ್ತುಗಳನ್ನು ವರ್ಗಾವಣೆ ಮಾಡಿದಾಗ ಆರ್ಥಿಕ ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸಲಾಗಿದೆ (ಅಂದರೆ) ಆರ್ಥಿಕ ವಿವರಣಪಟ್ಟಿಯಿಂದ ತೆಗೆದುಹಾಕಲಾಗಿದೆ. ಮೂರನೆಯ ವ್ಯಕ್ತಿಯೊಂದಿಗೆ ಆರ್ಥಿಕ ಸ್ವತ್ತಿನಿಂದ ಉಂಟಾಗುವ ನಗದು ಹರಿವುಗಳನ್ನು ಸರಿದೂಗಿಸಲು ಸಹ ಕಂಪನಿಯು ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸುತ್ತದೆ ಮತ್ತು ವರ್ಗಾವಣೆಯ ನಂತರ:

ಎ) ಆರ್ಥಿಕ ಸ್ವತ್ತಿನ ಗಮನಾರ್ಹ ಅಪಾಯ ಮತ್ತು ಪ್ರತಿಫಲಗಳು, ಅಥವಾ

ಬಿ) ಆರ್ಥಿಕ ಸ್ವತ್ತಿನ ನಿಯಂತ್ರಣ

ಆದಾಗ್ಯೂ, ಕಂಪನಿಯು ವರ್ಗಾವಣೆಗೊಂಡ ಆರ್ಥಿಕ ಸ್ವತ್ತು ಮತ್ತು ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಅದರ ಮುಂದುವರಿದ ಒಳಗೊಳ್ಳುವಿಕೆಯ ಮಟ್ಟಿಗೆ ಗುರುತಿಸುತ್ತದೆ, ಅವುಗಳನ್ನು ಅವುಗಳ ಹಕ್ಕುಗಳು ಮತ್ತು ಆರ್ಥಿಕ ಸ್ವತ್ತಿನ ಬಾಧ್ಯತೆಗಳ ಆಧಾರದ ಮೇಲೆ ಅಳೆಯಲಾಗುತ್ತದೆ. ಕಂಪನಿಯು ಅಮಾನ್ಯ ಅವಶ್ಯಕತೆಗಳನ್ನು ಭವಿಷ್ಯಾನ್ವಯವಾಗಿ ಅನ್ವಯಿಸಿದೆ.

ಅದರ ಆರ್ಥಿಕ ಸ್ವತ್ತು ಅಥವಾ ಅದರ ಭಾಗಶ:, ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವನ್ನು ಗುರುತಿಸುವ ದಿನಾಂಕದಂದು ಅಳತೆ ಮಾಡಲಾಗುವುದು ಮತ್ತು ಯಾವುದೇ ಹೊಸ ಸ್ವತ್ತು ಸೇರಿದಂತೆ ಸ್ವೀಕರಿಸಿದ ಪ್ರತಿಫಲ (consideration)ವು ಯಾವುದೇ ಹೊಸ ಹೊಣೆಗಾರಿಕೆಯನ್ನು ಕಡಿಮೆ ಪಡೆಯುತ್ತದೆ ಎಂದು ಪರಿಭಾವಿಸಲಾದುದನ್ನು ಲಾಭ ಮತ್ತು ನಷ್ಟ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ.

ದುರ್ಬಲ ಉದ್ದೇಶಗಳಿಗಾಗಿ ಗಮನಾರ್ಹ ಆರ್ಥಿಕ ಸ್ವತ್ತುಗಳನ್ನು ಪ್ರತಿ ವರದಿಯ ದಿನಾಂಕದಂದು ವೈಯಕ್ತಿಕ ಆಧಾರದ ಮೇಲೆ ಪರೀಕ್ಷಿಸಲಾಗುತ್ತದೆ. ಇತರ ಹಣಕಾಸು ಸ್ವತ್ತುಗಳನ್ನು ಸಾಮೂಹಿಕವಾಗಿ ಗುಂಪಿನಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ, ಅದು ಇದೇ ಕ್ರೆಡಿಟ್ ಅಪಾಯದ ಗುಣಲಕ್ಷಣಗಳನ್ನು

ಹಂಚಿಕೊಳ್ಳುತ್ತದೆ. ಈ ಪ್ರಕಾರವಾಗಿ ದುರ್ಬಲಗೊಳಿಸುವ ಪರೀಕ್ಷೆಯನ್ನು ಈ ಕೆಳಗಿನ ಆಧಾರದ ಮೇಲೆ ಪೂರ್ವಾನ್ವಯವಾಗಿ ಮಾಡಲಾಗುತ್ತದೆ.

| **ಆರ್ಥಿಕ ಸ್ವತ್ತುಗಳ ಹೆಸರು** | **ದುರ್ಬಲತೆ ಪರೀಕ್ಷಾ ವಿಧಾನ** |
|---|---|
| ವ್ಯಾಪಾರ ಸ್ವೀಕೃತಿಗಳು | ನಿರೀಕ್ಷಿತ ಕ್ರೆಡಿಟ್ ನಷ್ಟ ಮಾದರಿಯನ್ನು ಅನ್ವಯಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವು ಭವಿಷ್ಯದ ಆರ್ಥಿಕ ಪರಿಸ್ಥಿತಿಗಳ ಪ್ರಸ್ತುತ ಸ್ಥಿತಿಗತಿ ಮತ್ತು ಮುನ್ಸೂಚನೆಗಳನ್ನು ಪ್ರತಿಬಿಂಬಿಸುವ ಐತಿಹಾಸಿಕ ದರಗಳ ಆಧಾರದ ಮೇಲೆ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ಸ್ವತ್ತುಗಳ ಜೀವಿತಾವಧಿ ಮೇಲೆ ನಿರೀಕ್ಷಿಸಲಾದ ಕ್ರೆಡಿಟ್ ನಷ್ಟವನ್ನು ಅಂದಾಜಿಸಲಾಗುವುದು. ಅದು ಉದ್ಯಮದ ಸ್ವರೂಪ, ಗ್ರಾಹಕರ ವಿಭಾಗ, ಹಿಂದಿನ ಕಾರಣ ಸ್ಥಿತಿ ಮತ್ತು ನಿರೀಕ್ಷಿತ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಈ ಸ್ವತ್ತುಗಳಿಂದ ನಿರೀಕ್ಷಿಸಲಾದ ಲಾಭ ನಷ್ಟದ ಅಂದಾಜು ಮಾಡಲಾಗುವುದು. |
| ಇತರೆ ಹಣಕಾಸಿನ ಸ್ವತ್ತುಗಳು | ಕ್ರೇಡಿಟ್ ಅಪಾಯವು ಗಮನಾರ್ಹವಾಗಿ ಹೆಚ್ಚಾಗದೆಇದ್ದಲ್ಲಿ, 12 ತಿಂಗಳಿನ ಇಸಿಎಲ್ ಅನ್ನು ಹಾನಿಯ ನಷ್ಟಕ್ಕಾಗಿ ಪೂರೈಸುವುದು. ಅಂಗೀಕಾರದ ಪ್ರಾರಂಭದಿಂದ ಕ್ರೇಡಿಟ್ ಅಪಾಯದಲ್ಲಿಗಮನಾರ್ಹ ಬದಲಾವಣೆಯಾದಾಗ ಜೀವಿತಾವಧಿಯ ಪೂರ್ವನಿಯೋಜಿತ ಸಂಭವನೀಯತೆಆಧಾರದ ಮೇಲೆ ದುರ್ಬಳಕೆಯನ್ನು ಅಳೆಯಲಾಗುವುದು. ಆರಂಭಿಕ ಅಂಗೀಕಾರದಿಂದ ನಗದು ಲಾಭದ ಅಪಾಯದಲ್ಲಿ ಅಲ್ಲಿ ಧೀರ್ಘಕಾಲಿಕವಾಗಿ ಗಮನಾರ್ಹವಾಗಿ ಹೆಚ್ಚಳವಾಗಿರುವುದಿಲ್ಲ, ಒಂದು ವೇಳೆ, ನಂತರದ ಅವಧಿಯಲ್ಲಿ ಅಂತಹ ಪ್ರಕರಣದ ಲಾಭದ ಗುಣಮಟ್ಟದಲ್ಲಿ ಸುಧಾರಿಸುವುದು, ನಂತರ 12 ತಿಂಗಳಿನ ನಿರೀಕ್ಷಿತ ಲಾಭ ನಷ್ಟದಆಧಾರದ ಮೇಲೆ ನಷ್ಟದ ಹಾನಿ ಭರ್ತಿಯನ್ನು ಘಟಕವು ಹಿಂದಿರುಗಿಸುತ್ತದೆ. ಆದಾಗ್ಯೂ ಪಾವತಿಯಾಗದ ಆದಾಯವು ವ್ಯಾಪಾರದ ಕರಾರುಗಳಿರುವಂತೆ ಸಂಬಂಧದಲ್ಲಿ ನಷ್ಟದ ಪರೀಕ್ಷಾ ವಿಧಾನವನ್ನು ಬಳಸಿರುವುದು. |

**ಬಿ) ನಗದು ಮತ್ತು ತತ್ಸಮಾನಗಳು:**

ನಗದು ಹರಿವಿನ ಲೆಕ್ಕವಿವರಣೆಯಲ್ಲಿ ಮಂಡಿಸುವುದರ ಉದ್ದೇಶಕ್ಕಾಗಿ, ನಗದು ಮತ್ತು ತತ್ಸಮಾನಗಳನ್ನೊಳಗೊಂಡು ಕೈಯಲ್ಲಿರುವ ನಗದು, ಬ್ಯಾಂಕಿನಲ್ಲಿ ಠೇವಣಿ ಇಡಲಾದ ನಗದಿನೊಂದಿಗೆ ಹಣಕಾಸು ಸಂಸ್ಥೆಗಳು ಆಹ್ವಾನಿಸುವ ಇತರೆ ಅಲ್ಪಾವಧಿ ಠೇವಣಿಗಳು, ಹೆಚ್ಚಿನ ಚಾಲ್ತಿ ಹೂಡಿಕೆಗಳೊಂದಿಗೆ ಮೂರು ತಿಂಗಳಿನ ಮೂಲ ಮುಕ್ತಾಯ ಅವಧಿ ಅಥವಾ ಅದಕ್ಕೂ ಕಡಿಮೆ ಇರುವುದನ್ನು ನಗದು ಹಣವಾಗಿ ಪರಿವರ್ತಿಸುವುದು ಮತ್ತು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಅಪಾಯಕ್ಕೊಳಪಟ್ಟಿರುತ್ತವೆ.

**ಸಿ) ವ್ಯವಹಾರದ ಸ್ವೀಕೃತಿಗಳು:** ವ್ಯವಹಾರ ಸ್ವೀಕೃತಿಯನ್ನು ಮೂಲತ ನ್ಯಾಯಯುತ ಬೆಲೆಯಲ್ಲಿ ಪರಿಗಣಿಸಲಾಗುತ್ತಿದ್ದು ತರುವಾಯ ವ್ಯವಹಾರ ಸ್ವೀಕೃತಿಯನ್ನು ಪರಿಗಣಿಸುವಾಗ ತಗ್ಗಿದ ಬೆಲೆಯನ್ನು ಪರಿಣಾಮಕಾರಿ ಬಡ್ಡಿ ವಿಧಾನದನ್ವಯ ದುರ್ಬಲತೆಯ ಅವಕಾಶಗಳನ್ನು ಕಡಿಮೆಗೊಳಿಸಿ ಬಿಂಬಿಸಲಾಗುವುದು.

**1.20. ಆರ್ಥಿಕ ಹೊಣೆಗಾರಿಕೆಗಳು:**

ಆರ್ಥಿಕ ಹೊಣೆಗಾರಿಕೆಗಳು, ಸಾಲಗಳು, ವ್ಯಾಪಾರ ಸಂದಾಯಗಳು, ಹಣಕಾಸು ಉತ್ಪನ್ನ ಸಾಧನಗಳು, (Derivative Financial Instruments) ಆರ್ಥಿಕ ಖಾತರಿ ಬಾದ್ಯತೆಗಳು ಮತ್ತು ಇತರೆ ಆರ್ಥಿಕ

ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತವೆ.

ಕಂಪನಿಯು ಆರ್ಥಿಕ ಹೊಣೆಗಾರಿಕೆಗಳನ್ನು ಈ ಕೆಳಕಂಡಂತೆ ಮಾಪನ ಮಾಡಲಾಗುತ್ತದೆ.

| ಮಾಪನಾ ಆಧಾರ | ಆರ್ಥಿಕ ಹೊಣೆಗಾರಿಕೆಗಳ ಹೆಸರು |
|---|---|
| ಋಣಮುಕ್ತತೆಯ ವೆಚ್ಚ | ಸಾಲಗಳು, ವ್ಯಾಪಾರ ಸಂದಾಯಗಳು, ಹೊದಗಿಬಂದ ಬಡ್ಡಿ, ಭದ್ರತಾ ಠೇವಣಿ ಮತ್ತು ವ್ಯಾಪಾರಕ್ಕಲ್ಲದ ಇತರೆ ಹಣಕಾಸಿನ ಹೊಣೆಗಾರಿಕೆಗಳು |
| FVTPL | ಉತ್ಪನ್ನ ಒಪ್ಪಂದಗಳಾಗಿದ್ದ ವಿದೇಶಿ ವಿನಿಮಯ ಮುಂಗಡ ಒಪ್ಪಂದಗಳು ಹೆಡ್ಜ್ ಲೆಕ್ಕಪತ್ರ ನಿರ್ವಹಣೆ ಮತ್ತು IND-AS. 109 ಮತ್ತು ಇತರ ಆರ್ಥಿಕ ಹೊಣೆಗಾರಿಕೆಗಳಿಗೆ ಅರ್ಹತೆ ಹೊಂದಿರುವುದಿಲ್ಲ. |

ಆರ್ಥಿಕ ಹೊಣೆಗಾರಿಕೆಗಳನ್ನು ಅದು ಅಳಿಸಿದಾಗ ಮಾತ್ರ ಅಮಾನ್ಯಗೊಳಿಸ/ನಿರ್ಲಕ್ಷಿಸಲಾಗುತ್ತದೆ (ಅಂದರೆ) ಒಪ್ಪಂದದ ಪ್ರಕಾರ ಬಾಧ್ಯತೆಯು ನಿಗದಿತವಾದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಅವಧಿ ಮೀರಿದಾಗ.

ಹಣಕಾಸಿನ ಹೊಣೆಗಾರಿಕೆಗಳು ಅಥವಾ ಅದರ ಭಾಗವನ್ನು ಅಮಾನ್ಯ (derecognise) ಗೊಳಿಸಿದ ಮೇಲೆ, ಅಳಿಸಲಾದ ಅಥವಾ ಇನ್ನೊಂದು ಪಕ್ಷಕ್ಕೆ ವರ್ಗಾಯಿಸಲಾದ ಆರ್ಥಿಕ ಹೊಣೆಗಾರಿಕೆಗಳನ್ನು ಸಾಗಿಸುವ ಮೊತ್ತ ಮತ್ತು ನಗದುಅಲ್ಲದ ಸ್ವತ್ತುಗಳ ವರ್ಗಾವಣೆ ಅಥವಾ ಭಾವಿಸಲಾದ ಹೊಣೆಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲಾಗಿದೆ.

1.21 **ಆರ್ಥಿಕ ಸಾಧನಗಳನ್ನು ಸರಿದೂಗಿಸುವುದು**

ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಿವ್ವಳ ಮೊತ್ತವನ್ನು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಸರಿದೂಗಿಸಿ ಗುರುತಿಸಲಾದ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಆಸ್ತಿಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸುವ ಉದ್ದೇಶವಿದ್ದಾಗ ಮಾತ್ರ ಸರಿದೂಗಿಸಲಾಗುತ್ತದೆ.

**ದಿನಾಂಕ 31.03.2017 ರಂದು ಇದ್ದಂತೆ ಸಂಪನ್ಮೂಲವಾರು ಸ್ಥಾಪಿತ ಉತ್ಪಾದನಾ ಸಾಮರ್ಥ್ಯ:**

| ಸಂಪನ್ಮೂಲ | ಸ್ಥಾಪಿತ ಸಾಮರ್ಥ್ಯ (ಮೆಗಾ ವಾಟ್) |
|---|---|
| ಜಲ | 3671 |
| ಶಾಖೋತ್ಪನ್ನ | 5020 |
| ಕೇಂ.ವಿ.ಉ.ಘಟಕ | 2937 |
| ಎನ್.ಸಿ.ಇ. | 8079 |
| ಐ.ಪಿ.ಪಿ ಗಳು ಮತ್ತು ಇತರೆ | 1341 |
| ಒಟ್ಟು | 21048 |



ದಿನಾಂಕ 31.03.2017 ರಂದು ಇದ್ದಂತೆ ಕ.ವಿ.ಪ್ರ.ನಿ.ನಿ.ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳು :

| ವೋಲ್ಟೇಜು ವರ್ಗ | ವಿದ್ಯುತ್ ಕೇಂದ್ರಗಳ ಸಂಖ್ಯೆ | ಪ್ರಸರಣ ಮಾರ್ಗ/ ಭೂಗತ ಕೇಬಲ್ಲು ಮಾರ್ಗ ಉದ್ದಳತೆ (ಸೆಂ.ಕಿ.ಮೀ.) |
|---|---|---|
| 400 ಕೆವಿ | 4+10* | 3134 |
| 220 ಕೆವಿ | 99 | 11078 |
| 110 ಕೆವಿ | 398 | 10342 |
| 66 ಕೆವಿ | 615 | 10563 |
| ಒಟ್ಟು | 1116 | 35117 |





400ಕೆವಿ ಸಾಮರ್ಥ್ಯದ 10 ಉಪಕೇಂದ್ರಗಳನ್ನು ಪಿ.ಜಿ.ಸಿ.ಐ.ಎಲ್. ನಿರ್ವಹಿಸುತ್ತಿದೆ.

**ಪ್ರಸರಣ ನಷ್ಟ-3.283%** (ಆ.ವ.16-17) (ಕ.ವಿ.ಪ್ರ.ನಿ.ನಿ.ನಿ. ಗಡಿಯಿಂದ ವಿ.ಸ.ಕಂಪನಿಗಳ ಅಂತರ್ಗತ ಬಿಂದುವಿನವರೆಗೆ, ಎಸ್.ಆರ್. ನಷ್ಟವನ್ನು ಹೊರತುಪಡಿಸಿ)

**ವಿದ್ಯುತ್ ಸರಬರಾಜು ಕಂಪನಿವಾರು ಸ್ಥಾಪಿತ ಪ್ರಸರಣ ಸಾಮರ್ಥ್ಯ-2016-17**
**(220ಕೆವಿ ಉಪ ಕೇಂದ್ರಗಳು)**

| ವಿ.ಸ. ಕಂಪನಿ | ಉಪಕೇಂದ್ರಗಳ ಸಂಖ್ಯೆ | ಪರಿವರ್ತಕ ಸಾಮರ್ಥ್ಯ (ಎಂ.ವಿ.ಎ) | ಪ್ರಸರಣ ಸಾಮರ್ಥ್ಯ (ದ.ಲ.ಯೂ) |
|---|---|---|---|
| ಬೆ.ವಿ.ಸ ಕಂಪನಿ | 43 | 11045 | 9388 |
| ಮಂ.ವಿ.ಸ ಕಂಪನಿ | 8 | 1900 | 1615 |
| ಚಾ.ವಿ.ಸ ಕಂಪನಿ | 12 | 2650 | 2252 |
| ಗು.ವಿ.ಕಂಪನಿ | 14 | 2500 | 2125 |
| ಹು.ವಿ.ಕಂಪನಿ | 22 | 4705 | 4000 |
| ಒಟ್ಟು | 99 | 22800 | 19380 |

**ಟಿಪ್ಪಣಿ:**

1. 220ಕೆ.ವಿ.ಉಪಕೇಂದ್ರಗಳಲ್ಲಿನ ಸ್ಥಾಪಿತ ಪರಿವರ್ತಕ ಸಾಮರ್ಥ್ಯವನ್ನು ಆಧರಿಸಿ ಪ್ರಸರಣ ಸಾಮರ್ಥ್ಯವನ್ನು ಎಂ.ವಿ.ಎ.ನಲ್ಲಿ ಗೊತ್ತುಪಡಿಸಲಾಗುತ್ತದೆ.
2. ಪರಿವರ್ತಕ ಸಾಮರ್ಥ್ಯ(ಎಂ.ವಿ.ಎ)ವನ್ನು 0.85 ಪ್ರಮಾಣದ ವಿದ್ಯುತ್ ಕಾರಕಾಂಶದಿಂದ ಗುಣಿಸಿ ಪ್ರಸರಣ ಸಾಮರ್ಥ್ಯವನ್ನು ದ.ಲ.ಯೂ.ನಲ್ಲಿ ಗೊತ್ತುಪಡಿಸಲಾಗುತ್ತದೆ.

## ವಿದ್ಯುತ್ ಹಾಗೂ ಬೇಡಿಕೆ ಮುನ್ನೋಟ :

19ನೇ ಯ ಇ.ಪಿ.ಎಸ್. ಪ್ರಕಾರ ಕರ್ನಾಟಕ ರಾಜ್ಯದ ವಿದ್ಯುತ್ ಹಾಗೂ ಬೇಡಿಕೆ ಮುನ್ನೋಟದ ಮಾಹಿತಿ ಹೀಗಿದೆ:

| ವರ್ಷ | ವಿದ್ಯುತ್ (ದ.ಲ. ಯೂನಿಟ್) | ಬೇಡಿಕೆ (ಮೆಗಾ ವಾಟ್) |
|---|---|---|
| 2017-18 | 69808 | 11517 |
| 2018-19 | 73636 | 12169 |
| 2019-20 | 77532 | 12834 |
| 2020-21 | 81622 | 13534 |
| 2021-22 | 85932 | 14271 |
| 2022-23 | 90381 | 15033 |
| 2023-24 | 95042 | 15834 |
| 2024-25 | 99916 | 16674 |
| 2025-26 | 105017 | 17554 |
| 2026-27 | 110368 | 18481 |

## 2016–17ರಲ್ಲಿ ಸ್ಥಾಪಿಸಲ್ಪಟ್ಟ ಹೊಸ ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳು ಹಾಗೂ ಕೈಗೊಳ್ಳಲಾದ ಉನ್ನತೀಕರಣ ಕೆಲಸಗಳು:

## ಸಾರಾಂಶ

(ಎ) ಹೊಸ ಕೇಂದ್ರಗಳ ಸ್ಥಾಪನೆ:

| ಕ್ರ .ಸಂ. | ವೋಲ್ಟೇಜು ವರ್ಗ(ಕೆ.ವಿ) | ಸ್ಥಾಪಿಸಲ್ಪಟ್ಟ ಹೊಸ ಕೇಂದ್ರಗಳು | | ಹಿಂದಿನ ಆರ್ಥಿಕ ವರ್ಷದಲ್ಲಿ ವಿದ್ಯುತ್ ಕೇಂದ್ರಗಳಲ್ಲಿ ಈಗಾಗಲೇ ಪರಿವರ್ತಕಗಳನ್ನು ಅಳವಡಿಸಿದ್ದು, ಪ್ರಸಕ್ತ ವರ್ಷದಲ್ಲಿ ಸ್ಥಾಪಿಸಲ್ಪಟ್ಟ 2ನೇ ಪರಿವರ್ತಕ | | ಒಟ್ಟು ಎಂ.ವಿ.ಎ. |
|---|---|---|---|---|---|---|
| | | ಸಂಖ್ಯೆ | ಎಂ.ವಿ.ಎ. | ಸಂಖ್ಯೆ | ಎಂ.ವಿ.ಎ. | ಒಟ್ಟು ಎಂ.ವಿ.ಎ. |
| 1 | 400 | - | - | - | - | **-** |
| 2 | 220 | 2 | 512.5 | | | **512.5** |
| 3 | 110 | 13 | 190.0 | | 10 | **190.0** |
| 4 | 66 | 13 | 179.5 | | 40 | **219.5** |
| | **ಒಟ್ಟು** | **28** | **882.0** | **0** | **50** | **932.0** |

(ಬಿ) ಪ್ರಸರಣ ಮಾರ್ಗಗಳ ಸ್ಥಾಪನೆ:

| ಕ್ರ. ಸಂ. | ವೋಲ್ಟೇಜು ವರ್ಗ(ಕೆ.ವಿ) | ಸ್ಥಾಪಿಸಲ್ಪಟ್ಟ ಹೊಸ ಪ್ರಸರಣ ಮಾರ್ಗಗಳು | | ಮಾರ್ಚ್ 2017 ರವರೆಗೆ ಬಲಪಡಿಸುವಿಕೆ/ಪುನರ್ ವಾಹಕ ಗೊಳಿಸುವಿಕೆ ಕೆಲಸದ ಪ್ರಗತಿ | ಒಟ್ಟು | |
|---|---|---|---|---|---|---|
| | | ಸಂಖ್ಯೆ | ಸ.ಕಿ.ಮೀ. | ಸಂಖ್ಯೆ | ಸಂಖ್ಯೆ | ಸ.ಕಿ.ಮೀ. |
| 1 | 400 | 2 | 451.404 | | 2 | 451.404 |
| 2 | 220 | 4 | 107.980 | | 4 | 107.98 |
| 3 | 110 | 19 | 148.801 | 2 | 21 | 148.801 |
| 4 | 66 | 22 | 152.310 | 1 | 23 | 152.31 |
| | ಒಟ್ಟು | **47** | **860.494** | **3** | **50** | **860.494** |

ಸಿ) ವಿದ್ಯುತ್ ಕೇಂದ್ರಗಳ ಉನ್ನತೀಕರಣ:

| ಕ್ರ. ಸಂ. | ವೋಲ್ಟೇಜು ವರ್ಗ(ಕೆ.ವಿ) | ಪರಿವರ್ತಕಗಳ ಬದಲಾವಣೆ ಹಾಗೂ ಹೆಚ್ಚುವರಿ ಒದಗಿಸುವಿಕೆ | | ಎರಡನೇ ಪರಿವರ್ತಕ | ಬಿಡಿ ಭಾಗಗಳು ಹಾಗೂ ಒಂದೇ ಸಾಮರ್ಥ್ಯದ ಪರಿವರ್ತಕಗಳನ್ನು ವಿವಿಧ ವೋಲ್ಟೇಜು ವರ್ಗದ ಪರಿವರ್ತಕಗಳಿಂದ ಬದಲಾವಣೆ | ಒಟ್ಟು | |
|---|---|---|---|---|---|---|---|
| | | ಸಂಖ್ಯೆ | ಎಂ.ವಿ.ಎ. | ಎಂ.ವಿ.ಎ. | ಸಂಖ್ಯೆ | ಸಂಖ್ಯೆ | ಎಂ.ವಿ.ಎ. |
| 1 | 400 | - | - | - | - | - | - |
| 2 | 220 | 4 | 400.0 | - | - | 4 | 400.0 |
| 3 | 110 | 15 | 160.0 | - | 2 | 17 | 160.0 |
| 4 | 66 | 46 | 404.9 | 11.5 | - | 46 | 416.4 |
| | ಒಟ್ಟು | **65** | **964.9** | **11.5** | **2** | **67** | **976.4** |

| ಎ)–ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿಕಾರ್ಯಾನುಷ್ಠಾನಗೊಂಡ ವಲಯವಾರು ಹೊಸ ವಿದ್ಯುತ್ ಕೇಂದ್ರಗಳು | | | | | | | |
|---|---|---|---|---|---|---|---|
| ಕ್ರ. ಸಂ | ಜಿಲ್ಲೆ | ಸ್ಥಳ | ಕಾಮಗಾರಿಯ ಹೆಸರು | ಸಾಮರ್ಥ್ಯ ಸೇರ್ಪಡೆ | ಸೇರ್ಪಡೆ ಯಾದ ಒಟ್ಟು ಎಂ.ವಿ.ಎ | ವೋಲ್ಟೇಜು ವರ್ಗ (ಕೆ.ವಿ) | ಅನುಷ್ಠಾನಗೊಂಡ ದಿನಾಂಕ |
| **ಬಾಗಲಕೋಟೆ ಪ್ರಸರಣ ವಲಯ** | | | | | | | |
| 1 | ಹಾವೇರಿ | ಬಸವನಕಟ್ಟಿ (ಸೂಮನಕಟ್ಟಿ ಕ್ರಾಸ್(ಶಿಬಾರ್) | 1x10 ಎಮ್ ವಿ ಎ, 110/11ಕೆ.ವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x10 | 10 | 110 | 23-Feb-17 |
| 2 | ಬೆಳಗಾವಿ | ಬೆನಕಟ್ಟಿ | 1x10 ಎಮ್. ವಿ ಎ 110ಕೆ.ವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ (ಕಾರ್ಯಾನುಷ್ಠಾನಗೊಂಡ ಮೊದಲ ಪರಿವರ್ತನಾ ಕೇಂದ್ರ) | 1x10 | 10 | 110 | 30-Mar-17 |
| 3 | ಹಾವೇರಿ | ಗುಡುಗುರು ಮೈದೂರು (ಹೊಸಹೊನ್ನಟ) | 1x10 ಎಮ್ ವಿ ಎ, 110/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x10 | 10 | 110 | 24-Dec-16 |
| 4 | ಬೆಳಗಾವಿ | ಹುದಾಲಿ | 1x10 ಎಮ್ ವಿ ಎ, 110/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x10 | 10 | 110 | 16-Feb-17 |
| 5 | ಬೆಳಗಾವಿ | ನಾಗನೂರ್ | 2x10 ಎಮ್ ವಿ ಎ, 110ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 2x10 | 20 | 110 | 30-Mar-17 |
| 6 | ಬಾಗಲಕೋಟೆ | ನಾವಲಾಗಿ | 1x10 ಎಮ್. ವಿ ಎ 110/11 ಕೆವಿ ಸಾಮರ್ಥ್ಯದಉಪ ಕೇಂದ್ರದ ಸ್ಥಾಪನೆ (ಕಾರ್ಯಾನುಷ್ಠಾನ ಗೊಂಡ ಮೊದಲ ಪರಿವರ್ತನಾ ಕೇಂದ್ರ) | 1x10 | 10 | 110 | 30-Mar-17 |
| 7 | ಬೆಳಗಾವಿ | ಯಾದ್‌ವಾಡ್ | 2x10 ಎಮ್.ವಿ.ಎ 33/11 ಕೆವಿ ಉಪಕೇಂದ್ರವನ್ನು ಎಮ್.ವಿ.ಎ 110/11ಕೆವಿ ಉಪಕೇಂದ್ರಕ್ಕೆಉನ್ನತೀಕರಣ | 2x10 | 20 | 110 | 04-Jan-17 |
| **ಒಟ್ಟು ಉಪಮೊತ್ತ (ಎಮ್.ವಿ.ಎ)** | | | | | **90** | | |

| **ಬೆಂಗಳೂರು ಪ್ರಸರಣ ವಲಯ** | | | | | | | |
|---|---|---|---|---|---|---|---|
| 8 | ರಾಮನಗರ | ಹಳ್ಳಿಮಾರನಹಳ್ಳಿ | 1x12.5 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x12.5 | 12.5 | 66 | 28-Nov-16 |
| 9 | ಬೆಂಗಳೂರು ನಗರ | ಹಾಲೂರ್ | 2x12.5ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x12.5 | 25 | 66 | 17-Mar-17 |
| 10 | ಬೆಂಗಳೂರು ನಗರ | ಛತ್ರ | 2x8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x8 | 16 | 66 | 28-Dec-16 |
| 11 | ಕೋಲಾರ | ದೊಡ್ಡಕೇರಿ | 2x12.5 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x12.5 | 25 | 66 | 27-Mar-17 |
| 12 | ರಾಮನಗರ | ಮಾಗಡಿ | 2 x 100 ಎಮ್ ವಿ ಎ, 1 x 12.5 ಎಮ್ ವಿ ಎ, 220/66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x100, 1x12.5 | 212.5 | 220 | 14-Feb-17 |
| 13 | ಕೋಲಾರ | ಮಲ್ಲನಾಯಕನ ಹಳ್ಳಿ | 1 x 8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 1x8 | 8 | 66 | 20-Feb-17 |
| 14 | ಚಿಕ್ಕಬಳ್ಳಾಪುರ | ಪಲ್ಲಿಚರ್ಲು | 1 x 8 ಎಮ್ ವಿ ಎ, ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x8 | 8 | 66 | 6-Jan-17 |
| 15 | ಬೆಂಗಳೂರು ನಗರ | ವಿಕಾಸ್ ಟೆಕನಿ--ಕಲ್ ಪಾರ್ಕ್ | 2 x 150 ಎಮ್ ವಿ ಎ, 220/66/11ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x150 | 300 | 220 | 6-Mar-17 |
| **ಒಟ್ಟು ಉಪ ಮೊತ್ತ (ಎಮ್.ವಿ.ಎ)** | | | | | **607** | | |

| ಎ)–ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿ ಕಾರ್ಯಾನುಷ್ಠಾನಗೊಂಡ ವಲಯವಾರು ಹೊಸ ವಿದ್ಯುತ್ ಕೇಂದ್ರಗಳು | | | | | | | |
|---|---|---|---|---|---|---|---|
| ಕ್ರ. ಸಂ | ಜಿಲ್ಲೆ | ಸ್ಥಳ | ಕಾಮಗಾರಿಯ ಹೆಸರು | ಸಾಮರ್ಥ್ಯ ಸೇರ್ಪಡೆ | ಸೇರ್ಪಡೆ ಯಾದ ಒಟ್ಟು ಎಂ.ವಿ.ಎ | ವೋಲ್ಟೇಜು ವರ್ಗ (ಕೆ.ವಿ) | ಅನುಷ್ಠಾನಗೊಂಡ ದಿನಾಂಕ |
| **ಹಾಸನ ಪ್ರಸರಣ ವಲಯ** | | | | | | | |
| 16 | ಚಿಕ್ಕಮಗಳೂರು | ದುಗಲಪುರಾ | 2 x 8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 2x8 | 16 | 66 | 7-Feb-17 |
| 17 | ಹಾಸನ | ಉಗ್ಗಣೆ | 1x8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 1x8 | 8 | 66 | 17-Mar-17 |
| **ಒಟ್ಟು ಉಪಮೊತ್ತ (ಎಮ್.ವಿ.ಎ)** | | | | | **24** | | |
| **ಕಲಬುರ್ಗಿ ಪ್ರಸರಣ ವಲಯ** | | | | | | | |
| 18 | ರಾಯಚುರು | ಗೂಗಲ್ | 1 x 10ಎಮ್ ವಿ ಎ, 110/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 1x10 | 10 | 110 | 31-Mar-17 |
| 19 | ಯಾದಗಿರಿ | ಹುಣಸಗಿ | ಹಾಲಿ 33/11 ಕೆವಿ ಯನ್ನು 1 x 20ಎಮ್ ವಿ ಎ, 110/33 ಕೆವಿ ಮತ್ತು, 1 x 10 ಎಮ್ ವಿ ಎ, 110/11ಕೆವಿ ಉಪ ಕೇಂದ್ರಕ್ಕೆ ಉನ್ನತಿಕರಣ (ಕಾರ್ಯಾನುಷ್ಠಾನಗೊಂಡ ಮೊದಲ ಪರಿಪರ್ವತನಾ ಕೇಂದ್ರ) | 1x10 | 10 | 110 | 28-Feb-17 |
| 20 | ಬಳ್ಳಾರಿ | ಮೈಲಾರ | 33/11 ಕೆವಿ, 2 x 10 ಎಮ್ ವಿ ಎ,110/11 ಕೆವಿ ಸಾಮ–ರ್ಥ್ಯದ ಉಪಕೇಂದ್ರದ ಉನ್ನತಿಕರಣ | 2x10 | 20 | 110 | 31-Aug-16 |
| 21 | ಕೊಪ್ಪಳ | ನಾವಲಿ | 2 x 10 ಎಮ್ ವಿ ಎ, 110/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 2x10 | 20 | 110 | 24-Mar-17 |
| 22 | ಬೀದರ್ | ನಿರಣಾ | ಹಾಲಿ 33/11 ಕೆವಿ ಯನ್ನು 2 x 10 ಎಮ್ ವಿ ಎ, 110/11 ಕೆವಿ ಉಪಕೇಂದ್ರಕ್ಕೆ ಉನ್ನತಿಕರಣ | 2x10 | 20 | 110 | 25-Nov-16 |
| 23 | ಬಳ್ಳಾರಿ | ಸಿರಿಗೇರಿ ಕ್ರಾಸ್ | 33/11 ಕೆವಿ, 2 x 10 ಎಮ್ ವಿ ಎ, 110/11ಕೆವಿ ಸಾಮರ್ಥ್ಯದ ಉಪಕೇಂದ್ರದ ಉನ್ನತಿಕರಣ | 2x10 | 20 | 110 | 24-Mar-17 |
| **ಒಟ್ಟು ಉಪಮೊತ್ತ (ಎಮ್.ವಿ.ಎ)** | | | | | **100** | | |
| **ಮೈಸೂರು ಪ್ರಸರಣ ವಲಯ** | | | | | | | |
| 24 | ಮಂಡ್ಯ | ಬೆಳಗೊಳ | ಹಾಲಿ 2 x 12.5 ಎಮ್ ವಿ ಎ, 66/11 ಕೆ ವಿ ಉಪಕೇಂದ್ರ ನ್ನು ಬೆಳಗೊಳ ಪ್ರದೇಶಕ್ಕೆ ಸ್ಥಳಾಂತರಗೊಂಡಿದೆ | - | 0 | 66 | 17-Mar-17 |
| 25 | ಮೈಸೂರು | ದೇವನೂರ್ ಹಂತ–2 | 2 x 12.5 ಎಮ್ ವಿ ಎ, 66/11ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 2x12.5 | 25 | 66 | 20-Mar-17 |
| 26 | ಮೈಸೂರು | ಹೆಬ್ಬಳಾ ಕೈಗಾರಿಕ ಪ್ರದೇಶ | 1 x 20 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪ ಕೇಂದ್ರದ ಸ್ಥಾಪನೆ | 1x20 | 20 | 66 | 22-Mar-17 |
| **ಒಟ್ಟು ಉಪಮೊತ್ತ (ಎಮ್.ವಿ.ಎ)** | | | | | **45** | | |

| ಎ)–ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿ ಕಾರ್ಯಾನುಷ್ಠಾನಗೊಂಡ ವಲಯವಾರು ಹೊಸ ವಿದ್ಯುತ್ ಕೇಂದ್ರಗಳು | | | | | | | |
|---|---|---|---|---|---|---|---|
| ಕ್ರ. ಸಂ | ಜಿಲ್ಲೆ | ಸ್ಥಳ | ಕಾಮಗಾರಿಯ ಹೆಸರು | ಸಾಮರ್ಥ್ಯ ಸೇರ್ಪಡೆ | ಸೇರ್ಪಡೆಯಾದ ಒಟ್ಟು ಎಂ.ವಿ.ಎ | ವೋಲ್ಟೇಜು ವರ್ಗ (ಕೆ.ವಿ) | ಅನುಷ್ಠಾನಗೊಂಡ ದಿನಾಂಕ |
| ತುಮಕೂರು ಪ್ರಸರಣ ವಲಯ | | | | | | | |
| 27 | ತುಮಕೂರು | ಆಗಲವಾಡಿ | 1x 8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x8 | 8 | 66 | 31-Mar-17 |
| 28 | ತುಮಕೂರು | ಪುರಾವಾರ | 1 x 8 ಎಮ್ ವಿ ಎ, 66/11 ಕೆವಿ ಸಾಮರ್ಥ್ಯದ ಉಪಕೇಂದ್ರದ ಸ್ಥಾಪನೆ | 1x8 | 8 | 66 | 31-Mar-17 |
| ಒಟ್ಟು ಉಪಮೊತ್ತ (ಎಮ್.ವಿ.ಎ) | | | | | 16 | | |
| ಒಟ್ಟು(ಎಮ್.ವಿ.ಎ) | | | | | 882 | | |
| ಹಿಂದಿನ ವರ್ಷದಲ್ಲಿ ಆದ ಕೇಂದ್ರಗಳ ಸ್ಥಾಪನೆ, 2ನೇ ಪರಿರ್ವತಕ ಸ್ಥಾಪನೆ 2016–17ಯ | | | | | | | |

| ಬೆಂಗಳೂರು ಪ್ರಸರಣ ವಲಯ | | | | | | | |
|---|---|---|---|---|---|---|---|
| 1 | ಬೆಂಗಳೂರು ನಗರ | ಹೆಣ್ಣೂರುರಸ್ತೆ | 2ನೇ 1 x 20 ಎಮ್ ವಿ ಎ, 66/11 ಕೆವಿ ಪರಿವರ್ತಕ | 1x20 | 20 | 66 | 17-Jun-16 |
| 2 | ಬೆಂಗಳೂರು ನಗರ | ಶ್ರೀಗಂಧಕಾವಲ್ | 2ನೇ 1 x 20 ಎಮ್ ವಿ ಎ, 66/11ಕೆವಿ ಪರಿವರ್ತಕ | 1x20 | 20 | 66 | 29-Jul-16 |

| ಬಾಗಲಕೋಟೆ ಪ್ರಸರಣ ವಲಯ | | | | | | | |
|---|---|---|---|---|---|---|---|
| 3 | ಬೆಳಗಾವಿ | ಮನ್ನೂರು | 2ನೇ 1 x 20 ಎಮ್ ವಿ ಎ,110/11 ಕೆವಿ ಪರಿವರ್ತಕ | 1x10 | 10 | 110 | 29-Jun-16 |
| ಒಟ್ಟು(ಎಮ್.ವಿ.ಎ) | | | | | 50 | | |

| ಬಿ–ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿ ಕಾರ್ಯಾನುಷ್ಠಾನಗೊಂಡ ವಲಯವಾರು ಹೊಸ ವಿದ್ಯುತ್ ಮಾರ್ಗಗಳು | | | | | | |
|---|---|---|---|---|---|---|
| ಕ್ರ. ಸಂ | ಜಿಲ್ಲೆ | ಸ್ಥಳ | ಯೋಜನೆಯ ಹೆಸರು | ವೋಲ್ಟೇಜು ವರ್ಗ (ಕೆವಿ) | ಮಾರ್ಗದ ಉದ್ದಳತೆ ಸ.ಕಿ.ಮೀ. | ಅನುಷ್ಠಾನಗೊಂಡ ದಿನಾಂಕ |
| ಬಾಗಲಕೋಟೆ ಪ್ರಸರಣ ವಲಯ | | | | | | |
| 1 | ವಿಜಯಪುರ | ಅತರ್ಗ (ದೇವರ ಹಿಪ್ಪರಗಿ ಪ್ರವೇಶ ನಿರ್ಗಮನ) ಮಾರ್ಗ | 110 ಕೆ.ವಿ ಅತರ್ಗ ಉಪ ಕೇಂದ್ರದಲ್ಲಿ ಆಲೋ ವ್ಯವಸ್ಥೆ ಮಾಡಲು,110ಕೆ.ವಿ. ಬಸವನ ಬಾಗೇವಾಡಿ ದೇವರಹಿಪ್ಪರಗಿ ಇಂಡಿ ಮಾರ್ಗ ದಿಂದ ಅತರ್ಗ ಉಪ ಕೇಂದ್ರ ವರೆಗೆ 10.7052 ಕಿ.ಮೀ. ದೂರದಷ್ಟು2 ನೇ ಸರ್ಕ್ಯೂಟ್ ಎಳೆಯು ವುದಕ್ಕೆ 110 ಕೆ.ವಿ ಅತರ್ಗ ಉಪ ಕೇಂದ್ರದಲ್ಲಿ, 01 ಸಂಖ್ಯೆ 110ಕೆ.ವಿಟಿ.ಬಿ ಅನ್ನು ಸ್ಥಾಪಿಸಲು. | 110 | 10.705 | 26-Oct-16 |
| 2 | ಹಾವೇರಿ | ಬಸವನಕಟ್ಟಿ (ಸೋಮನಕಟ್ಟಿ ಕ್ರಾಸ್ (ಶಿಬಾರ್) ಮಾರ್ಗ | 110ಕೆವಿ ಹಾವೇರಿ ಇಂದ ಗುತ್ತಲ್ಲ ಒಂಟಿ ಸರ್ಕ್ಯೂಟ್ ಮಾರ್ಗದಿಂದ ಸೋಮನಕಟ್ಟಿ ಕ್ರಾಸ್ ಉಪಕೇಂದ್ರ 0.184 ಕಿ.ಮೀ. ಉದ್ದಳತೆಗೆ ಪ್ರಸ್ತಾಪಿತ 110/11ಕೆವಿ ಉಪಕೇಂದ್ರಕ್ಕೆ 110ಕೆವಿ ಪ್ರವೇಶ–ನಿರ್ಗಮನ ಮಾರ್ಗ | 110 | 0.396 | 23-Feb-17 |
| 3 | ಹಾವೇರಿ | ಗುಡ್ಡುಗುರುಮೈದರ್ (ಹೊಸಹೊನ್ನಟ್ಟಿ ಮಾರ್ಗ) | 110 ಕೆ.ವಿ ರಾಣಿಬೆನ್ನೂರು ಇಂದ ಗುತ್ತಲ್ಲ 2ನೇ ಸರ್ಕ್ಯೂಟ್ ಮಾರ್ಗದಿಂದ ಹೊಸಹುನ್ನಟ್ಟಿ ಉಪಕೇಂದ್ರ 0.152 ಕಿ.ಮೀ. ಉದ್ದಳತೆಗೆ ಪ್ರಸ್ತಾಪಿತ 110/11ಕೆವಿ ಉಪಕೇಂದ್ರಕ್ಕೆ 110ಕೆವಿ ಪ್ರವೇಶ–ನಿರ್ಗಮನ ಮಾರ್ಗ | 110 | 0.304 | 24-Dec-16 |
| | | **400** | **220** | **110** | **66** | **Total** |
| 1 | ಪರೀಕ್ಷೆ ನಡೆಸಿದ ನಿರೋಧಕದ ತಂತಿಗಳ (ಇನ್ಸುಲೇಟರ್ ಸ್ಟ್ರಿಂಗ್‌ಗಳ) ಸಂಖ್ಯೆ | - | 5036 | 655 | 147 | 5838 |
| 2 | ದೋಷಯುಕ್ತ ಇನ್ಸುಲೇಟರ್ ಸ್ಟ್ರಿಂಗ್‌ಗಳನ್ನು ಬದಲಿಸಿದ ಸಂಖ್ಯೆ | - | 07 | 07 | - | 14 |
| 3 | ಹಾಟ್ ಸ್ಪಾಟ್‌ಗಳನ್ನು ಗುರುತಿಸುವುದಕ್ಕಾಗಿ ಥರ್ಮೋ ವಿಷನ್ ಸ್ಕ್ಯಾನಿಂಗ್ ಮೂಲಕ ಪರೀಕ್ಷಿಸಲ್ಪಟ್ಟ ಉಪಕೇಂದ್ರಗಳು/ ಇನ್ಸುಲೇಟರ್ ಸ್ಟ್ರಿಂಗ್‌ಗಳ ಸಂಖ್ಯೆ | 10 | 147 | 35 | 584 | 776 |
| 4 | ಪರೀಕ್ಷೆ ನಡೆಸಿದ ಜಂಪರ್‌ಗಳ ಸಂಖ್ಯೆ | 1429 | 2817 | 72 | 165 | 4483 |
| 5 | ಉಪ ಕೇಂದ್ರಗಳಲ್ಲಿ ಸ್ವಿಚ್ ಯಾರ್ಡಗಳಲ್ಲಿ ತಡೆಗಟ್ಟುವ ನಿರ್ವಹಣೆ (ಪ್ರಿವೆಂಟಿವ್ ಮೆಂಟೆನನ್ಸ್) ಸಂಖ್ಯೆ | 07 | 194 | 294 | 629 | 1124 |
| 6 | ತಡೆಗಟ್ಟುವ ನಿರ್ವಹಣೆ (ಪ್ರಿವೆಂಟಿವ್ ಮೆಂಟೆನನ್ಸ್) ನಡೆಸಿದ ಪ್ರಸರಣ ಮಾರ್ಗಗಳ ಸಂಖ್ಯೆ | - | 16 | - | - | 16 |
| 7 | EHV ಉಪ ಕೇಂದ್ರಗಳಲ್ಲಿ ಒದಗಿಸಿರುವ ಬೈ-ಪಾಸ್-ಜಂಪರ್‌ಗಳ ಸಂಖ್ಯೆ. | - | 11 | - | - | 11 |
| 8 | ತುರ್ತುಸ್ಥಿತಿಗಳ ಸಮಯದಲ್ಲಿ ತುರ್ತುಸ್ಥಿತಿಗಳನ್ನು ನಿರ್ವಹಿಸಿದ ಮಾರ್ಗಗಳು ಮತ್ತು ಉಪ ಕೇಂದ್ರಗಳ ಸಂಖ್ಯೆ | | | | | 165 |
| 9 | EHT ಪ್ರಸರಣ ಮಾರ್ಗಗಳಿಂದ ಕಟ್ಟಡಗಳಿಗೆ ಇರುವ ಲಂಬ (ವರ್ಟಿಕಲ್) ಮತ್ತು ಅಡ್ಡ (ಹಾರಿಜ್ಹಾಂಟಲ್) ಕ್ಲಿಯರೆನ್ಸ್‌ಗಳ ಮಾಪನ | | | | | 423 |

**ತಾಂತ್ರಿಕ ತನಿಖೆ & ಗುಣ ನಿಯಂತ್ರಣ ಶಾಖೆ**

**2016-17 ನೇ ಸಾಲಿನ ಸಾಧನೆಗಳ ವರದಿ ಈ ಕೆಳಕಂಡಂತಿದೆ**

| ಕ್ರ. ಸಂ | ವಿವರಗಳು | ವಾರ್ಷಿಕ ಗುರಿ | ತಿಂಗಳು | | ಸಂಚಿತ | | ಷರ |
|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾಧನೆ | |
| 1 | ಉಗ್ರಾಣ ತಪಾಸಣೆ | 31 | 6 | 6 | 18 | 17 | |
| 2 | **ಪ್ರಗತಿಯಲ್ಲಿರುವ ಕಾಮಗಾರಿಗಳ ತಪಾಸಣೆ** | | | | | | |
| | (ಎ) ಕೇಂದ್ರಗಳು | | 43 | 43 | 465 | 441 | ಪ್ರಗತಿಯಲ್ಲಿರುವ ಕಾಮಗಾರಿಗಳು- 33<br>ಪ್ರಗತಿಯಲ್ಲಿಲ್ಲದ ಕಾಮಗಾರಿಗಳು-14<br>ಪ್ರಾರಂಭವಾಗದ ಕಾಮಗಾರಿಗಳು-6 |
| | (ಬಿ) ಮಾರ್ಗಗಳು | | 37 | 37 | 404 | 381 | ಪ್ರಗತಿಯಲ್ಲಿರುವ ಕಾಮಗಾರಿಗಳು- 27<br>ಪ್ರಗತಿಯಲ್ಲಿಲ್ಲದ ಕಾಮಗಾರಿಗಳು-16<br>ಪ್ರಾರಂಭವಾಗದ ಕಾಮಗಾರಿಗಳು-5 |
| | (ಸಿ) ಉನ್ನತಿಕರಣ/ ಹೆಚ್ಚುವರಿ | | 42 | 42 | 505 | 504 | ಪ್ರಗತಿಯಲ್ಲಿರುವ ಕಾಮಗಾರಿಗಳು- 29<br>ಪ್ರಗತಿಯಲ್ಲಿಲ್ಲದ ಕಾಮಗಾರಿಗಳು-8<br>ಪ್ರಾರಂಭವಾಗದ ಕಾಮಗಾರಿಗಳು-10 |
| | (ಡಿ) ಪ್ರತ್ಯೇಕ ಮಾರ್ಗಗಳು | | 26 | 24 | 346 | 334 | ಪ್ರಗತಿಯಲ್ಲಿರುವ ಕಾಮಗಾರಿಗಳು- 20<br>ಪ್ರಗತಿಯಲ್ಲಿಲ್ಲದ ಕಾಮಗಾರಿಗಳು-21<br>ಪ್ರಾರಂಭವಾಗದ ಕಾಮಗಾರಿಗಳು-3 |
| 3 | **ಹಾಲಿ ಕೇಂದ್ರಗಳ & ಮಾರ್ಗಗಳ ತಪಾಸಣೆ** | | | | | | |
| | **(ಎ) ಕೇಂದ್ರಗಳು** | **1102** | **91** | **55** | **1087** | **640** | |
| | **(ಬಿ) ಮಾರ್ಗಗಳು** | **1402** | **108** | **41** | **1275** | **491** | |
| **4** | ಸಾಮಾಗ್ರಿಗಳ ತಪಾಸಣೆ | | | | | | |
| | **(ಎ) ಕಾರ್ಖಾನೆಗಳಲ್ಲಿ** | | | | | | |
| | (1) ಕ.ವಿ.ಪ್ರ.ನಿ.ನಿ ಯ ಕಾಮಗಾರಿ | | | **253** | | **1779** | |
| | (2) ಐ.ಪಿ.ಪಿ ಯ ಕಾಮಗಾರಿ | | | **0** | | **7** | |
| | (3) ಸ್ವಯಂ ನಿರ್ಮಾಣ ಕಾಮಗಾರಿ | | | **68** | | **378** | |
| | **(ಬಿ) ಕಾಮಗಾರಿಯ ಸ್ಥಳದಲ್ಲಿ** | | | **0** | | **0** | |
| | (1) ಕ.ವಿ.ಪ್ರ.ನಿ.ನಿ ಯ ಕಾಮಗಾರಿ | | | **45** | | **345** | |
| | (2) ಐ.ಪಿ.ಪಿ ಯ ಕಾಮಗಾರಿ | | | **12** | | **46** | |
| | (3) ಸ್ವಯಂ ನಿರ್ಮಾಣ ಕಾಮಗಾರಿ | | | **2** | | **27** | |
| | **(ಸಿ) ಉಗ್ರಾಣದಲ್ಲಿ** | | | **224** | | **1403** | |

| ಕ್ರ. ಸಂ | ವಿವರಗಳು | ವಾರ್ಷಿಕ ಗುರಿ | ತಿಂಗಳು | | ಸಂಚಿತ | | ಷರ |
|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾಧನೆ | |
| 5 | ಪೂರ್ಣಗೊಂಡ ಕಾಮ ಗಾರಿಗಳ ತನಿಖೆ 2014–15 | | | | | | |
| | (ಎ) ಕೇಂದ್ರಗಳು | 18 | | 7 | | 7 | |
| | (ಬಿ) ಮಾರ್ಗಗಳು | 28 | | 12 | | 7 | |
| | (ಸಿ) ಉನ್ನತಿಕರಣ/ ಹೆಚ್ಚುವರಿ | 38 | | 10 | | 12 | |
| 6 | ಮಾರಾಟಗಾರರ ವಿಶ್ಲೇಷಣೆಯ ತನಿಖೆ | 0 | | 1 | | 5 | |
| 7 | ಇತರೆ | | | | | | |
| | | | | | | | ಸಿವಿಲ್ ಕಾಮಗಾರಿಗಳು |
| ಕ್ರ. ಸಂ | ವಿವರಗಳು | ವಾರ್ಷಿಕ ಗುರಿ | ತಿಂಗಳು | | ಸಂಚಿತ | | ಷರ |
| | | | ಗುರಿ | ಸಾಧನೆ | ಗುರಿ | ಸಾಧನೆ | |
| 1 | ಪ್ರಗತಿಯಲ್ಲಿರುವ ಕಾಮಗಾರಿಗಳ ತನಿಖೆ | | | | | | |
| | (ಎ) ಕೇಂದ್ರಗಳು | | 23 | 23 | | 285 | |
| 2 | ಹಾಲಿ ಕೇಂದ್ರಗಳ & ಮಾರ್ಗಗಳ ತಪಾಸಣೆ | | | | | | |
| | (ಎ) ಕೇಂದ್ರಗಳು | | 4 | 4 | | 36 | |
| | (ಬಿ) ಮಾರ್ಗಗಳು | | | | | | |
| 3 | ಪೂರ್ಣಗೊಂಡ ಕಾಮಗಾರಿಗಳ ತನಿಖೆ | | | | | | |
| | (ಎ) ಕೇಂದ್ರಗಳು/ಇತರೆ | | 2 | 2 | | 13 | |
| | (ಬಿ) ಮಾರ್ಗಗಳು | | | | | | |
| | ಒಟ್ಟು | | 29 | 29 | | 334 | |

**ಮಾಹಿತಿ ತಂತ್ರಜ್ಞಾನ ಮತ್ತು ಎಂ.ಐ.ಎಸ್.**

ಮಾಹಿತಿ ತಂತ್ರಜ್ಞಾನ ಶಾಖೆಯು ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುತ್ತದೆ ಮತ್ತು ಕ.ವಿ.ಪ್ರ.ನಿ.ನಿ.ಯ ಅಧಿಕೃತ ವೆಬ್‌ಸೈಟ್, ಅಂತರ್‌ಜಾಲ (ಇಂಟರ್‌ನೆಟ್), ಇಂಟ್ರಾನೆಟ್ ಪೋರ್ಟಲ್, ಇ–ಪ್ರಸರಣ, ಡಾಟಾ ಸೆಂಟರ್, ಕಾವೇರಿ ಭವನದಲ್ಲಿರುವ ಕಛೇರಿಗಳ ನೆಟ್‌ವರ್ಕ್, ಯಂತ್ರಾಂಶ (ಹಾರ್ಡ್‌ವೇರ್) ಹಾಗೂ ಸಿಸ್ಟಮ್ ಅಡ್ಮಿನಿಸ್ಟ್ರೇಶನ್, ದತ್ತಾಂಶ ನಿರ್ವಹಣೆ, ತಂತ್ರಾಂಶ ಅಭಿವೃದ್ಧಿಪಡಿಸುವುದು, ಯಂತ್ರಾಂಶ ಮತ್ತು ತಂತ್ರಾಂಶ ಖರೀದಿ ಮೊದಲಾದ ಕೆಲಸಗಳನ್ನು ನಿರ್ವಹಿಸುತ್ತಿದೆ.

ಮಾಹಿತಿ ಹಕ್ಕು ಕಾಯ್ದೆ ನಿಯಮಗಳ ಅಡಿಯಲ್ಲಿ ಕವಿಪ್ರನಿನಿಯ ನಿಗಮ ಕಾರ್ಯಾಲಯ ಹಾಗೂ ಇತರ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಸಲ್ಲಿಸುವ ಮಾಹಿತಿಗಳನ್ನು ಡಾಟಾಬೇಸ್‌ನಲ್ಲಿ ನಿರ್ವಹಿಸಲಾಗುತ್ತಿದೆ. 2016–17ರ ವರ್ಷದಲ್ಲಿ, ಮಾಹಿತಿ ಹಕ್ಕು ಕಾಯಿದೆ ನಿಯಮಗಳ ಅಡಿಯಲ್ಲಿ ಸ್ವೀಕರಿಸಿ ಇತ್ಯರ್ಥಗೊಳಿಸಲ್ಪಟ್ಟ ಅರ್ಜಿಗಳ ವಿವರ ಹೀಗಿದೆ:

| ಸಾರ್ವಜನಿಕ ಪ್ರಾಧಿಕಾರದ ಅಡಿಯಲ್ಲಿ ಒಟ್ಟು ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸ್ವೀಕರಿಸಲ್ಪಟ್ಟ ಅರ್ಜಿಗಳ ಸಂಖ್ಯೆ | 2016-17ರ ವರ್ಷದಲ್ಲಿ ಇತ್ಯರ್ಥಗೊಳಸಲ್ಪಟ್ಟ ಅರ್ಜಿಗಳ ಸಂಖ್ಯೆ |
|---|---|---|
| 108 | 1831 | 1817 |

ಎಂ.ಐ.ಎಸ್. ಶಾಖೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳು/ಅಂಕಿ-ಅಂಶಗಳನ್ನು ಕಲೆ ಹಾಕುವ ಮತ್ತು ಕ್ರೋಢೀಕರಿಸುವ ಜವಾಬ್ದಾರಿಯನ್ನು ಹಾಗೂ ಕೇಂದ್ರ ವಿದ್ಯುತ್ ಪ್ರಾಧಿಕಾರ, ವಿದ್ಯುತ್ ಮಂತ್ರಾಲಯ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯೋಜನಾ ಇಲಾಖೆ, ಶಾಸನಬದ್ಧ ಸಂಸ್ಥೆಗಳು ಕೋರುವ ಮಾಹಿತಿಗಳನ್ನು ನಿಯಮಿತವಾಗಿ ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ.

ಎಂ.ಐ.ಎಸ್. ಶಾಖೆಯು ಪ್ರತಿ ತಿಂಗಳು ಗ್ರಾಮೀಣ ವಿದ್ಯುದೀಕರಣ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣದ ಪ್ರಗತಿಯ ವರದಿಗಳನ್ನು ಗ್ರಾಮೀಣ ವಿದ್ಯುದೀಕರಣ ನಿಗಮ, ನವದೆಹಲಿ ರವರಿಗೆ ಸಲ್ಲಿಸುವುದಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು, ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆ/ ಕೆ.ಡಿ.ಪಿ.ಸಭೆಗಳಿಗೆ ಒದಗಿಸುತ್ತಿದೆ.

ಎಂ.ಐ.ಎಸ್. ಶಾಖೆಯು ಮುಖ್ಯವಾಗಿ ವಿಧಾನ ಮಂಡಲದ ಮಾನ್ಯ ಸದಸ್ಯರುಗಳು ಕೋರುವ ಮಾಹಿತಿಗಳಿಗೆ ಮತ್ತು ಅಧಿವೇಶನದ ಸಮಯದಲ್ಲಿ ಕೋರಲಾಗುವ ಪ್ರಶ್ನೆಗಳಿಗೆ ಹಾಗೂ ವಿವಿಧ ನಿಯಮಗಳಡಿ ಕೋರಲಾದ ಸೂಚನೆಗಳಿಗೆ ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳಿಂದ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಕ್ರೋಢೀಕರಿಸಿ, ಕರಡು ಉತ್ತರಗಳನ್ನು ತಯಾರಿಸಿ, ಇಂಧನ ಇಲಾಖೆಗೆ ಸಲ್ಲಿಸುತ್ತಿದೆ. ಕಳೆದ 2016-17ನೇ ಸಾಲಿನಲ್ಲಿ ಜರುಗಿದ ವಿಧಾನ ಮಂಡಲದ ಅಧಿವೇಶನಗಳ ವಿವರಗಳು ಈ ಕೆಳಕಂಡಂತಿವೆ:-

| ಕ್ರ. ಸಂ. | ಅವಧಿ | ದಿನಗಳು | ಅಧಿವೇಶನ |
|---|---|---|---|
| 1. | 04-07-2016 ರಿಂದ 18-07-2016 | 11 ದಿನಗಳು | ಮುಂಗಾರು ಅಧಿವೇಶನ |
| 2. | 21-11-2016 ರಿಂದ 03-12-2016 | 10 ದಿನಗಳು | ಚಳಿಗಾಲದ ಅಧಿವೇಶನ |
| 3. | 06-02-2017 ರಿಂದ 14-02-2017 | 07 ದಿನಗಳು | ಬಜೆಟ್ ಅಧಿವೇಶನ |
| 4. | 15-03-2017 ರಿಂದ 28-03-2017 | 12 ದಿನಗಳು | ಮುಂದುವರೆದ ಅಧಿವೇಶನ |

ಒಟ್ಟಾರೆ 253 ವಿಧಾನ ಸಭೆಯ ಪ್ರಶ್ನೆಗಳು, 156 ವಿಧಾನ ಪರಿಷತ್ತಿನ ಪ್ರಶ್ನೆಗಳು ಮತ್ತು 13 ವಿವಿಧ ನಿಯಮಗಳು/ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ, ಸೂಚನೆಗಳಿಗೆ ಕ.ವಿ.ಪ್ರ.ನಿ.ನಿ/ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ.

## ಅರಣ್ಯ ಶಾಖೆಯ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕೇಂದ್ರ ಕಛೇರಿಯಲ್ಲಿ ಅರಣ್ಯ ವಿಭಾಗವು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಓರ್ವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯನ್ನು ಹೊಂದಿರುತ್ತದೆ.

2016-17 ಸಾಲಿನಲ್ಲಿ ಕೋಣಂದೂರು ವಿದ್ಯುತ್ ಮಾರ್ಗಕ್ಕೆ ಅವಶ್ಯವಿರುವ ಅರಣ್ಯ ಭೂಮಿಯನ್ನು ಹಸ್ತಾಂತರಿಸಲು ಕರ್ನಾಟಕ ಸರ್ಕಾರವು ಆದೇಶವನ್ನು ಹೊರಡಿಸಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿಯಿಂದ ವಿರಾಜ್‌ಪೇಟೆ ಮಡಕೇರಿ ವಿದ್ಯುತ್ ಮಾರ್ಗದ (2.354 ಹೇಕ್ಟರ್) ಪ್ರಸ್ತಾವನೆಯ ಅನುಸರಣಾ ವರದಿಯನ್ನು ಕರ್ನಾಟಕ ಸರ್ಕಾರದ ಮುಖಾಂತರ ಹಂತ-2ರ ಅನುಮೋದನೆಗೆ ಕೇಂದ್ರ ಸರ್ಕಾರದ ಪ್ರಾಂತಿಯ ಕಛೇರಿ, ಕೋರಮಂಗಲಕ್ಕೆ ಕಳುಹಿಸಿಕೊಡಲು ಕೋರಲಾಗಿದೆ.

ಇನ್ನುಳಿದ ಕಾಮಗಾರಿಗಳಿಗೆ ಅವಶ್ಯಕತೆವಿರುವ ಅರಣ್ಯ ಭೂಮಿಯನ್ನು ದೊರಕಿಸಿಕೊಳ್ಳುವಲ್ಲಿನ ಪ್ರಸ್ತಾವನೆಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಹಂತಗಳಲ್ಲಿ ಸಂಸ್ಕರಿಸಲ್ಪಡುತ್ತಿದ್ದು, ಅರಣ್ಯ (ಸಂರಕ್ಷಣೆ) ಕಾಯಿದೆ 1980 ರಡಿಯಲ್ಲಿ ಅವುಗಳ ಶೀಘ್ರ ಅನುಮೋದನೆಗಾಗಿ ನಿಗಮದ ಈ ಅರಣ್ಯ ಶಾಖೆಯ ಸರ್ವಕಾಲಿಕ ನಿಗಾವಹಿಸಿ ಪರಿಣಾಮಕಾರಿಯಾಗಿ ಪ್ರಯತ್ನಿಸುತ್ತಿದೆ.

1. ಮಡಿಕೇರಿಯಿಂದ ವಿರಾಜ್‌ಪೇಟೆ 66 ಕೆವಿ ವಿದ್ಯುತ್ ಮಾರ್ಗ
2. ಗುತ್ತಿ ನೆಲಮಂಗಲ ವಿದ್ಯುತ್ ಮಾರ್ಗ (ಹಳೆಯ 400 ಕೆವಿ ವಿದ್ಯುತ್ ಮಾರ್ಗ)
3. ಕೋಡಿಹಳ್ಳಿಯಿಂದ ಹುಣಸೇಣಹಳ್ಳಿ ವಿದ್ಯುತ್ ಮಾರ್ಗ
4. ಹಿರಿಯೂರು-ಗೌರಿಬಿದನೂರ್ ವಿದ್ಯುತ್ ಮಾರ್ಗ
5. ದಾವಣಗೆರೆ-ಹಿರಿಯೂರು-ಗೌರಿಬಿದನೂರ್ ವಿದ್ಯುತ್ ಮಾರ್ಗ (ಹಳೆಯ 220 ಕೆವಿ ವಿದ್ಯುತ್ ಮಾರ್ಗ)
6. ಕೋತಿಪುರ-ವಂದರಾಗುಪ್ಪೆ 66 ಕೆವಿ ವಿದ್ಯುತ್ ಮಾರ್ಗ
7. 220 ಕೆವಿ ಡಿಸಿ ವಿದ್ಯುತ್ ಮಾರ್ಗ ಮಿಟ್ಟೆಮರಿಯಿಂದ ಗೌರಿಬಿದನೂರ್ ವಿದ್ಯುತ್ ಮಾರ್ಗ
8. ಹುಲಿಕಲ್-ವರಾಹಿ ವಿದ್ಯುತ್ ಮಾರ್ಗ
9. ಕೋಣಂದೂರು ವಿದ್ಯುತ್ ಮಾರ್ಗ
10. 33 ಕೆವಿ ಎಸ್.ಸಿ. ವಿದ್ಯುತ್ ಮಾರ್ಗ ತೆಗ್ಗಿಯಿಂದ ಅನಗವಾಡಿ ವಯ ಬೀಳಗಿ
11. ಗುರುವಾಯನಕೆರೆಯಿಂದ ನೆಟ್ಟಲಮಡನೂರು
12. 0.837 ಹೆಕ್ಟೇರ್ ಬೇಲೂರು ಎಸ್ ಎಫ್‌ನಲ್ಲಿ (ಹಾಸನ-ನಂದಿಕೂರು) ತಾತ್ಕಾಲಿಕ ಮಾರ್ಗ ನಿರ್ಮಾಣ
13. ಜಮಖಂಡಿಯಿಂದ ಮಹಾಲಿಂಗಪೂರ ವಿದ್ಯುತ್ ಮಾರ್ಗ (110 ಕೆವಿ)
14. ಮುರುಡೇಶ್ವರದಿಂದ ಬೆಲಾಲಕಂದ ಮಾರ್ಗ (ಭಟ್ಕಳ)
15. ಬೆಲಾಲಕಂದ 110/11 ಕೆವಿ ವಿದ್ಯುತ್ ಉಪ-ಕೇಂದ್ರ
16. ಕನಸೂರ್ ಗ್ರಾಮ 110/11 ಕೆವಿ ವಿದ್ಯುತ್ ಉಪ-ಕೇಂದ್ರ
17. ಬೀದರಹಳ್ಳದಕಾವಲ್ ಗ್ರಾಮದ ಹತ್ತಿರ (ಹೆಚ್.ಎ.ಎಲ್. ಭೂಮಿಯ ಒಳಾಂಗಣ) 220 ಕೆವಿ ಬಹುವಿದ್ಯುತ್ ಮಾರ್ಗವನ್ನು ನಿರ್ಮಾಣಗೊಳಿಸಲಾಗಿದೆ (ಎಂ.ಆರ್.ಎಸ್. ಶಿವಮೊಗ್ಗದಿಂದ ನೆಲಮಂಗಲ ವಿದ್ಯುತ್ ಮಾರ್ಗ)
18. ಹೆಚ್.ಎ.ಎಲ್. ಭೂಮಿಯ ಒಳಾಂಗಣದಲ್ಲಿ ಹತ್ತಿರ 110 ಕೆವಿ ಎಸ್.ಸಿ. ವಿದ್ಯುತ್ ಮಾರ್ಗವನ್ನು 110 ಕೆವಿ ಡಿ.ಸಿ. ವಿದ್ಯುತ್ ಮಾರ್ಗಕ್ಕೆ ಸ್ಥಳಾಂತರಿಸಲಾಗಿದೆ. (ನಿಟ್ಟೂರು-ದೊಡ್ಡಗುಣಿ ವಿದ್ಯುತ್ ಮಾರ್ಗ).

**ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಪ್ರಸರಣ ವಿದ್ಯುತ್ ದರ ಅರ್ಜಿ** :

1. ವಾರ್ಷಿಕ ರೆವಿನ್ಯೂ ಅಗತ್ಯತೆ ಹಾಗೂ ಪ್ರಸರಣ ವಿದ್ಯುತ್ ದರವನ್ನು ನಿರ್ಧರಿಸಲು, ಪರಿಶೋಧಿತ ವಾರ್ಷಿಕ ಲೆಕ್ಕಗಳನ್ನು ಆಧರಿಸಿ, ಕ.ವಿ.ಪ್ರ.ನಿ.ನಿ.ಯು ಆರ್ಥಿಕ ವರ್ಷ 2015-16ರ ಸಾಲಿಗೆ, ತನ್ನ ವಾರ್ಷಿಕ ಕಾರ್ಯಸಾಧನಾ ಪರಿಶೀಲನಾ ಮನವಿಯನ್ನು ದಿನಾಂಕ 16.11.2016ರಂದು ಅರ್ಜಿಯನ್ನು ಗೌರವಾನ್ವಿತ ಕ.ವಿ.ನಿ. ಆಯೋಗಕ್ಕೆ ಮಂಡಿಸಿತು.

2. ವಾರ್ಷಿಕ ಕಾರ್ಯಸಾಧನಾ ಪರಿಶೀಲನೆಯಲ್ಲಿ, ಕ.ವಿ.ನಿ.ಆಯೋಗವ ರೂ.2341.35 ಕೋಟಿ ವಾರ್ಷಿಕ ರೆವಿನ್ಯೂ ಅಗತ್ಯತೆಯನ್ನು ಅನುಮತಿಸಿತು.

3. ಕ.ವಿ.ಪ್ರ.ನಿ.ನಿ.ಯು ಪ್ರಸರಣ ನಷ್ಟ ಪ್ರಮಾಣವನ್ನು ಕಡಿಮೆಗೊಳಿಸಿದ್ದಕ್ಕಾಗಿ ಹಾಗೂ ಶೇ.99.43ರಂತೆ ಉತ್ತಮ ವ್ಯವಸ್ಥೆ ಲಭ್ಯತೆಯನ್ನು ಸಾಧಿಸಿದ್ದಕ್ಕಾಗಿ, ದಿನಾಂಕ: 11.04.2017 ರ ಆದೇಶದಲ್ಲಿ ಕ.ವಿ.ನಿ. ಆಯೋಗವು, ಕ.ವಿ.ಪ್ರ.ನಿ.ನಿ.ಗೆ ರೂ.17.76 ಕೋಟಿ ಉತ್ತೇಜಕ ಪ್ರೋತ್ಸಾಹಧನವನ್ನು ಅನುಮತಿಸಿತು.

ಮುಂದಾಲೋಚನೆಯ ದೃಷ್ಟಿಯಿಂದ 2015-16ರ ವರ್ಷದ ಕೆಪೆಕ್ಸ್ ವಿವರಗಳನ್ನು ಕ.ವಿ.ನಿ. ಆಯೋಗಕ್ಕೆ ಸಲ್ಲಿಸಲಾಯಿತು. ಗೌರವಾನ್ವಿತ ಕ.ವಿ.ನಿ. ಆಯೋಗವು 136 ಕಾಮಗಾರಿಗಳ ಮಾದರಿಗಳನ್ನು ಮುಂದಾಲೋಚನಾ ಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡು ತೃತೀಯ ವ್ಯಕ್ತಿಯಿಂದ ಪರಿಶೀಲನೆಗೆ ಒಳಪಡಿಸಿ, ಎಲ್ಲಾ ಕೆಲಸಗಳು (4 ಕಾಮಗಾರಿಗಳನ್ನು ಹೊರತುಪಡಿಸಿ) ವಿವೇಚನಾಯುತವಾಗಿದೆ ಎಂದು ಘೋಷಿಸಿತು.

**ಮಾನವ ಸಂಪನ್ಮೂಲ ಅಭಿವೃದ್ಧಿ :**

ಸಂಸ್ಥೆಯ ಪ್ರತಿಯೊಬ್ಬ ಉದ್ಯೋಗಿಯ ಸೇವೆಯಿಂದ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಪಡೆಯಲು, ಉದ್ಯೋಗಿಯ ಸೇವೆ ಹಾಗೂ ವ್ಯಕ್ತಿತ್ವ ವಿಕಸನ ಇವೆರಡರಲ್ಲೂ ತರಬೇತಿಯನ್ನು ನೀಡುವುದು ಅತ್ಯವಶ್ಯವಾಗಿದೆ.

ಈ ತರಬೇತಿಯಿಂದ ಉದ್ಯೋಗಿಯು ಸಂಸ್ಥೆಗೆ ಅತ್ಯುತ್ತಮ ಸೇವೆಯನ್ನು ನೀಡುವುದರೊಂದಿಗೆ ಸಂಸ್ಥೆಗೂ ಒಳಿತಾಗಲಿದೆ. ನಿಯತ ತರಬೇತಿಯು ಉದ್ಯೋಗಿಗಳ ಜ್ಞಾನಾರ್ಜನೆಯನ್ನು ಉತ್ತಮಪಡಿಸುವುದರೊಂದಿಗೆ, ಅರ್ಹ ಉದ್ಯೋಗಿಯನ್ನು ಯೋಗ್ಯತಾನುಸಾರ ಹುದ್ದೆಯಲ್ಲಿ ನಿಯೋಜಿಸಲು ಅನುಕೂಲವಾಗುತ್ತದೆ.

ಅಂತಹ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು, ಉತ್ತಮ ಮೂಲ ಸೌಕರ್ಯ ಹಾಗೂ ಪರಿಣಿತ ಬೋಧಕ ವೃಂದವನ್ನು ಅತ್ಯಗತ್ಯಪಡಿಸುವ ಅತಿ ಸೂಕ್ಷ್ಮವಾದ ಕಾರ್ಯಚಟುವಟಿಕೆಯ ಯೋಜನೆಯು ಕಾರ್ಯಕ್ರಮದ ಅಗತ್ಯತೆ ಇದೆ.

ಕ.ವಿ.ಪ್ರ.ನಿ.ನಿ.ಯು ಹೂಡಿ, ವೈಟ್‌ಫೀಲ್ಡ್ ರಸ್ತೆ, ಬೆಂಗಳೂರು ಇಲ್ಲಿ ಸುಮಾರು 12 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸುವ ಮುನ್ನಡೆಯ ಕ್ರಮ ಕೈಗೊಂಡಿದೆ.

ಪ್ರಸ್ತುತ ಈ ಕೇಂದ್ರವು ಕೆಳಕಂಡ ಸೌಲಭ್ಯಗಳನ್ನು ಹೊಂದಿದೆ:

- ಒಂಭತ್ತು ಶೈಕ್ಷಣಿಕ ಕೊಠಡಿಗಳನ್ನು ಹೊಂದಿದ್ದು, ಪ್ರತಿ ಕೊಠಡಿಯಲ್ಲೂ 50 ಅಭ್ಯರ್ಥಿಗಳಿಗೆ ಸ್ಥಳಾವಕಾಶವಿದೆ.
- ವಸತಿ ನಿಲಯಗಳ ಎರಡು ಸಮುಚ್ಛಯಗಳಿದ್ದು, ಪ್ರತಿ ಸಮುಚ್ಛಯದಲ್ಲಿ ಸುಮಾರು 50 ಅಭ್ಯರ್ಥಿಗಳಿಗೆ ಉಳಿದುಕೊಳ್ಳುವ ಅವಕಾಶವಿದೆ.
- ಈ ಕೇಂದ್ರದೊಳಗೇ ಒಂದು ಉಪಹಾರ ಗೃಹದ ಸೌಲಭ್ಯವಿದೆ.
- ಯೋಗ ಕೊಠಡಿ.
- ಒಳಾಂಗಣ ಕ್ರೀಡೆಗಳ ಕೊಠಡಿ.
- ಒಳಾಂಗಣ ಷಟಲ್ ಬ್ಯಾಡ್‌ಮಿಂಟನ್ ಕೋರ್ಟ್.
- ಬಹುದೊಡ್ಡ ಹೊರಾಂಗಣಾ ಕ್ರೀಡಾ ಮೈದಾನ.

ಇದರ ಜೊತೆಗೆ, ಸುಮಾರು 400ರಿಂದ 500 ಆಸನಗಳ ಬಹು ಉದ್ದೇಶಿತ ಸಭಾಂಗಣ, ಸುಮಾರು 200 ತರಬೇತುದಾರರಿಗಾಗಿ ವಿಶೇಷ ಸೌಲಭ್ಯದ ವಸತಿ ನಿಲಯದ ಸಮುಚ್ಛಯ, ವಿಶೇಷ ಸಭಾ ಕೊಠಡಿ, ಡಿಜಿಟಲ್ ಲೈಬ್ರರಿ, ವರ್ಕಿಂಗ್ ಮಾಡ್ಯೂಲ್ಸ್/ಉಪಕರಣಗಳ ಪ್ರದರ್ಶನ ಪ್ರಯೋಗಾಲಯ, ಪ್ರಮುಖ ಸಂಸ್ಥೆಗಳೊಂದಿಗೆ ಕಾರ್ಯಜಾಲ ಸಂಪರ್ಕ, ಇತ್ಯಾದಿಗಳ ನಿರ್ಮಾಣ ಪ್ರಕ್ರಿಯೆಯಲ್ಲಿದೆ. ಒಟ್ಟಾರೆ, ಕ.ವಿ.ಪ್ರ.ನಿ.ನಿ.ಯು ಈ ಕೇಂದ್ರವನ್ನು ವೈಶಿಷ್ಟ್ಯತೆಯ ಕೇಂದ್ರ ವನ್ನಾಗಿಸುವ ದೃಷ್ಟಿಕೋನವನ್ನು ಹೊಂದಿದೆ.

**ಆರ್ಥಿಕ ವರ್ಷ 2016-17ರಲ್ಲಿ ನಡೆಸಿದ ತರಬೇತಿ ಕಾರ್ಯಕ್ರಮ** :

ಆರ್ಥಿಕ ವರ್ಷ 2016-17ರಲ್ಲಿ 3494 ಅಧಿಕಾರಿ/ನೌಕರರು ವಿವಿಧ ವಿಷಯಗಳಲ್ಲಿ ತರಬೇತಿಯನ್ನು ಪಡೆದಿದ್ದಾರೆ. ದಿನವೊಂದಕ್ಕೆ ಸರಾಸರಿ 149ಅಭ್ಯರ್ಥಿಗಳು ತರಬೇತಿಯನ್ನು ಪಡೆದಿದ್ದಾರೆ,

ಕ.ವಿ.ಪ್ರ.ನಿ.ನಿ.ಯ ಉದ್ಯೋಗಿಗಳಿಗೆ ಎರಡು ವರ್ಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ:

(1) **ಅನುಗಮನ ತರಬೇತಿ ಕಾರ್ಯಕ್ರಮ**

## (2) ಸೇವೆಯಲ್ಲಿರುವ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ.

### 1. ಅನುಗಮನ ತರಬೇತಿ ಕಾರ್ಯಕ್ರಮ :

ಕ.ವಿ.ಪ್ರ.ನಿ.ನಿ.ಯಲ್ಲಿ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳಿಗೆ ಈ ತರಬೇತಿಯನ್ನು ನಡೆಸಲಾಗುತ್ತದೆ. ಆರ್ಥಿಕ ವರ್ಷ 2016–17ರಲ್ಲಿ ಮುಂದೆ ತಿಳಿಸಿರುವ ಅನುಗಮನ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು:

- ಹೊಸದಾಗಿ ನೇಮಕಗೊಂಡ 1217ಕಿರಿಯ ಸ್ಟೇಷನ್ ಪರಿಚಾರಕ ದರ್ಜೆ, ಒಟ್ಟು 10 ಕಚೇರಿ ಕೆಲಸದ ದಿನಗಳ ತರಬೇತಿ.
- ಹೊಸದಾಗಿ ನೇಮಕಗೊಂಡ 50 ಕಿರಿಯ ಇಂಜಿನಿಯರುಗಳಿಗೆ, 30 ಕಚೇರಿ ದಿನಗಳ ಅವಧಿಗೆ ಶಿಕ್ಷಣ ಕೊಠಡಿಯೊಳಗೆ ಹಾಗೂ 30 ಕಚೇರಿ ದಿನಗಳ ಅವಧಿಗೆ ಕಾರ್ಯಕ್ಷೇತ್ರದಲ್ಲಿ, ಒಟ್ಟು 60 ಕಚೇರಿ ಕೆಲಸದ ದಿನಗಳ ತರಬೇತಿ.

### 2. ಸೇವೆಯಲ್ಲಿರುವ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ :

ಆರ್ಥಿಕ ವರ್ಷ 2016–17ರಲ್ಲಿ ಕ.ವಿ.ಪ್ರ.ನಿ.ನಿ.ಯಲ್ಲಿ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಮುಂದೆ ತಿಳಿಸಿರುವ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು:

- ಸ.ಕಾ.ನಿ.ಇಂ(ವಿ), ಸ.ಇಂ(ವಿ), ಕಿ.ಇಂ(ವಿ),ಲೆಕ್ಕಾಧಿಕಾರಿಗಳಿಗೆ ಪುನರ್ಮನನ ತರಬೇತಿ ಕಾರ್ಯಕ್ರಮ.
- ಎ ಮತ್ತು ಬಿ ಗುಂಪಿನ ಅಧಿಕಾರಿಗಳಿಗೆ ಮೆ॥ 6ನೇ ಸೆನ್ಸ್ ಪ್ರೈವೇಟ್ ಲಿಮಿಟೆಡ್ ರವರಿಂದ ಪಿಡಿಪಿ ತರಬೇತಿ ಕಾರ್ಯಾಗಾರ
- ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿ/ನೌಕರರಿಗೆ ನಿವೃತ್ತಿಪೂರ್ವ ಯೋಜನಾ ತರಬೇತಿ.
- ನೂತನವಾಗಿ ಲೆಕ್ಕಾಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಿದ್ದ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ.
- ಸಹಾಯಕ ಇಂಜಿನಿಯರ್‌ಗಳಿಗೆ ಕನ್ನಡದ ತರಬೇತಿ ಕಾರ್ಯಗಾರ.

### 3. ಕ.ವಿ.ಪ್ರ.ನಿ.ನಿ/ಹೊರಗಿನ ಉದ್ಯೋಗಿಗಳಿಗೆ ತರಬೇತಿ ಕಾರ್ಯಕ್ರಮ:

ಆರ್ಥಿಕ ವರ್ಷ 2016–17ರ ವರ್ಷದಲ್ಲಿ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಉದ್ಯೋಗಿಗಳಿಗೆ ಉದ್ಯೋಗಪೂರ್ವ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು:

- ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ 2007 ನೇ ಸಾಲಿನ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್
- ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಸೇವೆಯಲ್ಲಿರುವ ಕಿರಿಯ ಇಂಜಿನಿಯರ್‌ಗಳಿಗೆ ತರಬೇತಿ.
- ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಸಹಾಯಕ, ಕಿರಿಯ ಸಹಾಯಕ, ದಫ್ತರಿಗಳಿಗೆ ತರಬೇತಿ.
- ಪೌರಯುಕ್ತ ಆಡಳಿತ ಶಾಖೆಯಲ್ಲಿ ನೂತನವಾಗಿ ಸೇವೆಗೆ ಸೇರಿದ ಸಹಾಯಕ ಇಂಜಿನಿಯರ್ ರವರಿಗೆ ತರಬೇತಿ.
- ಚಾಮುಂಡಿ ವಿದ್ಯುತ್ ಸರಬರಾಜು ಕಂಪನಿಯ ಮಾಪಕ ಓದುಗರಿಗೆ ಪದೋನ್ನತಿ ಪೂರ್ವ ತರಬೇತಿ.

## ಆರ್ಥಿಕ ವರ್ಷ 2016-17 ನೇ ಸಾಲಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ, ಬೆಂಗಳೂರು ಯಿಂದ ಅಧಿಕಾರಿ/ನೌಕರರಿಗೆ ನೀಡಿದ ತರಬೇತಿಯ ವಿವರಗಳು

| ಕ್ರ. ಸಂ | ತರಬೇತಿ ಹೆಸರು | ಬ್ಯಾಚುಗಳ ಸಂಖ್ಯೆ | ತರಬೇತಿಗಾಗಿ ನಿಯೋಜಿಸಿದ ಸಂಖ್ಯೆ | ತರಬೇತಿಗೆ ಹಾಜರಾದ ಸಂಖ್ಯೆ | ಅವದಿ ದಿನಗಳಲ್ಲಿ | ಒಟ್ಟು ಮಾನವ ದಿನಗಳು | ಶೇಕಡವಾರು ತರಬೇತಿಗೆ ಹಾಜರಾದವರು |
|---|---|---|---|---|---|---|---|
| 1 | ಕಿರಿಯ ಸ್ಟೇಷನ್ ಪರಿಚಾರಕರಿಗೆ ಅನುಗಮನ ತರಬೇತಿ ಕಾರ್ಯಕ್ರಮ | 25 | 1240 | 1217 | 10 | 12170 | 98% |
| 2 | ಸಹಾಯಕ ಇಂಜಿನಿಯರ್‌ಗಳಿಗೆ ಕನ್ನಡ ತರಬೇತಿ | 2 | 65 | 64 | 10 | 640 | 98% |
| 3 | ಹಿರಿಯ ಸಹಾಯಕ/ಸಹಾಕರುಗಳಿಗೆ ಎಸ್.ಎ.ಎಸ್ ತರಬೇತಿ | 2 | 130 | 93 | 40 | 3720 | 72% |
| 4 | 2007 ನೇ ಸಾಲಿನ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್ ರವರುಗಳಿಗೆ ಉದ್ಯೋಗಪೂರ್ವ ತರಬೆತಿ | 5 | 258 | 256 | 30 | 7680 | 99% |
| 5 | 2015 ನೇ ಸಾಲಿನಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ರವರು ಗಳಿಗೆ ಉದ್ಯೋಗ ಪೂರ್ವ ತರಬೇತಿ | 1 | 60 | 50 | 30 | 1500 | 83% |
| 6 | ಸೇವೆಯಲ್ಲಿರುವ ಕಿರಿಯ ಇಂಜಿನಿಯರ್‌ಗಳಿಗೆ ಉದ್ಯೋಗ ಪೂರ್ವ ತರಬೇತಿ | 1 | 53 | 49 | 30 | 1470 | 92% |
| 7 | ಕ.ವಿ.ಪ್ರ.ನಿ.ನಿ/ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿ/ನೌಕರರಿಗೆ ನಿವೃತ್ತಿಪೂರ್ವ ಯೋಜನಾ ತರಬೇತಿ (ಕುಟುಂಬ ಸಮೇತ) | 7 | 599 | 456 | 2 | 912 | 76% |
| 8 | ಸಹಾಯಕ ಇಂಜಿನಿಯರ್ ರವರುಗಳಿಗೆ ಪುನಃಚೇತನ ತರಬೇತಿ | 10 | 504 | 366 | 2 | 732 | 73% |
| 9 | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮತ್ತು ಲೆಕ್ಕಾಧಿಕಾರಿ ರವರು ಗಳಿಗೆ ಪುನಃಚೇತನ ತರಬೇತಿ | 5 | 250 | 174 | 2 | 348 | 70% |
| 10 | ಪ್ರಥಮ ಚಿಕಿತ್ಸೆ ಮತ್ತು ಅಗ್ನಿಶಾಮಕ ಕಾರ್ಯಕ್ರಮ | 4 | 260 | 213 | 10 | 2130 | 82% |
| 11 | ನೂತನವಾಗಿ ಲೆಕ್ಕಾಧಿಕಾರಿ ಹುದ್ದೆಗೆ ಪದೋನ್ನತಿ ಹೊಂದಿದ್ದ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ | 3 | 120 | 98 | 3 | 294 | 82% |
| 12 | ಎ ಮತ್ತು ಬಿ ಗುಂಪಿನ ಅಧಿಕಾರಿಗಳಿಗೆ ಮೆ॥ 6ಖು ಸೆನ್ಸ್ ಪ್ರೈವೇಟ್ ಲಿಮಿಟೆಡ್ ರವರಿಂದ ಪಿಡಿಪಿ ತರಬೇತಿ ಕಾರ್ಯಾಗಾರ | 1 | 40 | 35 | 2 | 70 | 88% |
| 13 | ಚಾಮುಂಡಿ ವಿದ್ಯುತ್ ಸರಬರಾಜು ಕಂಪನಿಯ ಮಾಪಕ ಓದುಗರಿಗೆ ಪದೋನ್ನತಿ ಪೂರ್ವ ತರಬೇತಿ | 1 | 55 | 44 | 40 | 1760 | 80% |
| 14 | ಕಿರಿಯ ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿ | 2 | 116 | 112 | 28 | 3136 | 97% |

| ಕ್ರ. ಸಂ | ತರಬೇತಿ ಹೆಸರು | ಬ್ಯಾಚುಗಳ ಸಂಖ್ಯೆ | ತರಬೇತಿಗಾಗಿ ನಿಯೋಜಿಸಿದ ಸಂಖ್ಯೆ | ತರಬೇತಿಗೆ ಹಾಜರಾದ ಸಂಖ್ಯೆ | ಅವದಿ ದಿನಗಳಲ್ಲಿ | ಒಟ್ಟು ಮಾನವ ದಿನಗಳು | ಶೇಕಡವಾರು ತರಬೇತಿಗೆ ಹಾಜರಾದವರು |
|---|---|---|---|---|---|---|---|
| **15** | ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿ | 1 | 42 | 41 | 42 | 1722 | 98% |
| **16** | ದಫ್ತರಿಗಳಿಗೆ ಉದ್ಯೋಗ ಪೂರ್ವ ತರಬೇತಿ | 1 | 40 | 37 | 28 | 1036 | 93% |
| **17** | ಪೌರಯುಕ್ತ ಆಡಳಿತ ಶಾಖೆಯಲ್ಲಿ ನೂತನವಾಗಿ ಸೇವೆಗೆ ಸೇರಿದ ಸಹಾಯಕ ಇಂಜಿನಿಯರ್ ರವರಿಗೆ ತರಬೇತಿ | 1 | 41 | 41 | 30 | 1230 | 100% |
| **18** | ಹೊರಗಿನ ತರಬೇತಿ ಕಾರ್ಯ ಕ್ರಮಗಳಿಗೆ ನಿಯೋಜನೆ | | 155 | 148 | 2 | 296 | 95% |
| | ಕವಿಪ್ರನಿನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮದಲ್ಲಿ ನಡೆಸಿದ ತರಬೇತಿ ಒಟ್ಟು ಸಂಖ್ಯೆ | | **4028** | **3494** | | **40846** | **87%** |

ಒಟ್ಟು ಮಾನವ ದಿನಗಳು: 40846 ಮಾನವ ದಿನಗಳು

ಒಟ್ಟು ಕೆಲಸದ ದಿನಗಳು: 274 ದಿನಗಳು

ಒಂದು ದಿನಕ್ಕೆ ತರಬೇತಿಗೆ ಹಾಜರಾದವರು: **149** ಸಿಬ್ಬಂದಿ ಪ್ರತಿ ದಿನ

ಶೇಕಡವಾರು ತರಬೇತಿಗೆ ಹಾಜರಾದವರು: **87%**

## ಆಂತರಿಕ ಪರಿಶೋಧನಾ ಚಟುವಟಿಕೆಗಳ ಸಂಕ್ಷಿಪ್ತ ವಿವರಗಳು

ನಿಗಮದಿಂದ ಕಾಲಕಾಲಕ್ಕೆ ಆದೇಶಿಸಲ್ಪಡುವ ಸುತ್ತೋಲೆಗಳು, ಜಾರಿಯಲ್ಲಿರುವ ನಿಬಂಧನೆಗಳು, ಲೆಕ್ಕ ಸಂಪುಟ ಹಾಗೂ ಆಂತರಿಕ ಪರಿಶೋಧನಾ ಕೈಪಿಡಿ ಪ್ರಕಾರ ಆಂತರಿಕ ಪರಿಶೋಧನೆ ಕಾರ್ಯ ಆರ್ಥಿಕ ಸಲಹೆಗಾರರ(ಆಂ.ಪ) ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ನೀಡಲ್ಪಟ್ಟ ಪರಿಶೋಧನಾ ವಿಚಾರಣೆ/ಟಿಪ್ಪಣಿ, ಹೆಚ್ಚುವರಿ ಪಾವತಿ/ಅನಿಯತ ವೆಚ್ಚ ಇವುಗಳನ್ನು ಸಂಬಂಧಿತ ನಿಗಮದ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚಿಸಿದ ನಂತರ ಇತ್ಯರ್ಥಗೊಳಿಸಲಾಗುತ್ತದೆ. ಆಂತರಿಕ ಪರಿಶೋಧನೆಯ ವಿಭಾಗವಾರು ಕಾರ್ಯ ಚಟುವಟಿಕೆಯ ವಿವರಗಳನ್ನು ಕಾಲಕಾಲಕ್ಕೆ ಕ್ರೋಢಿಕರಿಸಿ ಕಾರ್ಯಾಧಾರಿತ ಪ್ರಗತಿಯ ವರದಿಯನ್ನು ಸಲ್ಲಿಸಲಾಗುತ್ತಿದೆ.

2016–17 ನೇ ವಾರ್ಷಿದ ಅಂತ್ಯಕ್ಕೆ ವಲಯವಾರು ಭೂ ದಾಖಲೆಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಲಯದ ಹೆಸರು | ಒಟ್ಟು ಆಸ್ತಿಗಳ ಸಂಖ್ಯೆ | ಪರಿಪೂರ್ಣ ದಾಖಲೆಗಳು ಲಭ್ಯವಿರುವುದು | ಭಾಗಶಃ ದಾಖಲೆಗಳು ಲಭ್ಯವಿರುವುದು | ಒಟ್ಟು ದಾಖಲೆಗಳು ಇಲ್ಲದಿರುವುದು |
|---|---|---|---|---|---|
| 1 | ಬೆಂಗಳೂರು | 318 | 172 | 110 | 36 |
| 2 | ತುಮಕೂರು | 207 | 138 | 30 | 39 |
| 3 | ಕಲಬುರುಗಿ | 173 | 99 | 59 | 15 |
| 4 | ಮೈಸೂರು | 164 | 126 | 38 | 0 |
| 5 | ಹಾಸನ | 185 | 123 | 37 | 25 |
| 6 | ಬಾಗಲಕೋಟೆ | 230 | 147 | 67 | 16 |
| | **ಒಟ್ಟು** | **1277** | **805** | **341** | **131** |

ಆಂತರಿಕ ಪರಿಶೋಧನಾ ವಿಭಾಗದಿಂದ ನಿರಂತರ ಪರಿಶೋಧನೆ ನಡೆಸಿದ ಹಿನ್ನೆಲೆಯಲ್ಲಿ ಆರ್ಥಿಕ ವರ್ಷದಲ್ಲಿ ಒಟ್ಟು 110 ಸಂಖ್ಯೆಯ ಆಸ್ತಿಗಳಿಗೆ ಸಂಪೂರ್ಣ ದಾಖಲೆಗಳನ್ನು ಸಿದ್ಧಪಡಿಸಿರುತ್ತಾರೆ.

**2016–17ನೇ ಸಾಲಿನ ಆಂತರಿಕ ಪರಿಶೋಧನೆಯ ಪ್ರಗತಿಯ ಹೆಚ್ಚುವರಿ ಪಾವತಿ/ ನಿಯಮಬಾಹಿರ ವೆಚ್ಚದ ಮತ್ತು ಆಡಿಟ್ ವರದಿಗಳ ಸಾರಾಂಶದ ವಿವರಗಳು ಈ ಕೆಳಕಂಡಂತ್ತಿದೆ.**

| **ಹೆಚ್ಚುವರಿ ಪಾವತಿಯ ವಿವರಗಳು** | | | | **ರೂ. ಲಕ್ಷಗಳಲ್ಲಿ** |
|---|---|---|---|---|
| **ಪ್ರಾರಂಭದ ಬಾಕಿ** | **ಕಂಡು ಹಿಡಿದ ಮೊತ್ತ** | **ಒಟ್ಟು** | **ವಸೂಲಾದ ಮೊತ್ತ** | **ಅಂತಿಮ ಬಾಕಿ** |
| 14.57 | 809.50 | 824.08 | 795.11 | 28.97 |
| | | | | |
| **ಅಕ್ಷೇಪಣಾರ್ಹ ಮೊತ್ತದ ವಿವರಗಳು** | | | | **ರೂ. ಲಕ್ಷಗಳಲ್ಲಿ** |
| **ಪ್ರಾರಂಭದ ಬಾಕಿ** | **ಕಂಡು ಹಿಡಿದ ಮೊತ್ತ** | **ಒಟ್ಟು** | **ಸಕ್ರಮಗೊಳಿಸಿದ ಮೊತ್ತ** | **ಅಂತಿಮ ಬಾಕಿ** |
| 218 | 104.91 | 118.45 | 92.92 | 25.54 |
| | | | | |
| **ಆಡಿಟ್ ಪ್ಯಾರಗಳ ವಿವರಗಳು** | | | | **ಸಂಖ್ಯೆಗಳಲ್ಲಿ** |
| ಪ್ರಾರಂಭಿಕ ಆಡಿಟ್ ಪ್ಯಾರಗಳ ವಿವರ | ಆಡಿಟ್ ಪ್ಯಾರಗಳ ನೀಡಿದ ವಿವರ | ಒಟ್ಟು | ಆಡಿಟ್ ಪ್ಯಾರಗಳಿಗೆ ಉತ್ತರ ಪಡೆದ ವಿವರ | ಬಾಕಿ ಉಳಿದ ಆಡಿಟ್ ಪ್ಯಾರಗಳು |
| 13.54 | 2007 | 2225 | 1810 | 415 |

## ವಲಯವಾರು ವಿವರಗಳು:

## ಆರ್ಥಿಕ ವರ್ಷ 2016-17 ರ ಆಡಿಟ್ ಪ್ಯಾರಗಳ ವಿವರಗಳು

| ಕ್ರ. ಸಂ | ವಲಯ/ಕಛೇರಿಯ ಹೆಸರು | ಪ್ರಾರಂಭಿಕ ಆಡಿಟ್ ಪ್ಯಾರಗಳ ಬಾಕಿ | ಆರ್ಥಿಕ ವರ್ಷದಲ್ಲಿ ನೀಡಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಒಟ್ಟು | ಆರ್ಥಿಕ ವರ್ಷದಲ್ಲಿ ಉತ್ತರ ಪಡೆದು ಅಂಗೀಕರಿಸಲಾದ ಆಡಿಟ್ ಪ್ಯಾರಗಳ ಸಂಖ್ಯೆ | ಬಾಕಿ ಉಳಿದ ಆಡಿಟ್ ಪ್ಯಾರಗಳು |
|---|---|---|---|---|---|---|
| 1 | ಬೆಂಗಳೂರು | 49 | 491 | 540 | 488 | 52 |
| 2 | ತುಮಕೂರು | 16 | 174 | 190 | 152 | 38 |
| 3 | ಕಲಬುರಗಿ | 57 | 211 | 268 | 212 | 56 |
| 4 | ಮೈಸೂರು | 16 | 151 | 167 | 106 | 61 |
| 5 | ಹಾಸನ | 39 | 298 | 337 | 288 | 49 |
| 6 | ಬಾಗಲಕೋಟೆ | 29 | 574 | 603 | 458 | 145 |
| 7 | ಕೇಂದ್ರ ಕಛೇರಿ | 9 | 69 | 78 | 68 | 10 |
| 8 | ಎಸ್.ಎಲ್.ಡಿ.ಸಿ | 3 | 39 | 42 | 38 | 4 |
| | **ಒಟ್ಟು** | **218** | **2007** | **2225** | **1810** | **415** |

### ಆರ್ಥಿಕ ವರ್ಷ 2016-17 ರ ಹೆಚ್ಚುವರಿ ಪಾವತಿಯ ವಿವರಗಳು

| ಕ್ರ. ಸಂ | ವಲಯ/ ಕಛೇರಿಯ ಹೆಸರು | 2016-17 ರಲ್ಲಿ ಹೆಚ್ಚುವರಿ ಪಾವತಿ | | | | ರೂ. ಲಕ್ಷಗಳಲ್ಲಿ |
|---|---|---|---|---|---|---|
| | | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ವಸೂಲಾದ ಮೊತ್ತ | ಅಚಿತಿಮ ಬಾಕಿ |
| 1 | ಬೆಂಗಳೂರು | 1.68 | 446.70 | 448.38 | 445.24 | 3.14 |
| 2 | ತುಮಕೂರು | 0.42 | 67.18 | 67.60 | 64.40 | 3.21 |
| 3 | ಕಲಬುರಗಿ | 4.31 | 30.72 | 35.03 | 31.45 | 3.57 |
| 4 | ಮೈಸೂರು | 1.67 | 29.07 | 30.74 | 24.85 | 5.89 |
| 5 | ಹಾಸನ | 1.27 | 53.64 | 54.91 | 45.62 | 9.30 |
| 6 | ಬಾಗಲಕೋಟೆ | 5.04 | 167.82 | 172.86 | 169.95 | 2.91 |
| 7 | ಕೇಂದ್ರ ಕಛೇರಿ | 0.15 | 11.88 | 12.03 | 12.03 | 0.00 |
| 8 | ಎಸ್.ಎಲ್.ಡಿ.ಸಿ | 0.03 | 2.49 | 2.53 | 1.57 | 0.95 |
| | **ಒಟ್ಟು** | **14.57** | **809.50** | **824.08** | **795.11** | **28.97** |

## ಆರ್ಥಿಕ ವರ್ಷ 2016-17 ರಲ್ಲಿ ಆಕ್ಷೇಪಣಾರ್ಹ ಮೊತ್ತದ ವಿವರಗಳು

| ಕ್ರ. ಸಂ | ವಲಯ/ ಕಛೇರಿಯ ಹೆಸರು | 2016-17 ರಲ್ಲಿ ಆಕ್ಷೇಪಣಾರ್ಹ ಮೊತ್ತ | | | | ರೂ. ಲಕ್ಷಗಳಲ್ಲಿ |
|---|---|---|---|---|---|---|
| | | ಪ್ರಾರಂಭದ ಬಾಕಿ | ಕಂಡು ಹಿಡಿದ ಮೊತ್ತ | ಒಟ್ಟು | ಸಕ್ರಮಗೊಳಿಸಿದ ಮೊತ್ತ | ಅಂತಿಮ ಬಾಕಿ |
| 1 | ಬೆಂಗಳೂರು | 0.08 | 20.27 | 20.35 | 18.87 | 1.47 |
| 2 | ತುಮಕೂರು | 2.47 | 15.25 | 17.72 | 13.00 | 4.72 |
| 3 | ಕಲಬುರಗಿ | 2.72 | 8.86 | 11.58 | 9.92 | 1.67 |
| 4 | ಮೈಸೂರು | 0.08 | 10.80 | 10.88 | 6.34 | 4.55 |
| 5 | ಹಾಸನ | 0.59 | 9.16 | 9.75 | 8.37 | 1.37 |
| 6 | ಬಾಗಲಕೋಟೆ | 0.06 | 39.00 | 39.06 | 27.80 | 11.26 |
| 7 | ಕೇಂದ್ರ ಕಛೇರಿ | 6.73 | 0.15 | 6.88 | 6.88 | 0.00 |
| 8 | ಎಸ್.ಎಲ್.ಡಿ.ಸಿ | 0.81 | 1.43 | 2.24 | 1.75 | 0.49 |
| | **ಒಟ್ಟು** | **13.54** | **104.91** | **118.45** | **92.92** | **25.54** |

## ಮಾರ್ಚ್ 2017 ರ ಅಂತ್ಯಕ್ಕೆ ಉಗ್ರಾಣದ ಸಾಮಗ್ರಿಗಳ ವಿವರಗಳು

| ಕ್ರ. ಸಂ | ವಲಯ/ ಕಛೇರಿಯ ಹೆಸರು | ಸಾಮಗ್ರಿಗಳ ವಿವರ | | | | | ರೂ. ಕೋಟಿಗಳಲ್ಲಿ |
|---|---|---|---|---|---|---|---|
| | | ಆರಂಭಿಕ ಶಿಲ್ಕು 01.04.2016 ರಂತೆ | ನಿರುಪಯುಕ್ತ ಸಾಮಗ್ರಿಗಳು | ಉಪಯೋಗಿಸದ ಸಾಮಗ್ರಿಗಳು | ರದ್ದಿ ಸಾಮಗ್ರಿಗಳು | ಉತ್ತಮ ಸಾಮಗ್ರಿಗಳು | ಅಂತಿಮ ಶಿಲ್ಕು 31.03.2017 ರಂತೆ |
| 1 | ಬೆಂಗಳೂರು | 45.74 | 1.68 | 0.96 | 2.11 | 25.05 | 29.80 |
| 2 | ತುಮಕೂರು | 14.50 | 4.06 | 2.61 | 1.63 | 5.08 | 13.38 |
| 3 | ಕಲಬುರಗಿ | 6.60 | 0.00 | 0.27 | 0.90 | 6.30 | 7.48 |
| 4 | ಮೈಸೂರು | 10.99 | 0.02 | 0.92 | 5.25 | 5.72 | 11.90 |
| 5 | ಹಾಸನ | 9.85 | 0.20 | 4.04 | 0.69 | 6.74 | 11.67 |
| 6 | ಬಾಗಲಕೋಟೆ | 17.06 | 1.03 | 1.73 | 1.05 | 12.29 | 16.10 |
| 7 | ಎಸ್.ಎಲ್.ಡಿ.ಸಿ | 0.41 | 0.00 | 0.00 | 0.04 | 0.38 | 0.43 |
| | **ಒಟ್ಟು** | **105.2** | **6.99** | **10.53** | **11.67** | **61.57** | **90.76** |

## 2016-17ನೇ ಸಾಲಿನ ಕವಿಪ್ರನಿನಿ ಮತ್ತು ಎಸ್ಕಾಂಗಳ ನೇರ ನೇಮಕಾತಿಯ ಸಾರಾಂಶ

ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಅವಶ್ಯ ಸಿಬ್ಬಂದಿಗಳ ಕೊರತೆಯಿದ್ದು, ಗ್ರಾಹಕರಿಗೆ ಉನ್ನತ ಮಟ್ಟದ ವಿದ್ಯುತ್‌ನ್ನು ನಿರಂತರವಾಗಿ ಸರಬರಾಜು ಮಾಡುವ ದೃಷ್ಟಿಯಿಂದ, ಖಾಲಿ ಇರುವ ಅವಶ್ಯ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧಾರವನ್ನು ಕೈಗೊಳ್ಳಲಾಯಿತು. ಕವಿಪ್ರನಿನಿಯ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ:

| ಕ್ರ. ಸಂ. | ಗುಂಪು | ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ | ಖಾಲಿ ಇರುವ ಹುದ್ದೆಗಳು |
|---|---|---|---|---|
| 1 | ಎ | 1230 | 1108 | 122 |
| 2 | ಬಿ | 1461 | 1099 | 362 |
| 3 | ಸಿ | 6231 | 4041 | 2190 |
| 4 | ಡಿ | 7173 | 3948 | 3225 |
| | ಒಟ್ಟು | **16095** | **10196** | **5899** |

ಮೊದಲನೇ ಹಂತದಲ್ಲಿ, ಅಂದರೆ 2015-16 ರ ಅವಧಿಯಲ್ಲಿ ಒಟ್ಟು 11,592 ಅವಶ್ಯ ಹುದ್ದೆಗಳನ್ನು ಮೆರಿಟ್ ಆಧಾರದ ಮೇಲೆ ಕರ್ನಾಟಕ ರಾಜ್ಯದ ರೋಸ್ಟರ್ ನಿಯಮಗಳನ್ನು ಅನುಸರಿಸಿ ನೇರ ನೇಮಕಾತಿ ಮೂಲಕ ಪಾರದರ್ಶಕ ರೀತಿಯಲ್ಲಿ ಭರ್ತಿ ಮಾಡಲಾಯಿತು. ನಿರ್ವಹಣಾ ಪದವೃಂದದ ಹುದ್ದೆಗಳಾದ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಮಾರ್ಗದಾಳು ಹುದ್ದೆಗೆ ಈ ಹಿಂದೆ 7ನೇ ತರಗತಿಯಲ್ಲಿ ಉತ್ತೀರ್ಣತೆ ಹೊಂದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುತ್ತಿತ್ತು. ಆದರೆ ಅಭ್ಯರ್ಥಿಗಳು ಸಲ್ಲಿಸುತ್ತಿದ್ದ ಅಂಕಪಟ್ಟಿಗಳು ನಕಲಿಯಾಗಿರುವ ಸಂಭವ ಹೆಚ್ಚಾಗಿದ್ದುದರಿಂದ, ಅಂತಹ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಕಿರಿಯ ಸ್ಟೇಷನ್ ಪರಿಚಾರಕ/ಕಿರಿಯ ಮಾರ್ಗದಾಳು ಹುದ್ದೆಗಳ ನೇಮಕಾತಿಗಾಗಿ ನಿಗದಿಪಡಿಸಲಾಗಿದ್ದ 7ನೇ ತರಗತಿ ಕನಿಷ್ಟ ವಿದ್ಯಾರ್ಹತೆಗೆ ತಿದ್ದುಪಡಿಯನ್ನು ಮಾಡಿ ಎಸ್.ಎಸ್.ಎಲ್.ಸಿ/10ನೇ ತರಗತಿ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ. ಮುಂದುವರೆದು ಸದರಿ ಹುದ್ದೆಗಳ ನೇರ ನೇಮಕಾತಿಗಾಗಿ ಸಹನಾ ಶಕ್ತಿ ಪರೀಕ್ಷೆಯನ್ನು ಪಾರದರ್ಶಕ ರೀತಿಯಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಸದರಿ ಸಹನಾ ಶಕ್ತಿ ಪರೀಕ್ಷೆಯು ಐದು(5) ಸ್ಪರ್ಧೆಗಳನ್ನು ಒಳಗೊಂಡಿದ್ದು, ಕಂಬ ಹತ್ತುವ ಸ್ಪರ್ಧೆಯು ಕಡ್ಡಾಯವಾಗಿರುತ್ತದೆ. ಸದರಿ ನೇಮಕಾತಿಯ ಸಹನಾ ಶಕ್ತಿ ಪರೀಕ್ಷೆಯ ಎಲ್ಲಾ ಸ್ಪರ್ಧೆಗಳನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದ್ದು, ನೇಮಕಾತಿಯಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗಿರುತ್ತದೆ.

ಕರ್ನಾಟಕದ ವಿದ್ಯುತ್ ಕ್ಷೇತ್ರದ ಇತಿಹಾಸದಲ್ಲಿ ಮೊದಲ ಬಾರಿಗೆ ಗುಂಪು 'ಎ', 'ಬಿ' ಮತ್ತು 'ಸಿ' ಪದವೃಂದದ ಹುದ್ದೆಗಳ ನೇಮಕಾತಿಯನ್ನು ಅಭ್ಯರ್ಥಿಗಳು ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಯೋಗ್ಯತೆಯ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿಮಾಡಲಾಗಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆಯು ಸಂಪೂರ್ಣವಾಗಿ ಗಣಕೀಕೃತವಾಗಿರುತ್ತದೆ.

ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರದ ಸಂಸ್ಥೆಗಳಾದ ಅಂಚೆ ಇಲಾಖೆ, ನ್ಯಾಷನಲ್ ಇನ್ಫರ್ಮ್ಯಾಟಿಕ್ ಸೆಂಟರ್(NIC), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (IIM & IISC) ಸಹಯೋಗದೊಂದಿಗೆ ಕೈಗೊಳ್ಳಲಾಗಿರುತ್ತದೆ.

ಎರಡನೇ ಹಂತದಲ್ಲಿ ಅಂದರೆ 2016-17 ಅವಧಿಯಲ್ಲಿ:

1. ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ 7562 ಕಿರಿಯ ಸ್ಟೇಷನ್ ಪರಿಚಾರಕ/ ಕಿರಿಯ ಮಾರ್ಗದಾಳು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು, ದಿನಾಂಕ: 05.08.2016 ರಂದು ಕವಿಪ್ರನಿನಿಯಿಂದ ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಎಸ್ಕಾಂಗಳ ಪರವಾಗಿ ನೇಮಕಾತಿ ಪ್ರಕ್ರಿಯೆಯನ್ನು ಕವಿಪ್ರನಿನಿಯೇ ಕೈಗೊಂಡು ಕೇಂದ್ರೀಕೃತವಾಗಿ ನೇಮಕಾತಿ ಪ್ರಕ್ರಿಯೆ ನಡೆಸಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಮಾರ್ಚ್-2017 ರಲ್ಲಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಲಾಗಿರುತ್ತದೆ.

2. ಕವಿಪ್ರನಿನಿ ಹಾಗೂ ಎಸ್ಕಾಂಗಳಲ್ಲಿ ಖಾಲಿ ಇದ್ದ 1921 ಇನ್ನಿತರೆ ಅವಶ್ಯ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕವಿಪ್ರನಿನಿಯಿಂದ, ದಿನಾಂಕ: 08.09.2016 ರಂದು ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ, ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | | | | | |
|---|---|---|---|---|---|---|---|
| | | ಕವಿಪ್ರನಿನಿ | ಬೆಸ್ಕಾಂ | ಸೆಸ್ಕ್ | ಹೆಸ್ಕಾಂ | ಜೆಸ್ಕಾಂ | ಒಟ್ಟು |
| 1 | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) | 10 | 4 | 8 | 10 | 20 | **52** |
| 2 | ಸಹಾಯಕ ಇಂಜಿನಿಯರ್(ವಿ) | 255 | 80 | 24 | 17 | 40 | **416** |
| 3 | ಸಹಾಯಕ ಇಂಜಿನಿಯರ್ (ಕಾಮಗಾರಿ) | 11 | 8 | 2 | 3 | - | **24** |
| 4 | ಸಹಾಯಕ ಲೆಕ್ಕಾಧಿಕಾರಿ | 33 | 100 | 23 | 90 | 50 | **296** |
| 5 | ಕಿರಿಯ ಇಂಜಿನಿಯರ್(ವಿ) | 304 | - | 33 | 32 | 40 | **409** |
| 6 | ಕಿರಿಯ ಇಂಜಿನಿಯರ್ (ಕಾಮಗಾರಿ) | 12 | - | - | - | - | **12** |
| 7 | ಸಹಾಯಕ | 83 | - | 70 | 119 | 150 | **422** |
| 8 | ಕಿರಿಯ ಸಹಾಯಕ | 20 | - | 100 | 70 | 100 | **290** |
| | **ಒಟ್ಟು** | **728** | **192** | **260** | **341** | **400** | **1921** |

ಸುಮಾರು ಹತ್ತು ವರ್ಷಗಳ ನಂತರ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಖಾಲಿ ಇದ್ದ 'ಎ' ಪದವೃಂದದ ಸುಮಾರು 52 ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆಯು ಸಂಪೂರ್ಣವಾಗಿ ಗಣಕೀಕೃತವಾಗಿದ್ದು, ಆಯ್ಕೆಯನ್ನು ಅಭ್ಯರ್ಥಿಗಳು ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಯೋಗ್ಯತೆಯ ಆಧಾರದ ಮೇಲೆ ಮಾಡಲಾಗಿರುತ್ತದೆ.ಸುಮಾರು 2.05 ಲಕ್ಷ ಅರ್ಜಿಗಳನ್ನು ಸ್ವೀಕೃತಗೊಂಡಿರುತ್ತದೆ. ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಆಯ್ಕೆಗೆ ಅವಕಾಶ ದೊರಕಿಸಿಕೊಡುವ ಉದ್ದೇಶದಿಂದ ಗುಂಪು 'ಎ' ಮತ್ತು 'ಬಿ' ಪದವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗೆ ತಿದ್ದುಪಡಿ ಮಾಡಿ, ಎಸ್.ಎಸ್.ಎಲ್.ಸಿ ಅಥವಾ ಉನ್ನತ ವಿದ್ಯಾರ್ಹತೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಅಭ್ಯಾಸ ಮಾಡಿರುವ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಾಗಿ ಆದೇಶಿಸಲಾಗಿರುತ್ತದೆ. ಮುಂದುವರೆದು ಅಭ್ಯರ್ಥಿಗಳು ಮೇಲೆ ತಿಳಿಸಿರುವಂತೆ ಕನ್ನಡ ಭಾಷೆಯನ್ನು ಅಭ್ಯಾಸ ಮಾಡದಿದ್ದಲ್ಲಿ, ಸದರಿ ಅಭ್ಯರ್ಥಿಗಳು ನೇಮಕಾತಿಗೂ ಮುನ್ನ ನಿಗಮದಿಂದ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಿರುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಡಿಸೆಂಬರ್–2017 ರಲ್ಲಿ ಕನ್ನಡ ಭಾಷಾ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಆನ್–ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯನ್ನು ತಯಾರಿಸುವ ಕಾರ್ಯವನ್ನು ಭಾರತದ ಪ್ರತಿಷ್ಠಿತ ಸಂಸ್ಥೆಯಾದ ಮೆ॥ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISC), ಬೆಂಗಳೂರು ರವರಿಗೆ ವಹಿಸಲಾಗಿರುತ್ತದೆ.ಕರ್ನಾಟಕ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯನ್ನು ನಡೆಸುವುದು ಕವಿಪ್ರನಿನಿಗೆ ಒಂದು ಸವಾಲಾಗಿತ್ತು. ಯಾವುದೇ ತಾಂತ್ರಿಕ ತೊಂದರೆಯಿಲ್ಲದೇ ಡಿಸೆಂಬರ್–2016 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ಮತ್ತು ಇನ್ನಿತರೆ ಹುದ್ದೆಗಳಿಗೆ ಜುಲೈ–2017 ರಲ್ಲಿ ಆನ್‌ಲೈನ್ ಆಪ್ಟಿಟ್ಯೂಡ್ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಕರ್ನಾಟಕ ಸರ್ಕಾರದ ಇತಿಹಾಸದಲ್ಲಿ ಮೊದಲ ಬಾರಿಗೆ ಸರ್ಕಾರಿ ಇಲಾಖೆಯಲ್ಲಿ ದೊಡ್ಡ ಪ್ರಮಾಣದಲ್ಲಿ ನೇರ ನೇಮಕಾತಿಗಾಗಿ ಆನ್‌ಲೈನ್ ಆಪ್ಟಿಟ್ಯೂಡ್ ಟೆಸ್ಟ್ ನಡೆಸಿರುವುದು ಒಂದು ದಾಖಲೆಯಾಗಿರುತ್ತದೆ. ಈ ಸಾಧನೆಯನ್ನು ಸರಿಗಟ್ಟಲು ಸರ್ಕಾರದ ಇಲಾಖೆ/ಸಂಸ್ಥೆಗಳಿಗೆ ಹಲವಾರು ವರ್ಷಗಳು ಬೇಕಾಗಬಹುದು.

ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ಕಲ್ಪಿಸುವ ಸಲುವಾಗಿ ಅಭ್ಯರ್ಥಿಗಳಿಗೆ ಪ್ರಶ್ನೆಗಳು ಅಥವಾ ಉತ್ತರಗಳು ತಪ್ಪು ಎನಿಸಿದ್ದಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ನೇಮಕಾತಿ ಪ್ರಕ್ರಿಯೆಯ ಪ್ರತಿ ಹಂತದ ಬಗ್ಗೆ ಅಭ್ಯರ್ಥಿಗಳಿಗೆ ಎಲೆಕ್ಟ್ರಾನಿಕ್ ಮಾಧ್ಯಮ, ಮುದ್ರಣ ಮಾಧ್ಯಮ ಮತ್ತು ಎಸ್.ಎಂ.ಎಸ್‌ಗಳ ಮೂಲಕ ಮಾಹಿತಿ ನೀಡಲಾಗುತ್ತಿತ್ತು ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಸುಳ್ಳು ಭರವಸೆ ನೀಡುವ ವ್ಯಕ್ತಿಗಳಿಂದ ಆಕರ್ಷಿತರಾಗದಂತೆ ಎಚ್ಚರಿಕೆ ಸಂದೇಶವನ್ನು ಸಹಾ ಕಾಲಕಾಲಕ್ಕೆ ನೀಡಲಾಗಿತ್ತು.

ಆಯ್ಕೆಯಾಗಿರುವ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನಾ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. ಕವಿಪ್ರನಿನಿಯು ಡಿಸೆಂಬರ್–2017 ರ ಒಳಗೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

2014–17 ರವರೆಗಿನ ಅವಧಿಯಲ್ಲಿ ಒಟ್ಟು 21516 ಖಾಲಿ ಇರುವ ಹುದ್ದೆಗಳಿಗೆ ನೇರ ನೇಮಕಾತಿಯಿಂದ ಭರ್ತಿ ಮಾಡಿ ನೌಕರರ ಸಾಮರ್ಥ್ಯವನ್ನು ಹೆಚ್ಚಿಸಿ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸಲಾಗುತ್ತಿದೆ.

**ಸಿಬಂಧ್ಧಿ ಶಾಖೆಯಿಂದ ಹೊರಡಿಸಲಾದ ಪ್ರಮುಖ ಆದೇಶಗಳು:**

1. ನೇರ ನೇಮಕಾತಿಯಲ್ಲಿ ಇತರೆ ಹಿಂದುಳಿದ ವರ್ಗಗಳ(ಒಬಿಸಿ) ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಭರ್ತಿ ಮಾಡದೇ ಮುಂದಕ್ಕೆ ಕೊಂಡೊಯ್ಯಲಾದ ರಿಕ್ತ ಸ್ಥಾನಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಮುಂದಕ್ಕೆ ಕೊಂಡೊಯ್ಯುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ ಹೊರಡಿಸಿರುವ ಆದೇಶವನ್ನು ನಿಗಮದಲ್ಲಿ ಅಳವಡಿಕೊಂಡು ದಿನಾಂಕ: 05.04.2016 ರಂದು ಸಂಖ್ಯೆ: ಕವಿಪ್ರನಿನಿ/ಬಿ16/5411/1996–97 ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ.

2. ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/4681/2006–07 ದಿನಾಂಕ: 07.02.2007 ಕ್ಕೆ ಅನುಗುಣವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿ ಸತತವಾಗಿ ಹಾಗೂ ದಿನಾಂಕ: 16.12.2015 ರಂದು ಹಾಲಿ ಕಾರ್ಯನಿರ್ವಹಿಸುತ್ತಿದ್ದ 83 ಸಹಾಯಕ ಇಂಜಿನಿಯರ್(ವಿ) ಮತ್ತು 175 ಕಿರಿಯ ಇಂಜಿನಿಯರ್(ವಿ) ರವರುಗಳ ಸೇವೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ದಿನಾಂಕ: 29.12.2010 ರಿಂದ ಅನ್ವಯವಾಗುವಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಅವರ ಸೇವೆಯನ್ನು ಸಕ್ರಮಗೊಳಿಸಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4681/2006–07, ದಿನಾಂಕ: 06.07.2016 ರಲ್ಲಿ ಹೊರಡಿಸಲಾಗಿರುತ್ತದೆ.

3. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ5ಸಿ/721/80–81, ದಿನಾಂಕ: 28.04.2016 ರಂದು ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 01.01.2016 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರನ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.33,378/– ಕ್ಕೆ ನಿಗದಿಪಡಿಸಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4681/2006–07, ದಿನಾಂಕ: 06.07.2016 ರಲ್ಲಿ ದಿನಾಂಕ: 29.12.2010 ರಿಂದ ಅನ್ವಯವಾಗುವಂತೆ ಸಕ್ರಮಗೊಳಿಸಲಾಗಿದ್ದ ಗುತ್ತಿಗೆ ಸಹಾಯಕ ಇಂಜಿನಿಯರ್(ವಿ) ಮತ್ತು ಕಿರಿಯ ಇಂಜಿನಿಯರ್(ವಿ) ರವರುಗಳಿಗೆ ದಿನಾಂಕ: 29.12.2010 ರಿಂದ 31.03.2016 ರವರೆಗೆ ವೇತನ ಹಾಗೂ ಇತರೆ ಭತ್ಯೆಗಳನ್ನು ನಾಲ್ಕು ಸಮಾನ ಕಂತುಗಳಲ್ಲಿ ಪಾವತಿಸಲು ಆದೇಶಿಸಲಾಗಿರುತ್ತದೆ.

5. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/40349/2016–17, ದಿನಾಂಕ: 27.07.2016 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಸೇವಾ ನಿಯಮಗಳ ಅಪೆಂಡಿಕ್ಸ್–8 ಭಾಗ–1 ರ ನಿಯಮಾವಳಿ 4ಕ್ಕೆ ತಿದ್ದುಪಡಿಯನ್ನು ಮಾಡಿ ಹುಚ್ಚುಪ್ರಾಣಿಯಿಂದ ಕಡಿತಕ್ಕೆ ಒಳಗಾದ ನಿಗಮದ ನೌಕರನಿಗೆ ಚುಚ್ಚುಮದ್ದು ಪಡೆಯುವ ವಾಸ್ತವ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ವಿಷಯದಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

6. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳಲ್ಲಿ ತಿಳಿಸಲಾಗಿರುವ ವಿವಿಧ ಹುದ್ದೆಗಳಲ್ಲಿ ಕೆಲವು ಹುದ್ದೆಗಳಿಗೆ ಬಡ್ತಿಗಾಗಿ ನಿಗದಿಪಡಿಸಲಾಗಿದ್ದ ಕನಿಷ್ಟ ಅರ್ಹತಾದಾಯಕ ಸೇವೆಗೆ ಹಾಗೂ ಇನ್ನಿತರೆ ಹುದ್ದೆಗಳಿಗೆ ಬಡ್ತಿಗಾಗಿ ಕನಿಷ್ಟ ಅರ್ಹತಾದಾಯಕ ಸೇವೆಯನ್ನು ನಿಗದಿಪಡಿಸಿಲ್ಲದ ಹುದ್ದೆಗಳಿಗೆ ತಿದ್ದುಪಡಿಯನ್ನು ಮಾಡಿ ಕನಿಷ್ಟ

ಅರ್ಹತಾದಾಯಕ ಸೇವೆಯನ್ನು ಹೆಚ್ಚಿಸಿ ನಿಗದಿಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/5607(I)/2000-01, ದಿನಾಂಕ: 27.07.2016 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

7. ದಿನಾಂಕ: 05.08.2016 ರಂದು 6262 ಕಿರಿಯ ಮಾರ್ಗದಾಳು/ ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಅರ್ಜಿಯನ್ನು ಅಹ್ವಾನಿಸಿ ವಿವರಗಳನ್ನು ಒಳಗೊಂಡ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

8. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು ಅಧ್ಯಾಯ-6 ರ ಕ್ರಮ ಸಂಖ್ಯೆ: 8ಎ ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುದ್ದೆಗೆ ನೇರ ನೇಮಕಾತಿ ಅಡಿಯಲ್ಲಿ ನಿಗದಿಪಡಿಸಲಾಗಿದ್ದ ಕನಿಷ್ಟ ವಿದ್ಯಾರ್ಹತೆಗೆ ತಿದ್ದುಪಡಿಯನ್ನು ಮಾಡಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಬಿ.ಇ/ಬಿ.ಟೆಕ್ ವಿದ್ಯಾರ್ಹತೆಯನ್ನು ನಿಗದಿಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/40333/2016-17, ದಿನಾಂಕ: 09.08.2016 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

9. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು ಅಧ್ಯಾಯ-7 ರ ಕ್ರಮ ಸಂಖ್ಯೆ: 5 ರ "ಸಹಾಯಕ ಲೆಕ್ಕಾಧಿಕಾರಿ" ಮತ್ತು ಕ್ರಮ ಸಂಖ್ಯೆ: 7 ರ "ಸಹಾಯಕ" ಹುದ್ದೆಗಳಿಗೆ ನಿಗದಿಪಡಿಸಿದ್ದ ನೌಕರಿ ಭರ್ತಿ ವಿಧಾನಕ್ಕೆ ತಿದ್ದುಪಡಿ ಮಾಡಿ ನೇರ ನೇಮಕಾತಿ ಕೋಟಾವನ್ನು ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಕ್ರಮವಾಗಿ 80% ಮತ್ತು 75% ಗಳಿಗೆ ಹೆಚ್ಚಿಸಲಾಗಿರುತ್ತದೆ.

10. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(II)/2000-01, ದಿನಾಂಕ: 09.08.2016 ರಲ್ಲಿ ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳ ಅಧ್ಯಾಯ-6 ರ ಕ್ರಮ ಸಂಖ್ಯೆ: 9, 10, 11 ಮತ್ತು 12 ಹಾಗೂ ಅಧ್ಯಾಯ-7 ರ ಕ್ರಮ ಸಂಖ್ಯೆ: 7 ಮತ್ತು 8 ರಲ್ಲಿ ನಿಗದಿಪಡಿಸಲಾಗಿದ್ದ ಕನಿಷ್ಟ ವಿದ್ಯಾರ್ಹತೆಯಲ್ಲಿ ತತ್ಸಮಾನ ವಿದ್ಯಾರ್ಹತೆಯನ್ನು ತಿದ್ದುಪಡಿಯನ್ನು ಮಾಡಲಾಗಿರುತ್ತದೆ ಮತ್ತು ಅಧ್ಯಾಯ-1 ರ ನಿಯಮ-2, ಅರ್ಥ ವಿವರಣೆ ಕ್ರಮ ಸಂಖ್ಯೆ: "ಎಫ್" ರಲ್ಲಿ ಡಿಪ್ಲೊಮಾ ವಿದ್ಯಾರ್ಹತೆಗೆ ನೀಡಿರುವ ವಿವರಣೆಗೆ ಪುನರ್ ವ್ಯಾಖ್ಯಾನಿಸಲಾಗಿರುತ್ತದೆ.

11. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97, ದಿನಾಂಕ: 17.08.2016 ರಲ್ಲಿ ದಿನಾಂಕ: 19.10.2015 ರಂದು ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ಶೇಕಡಾ 30 ರಷ್ಟು ಮೀಸಲಾತಿಯನ್ನು ಶೇಕಡಾ 33 ಕ್ಕೆ ಹೆಚ್ಚಿಸಿ ರೋಸ್ಟರ್ ಬಿಂದುಗಳಾದ 11, 51 ಮತ್ತು 91ನೇ ಬಿಂದುಗಳನ್ನು ಸರ್ಕಾರದ ದಿನಾಂಕ: 22.11.2002 ರ ಆದೇಶದಲ್ಲಿ 20 ಬಿಂದುಗಳ ಪಟ್ಟಿಯಲ್ಲಿ ಹಾಲಿ ಬಿಂದುಗಳಾದ 2, 5, 8, 12, 15 ಹಾಗೂ 18 ರ ಜೊತೆಗೆ ಮೀಸಲರಿಸಲು ಆದೇಶವನ್ನು ಹೊರಡಿಸಲಾಗಿರುತ್ತದೆ.

12. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016 ರಲ್ಲಿ 1921 ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಹಾಯಕ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಸಹಾಯಕ ಲೆಕ್ಕಾಧಿಕಾರಿ, ಕಿರಿಯ ಇಂಜಿನಿಯರ್(ವಿದ್ಯುತ್/ಕಾಮಗಾರಿ), ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಅರ್ಜಿಯನ್ನು ಅಹ್ವಾನಿಸಿ ವಿವರಗಳನ್ನು ಒಳಗೊಂಡ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

13. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/31816/2012-13, ದಿನಾಂಕ: 14.09.2016 ರಲ್ಲಿ ದಿನಾಂಕ: 01.04.2010 ರಿಂದ 31.03.2012 ರ ಅವಧಿಯಲ್ಲಿ ನಿವೃತ್ತರಾದ ನೌಕರರು/ ಅಧಿಕಾರಿಗಳು ನಿವೃತ್ತಿಯ ಸಮಯದಲ್ಲಿ ರೂ.39,610/- ವೇತನಕ್ಕಿಂತ ಹೆಚ್ಚು ಪಡೆಯುತ್ತಿರುವವರಿಗೆ ಪಿಂಚಣಿಯನ್ನು ರೂ.39,900/- ಗೆ ಹೆಚ್ಚಿಸಿ ದಿನಾಂಕ: 01.04.2012 ರಿಂದ 31.05.2016 ರವರೆಗೆ ಕಾಲ್ಪನಿಕವಾಗಿ ನಿಗದಿಪಡಿಸಲು ಹಾಗೂ ಆರ್ಥಿಕ ಲಾಭಾಂಶವನ್ನು ದಿನಾಂಕ: 01.06.2016 ರಿಂದ ವಿಸ್ತರಿಸಲು ಆದೇಶಿಸಲಾಗಿದೆ.

14. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ5ಸಿ/18561/2015-16, ದಿನಾಂಕ: 16.09.2016 ರಲ್ಲಿ ದಿನಾಂಕ: 02.02.2015 ರ ಅಧಿಸೂಚನೆಯ ಅನ್ವಯ ಸೇವೆಯಲ್ಲಿರುವಾಗಲೇ ಅಪಘಾತಕ್ಕಿಡಾಗಿ ಅಶಕ್ತತಾ ಆಧಾರದ ಮೇಲೆ ನಿವೃತ್ತಿ ಹೊಂದುವ ನೌಕರನ ಅವಲಂಬಿತರಿಗೆ ಅನುಕಂಪ ಆಧಾರದ ಮೇಲೆ ನೌಕರಿ ನೀಡುವ ವಿಷಯದಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

15. ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಅಧ್ಯಾಯ-1 ರ ನಿಯಮ-17 ರಲ್ಲಿ ನೇಮಕಾತಿಗಾಗಿ ಹಾಲಿ ನಿಗದಿಪಡಿಸಿರುವ ವಯಸ್ಸಿನ ವಯೋಮಿತಿಯಲ್ಲಿ ವಿಕಲಚೇತನ ಅಭ್ಯರ್ಥಿಗಳಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/5607(III)/2000-01, ದಿನಾಂಕ: 20.09.2016 ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

16. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ5ಸಿ/721/80-81, ದಿನಾಂಕ: 01.12.2016 ರಂದು ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ದಿನಾಂಕ: 01.07.2016 ರ ನಂತರ ಅರ್ಜಿ ಸಲ್ಲಿಸುವ ದಿವಂಗತ ನೌಕರನ ಅವಲಂಬಿತರ ಕುಟುಂಬದ ಮಾಸಿಕ ಆದಾಯದ ಮಿತಿಯನ್ನು ರೂ.34,223/- ಕ್ಕೆ ನಿಗದಿಪಡಿಸಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

17. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3301/2014-15, ದಿನಾಂಕ: 22.12.2016 ರಲ್ಲಿ ಮಾರ್ಗದಾಳು/ ಮೆಕ್ಯಾನಿಕ್ ದರ್ಜೆ-2 ಹಾಗೂ ತತ್ಸಮಾನ ಹುದ್ದೆಗಳಿಂದ ಮಾಪಕ ಓದುಗ ಹುದ್ದೆಗಳಿಗೆ ಬಡ್ತಿ ನೀಡುವ ವಿಷಯದಲ್ಲಿ ಕನಿಷ್ಟ ಅರ್ಹದಾಯಕ ಸೇವಾವಧಿಯ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

18. ಸಹಾಯಕ ಇಂಜಿನಿಯರ್(ವಿ) ಹುದ್ದೆಗೆ ಮುಂದಿನ ಉನ್ನತ ವೇತನ ಶ್ರೇಣಿಯನ್ನು ಮಂಜೂರು ಮಾಡುವ ವಿಷಯದಲ್ಲಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/ಬಿ59/41395/2013-14, ದಿನಾಂಕ: 21.01.2017 ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

19. ಕವಿಪ್ರನಿನಿಯಲ್ಲಿ 24 ಸಹಾಯಕ ಮಾರ್ಗದಾಳು ಮತ್ತು 3 ಸ್ಟೇಷನ್ ಪರಿಚಾರಕ ದರ್ಜೆ-2 ಬ್ಯಾಕ್‌ಲಾಗ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3590(II)/89-90, ದಿನಾಂಕ: 14.02.2017 ರಲ್ಲಿ ಉದ್ಯೋಗ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

20. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40342/2016-17, ದಿನಾಂಕ: 28.02.2017 ರಲ್ಲಿ ಕಿರಿಯ ಮಾರ್ಗದಾಳು/ ಕಿರಿಯ ಸ್ಟೇಷನ್ ಪರಿಚಾರಕ(361) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

21. ಈ ಹಿಂದೆ ಇತರೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ನಿಗಮದ ನೌಕರರಿಗೆ ಪಿಂಚಣಿಗಾಗಿ ಪರಿಗಣಿಸಲು ಕಾಲಮಿತಿಯನ್ನು ನಿಗದಿಪಡಿಸಿ ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/20315/2015-16, ದಿನಾಂಕ: 08.03.2017 ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

22. ನಿಗಮದ ಸಂಖ್ಯೆ: ಕವಿಪ್ರನಿನಿ/ಬಿ16/3595/98-99, ದಿನಾಂಕ: 21.03.2017 ರಲ್ಲಿ ನಿಗಮದ ವಿಕಲಚೇತನ ನೌಕರರಿಗೆ ಗರಿಷ್ಟ ರೂ.25000/-(ರೂಪಾಯಿ ಇಪ್ಪತ್ತೈದು ಸಾವಿರಗಳು) ಗಳ ಯಾಂತ್ರಿಕ ವಾಹನವನ್ನು ಒಂದು ಬಾರಿ ಮಾತ್ರ ಖರೀದಿಸುವ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

23. 2016-17 ರ ಅವಧಿಯಲ್ಲಿ ಮೂರು ವರ್ಷಗಳ ತೃಪ್ತಿಕರ ಸೇವೆಯನ್ನು ಪೂರೈಸಿರುವ ಕವಿಪ್ರನಿನಿ/ಎಸ್ಕಾಂಗಳ ಆರು ಪ್ರೊಬೇಷನರಿ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳು ಹುದ್ದೆಗೆ ವಿಲೀನಗೊಳಿಸಲಾಗಿರುತ್ತದೆ.

**ಔದ್ಯಮಿಕ ಬಾಂಧವ್ಯ**

ನಿಗಮದ ಗುರಿಸಾಧನೆಯಲ್ಲಿ ಮಾನವಶಕ್ತಿಯೂ ಅಪೂರ್ವವಾದ ಆಸ್ತಿಯೆಂದು ಪರಿಗಣಿಸಿರುವ ನಿಗಮವು ನೌಕರರ ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕ ಕಾರ್ಯಕ್ರಮಗಳ ಬಗ್ಗೆಯೂ ಮುತುವರ್ಜಿವಹಿಸಿರುತ್ತದೆ.ನೌಕರರ ಕುಂದು-ಕೊರತೆಗಳನ್ನುಸಕಾಲದಲ್ಲಿ ಗುರುತಿಸಿ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಪರಸ್ಪರ ಸಮಾಲೋಚಿಸಿ ಪರಿಹರಿಸಲಾಗುತ್ತಿದೆ. ನೌಕರರ ಸಂಘದೊಂದಿಗೆ ದಿನಾಂಕ:03.06.2004 ರಂದು ಮಾಡಿಕೊಂಡ ಒಪ್ಪಂದನ್ವಯ 2016-17ನೇ ಸಾಲಿನಲ್ಲಿ 4 ಜನ ಗ್ಯಾಂಗ್ ಮನ್‌ಗಳನ್ನು ಮಜ್ದೂರುಗಳನ್ನಾಗಿ ಪರಿವರ್ತಿಸಲಾಗಿದ್ದು, 7 ಜನ ಮಜ್ದೂರ್‌ಗಳನ್ನು ಕಿರಿಯ ಮಾರ್ಗದಾಳುಗಳಾಗಿ ನಿಗಮದಲ್ಲಿ ವಿಲೀನಗೊಳಿಸಲಾಗಿರುತ್ತದೆ.

ನಿಗಮವು ಸುಧಾರಣೆ ಹಾಗೂ ಪುನಃರಚನೆಯ ಮುಂಚೂಣಿಯಲ್ಲಿರುವುದರಿಂದ, ಈ ನಿಟ್ಟಿನಲ್ಲಿ ನೌಕರವರ್ಗ

ಹಾಗೂ ಆಡಳಿತ ವರ್ಗ ಪರಸ್ಪರ ಸಮಾಲೋಚಿಸಿ, ಪಾರದರ್ಶಕವಾದ ಸಲಹೆಯೊಂದಿಗೆ ಮುಂದುವರಿಯುತ್ತಿರುವುದು ಆಶಾದಾಯಕ ವಿಷಯ. "ಆಡಳಿತದಲ್ಲಿ ಕಾರ್ಮಿಕರ ಪಾತ್ರ"ವನ್ನು ಗುರುತಿಸಿ ಮಹತ್ವ ನೀಡಿರುವ ನಿಗಮದಲ್ಲಿ ನೌಕರರ ಸಂಘವು ಗುರಿ ಸಾಧನೆಗೆ ಸಹಕರಿಸುತ್ತಿರುವುದು ಗ್ರಾಹಕರಿಗೆ ಉತ್ತಮ ಸೇವೆ ನೀಡುವಲ್ಲಿ ಸ್ಫೂರ್ತಿಯಾಗಿರುತ್ತದೆ.

ಕಾರ್ಮಿಕ ಸಂಬಂಧ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣ ಹಂತದಲ್ಲಿದ್ದು, ದಿನಾಂಕ:31.03.2017ರ ಅಂತ್ಯಕ್ಕೆ 53 ಕಾರ್ಮಿಕ ಸಂಬಂಧ ಪ್ರಕರಣಗಳು, ವಿವಿಧ ಕಾರ್ಮಿಕ ನ್ಯಾಯಾಲಯಗಳಲ್ಲಿ 46 ಪ್ರಕರಣಗಳು ಮತ್ತು 58 ರಿಟ್ ಅರ್ಜಿಗಳು/ ರಿಟ್ ಅಪೀಲ್‌ಗಳು ಬೆಂಗಳೂರು, ಧಾರವಾಡ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿನ ರಾಜ್ಯ ಉಚ್ಛ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ.

**ಮಹಿಳಾ ದೂರು ನಿವಾರಣ ಸಮಿತಿ**

ನಿಗಮದಲ್ಲಿ ಮಹಿಳಾ ನೌಕರುಗಳಲ್ಲಿ ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಕಾರ್ಯ ಕ್ಷೇತ್ರಗಳಲ್ಲಿ ತೊಂದರೆ ಮತ್ತು ಅನುಚಿತ ವರ್ತನೆಗಳ ಬಗ್ಗೆ ದೂರು ನೀಡಲು ನಿಗಮದ ಆದೇಶ ದಿನಾಂಕ: 03.07.1998 ರ ಅನುಸಾರ ಮಹಿಳಾ ದೂರು ನಿವಾರಣ ಸಮಿತಿಯನ್ನು ನಿಗಮದಲ್ಲಿ ರಚಿಸುತ್ತಾ ಬಂದಿದ್ದು, ಸದರಿ ಸಮಿತಿಯಲ್ಲಿ ಒಬ್ಬ ಛೇರ್‌ಮನ್ ಹಾಗೂ 7 ಜನ ಸದಸ್ಯರುಗಳೊಳಗೊಂಡು ಒಬ್ಬರು ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯಾಗಿರುತ್ತಾರೆ.

ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಔ.ಬಾ/ಹಿ.ಸ.07/3209/97-98 ದಿನಾಂಕ:30.01.2013 ರಲ್ಲಿ ಮಹಿಳಾ ದೂರು ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

| ಕ್ರ. ಸಂ. | **ಹೆಸರು** | **ಸಮಿತಿಯಲ್ಲಿನ ಹುದ್ದೆ** |
|---|---|---|
| 1. | ಶ್ರೀಮತಿ ವಿಜಯ, ಅ.ಇಂ(ವಿ) ನಿಗಮ ಕಾರ್ಯಾಲಯ, ಕಾವೇರಿಭವನ. | ಅಧ್ಯಕ್ಷರು |
| 2. | ಶ್ರೀಮತಿ ಶಾಂತ, ಸ.ಪ್ರ.ವ್ಯವಸ್ಥಾಪಕರು (ಸೇವೆಗಳು) ನಿಗಮ ಕಾರ್ಯಾಲಯ, ಕಾವೇರಿಭವನ. | ಸದಸ್ಯರು |
| 3 | ಶ್ರೀಮತಿ ಎಂ.ಎಂ.ಸುಧಾಮಣಿ, ಸ.ಕಾ.ನಿ.ಇಂಜಿನಿಯರ್(ವಿ), 400ಕೆವಿ, ಉಪಕೇಂದ್ರ, ಕವಿಪ್ರನಿನಿ, ಹೂಡಿ. | ಸದಸ್ಯರು |
| 4. | ಶ್ರೀಮತಿ.ಕೆ.ಎಸ್.ಹೇಮ, ಸ.ಕಾ.ನಿ.ಇಂಜಿನಿಯರ್(ವಿ), 220ಕೆ.ವಿ, ಕವಿಪ್ರನಿನಿ, ಉಪಕೇಂದ್ರ, ಹೂಡಿ | ಸದಸ್ಯರು |
| 5 | ಶ್ರೀಮತಿ.ಕೆ.ವಿ.ಭಾರತಿ, ಹಿ.ಸ ನಿಗಮ ಕಾರ್ಯಾಲಯ, ಕಾವೇರಿಭವನ. | ಸದಸ್ಯರು |
| 6 | ಶ್ರೀಮತಿ.ಕೆ.ಪಿ.ರಾಧ, ಹಿ.ಸ ನಿಗಮ ಕಾರ್ಯಾಲಯ, ಕಾವೇರಿಭವನ | ಸದಸ್ಯರು |
| 7. | ಶ್ರೀಮತಿ.ಶ್ವೇತ ಲೂತ್ರ, ಕಾನೂನು ಸಲಹೆಗಾರರು, ಎಸ್.ಎ.ಎಸ್.ಹೆಚ್.ಎ, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು. | ಸರ್ಕಾರೇತರ ಪ್ರತಿನಿಧಿ |
| 8 | ಶ್ರೀಮತಿ.ಭಾರತಿ, ವ್ಯವಸ್ಥಾಪಕರು (ವಿಚಾರಣೆಗಳು-1), ನಿಗಮ ಕಾರ್ಯಾಲಯ, | ಸದಸ್ಯರು ಮತ್ತು ಸಂಚಾಲಕರು |

ಮೇಲ್ಕಂಡ ಸಮಿತಿಯ ಕಾಲಾನುಕಾಲಕ್ಕೆ ಸಭೆಯನ್ನು ಏರ್ಪಡಿಸಿಕೊಂಡು ಮಹಿಳಾ ದೂರುಗಳ ಬಗ್ಗೆ ಚರ್ಚಿಸಿ, ದೂರು ನಿರ್ವಹಣೆಗೊಳಸುತ್ತಾ ಬಂದಿರುತ್ತದೆ.ಆದರೆ 2016-17ನೇ ಸಾಲಿನಲ್ಲಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ.

ನಿಗಮದಲ್ಲಿ ಆಡಳಿತ ವರ್ಗ ಹಾಗೂ ನೌಕರ ವರ್ಗದ ಸಂಬಂಧ ಸದಾ ಉತ್ತಮ ಹಾಗೂ ಸಾಮರಸ್ಯದಿಂದ ಮುಂದುವರೆದಿದ್ದು ಎಲ್ಲಾ ನೌಕರರ ಹಾಗೂ ಅಧಿಕಾರಿಗಳ ತಂಡ ಸ್ಫೂರ್ತಿಯ ಸೆಲೆಯಿಂದ ಗ್ರಾಹಕ ವೃಂದಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವಲ್ಲಿ ಸಹಕಾರಿಯಾಗಿರುವುದು ಸಂತಸದ ವಿಷಯ.

**ಸಾಂಸ್ಥಿಕ ಆಡಳಿತ** :

ಕ.ವಿ.ಪ್ರ.ನಿ.ನಿ.ಯು ತನ್ನ ಎಲ್ಲ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹಾಗೂ ಪ್ರಾಮಾಣಿಕತೆಯ ನಂಬಿಕೆಯನ್ನು ಹೊಂದಿದೆ.

ಕ.ವಿ.ಪ್ರ.ನಿ.ನಿ.ಯ ನಿರ್ದೇಶಕ ಮಂಡಳಿಯು ತನ್ನ ಎಲ್ಲ ವ್ಯವಹರಣೆಗಳಲ್ಲಿ ಉತ್ತಮ ಆಚರಣೆಯನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳಲು ನಿಗಮ ಆಡಳಿತದಲ್ಲಿ ಹೆಚ್ಚು ಒತ್ತನ್ನು ನೀಡಿದೆ.

ಕಂಪನಿಯಲ್ಲಿನ ಆಡಳಿತದ ಪ್ರಕ್ರಿಯೆಯು, ಸಭೆಗಳ ನಂತರ ಅನುಸರಣೆ, ಪರಿಶೀಲನೆ ಹಾಗೂ ಮಂಡಳಿಯಿಂದ/ ಮಂಡಳಿಯ ಉಪ ಸಮಿತಿಗಳಿಂದ ಕೈಗೊಂಡ ಕ್ರಮಗಳಿಗೆ/ ನಿರ್ಣಯಗಳ ಬಾಕಿ ಇರುವುದಕ್ಕೆ ವರದಿ ಸಲ್ಲಿಕೆ ಇಂತಹ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ.

ದಿನಾಂಕ ಮಾರ್ಚ್ 31, 2017ರಂದು ಇದ್ದಂತೆ, ನಿರ್ದೇಶಕ ಮಂಡಳಿಯು 25 ಸದಸ್ಯರನ್ನು ಹೊಂದಿದೆ. ಎಲ್ಲ ನಿರ್ದೇಶಕರು, ಮಂಡಳಿಯ ನಡಾವಳಿಗಳು ಹಾಗೂ ಉಪ ಸಮಿತಿಯ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ನಿರ್ಣಯ ಪ್ರಕ್ರಿಯೆಗೆ ಮೌಲ್ಯವರ್ಧಿತ ಗೌರವವನ್ನು ಒದಗಿಸಿದೆ.

**ಮಂಡಳಿ ಸಭೆಗಳು** :

ಮಂಡಳಿ ನಿರ್ದೇಶಕರ ಸಭೆಯನ್ನು ಮುಂಚಿತವಾಗಿಯೇ ಗೊತ್ತುಪಡಿಸಿ, ಪ್ರತಿಯೊಬ್ಬ ನಿರ್ದೇಶಕರಿಗೆ ಲಿಖಿತ ರೂಪದಲ್ಲಿ ಸಭೆಯ ಸೂಚನಾ ಪತ್ರವನ್ನು ತಲುಪಿಸಲಾಗುತ್ತದೆ. ಸಭೆಯ ಕಾರ್ಯಸೂಚಿ ಹಾಗೂ ಸಂಬಂಧಿತ ಇತರ ಟಿಪ್ಪಣಿಗಳ ಮಾಹಿತಿಗಳನ್ನು ಮುಂಚಿತವಾಗಿ ಒದಗಿಸಲಾಗುತ್ತದೆ.

2016-17ರಲ್ಲಿ ಕೆಳಕಂಡಂತೆ ಸಭೆಗಳನ್ನು ನಡೆಸಲಾಯಿತು:

| ಕ್ರಮ ಸಂಖ್ಯೆ | ಸಭೆ ಸಂಖ್ಯೆ | ನಡೆದ ದಿನಾಂಕ |
|---|---|---|
| 1 | 99ನೇ ಸಭೆ | 06.06.2016 |
| 2 | 100ನೇ ಸಭೆ | 16.08.2016 |
| 3 | 101ನೇ ಸಭೆ | 26.09.2016 |
| 4 | 102ನೇ ಸಭೆ | 29.09.2016 |
| 5 | 103ನೇ ಸಭೆ | 19.12.2016 |
| 6 | 104ನೇ ಸಭೆ | 15.03.2017 |

**ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ** :

ವ್ಯವಸ್ಥಾಪಕ ನಿರ್ದೇಶಕರನ್ನು ಮುಖ್ಯ ವ್ಯವಸ್ಥಾಪಕ ಸಿಬ್ಬಂದಿ ಎಂದು ನೇಮಕಗೊಳಿಸಲು ಭಾರತ ಸರ್ಕಾರವು ವಿನಾಯಿತಿ ನೀಡಿದೆ.

ಕಂಪನಿಗಳ ಕಾಯ್ದೆ, 2013ರ ಪ್ರಕರಣ 203(2)ರ ಅನುಸಾರ, ನಿಗಮದ 93ನೇ ಯ ನಿರ್ದೇಶಕ ಮಂಡಳಿ ಸಭೆಯಲ್ಲಿ ಕೆಳಕಂಡವರನ್ನು ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ ಎಂದು ನೇಮಕ ಮಾಡಲಾಯಿತು.

1. **ಡಾ॥ ಅದಿತಿ ರಾಜ : ಮುಖ್ಯ ಆರ್ಥಿಕ ಅಧಿಕಾರಿ**

ಸಂಭಾವನೆ: ಕಾಲಕಾಲಕ್ಕೆ ವೇತನ, ಭತ್ಯೆಗಳು ಇತರ ಸೌಲಭ್ಯಗಳಿಗೆ ಹಾಲಿ ಸೇವಾ ಷರತ್ತುಗಳ ಪ್ರಕಾರ

2. **ಶ್ರೀ ಆರ್. ಶ್ರೀಧರ : ಕಂಪನಿ ಕಾರ್ಯದರ್ಶಿ**

ಸಂಭಾವನೆ: ಕಾಲಕಾಲಕ್ಕೆ ವೇತನ, ಭತ್ಯೆಗಳು ಇತರ ಸೌಲಭ್ಯಗಳಿಗೆ ಹಾಲಿ ಸೇವಾ ಷರತ್ತುಗಳ ಪ್ರಕಾರ

**ಮಂಡಳಿ ಉಪ ಸಮಿತಿಗಳು:**

ಮಂಡಳಿಯ ಉಪ ಸಮಿತಿಗಳನ್ನು ಕೇವಲ ಪ್ರಮುಖ ವಿಷಯಗಳ ಬಗ್ಗೆ ಹೆಚ್ಚಿನ ಕೇಂದ್ರೀಕೃತ ಗಮನ ಹರಿಸುವುದಕ್ಕಷ್ಟೇ ಅಲ್ಲದೆ, ಅಂತಹ ಪ್ರಕರಣ ಬಗ್ಗೆ ಶೀಘ್ರ ನಿರ್ಣಯಗಳನ್ನು ತೆಗೆದುಕೊಳ್ಳಲು ರಚಿಸಲಾಯಿತು. ನಿರ್ಣಯಗಳನ್ನು ತೆಗೆದುಕೊಳ್ಳಲು ಮಂಡಳಿಯು ಕೆಲವು ನಿರ್ದಿಷ್ಟ ಅಧಿಕಾರಗಳನ್ನು ನೀಡಿದೆ.

1. **ಕೇಂದ್ರೀಯ ಖರೀದಿ ಸಮಿತಿ:**

ಮುಖ್ಯ ಇಂಜಿನಿಯರ್ (ವಿದ್ಯುತ್)ರವರಿಗೆ ವಹಿಸಿರುವ ಅಧಿಕಾರವನ್ನು ಮೀರಿದ ಹಾಗೂ ರೂ.20 ಕೋಟಿಯವರೆಗೆ ಆರ್ಥಿಕ ಪರಿಣಾಮವನ್ನು ಬೀರಬಹುದಾದ ಪ್ರಸರಣ ವಲಯ ಅಥವಾ ಯೋಜನೆಗಳ ಸಂಬಂಧವಾದ ಎಲ್ಲ ವಿಷಯಗಳು, ವಿದ್ಯುತ್ ಕೇಂದ್ರ/ಮಾರ್ಗ ಕಾಮಗಾರಿ ವಹಿಸುವಿಕೆ, ಖರೀದಿ ಸಂಬಂಧವಾದ ಎಲ್ಲ ಪ್ರಕರಣಗಳನ್ನು ಪರಿಗಣಿಸಲು ಕೇಂದ್ರೀಯ ಖರೀದಿ ಸಮಿತಿಯನ್ನು ರಚಿಸಲಾಯಿತು.

**ಪ್ರಸಕ್ತ ವರ್ಷದಲ್ಲಿ, ಕೆಳಕಂಡಂತೆ ಕೇಂದ್ರೀಯ ಖರೀದಿ ಸಮಿತಿಯ ಸಭೆಗಳನ್ನು ನಡೆಸಲಾಯಿತು:**

| ಕ್ರ. ಸಂ. | ಸಭೆ ಸಂಖ್ಯೆ, ವಿವರ | ಸಭೆಯ ದಿನಾಂಕ |
|---|---|---|
| 1 | ಎ) 156ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 130ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 49ನೇ, ಪ್ರಸರಣ ವಲಯ, ಹಾಸನ<br>ಡಿ) 80ನೇ, ಪ್ರಸರಣ ವಲಯ, ಬಾಗಲಕೋಟೆ<br>ಇ) 82ನೇ, ಪ್ರಸರಣ ವಲಯ, ಮೈಸೂರು | 21.05.2016 |
| 2. | ಎ) 157ನೇ, ಟೆಂಡರಿಂಗ್ ಹಾಗೂ ಖರೀದಿ | 03.06.2016 |
| 3. | ಎ) 158ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 131ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 50ನೇ, ಪ್ರಸರಣ ವಲಯ, ಹಾಸನ<br>ಡಿ) 83ನೇ, ಪ್ರಸರಣ ವಲಯ, ಮೈಸೂರು<br>ಇ) 58ನೇ, ಪ್ರಸರಣ ವಲಯ, ಕಲಬುರ್ಗಿ<br>ಎಫ್) 50ನೇ, ಪ್ರಸರಣ ವಲಯ, ತುಮಕೂರು<br>ಜಿ) 81ನೇ, ಪ್ರಸರಣ ವಲಯ, ಬಾಗಲಕೋಟೆ | 23.07.2016 |
| 4. | ಎ) 159ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 132ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 51ನೇ, ಪ್ರಸರಣ ವಲಯ, ತುಮಕೂರು | 07.09.2016 |

| | | |
|---|---|---|
| | ಡಿ) 84ನೇ, ಪ್ರಸರಣ ವಲಯ, ಮೈಸೂರು<br>ಇ) 82ನೇ, ಪ್ರಸರಣ ವಲಯ, ಬಾಗಲಕೋಟೆ | |
| 5. | ಎ) 160ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 133ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 51ನೇ, ಪ್ರಸರಣ ವಲಯ, ಹಾಸನ<br>ಡಿ) 52ನೇ, ಪ್ರಸರಣ ವಲಯ, ತುಮಕೂರು | 11.11.2016 |
| 6. | ಎ) 161ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 134ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 52ನೇ, ಪ್ರಸರಣ ವಲಯ, ಹಾಸನ<br>ಡಿ) 85ನೇ, ಪ್ರಸರಣ ವಲಯ, ಮೈಸೂರು<br>ಇ) 83ನೇ, ಪ್ರಸರಣ ವಲಯ, ಬಾಗಲಕೋಟೆ<br>ಎಫ್) 59ನೇ, ಪ್ರಸರಣ ವಲಯ, ಕಲಬುರ್ಗಿ | 07.01.2017 |
| 7. | ಎ) 162ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 135ನೇ, ಪ್ರಸರಣ ವಲಯ, ಬೆಂಗಳೂರು | 28.01.2017 |
| 8. | ಎ) 163ನೇ, ಟೆಂಡರಿಂಗ್ ಹಾಗೂ ಖರೀದಿ<br>ಬಿ) 136ನೇ, ಪ್ರಸರಣ ವಲಯ, ಬೆಂಗಳೂರು<br>ಸಿ) 53ನೇ, ಪ್ರಸರಣ ವಲಯ, ಹಾಸನ<br>ಡಿ) 86ನೇ, ಪ್ರಸರಣ ವಲಯ, ಮೈಸೂರು | 06.03.2017 |

**2. ಸಾಲ ಪಡೆಯುವಿಕೆ ಉಪ ಸಮಿತಿ**

ಮಹಾ ಸಭೆಯಲ್ಲಿ ಷೇರುದಾರರ ಅನುಮೋದನೆಯ ಮಿತಿಗೆ ಒಳಪಟ್ಟಂತೆ, ನಿಗಮದ ಪರವಾಗಿ ಬ್ಯಾಂಕು ಮತ್ತು ಆರ್ಥಿಕ ಸಂಸ್ಥೆಗಳಿಂದ ಕಾಲಕಾಲಕ್ಕೆ ದೀರ್ಘಾವಧಿ ಸಾಲಗಳನ್ನು ಪಡೆಯಲು ಸಾಲ ಪಡೆಯುವಿಕೆ ಉಪ ಸಮಿತಿಗೆ ಅಧಿಕಾರಗಳನ್ನು ವಹಿಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ಸಾಲ ಪಡೆಯುವಿಕೆ ಉಪ ಸಮಿತಿಯು ಕೆಳಕಂಡಂತೆ ಸಭೆಗಳನ್ನು ನಡೆಸಿತು:

| ಕ್ರ. ಸಂ. | ಸಂಸ್ಥೆಯಿಂದ ದೀರ್ಘಾವಧಿ ಸಾಲವನ್ನು ಪಡೆಯಲು | ಮೊಬಲಗು | ಸಭೆಯ ದಿನಾಂಕ |
|---|---|---|---|
| 1 | ಮೆ॥ ಭಾರತೀಯ ಸ್ಟೇಟ್ ಬ್ಯಾಂಕ್ | ರೂ. 878 ಕೋಟಿ | 21.09.2016 |
| 2 | (i) ಮೆ॥ ಬ್ಯಾಂಕ್ ಆಫ್ ಇಂಡಿಯಾ<br>(ii) ಮೆ॥ ಕೆನರಾ ಬ್ಯಾಂಕ್ | (i) ರೂ. 350 ಕೋಟಿ<br>(ii) ರೂ. 500 ಕೋಟಿ | 15.02.2017 |

**3. ಪರಿಶೋಧನಾ ಸಮಿತಿ**

ಕಂಪನಿಗಳ ಕಾಯ್ದೆ, 2013ರ ಅವಕಾಶಗಳ ಪ್ರಕಾರ, ಕ.ವಿ.ಪ್ರ.ನಿ.ನಿಯು ಕೆಳಕಂಡಂತೆ ಪರಿಶೋಧನಾ ಸಮಿತಿಯನ್ನು ರಚಿಸಿತು:

| ಕ್ರ. ಸಂ. | ಸದಸ್ಯರು | ಹುದ್ದೆ |
|---|---|---|
| 1 | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ*, ಇಂಧನ ಇಲಾಖೆ. | ಅಧ್ಯಕ್ಷರು |
| 2 | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ*, ಆರ್ಥಿಕ ಇಲಾಖೆ. | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್* | ಸದಸ್ಯರು |
| 4 | ನಿರ್ದೇಶಕರು(ಪ್ರಸರಣ), ಕ.ವಿ.ಪ್ರ.ನಿ.ನಿ. | ಸದಸ್ಯರು |
| | ಶ್ರೀ ಆರ್. ಶ್ರೀಧರ, ನಿರ್ದೇಶಕರು ಹಾಗೂ ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ., | ಸಂಚಾಲಕರು |

*ಟಿಪ್ಪಣಿ: ಸದಸ್ಯತ್ವವು, ಕ.ವಿ.ಪ್ರ.ನಿ.ನಿ. ನಿರ್ದೇಶಕರ ಮಂಡಳಿಯಲ್ಲಿ ಹೊಂದಿರುವ ನಿರ್ದೇಶಕ ಹುದ್ದೆಯೊಂದಿಗೆ ಕೊನೆಗೊಳ್ಳುತ್ತದೆ.

**ಆಧಾರಿತ ವಿಷಯಗಳು:**

1. ಕಂಪನಿಯ ಪರಿಶೋಧಕರ ನೇಮಕ ಸಂಭಾವನೆ ಮತ್ತು ನೇಮಕಾತಿಯ ಷರತ್ತುಗಳ ಬಗ್ಗೆ ಶಿಫಾರಸ್ಸು.
2 ಪರಿಶೋಧಕರ ವೈಯಕ್ತಿಕತೆ ಹಾಗೂ ಕಾರ್ಯಸಾಧನೆ ಮತ್ತು ಪರಿಶೋಧನಾ ಪ್ರಕ್ರಿಯೆಯ ಪರಿಣಾಮಕತೆ ಬಗ್ಗೆ ಪರಿಶೀಲನೆ.
3. ಆರ್ಥಿಕ ನಿರೂಪಣೆ ಹಾಗೂ ಪರಿಶೋಧಕರ ತತ್ಸಂಬಂಧ ವರದಿಯ ಪರಿಶೀಲನೆ.
4. ಸಂಬಂಧಿತ ವ್ಯಕ್ತಿಗಳೊಂದಿಗೆ ಇರಬಹುದಾದ ಕಂಪನಿಯ ವ್ಯವಹಾರಗಳ ಅನುಮೋದನೆ ಅಥವಾ ತದನಂತರದಲ್ಲಿ ಮಾರ್ಪಾಡು.
5. ಅಂತರ ನಿಗಮ ಸಾಲ ಮತ್ತು ಹೂಡಿಕೆಗಳ ಪರಿಶೀಲನೆ.
6. ಅಗತ್ಯವಿರುವೆಡೆಯಲ್ಲೆಲ್ಲಾ, ಕಂಪನಿಯ ಆಸ್ತಿ ಅಥವಾ ಸ್ವಾಧೀನಪಡಿಸಿರುವಿಕೆಗಳ ಮೌಲ್ಯೀಕರಣ.
7. ಆಂತರಿಕ ಹಣಕಾಸು ನಿಯಂತ್ರಣ ಮತ್ತು ಅಪಾಯ ನಿರ್ವಹಣೆ ವ್ಯವಸ್ಥೆಯ ಮೌಲ್ಯೀಕರಣ.
8. ಸಾರ್ವಜನಿಕ ಕೊಡುಗೆ ಮೂಲಕ ಸ್ವೀಕರಿಸಿದ ನಿಧಿಯ ಪೂರ್ಣ ಬಳಕೆ ಹಾಗೂ ಸಂಬಂಧಿತ ವಿಷಯಗಳ ಮೇಲುಸ್ತುವಾರಿ.

**ಪರಿಶೋಧನಾ ಸಮಿತಿಯ ಸಭೆಗಳಿಗೆ ಲೆಕ್ಕ ಪರಿಶೋಧಕರು ಹಾಗೂ ಪೂರ್ಣಾವಧಿ ಮುಖ್ಯ ವ್ಯವಸ್ಥಾಪಕೀಯ ಸಿಬ್ಬಂದಿ ರವರಿಗೆ ಆಹ್ವಾನಿಸಲಾಗುತ್ತದೆ ಆದರೆ ಅವರಿಗೆ ಮತ ಚಲ್ಲಾಯಿಸಲು ಹಕ್ಕಿರುವುದಿಲ್ಲ.**

**ಪ್ರಸಕ್ತ ವರ್ಷದಲ್ಲಿ, ಕಂಪನಿಯ ಪರಿಶೋಧನಾ ಸಮಿತಿಯು ಕೆಳಕಂಡಂತೆ ಸಭೆಯನ್ನು ನಡೆಸಿತು:**

| **ಕ್ರಮ ಸಂಖ್ಯೆ** | **ಸಭೆ ಸಂಖ್ಯೆ** | **ಸಭೆ ನಡೆದ ದಿನಾಂಕ** |
|---|---|---|
| 1 | 23ನೇ ಸಭೆ | 12.04.2016 |
| 2 | 24ನೇ ಸಭೆ | 01.06.2016 |
| 3 | 25ನೇ ಸಭೆ | 11.08.2016 |
| 4 | 26ನೇ ಸಭೆ | 26.09.2016 |

**ಕಂಪನಿಗಳ ಕಾಯ್ದೆಯ ಪ್ರಕರಣ 134(3)ರ ಅವಕಾಶಗಳ ಪ್ರಕಾರ ಕೆಳಕಂಡ ಮಾಹಿತಿಗಳನ್ನು ಒದಗಿಸಲಾಗಿದೆ:**

**(ಎ) ವಾರ್ಷಿಕ ಸಲ್ಲಿಕೆ** :

ಕಾಯ್ದೆಯ ಪ್ರಕರಣ 92ರ ಅವಕಾಶಗಳ ಅನುಸಾರವಾಗಿ ಅನುಬಂಧ 1ರಲ್ಲಿ ಸಲ್ಲಿಸಿರುವ ವಾರ್ಷಿಕ ಸಲ್ಲಿಕೆಗಳ ಸಾರಾಂಶವನ್ನು, ಈ ವರದಿಗೆ (ಎಂ.ಜಿ.ಟಿ–9) ಲಗತ್ತಿಸಿದೆ.

**(ಬಿ) ನಿರ್ದೇಶಕರ ಜವಾಬ್ದಾರಿಯುತ ಹೇಳಿಕೆಗಳು** :

ಕಂಪನಿ ಕಾಯ್ದೆ, 2013ರ ಪ್ರಕರಣ 134(5)ರ ಅಡಿಯಲ್ಲಿನ ಅಗತ್ಯತೆಯನುಸಾರ, ನಿರ್ದೇಶಕರುಗಳು ದೃಢೀಕರಿಸುವುದೇನೆಂದರೆ,

(ಎ) ವಾರ್ಷಿಕ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆಯಲ್ಲಿ, ಯಾವುದೇ ಭೌತಿಕ ಬದಲಾವಣೆ ವ್ಯತ್ಯಯಿತ ಅಂಶಗಳ ಬಗ್ಗೆ ಸೂಕ್ತ ವಿವರಣೆಗಳೊಂದಿಗೆ ಅನ್ವಯಿತ ಲೆಕ್ಕತತ್ವ ಪದ್ಧತಿಗಳನ್ನು ಅನುಸರಿಸಲಾಗಿದೆ.

(ಬಿ) ಆರ್ಥಿಕ ವರ್ಷಾಂತ್ಯಕ್ಕೆ, ನಿಗಮದ ವ್ಯವಹರಣೆಗಳ ಹಾಗೂ ಆ ಅವಧಿಗೆ ನಿಗಮದ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯಯುತ ದೃಷ್ಟಿಕೋನವನ್ನು ಒದಗಿಸುವುದಕ್ಕಾಗಿ ನಿರ್ದೇಶಕರು ಅಂತಹ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ಕೆ ಮಾಡಿ ನಿರಂತರವಾಗಿ ಅನ್ವಯಿಸಿ, ಯುಕ್ತ ಹಾಗೂ ವಿವೇಚನಾಯುತ ಅಂದಾಜುಗಳನ್ನು ಹಾಗೂ ನಿರ್ಣಯವನ್ನು ಕೈಗೊಂಡಿದ್ದಾರೆ.

(ಸಿ) ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಸಲು ಹಾಗೂ ಮೋಸ, ವಂಚನೆ ಮತ್ತು ಇತರ ಅನಿಯತೆಗಳನ್ನು ಪತ್ತೆ ಮಾಡಿ ತಡೆಯಲು ನಿರ್ದೇಶಕರು ಈ ಕಾಯಿದೆಯ ಪ್ರಕಾರ, ಅಗತ್ಯವಾದ ಲೆಕ್ಕಪತ್ರ ದಾಖಲೆಗಳನ್ನು ನಿರ್ವಹಿಸಲು ಯುಕ್ತ ಹಾಗೂ ಸಾಕಷ್ಟು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

(ಡಿ) ನಿರ್ದೇಶಕರು, ಮುಂದುವರಿಕೆ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ್ದಾರೆ. ಮತ್ತು

(ಇ) ಎಲ್ಲ ಅನ್ವಯಿತ ಕಾನೂನುಗಳ ಪಾಲನೆಯಾಗಿರುವುದನ್ನು ಖಚಿತಪಡಿಸಿಕೊಳ್ಳಲು, ನಿರ್ದೇಶಕರು, ಸಾಕಷ್ಟು ಪ್ರಮಾಣದ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುವ ಸೂಕ್ತ ಕ್ರಮಬದ್ಧವಾದ ವ್ಯವಸ್ಥೆಯನ್ನು ಗೊತ್ತುಪಡಿಸಿಕೊಂಡಿದ್ದಾರೆ.

**(ಸಿ) ಮಂಡಳಿಯ ವಿವರಣೆಗಳು ಅಥವಾ ಅಭಿಪ್ರಾಯಗಳು ಪ್ರತಿಯೊಂದು ಅರ್ಹತೆ ಬಗ್ಗೆ, ಮೀಸಲಾತಿ ಬಗ್ಗೆ, ಅಥವಾ ಪ್ರತಿಕೂಲ ಅಭಿಪ್ರಾಯ, ಅಥವಾ ಟೀಕೆಗಳು**

(ಎ) ಶಾಸನ ಬದ್ದ ಲೆಕ್ಕ ಪರಿಶೋಧಕರು ತಿಳಿಸಿರುವ ತಮ್ಮ ವರದಿಯಲ್ಲಿ ; ಅನುಬಂಧ–1ಎ ಲಗತ್ತಿಸಲಾಗಿದೆ.

(ಬಿ) ಭಾರತ ಸರ್ಕಾರದ ನಿಯಂತ್ರಕರು ಹಾಗೂ ಮಹಾಲೇಖಪಾಲರು ತಿಳಿಸಿರುವ ತಮ್ಮ ವರದಿಯಲ್ಲಿ ; ಅನುಬಂಧ–1ಬಿ ಲಗತ್ತಿಸಲಾಗಿದೆ.

(ಸಿ) ಪ್ರಕರಣ 186ರ ಅಡಿಯಲ್ಲಿ, ಸಾಲ, ಖಾತರಿಗಳು ಅಥವಾ ಹುಡಿಕೆಗಳು ಇಲ್ಲ.

(ಡಿ) ನಿಗದಿತ ನಮೂನೆಯಲ್ಲಿ, ಪ್ರಕರಣ 188ರ ಉಪಪ್ರಕರಣ(1)ರಲ್ಲಿ ಉಲ್ಲೇಖಿಸಿರುವ ಸಂಬಂಧಿತ ವ್ಯಕ್ತಿಗಳ ಗುತ್ತಿಗೆಗಳು ಅಥವಾ ಏರ್ಪಾಡುಗಳ ವಿವರಗಳು ಇಲ್ಲ.

(ಇ) ಕಂಪನಿಯ ವ್ಯವಹರಣೆಯ ಸ್ಥಿತಿ–ಮೇಲೆ ತಿಳಿಸಲಾಗಿದೆ.

(ಎಫ್) ಯಾವುದೇ ಮೀಸಲಿಗೆ ಒಯ್ಯಲು ಪ್ರಸ್ತಾಪಿತವಾದ ಮೊಬಲಗು ಯಾವುದೇ ಮೊಬಲಗನ್ನು ಯಾವುದೇ ಮೀಸಲಾತಿಗೆ ಒಯ್ಯುವ ಪ್ರಸ್ತಾಪವಿಲ್ಲ.

(ಜಿ) ಲಾಭಾಂಶದ ಮೂಲಕ ಪಾವತಿಸಲು ಶಿಫಾರಸ್ಸುಗೊಂಡಿರುವ ಮೊಬಲಗು ಲಾಭಾಂಶದ ಪ್ರಯುಕ್ತ ಯಾವುದೇ ಮೊಬಲಗನ್ನು ಶಿಫಾರಸ್ಸು ಮಾಡಿಲ್ಲ.

(ಹೆಚ್) ಆರ್ಥಿಕ ಲೆಕ್ಕಪತ್ರ ನಿರೂಪಣೆಗಳು ಸಂಬಂಧಿಸಿರುವ ಕಂಪನಿಯ ಕಂಪನಿಯ ಆರ್ಥಿಕ ವರ್ಷಾಂತ್ಯ ಹಾಗೂ ವರದಿ ಸಲ್ಲಿಕೆಯ ಅವಧಿಯ ನಡುವೆ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿರಬಹುದಾದ

ಯಾವುದೇ ಭೌತಿಕ ಬದಲಾವಣೆ ಹಾಗೂ ಬದ್ಧತೆಗಳು :– ಇಲ್ಲ.

(ಐ) ಕಂಪನಿಯಲ್ಲಿ ವಿಪತ್ತು ನಿರ್ವಹಣೆ ಕಾರ್ಯನೀತಿಯ ಅಭಿವೃದ್ಧಿ ಹಾಗೂ ಅನುಷ್ಠಾನದ ವರದಿ – ಇಲ್ಲ.

**ಡಿ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್) ಉಪಕ್ರಮಗಳ ಪ್ರಯುಕ್ತ ಕಂಪನಿಯು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಿರುವ ಕಾರ್ಯನೀತಿ ವಿವರಗಳು :**

**ಎ) ಸಿ.ಎಸ್.ಆರ್. ಸಮಿತಿ :**

**ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಅನುಸರಣೆಯಾಗಿ, ಕೆಳಕಂಡ ಆಧಾರಿತ ಅಂಶಗಳಿಗೆ ಒಳಪಟ್ಟು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಲಾಗಿದೆ:**

| ಕ್ರಮ ಸಂಖ್ಯೆ | ಸದಸ್ಯರು | ಹುದ್ದೆ |
|---|---|---|
| 1 | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ | ಅಧ್ಯಕ್ಷರು |
| 2 | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ, | ಸದಸ್ಯರು |
| 3 | ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಸದಸ್ಯರು |
| 4 | ನಿರ್ದೇಶಕರು ಹಾಗೂ ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. | ಸಂಚಾಲಕರು |

ವರದಿಯಲ್ಲಿರುವ ಪ್ರಸಕ್ತ ವರ್ಷದಲ್ಲಿ, ಕಂಪನಿಯ ಸಿ.ಎಸ್.ಆರ್. ಸಮಿತಿಯು ಕೆಳಕಂಡಂತೆ ಸಭೆಯನ್ನು ನಡೆಸಿತು:

| **ಕ್ರಮ ಸಂಖ್ಯೆ** | **ಸಭೆ ಸಂಖ್ಯೆ** | **ಸಭೆ ನಡೆದ ದಿನಾಂಕ** |
|---|---|---|
| 1 | 3ನೇ ಸಭೆ | 20ನೇ ಫೆಬ್ರವರಿ, 2017 |

**ಬಿ) 2016–17ರ ಅವಧಿಯಲ್ಲಿ ಸಿ.ಎಸ್.ಆರ್. ಪ್ರಯುಕ್ತ ವಂತಿಗೆ :**

ಆ.ವ. 2016–17ರ ಸಾಲಿಗೆ, ಕಂಪನಿ ಕಾಯ್ದೆ 2013ರ ಪ್ರಕರಣ VII ರಲ್ಲಿ ಪಟ್ಟಿ ಮಾಡಿರುವ ಚಟುವಟಿಕೆಗಳ ನಿಮಿತ್ತ ರೂ. 2,44,48,780/– ( ರೂ. ಎರಡು ಕೋಟಿ ನಲ್ವತ್ತನಾಲ್ಕು ಲಕ್ಷ ನಲ್ವತ್ತೇಂಟು ಸಾವಿರ ಎಳನೂರ ಎಂಬತ್ತು ಮಾತ್ರ) ಗಳನ್ನು ಖರ್ಚು ಮಾಡಲಾಯಿತು.

**ಕ್ರೀಡೆ:**

ಕಬ್ಬಡಿ, ಬ್ಯಾಸ್ಕೆಟ್ ಬಾಲ್, ಷಟಲ್ ಬ್ಯಾಟ್ಮಿಂಟನ್ (ಪುರುಷರು), ಲಾನ್ ಟೆನ್ನಿಸ್ ಮತ್ತು ವಾಲಿ ಬಾಲ್ ತಂಡಗಳು.

ಕವಿಪ್ರನಿನಿ ಕ್ರೀಡಾ ಪಟುಗಳು ಅಂತರ್ ರಾಷ್ಟೀಯಾ, ರಾಷ್ಟೀಯಾ ಮತ್ತು ರಾಜ್ಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಅಂತರ್ ರಾಷ್ಟೀಯಾ, ರಾಷ್ಟೀಯಾ ಮತ್ತು ರಾಜ್ಯ ಮಟ್ಟದ ಸಾಧನೆಗಳನ್ನು ಮಾಡಿದ್ದು, ನಿಗಮಕ್ಕೆ ಕೀರ್ತಿ ತಂದಿರುತ್ತಾರೆ.

| | |
|---|---|
| **ಚೆಸ್** : | ಅಂತರ ರಾಷ್ಟ್ರೀಯ ಮಟ್ಟದ ಸಾಧನೆ :<br>ಜುಲೈ–2016 ರಲ್ಲಿ ಸರ್ಬಿಯದ, ನೊವಿಸಾಡ್ ನಲ್ಲಿ ನಡೆದ 16ನೇ ಅಂತರ ರಾಷ್ಟ್ರೀಯ ಅಂಗವಿಕಲರ ಚೆಸ್ ಸಂಸ್ಥೆ (ಐಪಿಸಿಎ) ವಿಶ್ವ ವೈಯಕ್ತಿಕ ಚೆಸ್ ಚಾಂಪಿಯನ್‌ಷಿಪ್–2016 ರಲ್ಲಿ ಶ್ರೀ ಸಂಜೀವ ಜಿ ಹಮಣ್ಣವರ್, ಸ.ಕಾ.ಇಂ, ಬ್ಯ.ಕಾ, ಯುಡಿಐಎಸ್ ಉಪ ವಿಭಾಗ, ಕವಿಪ್ರನಿನಿ, ಬೆಳಗಾವಿ ರವರು ಭಾರತವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ |
| **ಬಿಲಿಯರ್ಡ್ಸ್ ಮತ್ತು ಸ್ನೂಕರ್**: | ರಾಷ್ಟ್ರೀಯಮಟ್ಟದ ಸಾಧನೆ :<br>ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ ಇವರು ಡಿಸೆಂಬರ್–2016 ರಲ್ಲಿ ಮುಂಬೈ ನಲ್ಲಿ ನಡೆದ ರಾಷ್ಟೀಯಾ 6 ರೆಡ್ಸ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಟಾಪ್ 32 ಹಂತಕ್ಕೆ ತಲುಪಿರುತ್ತಾರೆ.<br>ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ ಇವರು ಫೆಬ್ರವರಿ–2016 ರಲ್ಲಿ ಪೂನಾದಲ್ಲಿ ನಡೆದ ರಾಷ್ಟೀಯಾ ಬಿಲಿಯಾರ್ಡಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಟಾಪ್ 32 ಹಂತಕ್ಕೆ ತಲುಪಿರುತ್ತಾರೆ. |
| **ನೆಟ್ ಬಾಲ್** | ರಾಷ್ಟ್ರೀಯಮಟ್ಟದ ಸಾಧನೆ :<br>ಶ್ರೀ ವಿಜಯ್ ಎನ್, ಕಿ.ಮಾ, 9 ನೇ ಪೂರ್ವ, ಉಪ ವಿಭಾಗ, ಬೆಸ್ಕಾಂ ಇವರು ಡೆಸೆಂಬರ್–2016 ರಲ್ಲಿ ದೆಹೆಲಿಯಲ್ಲಿ ನಡೆದ 36ನೇ ರಾಷ್ಟೀಯ ನೆಟ್ ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯದ ತಂಡವನ್ನು ಪ್ರತಿನಿಧಿಸಿರುತ್ತಾರೆ. ರಾಜ್ಯ ತಂಡವು 2ನೇ ಸ್ಥಾನ ಪಡೆದಿರುತ್ತದೆ. |
| **ಆರ್ಚರಿ**: | ಶ್ರೀಮತಿ ಕೀರ್ತನಾ, ಸ.ವ್ಯ (ಆ.ನಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಇವರು ಮಾರ್ಚ್–2017 ರಲ್ಲಿ ಫರೀದಾಬಾದ್ ನಲ್ಲಿ ನಡೆದ 37ನೇ ಸೀನಿಯರ್ ಪುರುಷರು ಮತ್ತು ಮಹಿಳೆಯರ ರೀಕರ್ವ್ ಮತ್ತು ಕಾಂಪೌಂಡ್ ರೌಂಡ್ ರಾಷ್ಟೀಯ ಆರ್ಚರಿ ಚಾಂಪಿಯನ್‌ಷಿಪ್ ನಲ್ಲಿ ರಾಜ್ಯದ ಮಹಿಳೆಯರ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ. |
| **ಅಥ್ಲೆಟಿಕ್ಸ್**: | ಶ್ರೀ ಡಿ ಎಂ ಶ್ರೀನಿವಾಸ್, ಸಹಾಯಕ, ದೇವನಹ್ಳಿ ಉಪ ವಿಭಾಗ, ಬೆಸ್ಕಾಂ ಇವರು ಫೆಬ್ರವರಿ–2017 ರಲ್ಲಿ ಹೈದರಬಾದ್ ನಲ್ಲಿ ನಡೆದ 38 ನೇ ಮಾಸ್ಟರ್ಸ್ ಅಥ್ಲೆಟಿಕ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ. |
| **ಬಿಲ್ಯಾರ್ಡ್ಸ್ ಮತ್ತು ಪೂಲ್** | ರಾಜ್ಯ ಮಟ್ಟದ ಸಾಧನೆ:<br>ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ ಇವರು ಕರ್ನಾಟಕ ರಾಜ್ಯದ ಹಿರಿಯ ಬಿಲಿಯರ್ಡ್ಸ ರ್‍ಯಾಂಕಿಂಗ್‌ನಲ್ಲಿ ಭಾಗವಹಿಸಿ 2 ನೇ ಸ್ಥಾನ ಪಡೆದಿರುತ್ತಾರೆ.<br>ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ ಇವರು ಕರ್ನಾಟಕ ರಾಜ್ಯದ 9 ಬಾಲ್ ಪೂಲ್ ರ್‍ಯಾಂಕಿಂಗ್ ಪಂದ್ಯಾವಳಿಯಲ್ಲಿ ಭಾಗವಹಿಸಿ 3 ನೇ ಸ್ಥಾನ ಪಡೆದಿರುತ್ತಾರೆ.<br>ಶ್ರೀ ಡಿ. ರಾಜ್‌ಕುಮಾರ್, ಮಾ.ಸಂ.ಅ.ಕೇಂದ್ರ ಇವರು ಕರ್ನಾಟಕ ಮತ್ತು ತಮಿಳು ನಾಡು ಅಂತರ ರಾಜ್ಯ ಚಾಂಪಿಯನ್‌ಷಿಪ್ ನಲ್ಲಿ ಕರ್ನಾಟಕ ರಾಜ್ಯ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿರುತ್ತಾರೆ. |

| **ಅಖಿಲ ಭಾರತ ವಿದ್ಯುತ್ ಕೀಡ್ರಾ ನಿಯಂತ್ರಣ ಮಂಡಳಿಯ ಪಂದ್ಯಾವಳಿಗಳಲ್ಲಿ ಮತ್ತು ಇತರೆ ಪಂದ್ಯಾವಳಿಗಳಲ್ಲಿ ಭಾಗವಹಿಸಿರುವ ವಿವರ** | |
|---|---|
| **ಕಬಡ್ಡಿ**: | ಕವಿಪ್ರನಿನಿ ಕಬಡ್ಡಿ ತಂಡವು ಜುಲೈ–2016 ರಲ್ಲಿ ತಮಿಳು ನಾಡಿನ ತಿರುಚಿರಾಪಳ್ಳಿನಲ್ಲಿ ನಡೆದ 41ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿರುತ್ತಾರೆ. |
| **ಬ್ಯಾಸ್ಕೆಟ್ ಬಾಲ್**: | ಕವಿಪ್ರನಿನಿ ಬ್ಯಾಸ್ಕೆಟ್ ಬಾಲ್ ತಂಡವು ಮೆ–2016 ರಲ್ಲಿ ಹೈದರಾಬಾದ್‌ನಲ್ಲಿ ನಡೆದ 41ನೇ ಅಖಿಲ ಭಾರತ ವಿದ್ಯುತ್ ಕೀಡಾ ನಿಯಂತ್ರಣ ಮಂಡಳಿಯ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿರುತ್ತಾರೆ. |

| | |
|---|---|
| 32 | ಕರ್ನಾಟಕ ಸರ್ಕಾರದಿಂದ ಹೊಂದಾಣಿಕೆಯ ಅಧಿಸೂಚನೆಯು ಬಾಕಿ ಇದ್ದು, ಟಿಪ್ಪಣಿ ಸಂಖ್ಯೆ: 19.5ರಲ್ಲಿ ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ರೂ. 4238.43 ಲಕ್ಷ ಶಿಲ್ಕನ್ನು ತೋರಿಸಿದ್ದು, ಇದು, ದಿನಾಂಕ 01.06.2002 ರಿಂದ ಅಂತಿಮ ಆರಂಭ ಶಿಲ್ಕನ್ನು ಅಧಿಸೂಚಿಸಿದ ನಂತರ ಮಾಡಿದ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಸಮನ್ವಯ –ಗೊಳಿಸಿಕೊಂಡು, ಅನುಮೋದನೆಗಾಗಿ ಪರಿಷ್ಕೃತ ಪ್ರಸ್ತಾಪವನ್ನು ಸಲ್ಲಿಸಬೇಕೆಂದು ಸರ್ಕಾರವು ಕ.ವಿ.ಪ್ರ.ನಿ.ನಿ.ಗೆ ನಿರ್ದೇಶನ ನೀಡಿದೆ. ದಿನಾಂಕ 31.03.2017ರಂದು ಇದ್ದಂತೆ, ಮೇಲಿನ ಲೆಕ್ಕಗಳ ಲೆಕ್ಕಸಮನ್ವಯ –ಗೊಳಿಸುವಿಕೆಯು ಪ್ರಗತಿಯಲ್ಲಿದ್ದು, ನಿವ್ವಳ ಮೌಲ್ಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗಲಿಲ್ಲ. | ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಸದರಿ ಮೊತ್ತವನ್ನು ಸಮನ್ವಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |

## ಆಂತರಿಕ ಆರ್ಥಿಕ ನಿಯಂತ್ರಣದ ಮೇಲಿನ ಶಾಸನಬದ್ಧ ಪರಿಶೋಧಕರ ವರದಿಗೆ ಉತ್ತರ

| ಕ್ರ. ಸಂ | ಶಾಸನಬದ್ಧ ಪರಿಶೋಧಕರ ಗಮನಿತ ಅಂಶಗಳು | ವ್ಯವಸ್ಥಾಪಕ ಮಂಡಳಿಯ ಉತ್ತರ |
|---|---|---|
| i) | 1 ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣ –ವನ್ನು ಹೊಂದಿರುವುದಿಲ್ಲ:<br>ಅ. ಕಾಲ ಕಾಲಕ್ಕೆ ಆಸ್ತಿ ಪುಸ್ತಕಗಳನ್ನು ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ಮಾಹಿತಿಯೊಂದಿಗೆ ನವೀಕರಿಸದಿರುವುದು.<br>ಆ. ವರದಿಯ ದಿನಾಂಕದಂದು ದುರ್ಬಲಗೊಂಡ ಆಸ್ತಿಗಳ ಗುರುತಿಸುವಿಕೆ.<br>ಇ. ಚರಾಸ್ತಿಗಳನ್ನು ಹೊರತು ಪಡಿಸಿ ಸ್ತಿರಾಸ್ಥಿಗಳ ಭೌತಿಕ ಪರೀಶೀಲನೆ ವರದಿ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯರೂಪ ಇಲ್ಲದೆ ಇರುವುದು.<br>ಈ. ಚರಾಸ್ತಿ ಪರೀಶೀಲನಾ ಮಾಹಿತಿಯನ್ನು ಆಸ್ತಿ ಪುಸ್ತಕದೊಂದಿಗೆ ಸಮನ್ವಯಗೊಳಿಸದೇ ಇರುವುದು.<br>ಮೇಲಿನ ಕೊರತೆಗಳು ಹಣಕಾಸಿನ ನಿರೂಪಣ ಪಟ್ಟಿಯಲ್ಲಿನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಗ್ಗೆ ಗಮನಾರ್ಹ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಡ –ಬಹುದಾಗಿದೆ. | ಅ. ಲೆಕ್ಕ ಘಟಕಗಳಿಗೆ ಆಸ್ತಿ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಲು ಮತ್ತು ಆಸ್ತಿ ಪುಸ್ತಕಗಳಲ್ಲಿರುವಂತೆ ಆಸ್ತಿಯ ಭಾಗಗಳ (asset Components) ಮೌಲ್ಯಗಳನ್ನು ಗುರುತಿಸಲು ಸೂಚನೆಗಳನ್ನು ನೀಡಲಾಗುತ್ತದೆ.<br>ಆ. ಕಂಪನಿಯು ವಿದ್ಯುತ್ ಪ್ರಸರಣ ಕಾರ್ಯವನ್ನು ನಿರ್ವಹಿಸುತ್ತಿರು ವುದರಿಂದ, ತನ್ನ ಆಸ್ತಿಗಳನ್ನು ವರ್ಷದ 365 ದಿನಗಳೂ ಉತ್ತಮಸ್ಥಿತಿಯಲ್ಲಿ ನಿರ್ವಹಿಸಬೇಕಾ –ಗಿರುತ್ತದೆ ಆದುದರಿಂದ ವರದಿಯ ದಿನಾಂಕದಂದು ಯಾವುದೇ ಆಸ್ತಿಗಳ ದುರ್ಬಲತೆ ಇರುವುದಿಲ್ಲ.<br>ಇ ಮತ್ತು ಈ. ವಿದ್ಯುತ್ ಪ್ರಸರಣ ಮಾರ್ಗಗಳು ರಾಜ್ಯಾದ್ಯಂತ ಗುಡ್ಡ ಗಾಡು ಪ್ರದೇಶದಲ್ಲಿ ಮತ್ತು ಅರಣ್ಯ ಪ್ರದೇಶದಲ್ಲಿ ವಿಸ್ತರಣೆಗೊಂಡಿರುವುದರಿಂದ ಭೌತಿಕವಾಗಿ ಸದರಿ ಪ್ರಸರಣ ಮಾರ್ಗಗಳನ್ನು ನಿಯತ ಕಾಲಿಕವಾಗಿ ಪರೀವಿಕ್ಷಣೆ ಮಾಡುವುದು ಪ್ರಾಯೋಗಿಕವಲ್ಲ. ಆದಾಗ್ಯೂ ವಿದ್ಯುತ್ ಪ್ರಸರಣ ಮಾರ್ಗಗಳು ಮತ್ತು ಇತರೆ ಆಸ್ತಿಗಳಿಂದ ಎಲ್ಲಿಯವರೆಗೆ ಪ್ರಸರಣ ಕಾರ್ಯವನ್ನು ನಿರ್ವಹಿಸಲಾಗುತ್ತಿರುತ್ತ ದೆಯೋ ಅಲ್ಲಿಯವರೆಗೆ ಭೌತಿಕವಾಗಿ ಸದರಿ ಆಸ್ತಿಗಳು ಪ್ರಸರಣ ಕಾರ್ಯಕ್ಕೆ ಲಭ್ಯವಿರುತ್ತದೆ. |
| ii) | ಭೂಮಿಯ ಮಾಲಿಕತ್ವ ಗುರುತಿಸುವಿಕೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮ –ಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲದ ಕಾರಣ ಭೂಮಿಯನ್ನು ಸೂಕ್ತವಾಗಿ ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಭೂಮಿ ಎಂದು ವರ್ಗೀಕರಿಸದ ಕಾರಣ ಹಾಗೂ ಅದರ ಋಣಮುಕ್ತತೆಯ ಬಗ್ಗೆ ಹಣಕಾಸಿನ ನಿರೂಪಣ ಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗ ಬಹುದಾಗಿದೆ. | ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಆಧಾರಿತ ಭೂಮಿಗಳನ್ನು ಗುರುತಿಸಲು ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆಗಳನ್ನು ನೀಡಿರುತ್ತದೆ. ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಪ್ರತ್ಯೇಕ ಅನುಬಂಧಗಳನ್ನು ನೀಡಿ ಸದರಿ ಭೂಮಿಗಳ ವಿವರಗಳನ್ನು ಲೆಕ್ಕ ಘಟಕಗಳಿಂದ ಪಡೆಯಲಾಗುತ್ತಿದೆ ಆದಾಗ್ಯೂ ಸೂಕ್ತವಾಗಿ ಭೂಮಿಯನ್ನು ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲಿಕತ್ವ ಆಧಾರಿತ ಭೂಮಿಗಳಾಗಿ ವರ್ಗೀಕರಿಸಲು ಹಾಗೂ ಕಾಮಗಾರಿ ಶಾಖೆಯೊಂದಿಗೆ ಚರ್ಚಿಸಿ ಸಮನ್ವಯಗೊಳಿಸಲು ಸೂಚನೆಗಳನ್ನು ನೀಡಲಾಗುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| iii) | ಕಂಪನಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ (ಪಿಪಿಇ) ಬೆಲೆಯನ್ನು ಕಾರ್ಯಾರಂಭಗೊಂಡ ದಿನಾಂಕದಂದು ಪೂರ್ಣವಾಗಿ ಬಂಡವಾಳೀಕರಿಸುವ ಕುರಿತು ಸಾಕಷ್ಟು ವಿಧಾನಗಳನ್ನು ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ನಿರೂಪಣ ಪಟ್ಟಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಬೆಲೆ ತಗ್ಗಿಸಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಕವಿಪ್ರನಿನಿಯು ತನ್ನ ಆಸ್ತಿಗಳನ್ನು ಬಂಡವಾಳೀಕರಣ ಮಾಡುವಾಗ ಉಪಕರಣದ ಬೆಲೆಯನ್ನು ಹಾಗೂ ಸದರಿ ಉಪಕರಣಕ್ಕೆ ಸಂಬಂಧಿಸಿದ ಖರ್ಚುಗಳನ್ನು ಸಹ ಪರಿಗಣಿಸಿ 'ಸಿ' ರಿಜಿಸ್ಟರ್‌ನಲ್ಲಿರುವಂತೆ ಕಾರ್ಯಾರಂಭದ ದಿನದವರೆಗೆ ವೆಚ್ಚಗಳನ್ನು ಪರಿಗಣಿಸಿ ಬಂಡವಾಳೀಕರಣ ಮಾಡಲಾಗುತ್ತಿದೆ. ಮುಂದುವರೆದು ಆಸ್ತಿ ಬಂಡವಾಳೀಕರಣ ಆದ ನಂತರ ಯಾವುದೇ ಬಿಲ್ಲುಗಳು ಮತ್ತು ವೆಚ್ಚಗಳನ್ನು ನಿರ್ವಹಿಸಿದಲ್ಲಿ ಸದರಿ ವೆಚ್ಚಗಳನ್ನು ಕೂಡ ಬಂಡವಾಳೀಕರಿಸಿ ಪರಿಷ್ಕೃತ ಆಸ್ತಿಯ ಮೌಲ್ಯದ ಮೇಲೆ ಸವಕಳಿಯನ್ನು ಪೂರ್ವಾನ್ವಯವಾಗಿ ಲೆಕ್ಕೀಕರಿಸಲಾಗುವುದು. ಆದಾಗ್ಯೂ ವರದಿ ಮಾಡಿದ ದಿನಾಂಕದಂದು ಯಾವುದೇ ಬಂಡವಾಳೀಕರಣಗೊಳಿಸದೆ ಬಾಕಿ ಉಳಿದಿರುವ ವೆಚ್ಚಗಳನ್ನು ಗುರುತಿಸಿ ಕಾರ್ಯಾದೇಶದನ್ವಯ (DWA) ಲೆಕ್ಕಗಳಲ್ಲಿ ಅವಕಾಶವನ್ನು (Provisions) ಕಲ್ಪಿಸಲಾಗುವುದು. |
| iv) | ಕಂಪನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ವಿಧಾನದ (Weighted Average) ಆಧಾರದ ಮೇಲೆ 2015ರಡಿಯಲ್ಲಿ ಹೊರಡಿಸಿರುವ IND AS 23 Borrowing Cost ಅನ್ವಯ ಕಂಪನಿಯ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಮೇಲಿನ ಸವಕಳಿಗಳು, ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಕವಿಪ್ರನಿನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಣಗೊಳಿಸುವಲ್ಲಿ IND AS 23 ರಲ್ಲಿ ತಿಳಿಯ ಪಡಿಸಿರುವ ಸರಾಸರಿ ವಿಧಾನ (Weighted Average) ನಿಯಮಗಳನ್ವಯ ಪಾಲಿಸುತ್ತಿದ್ದು ಸದರಿ ವಿಧಾನದಲ್ಲಿ ತಿದ್ದುಪಡಿಯ ಅವಶ್ಯಕತೆ ಇದ್ದಲ್ಲಿ ಸೂಕ್ತವಾಗಿ ಪರಿಶೀಲಿಸಿ ಅದರಂತೆ ಕ್ರಮ ಕೈಗೊಳ್ಳಲಾಗುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| v | ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಬಂಡವಾಳೀಕರಿಸುವಾಗ ಸಿಬ್ಬಂದಿ ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಅನುಪಾತದಲ್ಲಿ ಹಂಚಿಕೆ ಮಾಡುವಾಗ ಅಸಂಗತವಾಗಿ ಒಂದೊಂದು ಘಟಕದಲ್ಲಿ ಒಂದೊಂದು ರೀತಿಯಲ್ಲಿ ಪಾಲಿಸಲಾಗುತ್ತಿದ್ದು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಶಾಸನ ಬದ್ಧ ಪರಿಶೋಧಕರ ವರದಿ ಕ್ರಮ ಸಂಖ್ಯೆ 1 ರಲ್ಲಿ ಉಲ್ಲೇಖಿಸಿರುವಂತೆ ನೀಡಿರುವ ವ್ಯವಸ್ಥಾಪಕ ಮಂಡಳಿಯ ಉತ್ತರವನ್ನು ಪರಿಗಣಿಸುವುದು |
| vi | ಕಂಪನಿಯು ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರವನ್ನು ನಿಗಧಿತ ಅವಧಿಯಲ್ಲಿ ನೀಡುವ ಬಗ್ಗೆ ಪರಿಣಾಮಕಾರಿ –ಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ನಿರ್ಮಾಣ ಹಂತದಲ್ಲಿರುವ ವೆಚ್ಚಗಳು (EDC), ಸಾಲಗಳ ವೆಚ್ಚವನ್ನು ಒಳಗೊಂಡಂತೆ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಶಾಸನ ಬದ್ಧ ಪರಿಶೋಧಕರ ವರದಿ ಕ್ರಮ ಸಂಖ್ಯೆ 4 ರಲ್ಲಿ ಉಲ್ಲೇಖಿಸಿರುವಂತೆ ನೀಡಿರುವ ವ್ಯವಸ್ಥಾಪಕ ಮಂಡಳಿಯ ಉತ್ತರವನ್ನು ಪರಿಗಣಿಸುವುದು |
| vii | ಕಂಪನಿಯು ಸ್ಥಾಪನ ವೆಚ್ಚಗಳು ಮತ್ತು ಕಾಮಾಗಾರಿ ಬಿಲ್ಲುಗಳನ್ನು ಸಂಬಂಧಪಟ್ಟ ಆಸ್ತಿಯ ಭಾಗಗಳಿಗೆ ಬಂಡವಾಳೀಕರಣ –ಗೊಳಿಸುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೌಲ್ಯದ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಶಾಸನ ಬದ್ಧ ಪರಿಶೋಧಕರ ವರದಿ ಕ್ರಮ ಸಂಖ್ಯೆ 1 ರಲ್ಲಿ ಉಲ್ಲೇಖಿಸಿರುವಂತೆ ನೀಡಿರುವ ವ್ಯವಸ್ಥಾಪಕ ಮಂಡಳಿಯ ಉತ್ತರವನ್ನು ಪರಿಗಣಿಸುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| viii | ಕಂಪನಿಯು ಆಸ್ತಿ ಕಳಚುವ ವೆಚ್ಚ (De commissioning Cost) ಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ವೆಚ್ಚದ ಒಂದು ಭಾಗವೆಂದು ಅಂದಾಜು ಮಾಡಲು ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಕವಿಪ್ರನಿನಿಯು ನಡೆಸುವ ಚಟುವಟಿಕೆಯ ಸ್ವರೂಪವನ್ನು ಪರಿಗಣಿಸಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಕಳಚುವ ವೆಚ್ಚಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೌಲ್ಯದ ಒಂದು ಅಂಶವೆಂದು ಗುರುತಿಸಲು ಕಷ್ಟ ಸಾಧ್ಯ. |
| ix | ಕಂಪನಿಯು ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆದು ಆಸ್ತಿಗಳನ್ನು ಇಳಿಸಿದ ಮೌಲ್ಯದಲ್ಲಿ ಬೇರೆ ಲೆಕ್ಕ ಘಟಕಕ್ಕೆ ವರ್ಗಾಯಿಸಿದಲ್ಲಿ ಅದರ ಮೇಲಿನ ಸವಕಳಿಯನ್ನು ಹಾಗೂ ಆಸ್ತಿಯ ಬೆಲೆಯನ್ನು ಸೂಕ್ತವಾಗಿ ಪರಿಗಣಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಕಳಚಿದ ಆಸ್ತಿಗಳ ಮೇಲೆ ಸವಕಳಿಯನ್ನು ಲೆಕ್ಕ ಘಟಕಗಳಿಗೆ ನೀಡಲಾಗಿರುವ ಸವಕಳಿಯ ಸಿದ್ಧ ಪಟ್ಟಿಯನ್ವಯ ಕಳಚಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆಯಲಾಗುತ್ತಿದೆ. ಕಳಚಿದ ಆಸ್ತಿಗಳ ಅಂಗಭಾಗಗಳನ್ವಯ ಆಸ್ತಿ ಪುಸ್ತಕವನ್ನು ನಿರ್ವಹಿಸಲು ಈಗಾಗಲೇ ನೀಡಿರುವ ಮಾರ್ಗ ಸೂಚಿಗಳನ್ನು ಕೆಲವು ಸಂದರ್ಭಗಳಲ್ಲಿ ಪಾಲಿಸುತ್ತಿಲ್ಲ. ಆರ್ಥಿಕ ವರ್ಷ 2017-18ರಲ್ಲಿ ಸದರಿ ಮಾರ್ಗ ಸೂಚಿಗಳನ್ನು ಮತ್ತೊಮ್ಮೆ ಪುನರುಚ್ಚರಿಸಲಾಗುವುದು. |
| x | ಕಂಪನಿಯು ಸಿಬ್ಬಂದಿ ವೆಚ್ಚ ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮೇಲ್ವಿಚಾರಣ ಶುಲ್ಕದೊಂದಿಗೆ ನಿವ್ವಳಗೊಳಿಸುತ್ತಿರುವುದನ್ನು ತಾಂತ್ರಿಕವಾಗಿ ರೂಪಿಸುವ ವಿಷಯಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾದ ನಿಯಮ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೇಲೆ ಸಿಬ್ಬಂದಿ ವೆಚ್ಚವನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡದೆ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಸಿಬ್ಬಂದಿ ವೆಚ್ಚವು ಉತ್ಪ್ರೇಕ್ಷಿತವಾಗಿ (Over Statement) ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾ ಗುತ್ತದೆ. | ಬೃಹತ್ ಕಾಮಗಾರಿ ವಿಭಾಗಗಳಲ್ಲಿ ವಸೂಲಾತಿ ಮಾಡಿದ ಮೇಲ್ವಿಚಾರಣ ಶುಲ್ಕಗಳನ್ನು ಸಿಬ್ಬಂದಿ ವೆಚ್ಚದಲ್ಲಿ ಕಡಿಮೆ ಮಾಡುವುದನ್ನು ವೈಜ್ಞಾನಿಕವಾಗಿ ನಿರೂಪಿಸಲು ಪ್ರಯತ್ನ ಮಾಡುವ ನಿಟ್ಟಿನಲಿ ಆರ್ಥಿಕ ವರ್ಷ 2017-18ರಲ್ಲಿ ಕ್ರಮ ಕೈಗೊಳ್ಳಲಾಗುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| xi | ಕಂಪನಿಯಲ್ಲಿ ಯೋಜನೆಗಳ ಸಮೀಕ್ಷ ವರದಿ/ಕಾರ್ಯಸಾಧ್ಯತೆಗಳನ್ನು ನಿಯತ ಕಾಲಿಕವಾಗಿ ಪರಾಮರ್ಶಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವು -ದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ನಿವ್ವಳ ಮೌಲ್ಯ ಬಂಡವಾಳೀ -ಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾ -ಗುತ್ತದೆ. | ಯೋಜನೆಗಳ ಸಮೀಕ್ಷ ವರದಿ/ಕಾರ್ಯ ಸಾಧ್ಯತೆಗಳ ವೆಚ್ಚಗಳನ್ನು ಪೂರ್ವಾಭಾವಿ ವೆಚ್ಚಗಳ ಲೆಕ್ಕ ಶೀರ್ಷಿಕೆಯಲ್ಲಿ ಲೆಕ್ಕೀಕರಿಸ -ಲಾಗುವುದು. ಮುಂದುವರೆದು ಸದರಿ ಯೋಜನೆಯ ಕಾರ್ಯವನ್ನು ಪ್ರಾರಂಭಿಸಿದಲ್ಲಿ ಅಂತಹ ಯೋಜನೆಗಳ ಸಮೀಕ್ಷ ವರದಿ/ ಕಾರ್ಯಸಾಧ್ಯತೆಯ ವೆಚ್ಚಗಳನ್ನು ಬಂಡವಾಳೀ ಕರಿಸಲಾಗುವುದು. ಒಂದು ವೇಳೆ ಯೋಜನೆಯು ತಿರಸ್ಕೃತಗೊಂಡಲ್ಲಿ ಸಮೀಕ್ಷ ವರದಿ/ಕಾರ್ಯ ಸಾಧ್ಯತೆಯ ವೆಚ್ಚವನ್ನು ಅವಶ್ಯಕವಲ್ಲದ ಬಂಡವಾಳ ಖರ್ಚು (Infructuous Capital Expenditure) ಎಂದು ಪರಿಗಣಿಸಿ ತೊಡೆದು ಹಾಕಲಾಗುವುದು. ಯೋಜನೆಗಳನ್ನು ಪ್ರಾರಂಭಿಸುವ ಅಥವಾ ತಿರಸ್ಕರಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವರೆಗೂ ಸಮೀಕ್ಷಾ/ ಕಾರ್ಯ ಸಾಧ್ಯತೆಗಳ ವೆಚ್ಚಗಳನ್ನು ಪೂರ್ವಾ ಭಾವಿ ವೆಚ್ಚಗಳ ಲೆಕ್ಕ ಶೀರ್ಷಿಕೆಯಲ್ಲಿ ಮುಂದೂವರೆಸಲಾಗುವುದು. |
| xii | ಕಂಪನಿಯು ಬಾಡಿಗೆ ನೀಡಿರುವ ಕಛೇರಿ ಕಟ್ಟಡಗಳು/ಸಿಬ್ಬಂದಿಯ ವಸತಿ ಗೃಹಗಳನ್ನು ಹೂಡಿಕೆ ಮಾಡಲಾಗಿರುವ ಆಸ್ತಿಗಳೆಂದು ಪರಿಗಣಿಸುವ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ಹೂಡಿಕೆ ಆಸ್ತಿಗಳ ವಿಷಯದಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಶಾಸನ ಬದ್ಧ ಪರಿಶೋಧಕರ ವರದಿ ಕ್ರಮ ಸಂಖ್ಯೆ 13 ರಲ್ಲಿ ಉಲ್ಲೇಖಿಸಿರುವಂತೆ ನೀಡಿರುವ ವ್ಯವಸ್ಥಾಪಕ ಮಂಡಳಿಯ ಉತ್ತರವನ್ನು ಪರಿಗಣಿಸುವುದು |
| 1. | **ಸ್ವಂತ ವೆಚ್ಚ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು** :<br>ಕಂಪನಿಯು ಪ್ರತಿಯೊಂದು ಸ್ವಯಂ ಕಾಮಗಾರಿವಾರು ಮತ್ತು ಠೇವಣಿ ವಂತಿಗೆ ಕಾಮಗಾರಿವಾರು ಸಂಬಂಧಪಟ್ಟ ಮಾಹಿತಿ ಗಳನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸುವ | ಸ್ವಯಂ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳ ವಿಷಯದಲ್ಲಿ ಸಂಬಂಧಪಟ್ಟ ಮಾಹಿತಿಗಳೊಂದಿಗೆ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸಲು ಸೂಕ್ತ ಮಾರ್ಗದರ್ಶನ ನೀಡಲಾಗುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| | ಮತ್ತು ಖಚಿತ ಪಡಿಸಿಕೊಳ್ಳುವ ಪರಿಣಾಮ –ಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರು –ವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾ ಗುತ್ತದೆ. | |
| 2 | ಕಂಪನಿಯು ಮೇಲ್ವಿಚಾರಣ ಶುಲ್ಕವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಕಂಪನಿಯು ಶೇಕಡವಾರು ಕಾಮಗಾರಿ ಪೂರ್ಣಗೊಂಡ ವಿಧಾನದನ್ವಯ ಕ್ರಮ ವಹಿಸುವ ಪರಿಣಾಮ –ಕಾರಿಯಾದ ವಿಧಾನ ಮತ್ತು ಆಂತರಿಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಮುಂಚಿತವಾಗಿಯೇ ಆದಾಯವೆಂದು ಗುರುತಿಸಲಾಗುತ್ತಿದೆ ಇದರಿಂದಾಗಿ ಹಣ ಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಮೇಲ್ವಿಚಾರಣ ಶುಲ್ಕವನ್ನು ಮುಂಚಿತ –ವಾಗಿಯೇ ಗ್ರಾಹಕರಿಂದ ವಸೂಲಾತಿ ಮಾಡಲಾಗುತ್ತಿದ್ದು ಬಹಳಷ್ಟು ಸಂದರ್ಭಗಳಲ್ಲಿ ಸೇವೆಗಳನ್ನು ಆರ್ಥಿಕ ವರ್ಷ ಪೂರ್ಣ –ಗೊಳ್ಳುವುದರೊಳಗೆಯೇ ನಿರ್ವಹಿಸಲಾಗಿ –ರುತ್ತದೆ. |
| 3 | ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ವಸೂಲಾತಿ ಮಾಡಲಾಗುವ ಕಾರ್ಯ ಮತ್ತು ಪಾಲನ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಗಳ ಬಗ್ಗೆ ಪರೀಶೀಲನೆ ಮಾಡುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಕಂಪನಿಯ ಲಾಭಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ವಸೂಲಾತಿ ಮಾಡಬೇಕಾಗಿರುವ ಕಾರ್ಯ ಮತ್ತು ಪಾಲನ ವೆಚ್ಚಗಳನ್ನು ನಿಗಧಿಪಡಿಸಿ ಬೇಡಿಕೆ ಮಾಡಿ ವಸೂಲಾತಿ ಮಾಡಲು ಹಾಗೂ ಉಪಪ್ರದಾನ ವ್ಯವಸ್ಥಾಪಕರು (ತಾಂತ್ರಿಕ)ರವರು ನೀಡಿದ ನಿರ್ದೇಶನಗಳನ್ನು ಪಾಲಿಸಲು ಸೂಚಿಸಲಾ -ಗುವುದು. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| 4 | ಕಂಪನಿಯು ಗ್ರಾಹಕರಿಂದ ಠೇವಣಿವಂತಿಗೆ ಕಾಮಾಗಾರಿಗಾಗಿ ವಸೂಲಾತಿ ಮಾಡಿದ ವಂತಿಗೆಯನ್ನು ಸೂಕ್ತವಾಗಿ ಲೆಕ್ಕೀಕರಿಸದಿರುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣ –ದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು, ಅದರ ಮೇಲಿನ ಸವಕಳಿ ಮತ್ತು ಗ್ರಾಹಕರ ಸ್ವೀಕೃತಿಗಳು ಹಾಗೂ ಪಾವತಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾ –ಗುತ್ತದೆ. | ಶಾಸನ ಬದ್ಧ ಪರಿಶೋಧಕರ ವರದಿ ಕ್ರಮ ಸಂಖ್ಯೆ 16 ರಲ್ಲಿ ಉಲ್ಲೇಖಿಸಿರುವಂತೆ ನೀಡಿರುವ ವ್ಯವಸ್ಥಾಪಕ ಮಂಡಳಿಯ ಉತ್ತರವನ್ನು ಪರಿಗಣಿಸುವುದು. |
| 1<br><br><br><br><br>ಅ.<br><br><br><br><br><br><br><br><br>ಆ.<br><br><br><br><br><br><br><br>ಇ.<br><br><br><br>ಈ. | **<u>ಕಾಮಾಗಾರಿಗಳ ಬಿಲ್ಲುಗಳ ಪ್ರಕ್ರಿಯೆ ಕುರಿತು:</u>**<br>ಕಂಪನಿಯು ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸ –ಲಾಗಿರುವುದಿಲ್ಲ.<br>ಕಾಮಾಗಾರಿಗಳ ಅಳತೆ ಸಂಬಂಧವಾಗಿ, ಕವಿಪ್ರನಿನಿಯ ಅಳತೆ ನಿಯಮ ಪುಸ್ತಕದ ಕಲಮು–5ರ ಪ್ರಕಾರ, ಎಲ್ಲಾ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲೇ, ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸತಕ್ಕದ್ದು. ಆದರೆ, ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಬಿಲ್ಲುಗಳನ್ನು ಸಿದ್ದಪಡಿಸಿ/ಸ್ವೀಕರಿಸಿದ ನಂತರವಷ್ಟೇ ಅಳತೆ ಪುಸ್ತಕದಲ್ಲಿ ದಾಖಲಿಸಿ ಪರಿಪೂರ್ಣಗೊಳಸಲಾಗುತ್ತಿದೆ.<br>ಲೆಕ್ಕ ಪತ್ರಗಳ ವರದಿಯ ದಿನಾಂಕದಂದು ಪೂರ್ಣಗೊಂಡ ಬಂಡವಾಳ ಕಾಮಗಾರಿ –ಗಳು/ ನವೀಕರಿಸಲಾದ ಕಾಮಗಾರಿಗಳು/ ಆಧುನಿಕರೀಸಲಾದ ಕಾಮಗಾರಿಗಳು/ ದುರಸ್ತಿ ಮತ್ತು ನಿರ್ವಹಣ ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ಲೆಕ್ಕಗಳಲ್ಲಿ ಸೂಕ್ತವಾದ ಅವಕಾಶ ಕಲ್ಪಸಲಾಗಿರುವುದಿಲ್ಲ.<br>ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪ್ರಕ್ರಿಯೆಗೊಳಸ –ದಿರುವ ಬಗ್ಗೆ.<br>ಕಾಮಗಾರಿಗಳು ಆರ್.ಎ. ಬಿಲ್ಲುಗಳನ್ನು | ಅ. ಕಾಮಗಾರಿಗಳ ಅಳತೆಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲಿಯೇ ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸಲು ಎಲ್ಲಾ ಮುಖ್ಯ ಇಂಜಿನಿಯರುಗಳಿಗೆ ತಮ್ಮ ವ್ಯಾಪ್ತಿಯಲ್ಲಿರುವ ಕ್ಷೇತ್ರಾಧಿಕಾರಿಗಳಿಗೆ ನಿರ್ದೇಶನ ನೀಡಲು ಸೂಚಿಸಲಾಗಿದೆ.<br>ಆ. ಹೆಚ್ಚಿನ ಪ್ರಕರಣಗಳಲ್ಲಿ ಲೆಕ್ಕ ಪತ್ರ ವರದಿಯ ದಿನಾಂಕದೊಂದು ಪೂರ್ಣಗೊಂಡ ಎಲ್ಲಾ ಕಾಮಗಾರಿಗಳಿಗೂ ಲೆಕ್ಕ ಪತ್ರಗಳಲ್ಲಿ ಅವಕಾಶಗಳನ್ನು ಕಲ್ಪಸಲಾಗಿರುತ್ತದೆ. ಆದ್ಯಾಗ್ಯೂ ಲೆಕ್ಕ ಘಟಕಗಳಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗುವುದು.<br>ಇ. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ವಿವಿಧ ಹಂತಗಳಲ್ಲಿ ಪ್ರಾಧಿಕಾರವು ಅನುಮೋದಿಸಬೇಕಾಗಿರುವುದರಿಂದ ಲೆಕ್ಕ ಘಟಕಗಳಲ್ಲಿ ಬಿಲ್ಲುಗಳನ್ನು ಅಂಗೀಕರಿಸಿ ಪಾವತಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಮಯ ವ್ಯಯವಾಗುತ್ತಿದೆ.<br>ಈ. ಆರ್.ಎ ಬಿಲ್ಲುಗಳನ್ನು ಪಾವತಿಸಿದ ನಂತರ ಆಂತರಿಕ ಪರಿಶೋಧನೆಗೆ ಒಳಪಡಿಸಲಾಗುತ್ತದೆ. ಆದರೆ ಅಂತಿಮ ಬಿಲ್ಲುಗಳನ್ನು ಪೂರ್ವ ತನಿಖೆಗೊಳಪಡಿಸಿ ಅಂಗೀಕರಿಸಿ ಪಾವತಿಸಲಾಗುತ್ತಿದೆ. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| | ಆಂತರಿಕ ಪರಿಶೋಧಕರು ಪರಿಶೀಲಿಸು–ತ್ತಿಲ್ಲ, ಕೇವಲ ಅಂತಿಮ ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ.<br><br>ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು, ಅವಕಾಶ–ಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಸ್ಥಿರಾಸ್ತಿಗಳು ಮತ್ತು ಇಡಿಸಿ ಹಂಚಿಕೆ ಎರವಲು ವೆಚ್ಚ ಒಳಗೊಂಡಂತೆ, ಆಸ್ತಿ ನಿರ್ವಹಣ ವೆಚ್ಚ ಮತ್ತು ಸವಕಳಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. | |
| | **ಆಂತರಿಕ ಪರಿಶೋಧನೆ ವ್ಯವಸ್ಥೆ** | ಆಂತರಿಕ ಪರಿಶೋಧನಾ ಘಟಕವನ್ನು ಸಧೃಡಗೊಳಿಸಲು ವಿವರವಾದ ಪ್ರಸ್ತಾವನೆಯನ್ನು, ಲೆಕ್ಕ ಘಟಕಗಳ ಮತ್ತು ಅದರ ವ್ಯಾಪ್ತಿಗೆ ಒಳಪಡುವಂತ ವ್ಯವಹಾರಗಳನ್ನು ಪರಿಗಣಿಸಿ ವಿವರವಾದ ಪ್ರಸ್ತಾವನೆಯನ್ನು ಆಡಳಿತ ಅಧಿಕಾರಿಗೆ ಕಳುಹಿಸಲಾಗಿದೆ.<br><br>ಆಂತರಿಕ ಪರಿಶೋಧನಾ ಸಿಬ್ಬಂದಿಗಳ ತರಬೇತಿಯನ್ನು ಕವಿಪ್ರನಿನಿಯ ಮಾನವ ಸಂಪನ್ಮೂಲ ವಿಭಾಗದವರೆ ನಿಯಂತ್ರಣ ಮಾಡುತ್ತಿದ್ದಾರೆ ಮತ್ತು ಕ್ರಮಬದ್ಧವಾಗಿ ಬೇರೆ ಬೇರೆ ವಿಷಯುಗಳ ಬಗ್ಗೆ ತರಬೇತಿಯುನ್ನು ನೀಡಲಾಗಿದೆ.<br><br>i ರಿಂದ v ಕಂಡುಹಿಡಿದಿರುವ ಇತರೇ ಅರ್ಹತೆಗಳ ಜೊತೆಗೆ, ಆಂತರಿಕ ಪರಿಶೋಧನಾ ವಿಭಾಗವು ಶಾಸನಬದ್ಧ ಲೆಕ್ಕ ಪರಿಶೋಧಕರ ಗಮನಿತ ಅಂಶಗಳ ಮೇಲೂ ಸಹ ಪರಿಶೋಧನೆ ನಡೆಸ ಬೇಕೆಂದು ಸೂಚಿಸಲಾಗಿದೆ. |
| 1. | ಸೂಕ್ತವಾದ ಮತ್ತು ಗುಣಮಟ್ಟದ ಮಾನವಶಕ್ತಿಯ, ಲಭ್ಯತೆ ವ್ಯವಹಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೋಧನೆ ಇಲಾಖೆಯನ್ನು ಬಲಪಡಿಸ–ಬೇಕಾಗಿದೆ. ಆಂತರಿಕ ಲೆಕ್ಕ ಪರಿಶೋಧಕರು, ಆರ್.ಎ. ಬಿಲ್ಲುಗಳನ್ನು ಪರಿಶೀಲಿಸುವುದಿಲ್ಲ. ಆದರೆ ಅಂತಿಮ ಬಿಲ್ಲುಗಳನ್ನು ಮಾತ್ರ ಪರಿಶೀಲಿಸುತ್ತಾರೆ. ಮುಂದುವರೆದು, ಪ್ರಸ್ತುತ ಅತ್ಯಂತ ಪ್ರಮುಖ ಕ್ಷೇತ್ರಗಳಾದ ಆದಾಯ ಮತ್ತು ಖರ್ಚಿನ ಗುರುತಿಸುವಿಕೆಗೆ ಸಂಬಂಧಿಸಿದಂತೆ ಇದರ ಕಾರ್ಯ ವ್ಯಾಪ್ತಿಯು, ಆಂತರಿಕ ಪರಿಶೋಧನೆಗೆ ಒಳಪಟ್ಟಿರುವುದಿಲ್ಲ. ಆಂತರಿಕ ಪರಿಶೋಧನೆ ಸಿಬ್ಬಂದಿಗಳಿಗೆ ನಿರಂತರವಾಗಿ ಸೂಕ್ತವಾದ ಕೌಶಲ್ಯಗಳು ಹಾಗೂ ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ತರಬೇತಿಗೊಳಿಸು–ವಂತೆ ಯೋಜನೆಯನ್ನು ಸಿದ್ಧಪಡಿಸಿಕೊಳ್ಳ ಬೇಕಾಗಿರುತ್ತದೆ. | |
| 2. | ಕಂಪನಿಯು ಲೆಕ್ಕ ಪತ್ರಗಳಲ್ಲಿ ಆ ವರ್ಷದಲ್ಲಿ ಜಾರಿಯಾದ ಸಂಪೂರ್ಣ ವ್ಯವಹಾರದ ವರದಿಯನ್ನು ಖಚಿತಪಡಿಸಿಕೊಳ್ಳಲು ಸೂಕ್ತ ವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಆದಾಯ, ವೆಚ್ಚ, ಸ್ವತ್ತು ಮತ್ತು ಹೊಣೆಗಾರಿಕೆ ಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ. | |
| 3. | ವಿದ್ಯುತ್ ಸರಬರಾಜು ಕಂಪನಿ ಮತ್ತು ಕೆಇಆರ್‌ಸಿ (ಪ್ರಸರಣ ದರಗಳ ನಡುವೆ | |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| | ನಿರ್ಧರಿಸುವ ನಿಬಂಧನೆಗಳು ಮತ್ತು ಷರತ್ತುಗಳು) ನಿಬಂಧನೆ 2006ರನ್ವಯ ಇರುವ ಪ್ರಸರಣ ಒಪ್ಪಂದದ ಅನ್ವಯ ವಿಳಂಬವಾಗಿ ಪಾವತಿಸಲ್ಪಟ್ಟ (surcharge)/ ರಿಯಾಯಿತಿಗಳನ್ನು ಸಂಗ್ರಹಿಸಲು ಅಥವಾ ಪಾವತಿಸಲು ಕಂಪನಿಯಲ್ಲಿ ಸೂಕ್ತವಾದ ಕಾರ್ಯ ನೀತಿಗಳು, ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. | |
| 4. | ಕಂಪನಿಯು (O & M) ಶುಲ್ಕಗಳು, ವೀಲಿಂಗ್ ಶುಲ್ಕಗಳು, ಮೇಲ್ವಿಚಾರಣೆ ಶುಲ್ಕಗಳು, ಪ್ರೋತ್ಸಾಹಕ ಧನಗಳು, ದಂಡ ವಸೂಲಾತಿ ಮುಂತಾದ ಇತರೆ ಆದಾಯಗಳಿಂದ ಬರುವ ಲೆಕ್ಕಗಳ ಮೇಲೆ ಸಂಚಿತ ಆಧಾರದ ಮೇಲೆ ಸೂಕ್ತ ನಿಯಂತ್ರಣವನ್ನು ಹೊಂದಿಲ್ಲ. | |
| 5. | ಕಂಪನಿಯು IND ASನ್ನು ಮೊದಲ ಬಾರಿಗೆ ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ಪ್ರಸ್ತುತಿ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಹಿರಂಗಗೊಳಸದೇ ಇರುವುದರ ಬಗ್ಗೆ ಸೂಕ್ತವಾದ ಪ್ರಯತ್ನಗಳನ್ನು ಮಾಡಿಲ್ಲ. | |
| | **ಇತರೆ** | 1. ಮೂಲ ಸೌಕರ್ಯಗಳನ್ನು ನಿರ್ವಹಿಸು ವುದು ಮತ್ತು ನಿರ್ಮಾಣ ಮಾಡುವುದು ಕವಿಪ್ರನಿನಿಯ ನಿರಂತರ ಪ್ರಕ್ರಿಯೆ ಆಗಿರುವುದರಿಂದ ವರ್ಷದಿಂದ ವರ್ಷಕ್ಕೆ ಬಹಳಷ್ಟು ಸಂಖ್ಯೆಯಲ್ಲಿ ಕೆಲಸಗಳನ್ನು ಗುತ್ತಿಗೆದಾರರು/ಫರ್ಮ್ ಮೂಲಕ ನಡೆಸುತ್ತಿದ್ದು, ಅವರಿಂದ ಇ ಎಮ್ ಡಿ ಮತ್ತು ಇತರೆ ಠೇವಣಿಗಳನ್ನು ಸಂಗ್ರಹಿಸಲಾಗುತ್ತದೆ. ಠೇವಣಿಯ ಸಂಗ್ರಹಣೆ ಮತ್ತು ಮರುಪಾವತಿಸಲು ಕೆಲಸವಾರು ಗುತ್ತಿಗೆದಾರರು/ಫರ್ಮವಾರು ಶೆಡ್ಯೂಲ್‌ಗಳನ್ನು ನಿರ್ವಹಿಸಲಾಗುತ್ತಿದೆ. ಆದರೆ ಶೆಡ್ಯೂಲ್‌ಗಳಲ್ಲಿ ಬಹಳಷ್ಟು ಅಂಶಗಳಿರುವುದರಿಂದ ಪ್ರಾಯೋಗಿ -ಕವಾಗಿ ಪ್ರತಿಯೊಬ್ಬ ಗುತ್ತಿಗೆದಾರರು/ ಫರ್ಮ್‌ಗಳಿಂದ ದೃಢೀಕರಣ ಪಡೆಯುವುದು ಕಾರ್ಯಸಾಧ್ಯವಾಗಿರುವುದಿಲ್ಲ.<br><br>2. ಎಲ್ಲಾ ಲೆಕ್ಕ ವಿಭಾಗಗಳಿಂದ ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ |
| 1. | ಕಂಪನಿಯು ಇ ಎಮ್ ಡಿ ಮತ್ತು ಇತರೆ ಠೇವಣಿಗಳ ಕುರಿತು ದೃಢೀಕರಣ ಮತ್ತು ಸಮನ್ವಯ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಪ್ರಸ್ತುತ ಹೊಣೆಗಾರಿಕೆ ಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ. | |
| 2. | ಕಂಪನಿಯು, ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್ 2006ರ ಅಡಿ ಗುತ್ತಿಗೆದಾರರನ್ನು ಗುರುತಿಸಿ ಆರ್ಥಿಕ ಪಟ್ಟಿಯಲ್ಲಿ ಮಾಹಿತಿ -ಯನ್ನು ಬಹಿರಂಗಪಡಿಸಲು ಸೂಕ್ತವಾದ ಯಾವುದೇ ಕಾರ್ಯ ನೀತಿ ಮತ್ತು ಕಾರ್ಯ ವಿಧಾನ ಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಗುತ್ತಿಗೆದಾರರ ಮಾಹಿತಿಯು ಬಹಿರಂಗಗೊಳ್ಳದೆ ತಪ್ಪು ಉಂಟಾಗುವ ಸಾಧ್ಯತೆ ಇದೆ. | |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| 3. | ಕಂಪನಿಯು ಪ್ರಚಲಿತ/ ಅಪ್ರಚಲಿತ ಆಸ್ತಿ/ ಹೊಣೆಗಾರಿಕೆಗಳನ್ನು ಗುರುತಿಸಲು ಯಾವುದೇ ಕಾರ್ಯನೀತಿ, ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಗಳ ಪ್ರಸ್ತುತಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ. | ಫರ್ಮ್‌ಗಳಿಂದ ಮಾಹಿತಿಯನ್ನು ಪಡೆಯಲು ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ನಿಗಧಿತ ಅನುಬಂಧದಲ್ಲಿ ತೋರಿಸಲಾಗಿದೆ. ಎಲ್ಲಾ ಲೆಕ್ಕ ವಿಭಾಗಗಳಿಂದ ದೊರೆತ ವಿವರದ ಪ್ರಕಾರ 2016-17ನಲ್ಲಿ ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಫರ್ಮ್‌ಗಳಿಂದ ಯಾವುದೇ ವ್ಯವಹಾರ ನಡೆದಿಲ್ಲ. |
| 4. | ಕಂಪನಿಯು ಹಿಂದಿನ ಅವಧಿಯ ವಸ್ತುಗಳ ಗುರುತಿಸುವಿಕೆ ಮತ್ತು ವರದಿ ಮಾಡುವ ಬಗ್ಗೆ ಸೂಕ್ತವಾದ ಕಾರ್ಯನೀತಿ ಮತ್ತು ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ. | 3. ಕವಿಪ್ರನಿನಿಯ ಎಲ್ಲಾ ಲೆಕ್ಕ ವಿಭಾಗಗಳಿಂದ ಪ್ರಸ್ತುತ/ಪ್ರಸ್ತುತಿಯಲ್ಲಿ ಇಲ್ಲದೆ ಇರುವ ಆಸ್ತಿ ಮತ್ತು ಹೊಣೆಗಾರಿಕೆಗಳ ಮಾಹಿತಿಯನ್ನು ಪಡೆದು ವಾರ್ಷಿಕ ಲೆಕ್ಕ 2016-17 ರಲ್ಲಿ ಸೇರಿಸಲಾಗಿದೆ. ಆದ್ಯಾಗ್ಯೂ ಈಗಿರುವ ಪದ್ಧತಿಯ ಪ್ರಕಾರ ಪ್ರಸ್ತುತ/ಪ್ರಸ್ತುತದಲ್ಲಿ ಇಲ್ಲದೇ ಇರುವ ಹೊಣೆಗಾರಿಕೆಗಳನ್ನು ಗುರುತಿಸುವಲ್ಲಿ ಏನಾದರೂ ಸುಧಾರಣೆ ಆಗಬೇಕಾಗಿದ್ದಲ್ಲಿ ಅದನ್ನು ಪರಿಶೀಲಿಸ ಲಾಗುವುದು ಆಗಬೇಕೆಂದಿದ್ದರೆ ಕ್ರಮವನ್ನು ತಿಳಿದುಕೊಳ್ಳಲಾಗುವುದು. |
| 5. | ಕಂಪನಿಯು, ಸಿಇಆರ್‌ಸಿ/ಕೆಇ ಆರ್‌ಸಿಯಿಂದ ನಿಯಮಿತವಾಗಿ ಹೊರಡಿಸುವ ಹೊಸ ನಿಯಮಾವಳಿಗಳು/ಅಧಿಸೂಚನೆ/ಆದೇಶ/ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಸೂಕ್ತ -ವಾದ ಕಾರ್ಯವಿಧಾನಗಳನ್ನು ಹೊಂದಿರು ವುದಿಲ್ಲ. (ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂದಾಯ ಮತ್ತು ಪ್ರಸ್ತುತ ಆಸ್ತಿಗಳ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ. | 4. ಈ ವರ್ಷದಲ್ಲಿ ಹಿಂದಿನ ಅವಧಿಗಳ ಸಂಗ್ರಹಣೆಗಳ ಮಾಹಿತಿ ಪಡೆಯಲು ನಿಗಧಿತ ಅನುಬಂಧವನ್ನು ಮಾಡಲಾಗಿದೆ. ಅದಕ್ಕೆ ಅನುಗುಣವಾಗಿ ಕ್ರಮವನ್ನು ತೆಗೆದು -ಕೊಳ್ಳಲಾಗುವುದು. |
| 6. | ಕಂಪನಿಯು, ಗುತ್ತಿಗೆದಾರರಿಂದ ಬಂದಿರುವ ವಿಳಂಬ ಮನ್ನಾ ಅರ್ಜಿಗಳನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ನಿರ್ವಹಿಸಲು ಯಾವುದೇ ಸೂಕ್ತವಾದ ಕಾರ್ಯ ವಿಧಾನಗಳಾಗಲಿ, ಆಂತರಿಕ ನಿಯಂತ್ರಣ ಗಳನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ದಂಡ ಮುರಿದು ಕೊಳ್ಳುವಿಕೆ ಮತ್ತು ಕಂದಾಯ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ. | 5. ಸಿಇಆರ್‌ಸಿ/ಕೆಇಆರ್‌ಸಿ ಯುವರು ಹೊರಡಿಸುವ ಹೊಸ ನಿಯಾಮಾವಳಿ /ಅಧಿಸೂಚನೆ/ಆದೇಶ /ತಿದ್ದುಪಡಿಗಳನ್ನು ಕವಿಪ್ರನಿನಿಯು ಅಳವಡಿಸಿಕೊಂಡಿದೆ.<br>6. ಸಂಬಂಧಿಸಿದ ರಿಜಿಸ್ಟರ್ ತೆರೆಯುವ ಮೂಲಕ ಲೆಕ್ಕ ವಿಭಾಗಗಳ ಗುತ್ತಿಗೆದಾರ ರಿಂದ ಬಂದಿರುವ ವಿಳಂಬ ಮನ್ನಾ ಮಾಡುವ ಅರ್ಜಿಗಳನ್ನು ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. |
| 7. | ಕಂಪನಿಯು IND AS ನಿಯಮಗಳು 2015ರ ಅಡಿಯಲ್ಲಿ ನೀಡಿರುವ IND AS 19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವ -ನೀಯ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ. | 7. ಪ್ರತಿ ಲೆಕ್ಕ ವಿಭಾಗಗಳಿಂದ ಮಾರ್ಚ್ ಅಂತಿಮ ಲೆಕ್ಕಗಳಲ್ಲಿ ಅನುಬಂಧದ ರೂಪದಲ್ಲಿ ನೌಕರರ ವಿವರಗಳನ್ನು ಪಡೆಯಲಾಗುತ್ತಿದೆ ಮತ್ತು ಅದನ್ನು ನೌಕರರ ಪ್ರಯೋಜನೆಗಳ ಕಡೆಗೆ ಸಂಭವನೀಯ, ಸಾಮರ್ಥ್ಯವನ್ನು ನಿರ್ಧರಿಸಲು ಅಕ್ಯೂಟರಿಗೆ ಸಲ್ಲಿಸಲಾಗು ತ್ತಿದೆ. |
| 8. | ಕಂಪನಿಯು, ಇತರರಿಂದ (Form 26 AS ) ಟಿಡಿಎಸ್ ಮುರಿತ ಮಾಡಿರುವ ಲೆಕ್ಕ ಮತ್ತು | |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| | ಸಮನ್ವಯಗಳ ಬಗ್ಗೆ ಯಾವುದೇ ಕಾರ್ಯ ವಿಧಾನ ಮತ್ತು ಆಂತರಿಕ ನಿಯಂತ್ರಣ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಸಮುಂಚಿತವಾಗಿ ತೆರಿಗೆ ಪಾವತಿಸಿರುವ ಬಗ್ಗೆ ತಪ್ಪಾಗುವ ಸಾಧ್ಯತೆ ಇದೆ. | 8. ಇತರರು (Form 26 AS ) ಸಲ್ಲಿಸಿರುವ ಟಿಡಿಎಸ್ ನ್ನು ಮೇಲ್ವಿಚಾರಣೆ ಮತ್ತು ಸಮನ್ವಯಗೊಳಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. |
| 9. | ದಾಸ್ತಾನು ಮೌಲ್ಯದ ಸ್ಥಿರತೆಯ ಮೇಲೆ ಪರಿಣಾಮಕಾರಿಯಾದ ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ದಾಸ್ತಾನು ಮೌಲ್ಯಮಾಪನ-ದಲ್ಲಿ ವರದಿ ದಿನಾಂಕದ ತನಕ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ. | 9. ದಾಸ್ತಾನುಗಳನ್ನು ಅದರ ಖರೀದಿ ಬೆಲೆಗೆ ಮೌಲ್ಯಮಾಪನ ಮಾಡಲಾಗುತ್ತಿದೆ. ದಾಸ್ತಾನುಗಳನ್ನು ಸರಾಸರಿ ದರದಲ್ಲಿ ವಿತರಣೆ ಮಾಡಲಾಗುತ್ತಿದೆ ಸಾಮಾಗ್ರಿಗಳ ರಸೀತಿ ಮತ್ತು (Issue)ಗಳ ಮೇಲ್ವಿಚಾರಣೆ ಯನ್ನು ನಿರ್ವಹಿಸಲು ಉಗ್ರಾಣಗಳಲ್ಲಿ ನೂಮರಿಕಲ್ ಲೆಡ್ಜರ್ ಮತ್ತು ಲೆಕ್ಕ ವಿಭಾಗಗಳಲ್ಲಿ ಪ್ರೈಸಿಂಗ್ ಲೆಡ್ಜರನ್ನು ನಿರ್ವಹಣೆ ಮಾಡಲಾಗುತ್ತಿದೆ. |
| 10. | ಕಂಪನಿಯು ಸಾಮಾಗ್ರಿಗಳ ಬಿಡಿಭಾಗಗಳನ್ನು ಖರೀದಿಸುವ ಸಮಯದಲ್ಲಿ ಬಂಡವಾಳೀಕರ-ಣಕ್ಕೆ ಸಂಬಂಧಿಸಿದಂತೆ ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನಾಗಲಿ ಹೊಂದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಲೆಕ್ಕಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿ-ಕೊಳ್ಳಲು ಆಗುವುದಿಲ್ಲ. ಇದರಿಂದ ಸಾಮಾಗ್ರಿ ವಿವರಣಾ ಪಟ್ಟಿಯಲ್ಲಿ ಹೆಚ್ಚು ವಿವರಣೆ ಮತ್ತು ಕ್ಯಾಪಿಟಲ್ ವರ್ಕ್ಸ್ ಇನ್ ಪ್ರೋಗ್ರೆಸ್‌ಗಳ ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ. | 10. ಕವಿಪ್ರನಿನಿಯು ಸ್ಟೇಷನ್, ಟ್ರಾನ್ಸ್‌ಮಿಷನ್ ಲೈನ್ ಮತ್ತು ಮೈನರ್ ಕ್ಯಾಪಿಟಲ್ ವರ್ಕ್ಸ್‌ಗಳ ನಿರ್ವಹಣೆಗಾಗಿ ಸಾಮಾಗ್ರಿ ಗಳನ್ನು ಖರೀದಿಸುತ್ತದೆ. ಸಾಮಾಗ್ರಿಗಳನ್ನು ಖರೀದಿಸುವ ಸಮಯದಲ್ಲಿ ಸಾಮಾಗ್ರಿ ಗಳನ್ನು ಆರ್ & ಎಮ್ ವರ್ಕ್ಸ್ /ಕ್ಯಾಪಿಟಲ್ ವರ್ಕ್ಸ್-ಗಳಿಗೆ ಉಪಯೋಗಿಸಿರುವುದನ್ನು ಪ್ರತ್ಯೇಕಿ-ಸಲು ಸಾಧ್ಯವಾಗುತ್ತಿಲ್ಲ. ಒಂದೇ ರೀತಿಯ ಸಾಮಾಗ್ರಿಗಳನ್ನು ಆರ್ ಮತ್ತು ಎಂ ವರ್ಕ್ಸ್‌ಗೂ ಮಾತ್ರ ಕ್ಯಾಪಿಟಲ್ ವರ್ಕ್ಸ್‌ಗೂ ಉಪ-ಯೋಗಿಸಿಕೊಳ್ಳಬಹುದು. (ಪ್ರತಿ ವರ್ಷ ಕವಿಪ್ರನಿನಿಯು ಮಾಡಿರುವ ಬಂಡವಾಳ ವೆಚ್ಚವನ್ನು ಮೀಸಲು ಬಿಡಿ ಭಾಗಗಳನ್ನು ಬಂಡವಳೀಕರಿಸದಿದ್ದರೆ) |
| 11. | ಸಂಬಂಧಿಸಿದ ಗ್ರಾಹಕರು/ಗುತ್ತಿಗೆದಾರರು/ ಸರಬರಾಜುದಾರರ ವರದಿಯ ದಿನಾಂಕದಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದಕ್ಕೆ ಕಂಪನಿಯು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರು-ವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಯಲ್ಲಿ ಹೆಚ್ಚು/ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ. | 11. ಎಲ್ಲಾ ಬರಬಹುದಾದ ಮತ್ತು ಪಾವತಿಸ ಬೇಕಾದ ಲೆಕ್ಕಗಳ ಮೇಲ್ವಿಚಾರಣೆಯನ್ನು ಪ್ರತಿಯೊಂದು ಲೆಕ್ಕ ವಿಭಾಗಗಳಲ್ಲೂ ಫರ್ಮವಾರು ಮತ್ತು ಕೆಲಸವಾರು/ ಫರ್ಮವಾರು ಶೆಡ್ಯೂಲ್‌ಗಳನ್ನು ನಿರ್ವಹಣೆ ಮಾಡಲಾ-ಗುತ್ತಿದೆ. ಬರಬೇಕಾಗಿರುವ/ ಬಂದಿರುವ ಮತ್ತು ಪಾವತಿಸ ಬೇಕಾಗಿರುವ/ ಪಾವತಿಸಲ್ಪಟ್ಟ ಮೊತ್ತ ಗಳನ್ನು ಈ ಮೇಲಿನ ಶೆಡ್ಯೂಲ್‌ಗಳಲ್ಲಿ ದಾಖಲಿಸಲಾಗುತ್ತದೆ. ಆ ಶೆಡ್ಯೂಲ್‌ಗಳಲ್ಲಿ ಅಪರಿಮಿತ ಸಂಖ್ಯೆಯ ಅಂಶಗಳಿರುವುದರಿಂದ, ಗುತ್ತಿಗೆದಾರರು/ ಫರ್ಮ/ ಸರಬರಾಜುದಾರರಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದು ಪ್ರಾಯೋಗಿಕರವಾಗಿ ಕಾರ್ಯ ಸಾಧ್ಯವಾ-ಗುತ್ತಿಲ್ಲ. |

| ಕ್ರ. ಸಂ | ಶಾಸನಬದ್ಧ ಲೆಕ್ಕ ಪರಿಶೋಧಕರ ಅವಲೋಕನಗಳು | ಆಡಳಿತ ವರ್ಗದ ಉತ್ತರ |
|---|---|---|
| | **ಗಣಕೀಕರಣ**<br><br>ಗಣಕೀಕರಣದ ಅನುಪಸ್ಥಿತಿಯು ಕಂಪನಿಯ ಆರ್ಥಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಿಯಂತ್ರಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಹಾಗೂ ಸಕಾಲದಲ್ಲಿ ಆರ್ಥಿಕ ವರದಿಗಳನ್ನು ನಿಖರವಾಗಿ ಹಾಗೂ ನಂಬಿಕೆಗೆ ಅರ್ಹವಾದ ರೀತಿಯಲ್ಲಿ ಸಿದ್ಧಪಡಿಸುವಲ್ಲಿ ಪರಿಣಾಮ ಬೀರಬಹುದಾ–ಗಿದೆ. | ಲೆಕ್ಕ ವ್ಯವಸ್ಥೆಯ ಗಣಕೀಕರಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಪ್ರಸ್ತುತ ಕ.ವಿ.ಪ್ರ.ನಿ.ನಿ,ಯಲ್ಲಿ ಕೆಳಕಂಡ ಪ್ರಮುಖ ಸ್ವ–ನಿರ್ವಹಿತ ಕಾರ್ಯ ಪ್ರಕ್ರಿಯೆಗಳನ್ನು ಬಳಸಲಾಗುತ್ತಿದೆ.<br><br>1. ಇ–ಪ್ರೊಕ್ಯೂರ್‌ಮೆಂಟ್<br>2. ಲೆಕ್ಕಗಳನ್ನು ಅಂತಿಮವಾಗಿ ಸಮನ್ವಯ–ಗೊಳಿಸುವುದು–ಎಸ್.ಎಸ್.ತಂತ್ರಾಂಶ<br>3. ಅಂ.ಫ. ಲೆಕ್ಕ ವ್ಯವಹರಣೆ ಮತ್ತು ತೀರುವಳಿ<br>4. ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ<br>5. ಬ್ಯಾಂಕ್ ಲೆಕ್ಕ ಸಮನ್ವಯಗೊಳಿಸುವುದು<br>6. ತಪಶೀಲು ನಿರ್ವಹಣೆ ವ್ಯವಸ್ಥೆ<br>7. ಪಿಂಚಣಿ ಪಾವತಿ ನಿರ್ವಹಣೆ ವ್ಯವಸ್ಥೆ<br>8. ಕಂದಾಯ ವೆಚ್ಚಗಳ ಬಿಲ್ ಟ್ರ್ಯಾಕಿಂಗ್ ವ್ಯವಸ್ಥೆ<br>9. ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯಸಾಧನೆ ಮೇಲುಸ್ತುವಾರಿ ವ್ಯವಸ್ಥೆ<br>10. ಪಿಂಚಣಿ ಮತ್ತು ಉಪದಾನ ನ್ಯಾಸದಿಂದ ಲೆಕ್ಕಘಟಕಗಳಿಗೆ ನಿಧಿ ವರ್ಗಾವಣೆ<br>11. ಸಿಬ್ಬಂದಿ ಶಾಖೆಗಳಲ್ಲಿ ವೇತನ ಹಾಗೂ ಇತರ ಭತ್ಯೆ ಸಂಬಂಧಿತ ತಂತ್ರಾಂಶ<br>12. ವಿದ್ಯುತ್ ಕೇಂದ್ರ ಲಾಗ್–ಪುಸ್ತಕ, ಇ–ಲಾಗ್<br>13. ಯೋಜನೆ ಮೇಲುಸ್ತುವಾರಿ ಪದ್ಧತಿ<br>14. ಕ.ವಿ.ಪ್ರ.ನಿ.ನಿ. ಯೋಜನೆಗಳ ಛಾಯಾ ಚಿತ್ರಗಳನ್ನು ಜಾಲತಾಣದಲ್ಲಿ ತುಂಬುತ್ತಿ–ರುವುದು<br>15. ಎನ್.ಡಿ.ಸಿ.ಪಿ.ಎಸ್ ಹಾಗೂ ಇತರೆಗಳ ಮೇಲುಸ್ತುವಾರಿ |

## 2016–17ರ ಲೆಕ್ಕಪತ್ರಗಳ ಮೇಲೆ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರ ಟೀಕೆಗಳು ನೀಡಿರುವ ಉತ್ತರಗಳು.

| ಕ್ರ.ಸಂ. | ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರ ಟೀಕೆಗಳು | ಆಡಳಿತ ಮಂಡಳಿಯ ಉತ್ತರಗಳು |
|---|---|---|
| 1. | **ಲಾಭದ ಮೇಲಿನ ಅಭಿಪ್ರಾಯಗಳು:**<br>**ಲಾಭ ಮತ್ತು ನಷ್ಟದ ಖಾತೆ ತೆರಿಗೆಯ ಮುಂಚಿನ ಲಾಭ: ರೂ.1915.08 ಕೋಟಿ.**<br>ಕಂಪನಿಯು ಪ್ರಸ್ತಾವನೆಯನ್ನಾಧರಿಸಿ (21.07.2017) ಕರ್ನಾಟಕ ಸರ್ಕಾರವು ತನ್ನ ಸರ್ಕಾರಿ ಆದೇಶ ದಿನಾಂಕ:31.07.2017 ರಲ್ಲಿ ಈ ಕೆಳಗೆ ನಮೂದಿಸಿದ ಕಂಪನಿಯ ಬಾಕಿಯನ್ನು (ಪಾವತಿಗಳು/ಸ್ವೀಕೃತಿಗಳು) ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾಯಿಸಲು ಆದೇಶಿಸಿದೆ. | ಕೆ.ಪಿ.ಟಿ.ಸಿ.ಎಲ್. ನ ಪುಸ್ತಕಗಳಲ್ಲಿ 31.03.2016ಕ್ಕೆ ಕರ್ನಾಟಕ ಸರ್ಕಾರದಿಂದ ಬರಬೇಕಾದ ಆರ್.ಇ. ಸಬ್ಸಿಡಿ ಬಾಕಿ ಮೊತ್ತ ರೂ.986.50 ಮತ್ತು ಕೆ.ಪಿ.ಸಿ.ಎಲ್. ಗೆ (ಕೆಪಿಸಿಎಲ್ ರೂ.1997.56 ಕೋಟಿ ಮತ್ತು ವಿವಿಎನ್‌ಎಲ್ ರೂ.27.28 ಕೋಟಿ) ಪಾವತಿಸಬೇಕಾದ ವಿದ್ಯುತ್ ಖರೀದಿ ಬಾಕಿಗಳ ಮೊತ್ತ ರೂ.2024.84 ಕೋಟಿ ಇತ್ತು. ಕೆ.ಪಿ.ಟಿ.ಸಿ.ಎಲ್. ಮತ್ತು ಕೆ.ಪಿ.ಸಿ.ಎಲ್. ಎರಡೂ ಅವುಗಳ ಪುಸ್ತಕಗಳಲ್ಲಿರುವ ವಿದ್ಯುತ್ ಖರೀದಿ ಬಾಕಿಗಳ ಮೇಲೆ ಬಡ್ಡಿಯನ್ನು ವಿಧಿಸುತ್ತಿವೆ. |
| 1.<br><br>2.<br><br>3. | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಗೆ ಪಾವತಿಸಬೇಕಾದ ಭಾಗಶ: ಬಡ್ಡಿ ಬಾಕಿ ಮೊತ್ತ ರೂ.467.52 ಕೋಟಿಗಳು.<br>ಕೆ.ಪಿ.ಸಿ.ಎಲ್. ಗೆ ಪಾವತಿಸಬೇಕಾದ ವಿದ್ಯುತ್ ಖರೀದಿ ವೆಚ್ಚ ರೂ.888.89; ಮತ್ತು<br>ಕರ್ನಾಟಕ ಸರ್ಕಾರದಿಂದ ಸ್ವೀಕಾರಾರ್ಹವಾದ ಹಿಂದಿನ ಆರ್.ಇ. ಸಬ್ಸಿಡಿ ಮೊತ್ತ ರೂ.986.50 ಕೋಟಿ.<br>ಸರ್ಕಾರಿ ಆದೇಶದ ಪ್ರಕಾರ, ಮೇಲಿನ ಬಾಕಿಯನ್ನು ವರ್ಗಾವಣೆ ಮಾಡಿದ ಮೇಲೆ ನಿವ್ವಳ ವ್ಯತ್ಯಾಸವನ್ನು ಪ್ರತ್ಯೇಕ ಖಾತೆಯಲ್ಲಿ ಲೆಕ್ಕಹಾಕಬೇಕು 'ನಿವ್ವಳ ಮೌಲ್ಯಕ್ಕೆ ಪ್ರಸ್ತಾವಿತ ಹೊಂದಾಣಿಕೆ'. ಮೇಲೆ ತಿಳಿಸಿರುವ ಬಾಕಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾವಣೆ ಮಡುವಾಗ, ಕಂಪನಿಯು ಎರಡು ವಹಿವಾಟುಗಳನ್ನು ರವಾನಿಸಿತು ಅವುಗಳೆಂದರೆ; (i) ವಿದ್ಯುತ್ ಖರೀದಿ ವೆಚ್ಚ ಮತ್ತು (ii) 'ನಿವ್ವಳ ಮೌಲ್ಯಕ್ಕೆ ಪ್ರಸ್ತಾವಿತ ಹೊಂದಾಣಿಕೆ' ಖಾತೆ ಮೂಲಕ ಸ್ವೀಕಾರಾರ್ಹವಾದ ಆರ್.ಇ. ಸಬ್ಸಿಡಿ, ಆದಾಗ್ಯೂ, ಹಿಂದಿನ ವರ್ಷಗಳಲ್ಲಿ ಖರ್ಚು ಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾದ ಪ್ರಸ್ತಾವನೆಯಲ್ಲಿ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017ರ ಷರತ್ತುಗಳ ಎದುರಾಗಿ | ಕೆಪಿಸಿಎಲ್ 2015–16ರಲ್ಲಿ ಕೆ.ಪಿ.ಟಿ.ಸಿ.ಎಲ್ ನಿಂದ ಬರಬೇಕಾದ ಬಡ್ಡಿ ರೂ.364.14 ಕೋಟಿಯಷ್ಟು ಮೊತ್ತವನ್ನು ತನ್ನ ಲೆಕ್ಕಪುಸ್ತಕದಿಂದ ತೊಡೆದು ಹಾಕಿದೆ ಮತ್ತು 2015–16 ನೇ ಸಾಲಿನಿಂದ ಮುಂದೆ ಕೆಪಿಟಿಸಿಎಲ್ ವಿದ್ಯುತ್ ಖರೀದಿಯ ಬಾಕಿಯ ಮೇಲೆ ಬಡ್ಡಿಯ ಶುಲ್ಕವನ್ನು ವಿಧಿಸದಿರಲು ನಿರ್ಣಯಿಸಿತು. ಕೆ.ಪಿ.ಟಿ.ಸಿ.ಎಲ್. 2015–16ನೇ ಆರ್ಥಿಕ ವರ್ಷಕ್ಕೆ 103.38 ಕೋಟಿ ಮೊತ್ತದಷ್ಟು ವಿದ್ಯುತ್ ಖರೀದಿಯ ವಿಳಂಬ ಪಾವತಿಯ ಮೇಲೆ ಬಡ್ಡಿಯನ್ನು ಸಹ ಒದಗಿಸಿದೆ.<br>ಕೆಪಿಟಿಸಿಎಲ್ ನಿಂದ ಬರಬೇಕಾದ ಬಡ್ಡಿಯನ್ನು ಕೆಪಿಸಿಎಲ್‌ನ ಲೆಕ್ಕಪುಸ್ತಕದಿಂದ ತೊಡೆದು ಹಾಕಿರುವುದರಿಂದ, ಅದು ಕೆಪಿಟಿಸಿಎಲ್ ನ ಪುಸ್ತಕದಲ್ಲಿ ಹೊಣೆಗಾರಿಕೆ ನಂದಿಸುವಿಕೆಯಲ್ಲಿ ಪರಿಣಮಿಸಿತು. ಕೆಪಿಟಿಸಿಎಲ್ ಪುಸ್ತಕಗಳ ರೂ. 467.52 (364.14 + 103.38) ಕೋಟಿಗಳಷ್ಟು ಆದಾಯವಾಗಿ ಪರಿಗಣಿಸಿದ್ದು ಕ್ರಮ ಬದ್ಧವಾಗಿರುತ್ತದೆ. ಆದರೆ, ಕರ್ನಾಟಕ ಸರ್ಕಾರದಿಂದ ಸ್ವೀಕಾರಾರ್ಹವಾದ ಆರ್.ಇ. ಸಬ್ಸಿಡಿ ರೂ.986.50 ಕೋಟಿ ಮೊತ್ತವನ್ನು ಕೆಪಿಟಿಸಿಎಲ್ ಲೆಕ್ಕಪುಸ್ತಕದಿಂದ ತೊಡೆದು ಹಾಕಿರುವುದಿಲ್ಲ ಅಥವಾ ಕರ್ನಾಟಕ ಸರ್ಕಾರವು ಕೆಪಿಟಿಸಿಎಲ್ ಗೆ ತೊಡೆದು ಹಾಕಲು ನಿರ್ದೇಶನ ನೀಡಿರುವುದಿಲ್ಲ. ಹಾಗೆಯೇ, ವಿದ್ಯುತ್ ಖರೀದಿ ಬಾಕಿ ಮೊತ್ತ ರೂ.888.79 ಕೋಟಿಗಾಗಿ |

| ಕ್ರ.ಸಂ. | ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರ ಟೀಕೆಗಳು | ಆಡಳಿತ ಮಂಡಳಿಯ ಉತ್ತರಗಳು |
|---|---|---|
| | ಆದಾಯದ ಬಡ್ಡಿ ಬಾಕಿ ಮೊತ್ತ ರೂ. 467.52 ಕೋಟಿಯನ್ನು ವರ್ಗಾವಣೆ ಮಾಡಲಾಗಿದೆ. ಕೆ.ಪಿ.ಸಿ.ಎಲ್. ಗೆ ಪಾವತಿಸಬೇಕಾಗಿರುವ ವಿದ್ಯುತ್ ಖರೀದಿ ವೆಚ್ಚವನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬಕಾಗಿರುವ ಆರ್.ಇ. ಸಬ್ಸಿಡಿಯನ್ನು ಹಿಂದಿನ ವರ್ಷಗಳಲ್ಲಿ ಆದಾಯ ಮತ್ತು ಖರ್ಚು ಎಂದು ಪ್ರತ್ಯೇಕವಾಗಿ ಲೆಕ್ಕ ಹಾಕಲಾಗಿದೆ, ಇದೇ ಸ್ವರೂಪದ ಲೆಕ್ಕಪತ್ರ ಉಪಚಾರವು ಎಲ್ಲ ಮೂರು ವ್ಯವಹಾರಗಳಿಗೆ ನೀಡಬಹುದಾಗಿದೆ, ಈ ಕೆಳಗಿನವುಗಳ ಕಾರಣದಿಂದಾಗಿ ಇದೇ ಸ್ವರೂಪದ ವ್ಯವಹಾರಗಳಿಗೆ ವಿಭಿನ್ನ ಸ್ವರೂಪದ ಲೆಕ್ಕಪರಿಶೋಧಕ ಉಪಚಾರದಿಂದ ರೂ. 97.71 ಕೋಟಿಯಷ್ಟು ಲಾಭದ ಮೇಲುಗೈ ಸಾಧಿಸಿತು.<br><br>ಹಿಂದಿನ ವರ್ಷಗಳಿಗೆ ಸಂಬಂಧಿಸಿದಂತೆ ಕೆ.ಪಿ.ಸಿ.ಎಲ್. ನ ವಿದ್ಯುತ್ ಖರೀದಿ ವೆಚ್ಚವಾದ ರೂ.888.79 ಕೋಟಿಗಳಷ್ಟು ಆದಾಯವನ್ನು ಇರುವುದಕ್ಕಿಂತ ಕಡಿಮೆ ತೋರಿಸಿ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017 ಯನ್ನಾಧರಿಸಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾಯಿಸ –ಲಾಗಿದೆ. ಕಂಪನಿಯು ಇದನ್ನೇ ಹಿಂದಿನ ವರ್ಷಗಳಲ್ಲಿ ಖರ್ಚುಗಳನ್ನಾಗಿ ಲೆಕ್ಕ ಹಾಕಿರುವುದರಿಂದ ಮತ್ತು ಅದನ್ನೇ ಈ ವರ್ಷಾವಧಿಯಲ್ಲಿ ವರ್ಗಾವಣೆ ಮಾಡಿರುವುದ –ರಿಂದ, ಇದನ್ನು ವರ್ಷಾವಧಿಯಲ್ಲಿ ಆದಾಯವೆಂದು ಲೆಕ್ಕ ಹಾಕಬಹುದಾಗಿತ್ತು.<br><br>ಇದೇ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017 ರ ಮೇಲೆ ಎಸ್ಕಾಂಗಳಿಗೆ ವರ್ಗಾವಣೆಗೊಂಡ ಸರ್ಕಾರದಿಂದ ಸ್ವೀಕಾರಾರ್ಹ ಆರ್.ಇ. ಸಬ್ಸಿಡಿಯು 986.50 ಕೋಟಿಗಳಷ್ಟು ಇರುವುದಕ್ಕಿಂತ ಕಡಿಮೆ ತೋರಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಕಂಪನಿಯು ವಿದ್ಯುತ್ ಖರೀದಿ ವೆಚ್ಚಗಳಿಗೆ ಎದುರಾಗಿ ಇದನ್ನೇ ಆದಾಯವೆಂದು ಲೆಕ್ಕಹಾಕಲಾಗಿದೆ, ಎಸ್ಕಾಂ –ಗಳಿಗೆ ಅದನ್ನು ವರ್ಗಾಯಿಸಿದ ವರ್ಷಗಳ ನಂತರ ಇದನ್ನು ಖರ್ಚು ಎಂದು ಲೆಕ್ಕ ಹಾಕಬಹುದಾಗಿತ್ತು. | ಕೆಪಿಟಿಸಿಎಲ್ ಪುಸ್ತಕಗಳಿಂದ ವಜಾಮಾಡಲು (written back) ಅಥವಾ ಕರ್ನಾಟಕ ಸರ್ಕಾರದಿಂದ ಅದನ್ನು ವಜಾಮಾಡಲು ನಿರ್ದೇಶನ ನೀಡಿರುವುದಿಲ್ಲ. ಬದಲಾಗಿ, ಕರ್ನಾಟಕ ಸರ್ಕಾರವು ಸ್ವೀಕರಿಸಬಹುದಾದ ಆರ್.ಇ. ಸಬ್ಸಿಡಿ ಮತ್ತು ವಿದ್ಯುತ್ ಖರೀದಿ ಹಣವನ್ನು ಎಸ್ಕಾಂಗಳಿಗೆ ವರ್ಗಾಯಿಸುವಂತೆ ನಿರ್ದೇಶನ ನೀಡಿರುತ್ತದೆ. ಆದ್ದರಿಂದ, ಕೆಪಿಟಿಸಿಎಲ್ ಸ್ವೀಕಾರಾರ್ಹವಾದ ಆರ್.ಇ. ಸಬ್ಸಿಡಿ ವರ್ಗಾವಣೆ ಮೊತ್ತವಾದ ರೂ.986.50 ಕೋಟಿ ಅನ್ನು ವೆಚ್ಚವೆಂದು ಮತ್ತು ವಿದ್ಯುತ್ ಖರೀದಿ ಬಾಕಿ ಮೊತ್ತ ರೂ.888.79 ಕೋಟಿ ಗಳನ್ನು ಆದಾಯವೆಂದು ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕಾಗು -ವುದಿಲ್ಲ |

| ಕ್ರ.ಸಂ. | ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರ ಟೀಕೆಗಳು | ಆಡಳಿತ ಮಂಡಳಿಯ ಉತ್ತರಗಳು |
|---|---|---|
| 2 | **ಹಿಂದಿನ ವರ್ಷಗಳಲ್ಲಿ ಪ್ರಸ್ತುತಿ ಮತ್ತು ಬಹಿರಂಗಪಡಿಸಿರುವ ಅಂಶಗಳ ಮೇಲೆ ಅಭಿಪ್ರಾಯ.**<br><br>**ಹಿಂದಿನ ಅವಧಿಯ ಜಮೆಗಳು/ಶುಲ್ಕಗಳು: ರೂ.98.57 ಕೋಟಿ (ಪ್ರಸಕ್ತ ವರ್ಷ 2016-17) ಮತ್ತು ರೂ.29.46 ಕೋಟಿ (ಹಿಂದಿನ ವರ್ಷ 2015-16ರ ತುಲನಾತ್ಮಕ ಅಂಕಿ ಅಂಶಗಳು)**<br><br>ಮೇಲಿನ ವಿವರವು ಹಿಂದಿನ ಅವಧಿಗೆ ಆದಾಯವನ್ನು ತಲುಪಿದ ನಂತರ ಹಿಂದಿನ ವ್ಯವಹಾರಗಳನ್ನು ಪ್ರತಿನಿಧಿಸುತ್ತದೆ ಮತ್ತು ಪ್ರಸಕ್ತ ವರ್ಷದ ಪ್ರತ್ಯೇಕ ಸಾಲಿನ ಅಂಶದಲ್ಲಿ ಅದನ್ನು ಲಾಭ ಮತ್ತು ನಷ್ಟ ವಿವರಣ ಪಟ್ಟಿಯಲ್ಲಿ ಚಿತ್ರಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಪ್ರತ್ಯೇಕ ಸಾಲಿನ ಅಂಶವಾಗಿ ಚಿತ್ರಿಸಲಾಗಿರುವುದನ್ನು ಕಂಪನಿಗಳ ಕಾಯ್ದೆ 2013ರ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ (IND-AS) ಕಾಂಪ್ಲೈಯೆಂಟ್ ಸ್ಟೇಟ್‌ಮೆಂಟ್ಸ್ ನ ಷೆಡ್ಯೂಲ್ III ರಲ್ಲಿ ಸೂಚಿಸಲಾಗಿರುವ ಲಾಭ ಮತ್ತು ನಷ್ಟ ವಿವರಣ ಪಟ್ಟಿಯ ಸಾಲಿನಲ್ಲಿ ಇರುವುದಿಲ್ಲ.<br><br>ಮುಂದುವರೆದು, ಕಂಪನಿಯು ಇಂಡ್-ಎ.ಎಸ್.8 ಪ್ರಕಾರ ಎಲ್ಲ ಹಿಂದಿನ ಅವಧಿಯ ಅಂಶಗಳನ್ನು ಪುನ: ಸ್ಥಾಪಿಸಲಾಗಿದೆ ಎಂದು ಟಿಪ್ಪಣಿ ಸಂಖ್ಯೆ 1.6 ರಲ್ಲಿ ಬಹಿರಂಗಪಡಿಸಿದೆ. ಆದ್ಯಾಗ್ಯೂ, ಕಂಪನಿಯು ಹಿಂದಿನ ಅವಧಿ 2000-01 ರಿಂದ 2015-16 ಕ್ಕೆ ಸಂಬಂಧಿಸಿದ ಐಟಂಗಳನ್ನು ಹಿಂದಿನ ಅವಧಿಗಳ ಅಂಕಿ-ಅಂಶಗಳನ್ನು ಪುನ: ಸ್ಥಾಪಿಸದೆ ಪ್ರಸಕ್ತ ಸಾಲಿನಲ್ಲಿ ಚಿತ್ರಿಸಿದೆ. ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) 8ರ ಕಂಡಿಕೆ 49ರ ಅಡಿಯಲ್ಲಿ ಅಗತ್ಯವಿದ್ದರೂ, ಅದನ್ನು ಮಾಡಲು ಸಾಧ್ಯವಿಲ್ಲವೆನ್ನುವುದು ವಾಸ್ತವಾಂಶ ಮತ್ತು ಅದನ್ನು ಟಿಪ್ಪಣಿಗಳಲ್ಲಿ ಬಹಿರಂಗಪಡಿಸಲಾಗದ ಸನ್ನಿವೇಶಗಳು, ದಾಖಲೆಗಳಲ್ಲಿ ಲಭ್ಯ ವಿರುವುದಿಲ್ಲ. | ಕೆಪಿಟಿಸಿಎಲ್ ಹಿಂದಿನ ಅವಧಿಯ ಅಂಶಗಳಲ್ಲಿ ತೋರಿಸಿರುವ ಕೆಲವು ಅಂಶಗಳ ಬಗ್ಗೆ ಲೋಪ/ದೋಷದ ಅವಧಿಯನ್ನು ಗುರುತಿಸಿದೆ. ಈ ಅಂಶಗಳು 2001 ರಿಂದ 2015-16ರ ಅವಧಿಗೆ ಸಂಬಂಧಿಸಿದವುಗಳಾಗಿವೆ. ಈ ಅಂಶಗಳ ಮರುಸ್ಥಾಪನೆ ಖಂಡಿತವಾಗಿಯೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ.)ವು ಆ ಅವಧಿಗೆ ನಿರ್ಧರಿಸಿರುವ ದರ ಮತ್ತು ಆದಾಯ ತೆರಿಗೆಯ ಲೆಕ್ಕಾಚಾರ ಮತ್ತು ಮುಂದೂಡಲಾದ ತೆರಿಗೆಯ ಮೇಲೆ ಪರಿಣಾಮ ಬೀರುತ್ತದೆ. ಕೆ.ಇ.ಆರ್.ಸಿ. 2017-18ನೇ ವರ್ಷಕ್ಕೆ ಈಗಾಗಲೇ ದರಪಟ್ಟಿ ಆದೇಶ ಹೊರಡಿಸಿದೆ ಮತ್ತು ತೆರಿಗೆ ನಿರ್ಧಾರಣೆಯು ಮುಕ್ತಾಯವಾಗಿದೆ, ಮತ್ತು 2014-15ನೇ ಮೌಲ್ಯಮಾಪನ ವರ್ಷಕ್ಕೆ ಈಗಾಗಲೇ ಮೌಲ್ಯಮಾಪನ ಆದೇಶ ಹೊರಡಿಸಲಾಗಿದೆ. ಈ ಮೇಲಿನ ಹಿನ್ನೆಲೆಯಲ್ಲಿ 2001 ರಿಂದ 2016ರ ವರೆಗಿನ ಅಂಕಿ-ಅಂಶಗಳನ್ನು ಪುನ: ಸ್ಥಾಪಿಸುವುದು ಅಪ್ರಾಯೋಗಿಕ ವಾಗಿದೆ. ಅತಿದೊಡ್ಡ ಮೂಲಸೌಕರ್ಯ ಮತ್ತು ಪ್ರತಿವರ್ಷ ಅಗಾಧವಾದ ಬೆಳವಣಿಗೆ ಹೊಂದಿರುವ ಕೆಪಿಟಿಸಿಎಲ್ ನಂತಹ ಸಂಸ್ಥೆಯ ಲೆಕ್ಕಪತ್ರ ನಿರ್ವಹಣೆ ಮಾಡುವಾಗ ಲೋಪದೋಷಗಳು ಸಂಭವಿಸಬಹುದು ಎಂಬುದನ್ನು ಪುನರುಚ್ಚರಿಸಲಾಗಿದೆ. 2000-01 ರಿಂದ 2015ರ ವರೆಗಿನ ಲೆಕ್ಕಪತ್ರಗಳ ಪುನರಾವರ್ತನೆಯು ಕಾರ್ಯಸಾಧ್ಯವಲ್ಲ. ಕಾರ್ಯಾಚರಣೆಗಳಿಂದ ಸುಮಾರು 3% ರಷ್ಟು ಆದಾಯವು ರೂ.98.57 ಕೋಟಿಗಳಿಗೆ ಹಿಂದಿನ ಅವಧಿಯಲ್ಲಿ ಅಂದಾಜು ಮಾಡಿದ ಅವಧಿಗಳ ನಿವ್ವಳ ಇದನ್ನು ಹಿಂದಿನ ವರ್ಷದ ಖಾತೆಗಳ ಮರು-ಪುನರಾವರ್ತನೆಯು ವಸ್ತುನಿಷ್ಠ ಅಂಶದ ಮೇಲೆ ನೋಡಬಹುದಾಗಿದೆ. ಇಂಡ್ ಎಎಸ್-8ರಲ್ಲಿ ತಿಳಿಸಿರುವಂತೆ "ಸುತ್ತಮುತ್ತಲಿನ ಸಂದರ್ಭಗಳಲ್ಲಿ ನಿರ್ಣಯಿಸಲ್ಪಟ್ಟ ಲೋಪ ಅಥವಾ ತಪ್ಪು ಹೇಳಿಕೆಗಳು ಗಾತ್ರ ಮತ್ತು ಸ್ವರೂಪದ ವಸ್ತುನಿಷ್ಠತೆಯನ್ನು ಅವಲಂಬಿಸಿರುತ್ತದೆ. ಅಂಶದ ಗಾತ್ರ ಅಥವಾ ಸ್ವರೂಪ ಅಥವಾ ಇವೆರಡರ ಸಂಯೋಜನೆಯು ನಿರ್ಧರಿಸುವ ಅಂಶವಾಗಿರ ಬಹುದು". |

# ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿ


| ಒಳಾಂಶ ಕೋಷ್ಟಕ: | |
|---|---|
| 1. | ಹಿನ್ನೆಲೆ |
| 2. | ಉದ್ದೇಶ |
| 3. | ಸಾ.ಸಾ.ಹೊ.ಸಮಿತಿಯ ಆಧಾರಿತ ವಿಷಯಗಳು |
| 4. | ಸಾ.ಸಾ.ಹೊ.ಚಟುವಟಿಕೆ/ಯೋಜನೆ |
| 5. | ಸಾ.ಸಾ.ಹೊ. ಮೊಬಲಗು |
| 6. | ಸಾ.ಸಾ.ಹೊ.ಮೊಬಲಗಿನ ಖರ್ಚು ವೆಚ್ಚಗಳು |
| 7. | ಆಡಳಿತ |
| 8. | ಮಾಹಿತಿಯ ಪ್ರಚಾರ |


1. **ಹಿನ್ನೆಲೆ:**

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯು, ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯಲ್ಲಿನ ಸಮುದಾಯ ಹಾಗೂ ವಾತಾವರಣದ ಜವಾಬ್ದಾರಿಯುತ ಸಾಮಾನ್ಯ ಪ್ರಜ್ಞೆಯಾಗಿದೆ. ಇದು, ನೀತಿವಂತಿಗೆ ವ್ಯವಹರಣೆಯ ಮೂಲಕ ಸಮಾಜದ ಆರ್ಥಿಕ ಬೆಳವಣಿಗೆಗೆ ಬೃಹತ್ ಪ್ರಮಾಣದಲ್ಲಿ ಕೊಡುಗೆ ನೀಡಿ, ಜೀವಾನಾಧಾರಕ್ಕೆ ಆಧಾರವಾಗಬಹುದಾದ ಸಾಮರ್ಥ್ಯವನ್ನು ನೆಲೆಗೊಳಿಸಿ ನಿರಂತರ ಬದ್ಧತೆಯಾಗಿರುತ್ತದೆ. ನಿಗಮವು ತನ್ನ ವ್ಯವಹರಣೆಯನ್ನು ಜವಾಬ್ದಾರಿ, ನ್ಯಾಯಯುತ ಹಾಗೂ ಅತ್ಯಂತ ಪಾರದರ್ಶಕತೆಯ ವಿಧಾನದ ಮೂಲಕ ನಡೆಸಲು ನಂಬಿಕೆಯುಳ್ಳದ್ದಾಗಿದೆ. ಕಂಪನಿಯು ತನ್ನ ಕಾರ್ಯಾಚರಣೆಯನ್ನು ನಡೆಸುವ ವ್ಯಾಪ್ತಿಯ ಸಮಾಜ ಹಾಗೂ ವಾತಾವರಣದ ಮೇಲೆ, ಸಾಮಾಜಿಕ ಉದ್ದೇಶಗಳ ಅಂಗವಾಗಿ, ಒಟ್ಟಾರೆ ಸಕಾರಾತ್ಮಕ ಪರಿಣಾಮವನ್ನು ಬೀರಲು ಕಂಪನಿಯು ನಿರಂತರವಾಗಿ ವಿಹಿತ ವಿಧಾನಗಳತ್ತ ಅನ್ವೇಶಿಸಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ರಾಜ್ಯದ ಒಂದು ವಿದ್ಯುತ್ ಪ್ರಸರಣ ಸಂಸ್ಥೆಯಾಗಿದ್ದು, ತನ್ನ ವಿದ್ಯುತ್ ಕೇಂದ್ರಗಳು ಹಾಗೂ ಪ್ರಸರಣ ಮಾರ್ಗಗಳ ಮೂಲಕ ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸರಣೆಯನ್ನು ಮಾಡುವ ಜವಾಬ್ದಾರಿಯನ್ನು ಹೊಂದಿದೆ. ಕ.ವಿ.ಪ್ರ.ನಿ.ನಿಯು, ಸಾರ್ವಜನಿಕ ನಾಗರೀಕರಿಗೆ ಸೇವೆಯನ್ನು ನೀಡುವಲ್ಲಿ, ಸ್ಪರ್ಧಾತ್ಮಕ ದರದ, ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನೀಡಲು ಕೆಳಕಂಡ ಧ್ಯೇಯೋದ್ದೇಶವನ್ನು ಹೊಂದಿದೆ:

1. ವಿದ್ಯುತ್ ಪ್ರಸರಣೆಯಲ್ಲಿ ಉತ್ತಮ ಕಾರ್ಯಾಚರಣೆಗೆ ಪ್ರೋತ್ಸಾಹ;
2. ತನ್ನ ಎಲ್ಲಾ ತಾಂತ್ರಿಕ ಸೌಲಭ್ಯಗಳು ಉನ್ನತಮಟ್ಟದ ನಿರ್ವಹಣೆಯಲ್ಲಿರುವುದನ್ನು ಖಚಿತಪಡಿಸಿ ಕೊಳ್ಳುವುದು; ಮತ್ತು
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಗುಣಮಟ್ಟವನ್ನು ಕಾಯ್ದಿದಿರಿಸಿಕೊಳ್ಳುವುದು.

2. **ಉದ್ದೇಶ:**

ಈ ನೀತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಒಂದು ಪ್ರಮುಖ ವ್ಯವಹರಣ ಪ್ರಕ್ರಿಯೆಯನ್ನಾಗಿಸಲು ಮಾರ್ಗದರ್ಶಕಗಳನ್ನು ಅಣಿಗೊಳಿಸುತ್ತದೆ. ಭಾರತದಲ್ಲಿ ನಿಗಮದ ಕಾರ್ಯಚಟುವಟಿಕೆಗಳ ಸಾಮಾಜಿಕ ಹಾಗೂ

ವಾತಾವರಣದ ಮೇಲಿನ ಪರಿಣಾಮವನ್ನು ಆಧರಿಸಿ, ಸಮಾಜದ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VIIರ ಪ್ರಕಾರ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ದಿಷ್ಟಪಡಿಸುತ್ತದೆ. ಅನುಷ್ಠಾನಗೊಳಿಸುವಿಕೆಯ ವರ್ಷಗಳಲ್ಲಿ, ಕೈಗೊಳ್ಳಬೇಕಾದ ಯೋಜನೆ ಹಾಗೂ ಉದ್ದೇಶಗಳನ್ನು ಹೊರಸೂಸುವುದರೊಂದಿಗೆ, ಆಯ್ಕೆ ಮಾಡಿರುವ ಕ್ಷೇತ್ರ/ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಿಕೆಯ ಕಾರ್ಯಕ್ರಮ ಹಾಗೂ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VIIರಲ್ಲಿ ವಿಷದೀಕರಿಸಿರುವ ಚಟುವಟಿಕೆಗಳಿಗೆ ಒಳಪಟ್ಟು, ಕಂಪನಿಯು ವಿವಿಧ ಸನ್ನಿವೇಶ ಹಾಗೂ ಸವಾಲುತನಗಳಿಗೆ ಸೂಕ್ತ ಹಾಗೂ ಸುಲಭ ರೀತಿಯಲ್ಲಿ ಸ್ಪಂದಿಸಲು ನೀತಿಯ ಉದ್ದೇಶವನ್ನು ಸಾಧ್ಯವಾದಷ್ಟೂ ವಿಸ್ತೃತವಾಗಿಸಲಾಗಿದೆ. ಆದರೆ, ಭಾರತದಾಚೆ ಕೈಗೊಳ್ಳುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ರೀತಿಯ ಕೊಡುಗೆ, ವಂತಿಗೆಗಳನ್ನು ನೀಡುವುದಿಲ್ಲ.

**3. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ಆಧಾರಿತ ವಿಷಯಗಳು:**

ಕ.ವಿ.ಪ್ರ.ನಿ.ನಿ.ಯ ನಿರ್ದೇಶಕ ಮಂಡಳಿಯು, ಕೆಳಕಂಡ ಆಧಾರಿತ ವಿಷಯಗಳೊಂದಿಗೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯನ್ನು ರಚಿಸಿದೆ:

ಎ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ನೀತಿಯನ್ನು ರೂಪಿಸಿ ಮಂಡಳಿಗೆ ಶಿಫಾರಸ್ಸು ಮಾಡುವುದು;

ಬಿ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಭರಿಸುವ ವೆಚ್ಚಗಳಿಗೆ ಶಿಫಾರಸ್ಸು ಮಾಡುವುದು;

ಸಿ. ಕಾಲಕಾಲಕ್ಕೆ ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳನ್ನು ಮೇಲ್ವಿಚಾರಣೆಗೆ ಒಳಪಡಿಸುವುದು.

ಡಿ. ಕಂಪನಿಯು ಕೈಗೊಳ್ಳುವ ಚಟುವಟಿಕೆಗಳು ಅಥವಾ ಸಾ.ಸಾ.ಹೊ. ಯೋಜನೆಗಳು/ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪಾರದರ್ಶಕ ಮೇಲ್ವಿಚಾರಣೆಯನ್ನು ಕಾರ್ಯಗತಗೊಳಿಸುವುದು.

ನಿಗಮದ ಸಾ.ಸಾ.ಹೊ.ಸಮಿತಿಯು, ಯೋಜಿತ ಉದ್ದೇಶಗಳನ್ನು ಕಾಯಕಲ್ಪಗೊಳಿಸಲು ಕೆಳಕಂಡಂತೆ ಪ್ರಕ್ರಿಯೆಗೊಳಿಸುತ್ತದೆ:

- ಸಾ.ಸಾ.ಹೊಣೆಗಾರಿಕೆ ಉಪಕ್ರಮಗಳ ಸಂಬಂಧವಾಗಿ, ನಿಗಮವು ಕೈಗೊಳ್ಳಬೇಕಾದ ಚಟುವಟಿಕೆಗಳನ್ನು ಸೂಚಿಸುವ ಕಾರ್ಯನೀತಿಯನ್ನು ರೂಪಿಸಿ ಪರಿಶೀಲಿಸುವುದು;
- ಸಾ.ಸಾ.ಹೊಣೆಗಾರಿಕೆ ಚಟುವಟಿಕೆಗಳಿಗಾಗಿ ಭರಿಸಬೇಕಾದ ವೆಚ್ಚಕ್ಕೆ ಶಿಫಾರಸ್ಸು ಮಾಡುವುದು;
- ನಿಗಮವು ಕೈಗೊಳ್ಳಬೇಕಾದ ಯೋಜನೆ/ಕಾರ್ಯಕ್ರಮ/ಚಟುವಟಿಕೆಗಳ ಅನುಷ್ಠಾನ ಅಥವಾ ನಿ.ಸಾ.ಹೊ. ನಿಮಿತ್ತವಾಗಿ ಭರಿಸಿದ ಕಟ್ಟಕಡೆಯ ವೆಚ್ಚವನ್ನು ಖಚಿತಪಡಿಸಿಕೊಳ್ಳಲು ಪಾರದರ್ಶಕ ಮೇಲ್ವಿಚಾರಣಾ ಕಾರ್ಯನೀತಿಯನ್ನು ರೂಪಿಸುವುದು;
- ಕಾಲಕಾಲಕ್ಕೆ ಈ ನೀತಿಯನ್ನು ಮೇಲ್ವಿಚಾರಣೆಗೆ ಒಳಪಡಿಸಿ ಅನುಷ್ಠಾನಗೊಳಿಸುವುದು;
- ಸಾ.ಸಾ.ಹೊ.ಚಟುವಟಿಕೆಗಳ ಬಗ್ಗೆ ಹಾಗೂ ಆ ನಿಮಿತ್ತವಾಗಿ ನಿಗಮದ ಕೊಡುಗೆಯ ಬಗ್ಗೆ ವಾರ್ಷಿಕವಾಗಿ ಮಂಡಳಿಗೆ ವರದಿಯನ್ನು ಸಲ್ಲಿಸುವುದು;

☒ ಕಾಯ್ದೆಯ ಅಡಿಯಲ್ಲಿ ಕಡ್ಡಾಯಗೊಳಿಸಿರುವ ಇತರ .ಯಾವುದೇ ಅಗತ್ಯತೆ ಹಾಗೂ ತತ್ಸಂಬಂಧ ಹೊರಡಿಸಿರುವ ನಿಯಮಗಳ ಪಾಲನೆ

4. **ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆ/ಯೋಜನೆ:**

ಕಂಪನಿಗಳ ಕಾಯ್ದೆ, 2013ರ ಅನುಸೂಚಿ VII, ಕಂಪನಿಗಳು ತಮ್ಮ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಕಾರ್ಯನೀತಿಯಲ್ಲಿ ಕೆಳಗೆ ಸೂಚಿಸಿರುವ ಚಟುವಟಿಕೆಗಳನ್ನು ಒಳಪಡಿಸಿಕೊಳ್ಳಬೇಕೆಂದು ಅಗತ್ಯಪಡಿಸುತ್ತದೆ.

i. ಹಸಿವು, ಬಡತನ ಮತ್ತು ಅಪೌಷ್ಠಿಕತೆ ನಿರ್ಮೂಲನೆ ಮಾಡುವುದು, ನೈರ್ಮಲ್ಯದ ಪ್ರಚಾರಕ್ಕಾಗಿ ಮತ್ತು ಸುರಕ್ಷಿತವಾಗಿ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಕೋಶಕ್ಕೆ ದೇಣಿಗೆ ನೀಡಿದ ಕೊಡುಗೆ ಸೇರಿದಂತೆ ಮುಂಜಾಗ್ರತಾ ಕ್ರಮಗಳು ಮತ್ತು ನೈರ್ಮಲ್ಯ ಸೇರಿದಂತೆ ಆರೋಗ್ಯ ಸುರಕ್ಷೆಯನ್ನು ಉತ್ತೇಜಿಸುವುದು.

ii. ವಿಶೇಷವಾಗಿ ಮಕ್ಕಳು, ಮಹಿಳೆಯರು, ಹಿರಿಯರು ಮತ್ತು ವಿಭಿನ್ನ ಶಕ್ತರ ಜೀವನ ಉನ್ನತೀಕರಣ ಯೋಜನೆಯಲ್ಲಿ ವೃತ್ತಿ ಕೌಶಲ್ಯಗಳನ್ನು ಒಳಗೊಂಡಂತೆ ಶಿಕ್ಷಣವನ್ನು ಉತ್ತೇಜಿಸುವುದು.

iii. ಲಿಂಗ ಸಮಾನತೆ, ಮಹಿಳಾ ಸಬಲೀಕರಣವನ್ನು ಉತ್ತೇಜಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಆಶ್ರಮ ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು; ಹಿರಿಯ ನಾಗರಿಕರು ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಗುಂಪುಗಳು ಎದುರಿಸುತ್ತಿರುವ ಅಸಮಾನತೆಗಳನ್ನು ಕಡಿಮೆ ಮಾಡುವ ಕ್ರಮಗಳಿಗಾಗಿ ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು ಮತ್ತು ಇಂತಹ ಇತರೆ ಸೌಲಭ್ಯಗಳನ್ನು ಸ್ಥಾಪಿಸುವುದು.

iv. ಪರಿಸರ ಸಂರಕ್ಷಣೆ, ಪರಿಸರ ಸಮತೋಲನ, ಸಸ್ಯ ಸಂಪತ್ತು ಮತ್ತು ಪ್ರಾಣಿಗಳ ರಕ್ಷಣೆ, ಕೃಷಿ ಅರಣ್ಯ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ನಿರ್ಮಲ ಗಂಗಾ ನಿಧಿಗೆ ಕೊಡಿಗೆ ಸೇರಿದಂತೆ ಮಣ್ಣು, ವಾಯು ಮತ್ತು ನೀರಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.

v. ಐತಿಹಾಸಿಕ ಪ್ರಾಮುಖ್ಯತೆ ಹೊಂದಿರುವ ಕಟ್ಟಡಗಳು ಮತ್ತು ತಾಣಗಳು ಸೇರಿದಂತೆ ರಾಷ್ಟ್ರೀಯ ಪರಂಪರೆಯ ಕಲೆ, ಸಂಸ್ಕೃತಿಯ ರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ, ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ಉತ್ತೇಜನ ಮತ್ತು ಅಭಿವೃದ್ಧಿ.

vi. ಸಶಸ್ತ್ರ ಪಡೆಗಳ ಶೂರರು, ಯುದ್ಧದಲ್ಲಿ ಮಡಿದ ಸೈನಿಕರ ವಿಧವೆಯರು ಮತ್ತು ಅವರ ಅವಲಂಬಿತರ ಪ್ರಯೋಜನಕ್ಕಾಗಿ ಕ್ರಮಗಳು.

vii. ಗ್ರಾಮೀಣ ಕ್ರೀಡೆಗಳು, ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಕ್ರೀಡೆಗಳು, ಪ್ಯಾರಾಲಂಪಿಕ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ಉತ್ತೇಜನಕ್ಕಾಗಿ ತರಬೇತಿ.

viii. ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ, ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರೂಪಿಸುವ ಪರಿಹಾರ ನಿಧಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ, ಇತರೆ ಹಿಂದುಳಿದ ವರ್ಗಗಳು, ಅಲ್ಪ ಸಂಖ್ಯಾತರು ಹಾಗೂ ಮಹಿಳಾ ಕಲ್ಯಾಣಕ್ಕಾಗಿ ಕೊಡುಗೆ; ಮತ್ತು

ix. ಕೇಂದ್ರ ಸರ್ಕಾರದ ಅನುಮೋದನೆ ಹೊಂದಿರುವ ಶೈಕ್ಷಣಿಕ ಸಂಸ್ಥೆಗಳೊಳಗೆ ಇರುವ ತಾಂತ್ರಿಕ ಇನಕ್ಯೂಬೇಟರ್‌ಗಳಿಗೆ ಕೊಡುಗೆಗಳು ಅಥವಾ ನಿಧಿಗಳು.

x. ಗ್ರಾಮೀಣ ಅಭಿವೃದ್ಧಿ ಯೋಜನೆಗಳು.

xi. ಕೊಳಗೇರಿ ಪ್ರದೇಶ ಅಭಿವೃದ್ಧಿ ಯೋಜನೆಗಳು.

**ವಿವರಣೆ:** ಈ ಅಂಶದ ಉದ್ದೇಶಕ್ಕಾಗಿ "ಕೊಳಗೇರಿ ಪ್ರದೇಶ" ಎಂಬ ಶಬ್ದವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿರುವ ಯಾವುದೇ ಇತರ ಪ್ರಾಧಿಕಾರದಿಂದ ಘೋಷಿಸಲ್ಪಟ್ಟ ಪ್ರದೇಶ. ಕಂಪನಿಗಳ ಕಾಯ್ದೆ, 2013ರ ಅನುಸೂಚಿ–7 ಯು ಒಂದು, ಸಿ.ಎಸ್.ಅರ್. ಚಟುವಟಿಕೆಗಳು ಮತ್ತು ಅದರ ಸಲುವಾಗಿ ಖರ್ಚು ಮಾಡಬಹುದಾದ ಮೊಬಲಗನ್ನು ನಿರ್ದಿಷ್ಟಪಡಿಸುವ ಕೈಪಿಡಿ ದಾಖಲೆಯಾಗಿರುತ್ತದೆ. ಸದರಿ ಅನುಸೂಚಿಯು ಕಾಲ ಕಾಲಕ್ಕೆ ತಿದ್ದುಪಡಿ ಆಗುತ್ತಿರುತ್ತದೆ. ಆದ್ದರಿಂದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯವು ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಅನುಸೂಚಿ–7 ನ್ನು ಕ.ವಿ.ಪ್ರ.ನಿ.ನಿಯ ಸಿ.ಎಸ್.ಆರ್ ಕಾರ್ಯನೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

**5. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗು**

ಕಂಪನಿಗಳ ಕಾಯ್ದೆ 2013ರ ಪ್ರಕರಣ 135 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತಿ ಆರ್ಥಿಕ ವರ್ಷದಲ್ಲಿ, ತತ್‌ಕ್ಷಣದ ಹಿಂದಿನ ಮೂರು ವರ್ಷಗಳಲ್ಲಿ ಗಳಿಸಿದ ನಿವ್ವಳ ಲಾಭದ ಕನಿಷ್ಠ ಶೇಕಡಾ 2ರಷ್ಟನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಅನುಸರಣೆಯಾಗಿ ಖರ್ಚು ಮಾಡುವುದನ್ನು ನಿಗಮವು ಖಚಿತಪಡಿಸಿಕೊಳ್ಳತಕ್ಕದ್ದು.

ಈ ನೀತಿಯ ಪ್ರಕಾರ, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಖರ್ಚಿನ ಮೊದಲ ಆರ್ಥಿಕ ವರ್ಷವು 2014–15 ಆಗಿದ್ದು, ನಿವ್ವಳ ಲಾಭವು ಆ.ವ2011–12,2012–13 ಮತ್ತು 2013–14ರ ನಿವ್ವಳ ಲಾಭದ ಸರಾಸರಿ ಎಂದು ಅರ್ಥೈಸುತ್ತದೆ.

ಮೇಲೆ ತಿಳಿಸಿರುವ ನಿವ್ವಳ ಲಾಭ ಎಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭ ಎಂದಾಗುತ್ತದೆ. ಇದರಲ್ಲಿ ಭಾರತದಾಚೆ ನಡೆಸಿದ ವ್ಯವಹರಣೆಯಿಂದ ಗಳಿಸಿದ ಲಾಭವನ್ನು ಒಳಗೊಳ್ಳುವುದಿಲ್ಲ.

**6. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳು**

ಸಾ.ಸಾ.ಹೊ. ಸಮಿತಿಯು, ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಮೊಬಲಗಿನ ಖರ್ಚುವೆಚ್ಚಗಳನ್ನು ಕೆಳಕಂಡವುಗಳಿಗೆ ಸಂಬಂಧಿಸಿದಂತೆ, ನಿರ್ಧರಿಸುತ್ತದೆ :

- ಅಭಿವೃದ್ಧಿತ ವಿವಿಧ ಸಂಸ್ಥೆಗಳು ಹಾಗೂ ಪ್ರಾರಂಭಿಕಹಂತದ ಆಕರ ಸಂಸ್ಥೆಗಳಿಗೆ ನಿಧಿ ಸೌಲಭ್ಯ ಒದಗಿಸಬೇಕಾದ ಶೇಕಡಾವಾರು ಒಟ್ಟು ಮೊಬಲಗು; ಮತ್ತು
- ವಿತರಣೆಯನ್ನು ಎಷ್ಟು ಭಾಗಗಳಲ್ಲಿ ಬಿಡುಗಡೆ ಮಾಡಬೇಕು;
- ಸಾ.ಸಾ.ಹೊ.ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಯಾವುದೇ ಹೆಚ್ಚುವರಿ ಕಂಡುಬಂದರೆ, ಅವು ನಿಗಮದ ವ್ಯವಹರಿತ ಲಾಭದ ಭಾಗವಾಗಿರುವುದಿಲ್ಲ.
- ಸ್ವೀಕರಿಸಿದ ಯಾವುದೇ ವಂತಿಗೆಯಿಂದ ಗಳಿಸಿದ ಆದಾಯವು ಹಾಗೂ

ಸಾ.ಸಾ.ಹೊ. ಚಟುವಟಿಕೆಗಳಿಂದ ಒದಗಿದ .ಯಾವುದೇ ಹೆಚ್ಚುವರಿಯನ್ನು ನಿಗಮ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು.

- ನಿಗಮದ ಉದ್ಯೋಗಿಗಳ ಸಾ.ಸಾ.ಹೊ. ಸಾಮರ್ಥ್ಯವನ್ನು ರೂಪಿಸಲು ನಿಧಿಯನ್ನು ಸಜ್ಜುಗೊಳಿಸಲು ಸಮಿತಿಯು ಶಿಫಾರಸ್ಸು ಮಾಡಿ, ತನ್ಮೂಲಕ ಸಾ.ಸಾ.ಹೊ.ಚಟುವಟಿಕೆಗಳನ್ನು ಕೈಗೊಳ್ಳತಕ್ಕದ್ದು.

7. **ಆಡಳಿತ**

1 ಪ್ರತಿ ವರ್ಷ, ಆಯಾ ಆರ್ಥಿಕ ವರ್ಷದಲ್ಲಿ ಹಮ್ಮಿಕೊಂಡಿರುವ ಸಾ.ಸಾ.ಹೊ.ಚಟುವಟಿಕೆಗಳ ಕಾರ್ಯಕ್ರಮ ವಿವರಗಳ ಯೋಜನೆ ಹಾಗೂ ತತ್ಸಂಬಂಧ ಖರ್ಚುವೆಚ್ಚ ವಿವರಗಳ ಪ್ರಸ್ತಾಪವನ್ನು ಸಾ.ಸಾ.ಹೊ. ಸಮಿತಿಯು ಅನುಮೋದನೆಗಾಗಿ ಮಂಡಳಿಗೆ ಮಂಡಿಸತಕ್ಕದ್ದು. ಅವಶ್ಯವೆಂದು ಕಂಡುಬಂದರೆ, ಅಗತ್ಯ ಮಾರ್ಪಾಡುಗಳೊಂದಿಗೆ ಮಂಡಳಿಯು ಸಾ.ಸಾ.ಹೊಣೆಗಾರಿಕೆ ಚಟುವಟಿಕೆಯ ಯೋಜನೆಯನ್ನು ಪರಿಗಣಿಸಿ ಅನುಮೋದಿಸುತ್ತದೆ.

2 ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯು, ಸಾ.ಸಾ.ಹೊ.ಚಟುವಟಿಕೆಗಳ ಅನುಷ್ಠಾನವನ್ನು ಪರಿಶೀಲಿಸಿ, ಈ ನೀತಿಯ ಪ್ರಕಾರ ಕಾರ್ಯಕ್ರಮಗಳು ಸಮರ್ಥನೀಯ ಹಾಗೂ ದಕ್ಷ ರೀತಿಯಲ್ಲಿ ನಿರ್ವಹಿತಗೊಂಡಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಕಾಲಕಾಲಕ್ಕೆ ಅಗತ್ಯ ನಿರ್ದೇಶನ ನೀಡತಕ್ಕದ್ದು.

3 ಪ್ರತಿ ಆರು ತಿಂಗಳುಗಳಿಗೊಮ್ಮೆ, ಆ ಆರು ತಿಂಗಳುಗಳಲ್ಲಿ ಅನುಮೋದಿತ ಸಾ.ಸಾ.ಹೊ. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವ ಪ್ರಗತಿಯ ಬಗ್ಗೆ ತಹಲ್ ವರದಿಯನ್ನು ಒದಗಿಸತಕ್ಕದ್ದು. ಅಂತಹ ಸಮಿತಿಯು ಪರಿಶೀಲಿಸಿ, ಅನುಷ್ಠಾನಿತ ಕಾರ್ಯದ ಬಗ್ಗೆ ಮಂಡಳಿಯ ಗಮನಕ್ಕೆ ತರತಕ್ಕದ್ದು.

4 ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ, ಮಂಡಳಿಗೆ ಸಾ.ಸಾ.ಹೊ.ಸಮಿತಿಯು ವರದಿಯನ್ನು ಮಂಡಿಸತಕ್ಕದ್ದು.

೮. **ಮಾಹಿತಿಯ ಪ್ರಚಾರ**

ಸಾ.ಸಾ.ಹೊ.ಸಮಿತಿಯು, ನಿಗಮದ ಮಂಡಳಿಗೆ ಕನಿಷ್ಠ ವಾರ್ಷಿಕವಾಗಿ, ನಿಗಮವು ಕೈಗೊಂಡ ನಿ.ಸಾಹೊ. ಯೋಜನೆಗಳು/ಚಟುವಟಿಕೆಗಳು ಹಾಗೂ ಅದರ ಯೋಜನೆಗಳು/ಚಟುವಟಿಕೆಗಳಿಂದ ಕಂಡುಬಂದ ಫಲಿತಗಳ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

ನಿಗಮವು ಈ ನೀತಿಯ ಮಾಹಿತಿಯನ್ನು ನಿಗಮದ ಜಾಲತಾಣ www.kptcl.com/ePrasarana ದಲ್ಲಿ ತುಂಬಿಸತಕ್ಕದ್ದು. ಮುಂದುವರೆಸಿ, ಸಾ.ಸಾ.ಹೊ. ಕಾರ್ಯಚಟುವಟಿಕೆಯ ವಿವರವಾದ ವರದಿಯನ್ನು ನಿಗಮದ ವಾರ್ಷಿಕ ಲೆಕ್ಕಪತ್ರಗಳ ನಿರ್ದೇಶಕರ ವರದಿಯಲ್ಲಿ ಹಾಗೂ ಜಾಲತಾಣದಲ್ಲಿ ಪ್ರಚಾರಪಡಿಸುವುದು.

ಸಾ.ಸಾ.ಹೊ. ನೀತಿಯನ್ವಯ, ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಮೇಲ್ವಿಚಾರಣೆಗೆ ಒಳಪಡಿಸಿ, ಅನುಸರಣೆ ಮಾಡಿರುವ ಬಗ್ಗೆ ಸಾ.ಸಾ.ಹೊ. ಸಮಿತಿಯು ನಿಗಮದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಜವಾಬ್ದಾರಿಯುತವಾದ ಹೇಳಿಕೆಯನ್ನು ನೀಡತಕ್ಕದ್ದು.

**ಮಂಡಳಿಯ ವರದಿಯಲ್ಲಿ ಒಳಪಡಿಸಬೇಕಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಟುವಟಿಕೆಗಳ ವಾರ್ಷಿಕ ವರದಿ**

1. ಕಂಪನಿಯ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿ.ಎಸ್.ಆರ್.) ನೀತಿಯ ಸಂಕ್ಷಿಪ್ತ ನೋಟ, ಕೈಗೊಳ್ಳಬೇಕೆಂದು ಉದ್ದೇಶಿಸಲಾಗಿರುವ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅವಲೋಕನ, ಇವುಗಳನ್ನು ಅನುಬಂಧ-4 ಎಂದು ಲಗತ್ತಿಸಲಾಗಿದೆ. ನಿಗಮ ಸಾಮಾಜಿಕ ಹೊಣೆಗಾರಿಕೆಯ ನೀತಿ ಹಾಗೂ ಯೋಜನೆ/ಕಾರ್ಯಕ್ರಮಗಳ ಜಾಲತಾಣ ಸಂಪರ್ಕ: www.kptcl.com.

ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಸಮಿತಿಯ ರಚನೆ ಹೀಗಿದೆ:

| ಕ್ರ. ಸಂ. | ಹೆಸರು / ಶ್ರೀಯುತ | ಪದನಾಮ |
|---|---|---|
| 1. | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ | ಅಧ್ಯಕ್ಷರು |
| 2. | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಆರ್ಥಿಕ ಇಲಾಖೆ, | ಸದಸ್ಯರು |
| 3. | ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ | ಸದಸ್ಯರು |
| | ನಿರ್ದೇಶಕರು ಹಾಗೂ ಕಂಪನಿ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. | ಸಂಚಾಲಕರು |

3. ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (ಆ.ವ 2013-14 ರಿಂದ 2015-16) ಕಂಪನಿಯ ಸರಾಸರಿ ನಿವ್ವಳ ಲಾಭ:

| ಆರ್ಥಿಕ ವರ್ಷ | ತೆರಿಗೆಗೆ ಮುಂಚಿನ ನಿವ್ವಳ ಲಾಭ ( ರೂ.ಗಳಲ್ಲಿ) |
|---|---|
| 2013-14 | 36,17,00,165 |
| 2014-15 | 101,02,93,474 |
| 2015-16 | 229,53,23,390 |
| ಒಟ್ಟು | **366,73,17,029** |
| ಸರಾಸರಿ ನಿವ್ವಳ ಲಾಭ | **122,24,39,010** |

ತೆರಿಗೆಗೆ ಮುಂಚಿನ ನಿವ್ವಳ ಲಾಭವನ್ನು ಪರಿಗಣಿಸಿದ ನಂತರ, ಕಳೆದ ಮೂರು ವರ್ಷಗಳಲ್ಲಿ(ಆ.ವ.2013-14 ರಿಂದ 2015-16) ಕಂಪನಿಯ ಸರಾಸರಿ ನಿವ್ವಳ ಲಾಭ ರೂ.**122,24,39,010**/-.

4. ನಿಗದಿಪಡಿಸಿರುವ ಸಿ.ಎಸ್.ಆರ್.ವೆಚ್ಚ (ಮೇಲಿನ ಅಂಶ 3ರಲ್ಲಿನ ಮೊಬಲಗಿನ ಶೇ.2ರಂತೆ ) : ರೂ. 2,44,48,780/-.

5. ಪ್ರಸಕ್ತ ಆರ್ಥಿಕ ವರ್ಷದಲ್ಲಿ ವ್ಯಯಿಸಿದ ಸಿ.ಎಸ್.ಆರ್. ನಿಮಿತ್ತದ ವೆಚ್ಚ:

ಎ) ಸದರಿ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿಬೇಕಾದ ಒಟ್ಟು ಮೊತ್ತ ರೂ.2.44 ಕೋಟಿ.

ಬಿ) ಖರ್ಚು ಮಾಡದೆ ಉಳಿದಿರುವ ಮೊತ್ತ ಇದ್ದಲ್ಲಿ ರೂ.48.780/-

ಸಿ) ಸದರಿ ಆರ್ಥಿಕ ವರ್ಷದಲ್ಲಿ ಖರ್ಚು ಮಾಡಿದ ಮೊತ್ತದ ವಿಧಾನ ಈ ಕೆಳಗಿನಂತಿದೆ:

| (1) | (2) | (3) | (4) |
|---|---|---|---|
| ಕ್ರ ಸಂ. | ಸಿ.ಎಸ್.ಆರ್. ಯೋಜನೆ ಅಥವಾ ಗೊತ್ತುಪಡಿಸಿರುವ ಚಟುವಟಿಕೆ | ಯಾವ ಕ್ಷೇತ್ರದಲ್ಲಿ ಯೋಜನೆಯು ಒಳಗೊಂಡಿದೆ | ಯೋಜನೆ ಅಥವಾ ಕಾರ್ಯಕ್ರಮ (1) ಸ್ಥಳೀಯ ಪ್ರದೇಶ ಅಥವಾ ಇತರೆ (2) ಯೋಜನೆ ಅಥವಾ ಕಾರ್ಯಕ್ರಮವನ್ನು ಕೈಗೊಂಡ ರಾಜ್ಯ ಹಾಗೂ ಜಿಲ್ಲೆಯ ಹೆಸರನ್ನು ತಿಳಿಸಿ |
| 1. | ಬೋರಿಂಗ್ ಮತ್ತು ಲೇಡಿ ಕರ್ಸ್‌ನ್ ಆಸ್ಪತ್ರೆ | ಆರೋಗ್ಯ ಇಲಾಖೆ | ಬೆಂಗಳೂರು |
| 2. | ತುಮಕೂರು ವಿಧಾನಸೌಧದ ಉದ್ಯಾನವನವನ್ನು ನವೀಕರಿಸುವುದು | ಕಂದಾಯ ಇಲಾಖೆ | ತುಮಕೂರು |
| 3. | ಬೋರಿಂಗ್ ಮತ್ತು ಲೇಡಿ ಕರ್ಸ್‌ನ್ ಆಸ್ಪತ್ರೆ | ಆರೋಗ್ಯ ಇಲಾಖೆ | ಬೆಂಗಳೂರು |
| 4. | ಕನಕಪುರ ತಾಲೂಕಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ | ಗ್ರಾಮಾ ಪಂಚಾಯಿತಿ | ಕನಕಪುರ |
| 5. | ಸರ್ಕಾರಿ ಪ್ರಾಥಮಿಕ ಶಾಲ | ಶಿಕ್ಷಣ ಇಲಾಖೆ | ನಾಯಕನಹಳ್ಳಿ ಕನಕಪುರ ತಾಲೂಕು |
| 6. | ಡಾ.ಅಂಬೇಡ್ಕರ್ ಭವನ ,ಸಭಾಂಗಣ | ಸಮಾಜ ಕಲ್ಯಾಣ ಇಲಾಖೆ | ಕನಕಪುರ |
| 7. | ಕೃಷಿ ಅರಣ್ಯ ಅಭಿವೃದ್ಧಿ | ಅರಣ್ಯ ಇಲಾಖೆ | ರಾಮನಗರ |

- **ಅನುಷ್ಠಾನಗೊಳಿಸುವ ಏಜೆನ್ಸಿಯ ವಿವರಗಳು**

| (5) | (6) | (7) | (8) |
|---|---|---|---|
| ಯೋಜನೆ/ ಕಾರ್ಯಕ್ರಮವಾರು ವೆಚ್ಚದ ಬಜೆಟ್ ವೆಚ್ಚ | ಭರಿಸಿದ ಮೊಬಲಗಿನ ವೆಚ್ಚ | ವರದಿ ಸಲ್ಲಿಕೆಯವರೆಗಿನ ಸಂಚಿತ ವೆಚ್ಚ | ನೇರವಾಗಿ ಅಥವಾ ಅನುಷ್ಠಾನದ ಏಜೆನ್ಸಿ ಮೂಲಕ ಭರಿಸಿದ |
| 13.00 | ಆಪರೇಷನ್ ಕೊಠಡಿಗೆ ಆಪರೇಷನ್ ಮೇಜುಗಳು ಮತ್ತು ಉಪಕರಣಗಳು | 2016-17 | ಚೆಕ್ ಮೂಲಕ |
| 15.00 | ಉದ್ಯಾನವನವನ್ನು ನವೀಕರಿಸುವುದು | 2016-17 | ಚೆಕ್ ಮೂಲಕ |
| 16.00 | ಆಂಬ್ಯುಲೆನ್ಸ್ ವಾಹನ | 2016-17 | ಚೆಕ್ ಮೂಲಕ |
| 100.00 | ಕನಕಪುರ ತಾಲೂಕಿನಲ್ಲಿ 30 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ | 2016-17 | ಚೆಕ್ ಮೂಲಕ |
| 35.00 | ಸರ್ಕಾರಿ ಪ್ರಾಥಮಿಕ ಶಾಲೆಗೆ ಹೆಚ್ಚುವರಿ ಕೊಠಡಿಗಳ ವ್ಯವಸ್ಥೆ | 2016-17 | ಚೆಕ್ ಮೂಲಕ |
| 50.00 | ಅಕೌಸ್ಟಿಕ್ಸ್ ಸೌಲಭ್ಯಗಳನ್ನು ಒದಗಿಸಲು | 2016-17 | ಚೆಕ್ ಮೂಲಕ |
| 15.00 | ಜಿಲ್ಲಾ ಕಚೇರಿ ಕಾಂಪ್ಲೆಕ್ಸ್‌ನ ಸುತ್ತಲೂ ಕೃಷಿ ಅರಣ್ಯ ಅಭಿವೃದ್ಧಿ ಅಳವಡಿಸಲು | 2016-17 | ಚೆಕ್ ಮೂಲಕ |
| ಒಟ್ಟು **244.00** | | | |

1. ಕಂಪನಿಯು ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭದ ಮೊಬಲಗನ್ನು ಅಥವಾ ಅದರ ಭಾಗಾಂಶವನ್ನು ಈ ನಿಮಿತ್ತವಾಗಿ ಖರ್ಚು ವ್ಯಯಿಸಲು ವಿಫಲಗೊಂಡರೆ, ಕಂಪನಿಯು ತನ್ನ ಮಂಡಳಿ ವರದಿಯಲ್ಲಿ ಖರ್ಚನ್ನು ವ್ಯಯಿಸದಿರುವುದರ ಕಾರಣವನ್ನು ತಿಳಿಸತಕ್ಕದ್ದು: ಇದು ಅನ್ವಯಿಸುವುದಿಲ್ಲ., ಕಂಪನಿಯು ಸಿ.ಎಸ್.ಆರ್. ಚಟುವಟಿಕೆಯ ನಿಮಿತ್ತ ನಿಗದಿತ ಮೊಬಲಗನ್ನು ಖರ್ಚು ಮಾಡಿದೆ.

2. ಸಿ.ಎಸ್.ಆರ್. ಸಮಿತಿಯ ಜವಾಬ್ದಾರಿಯುತ ಹೇಳಿಕೆ:ಸಿಎಸ್.ಆರ್. ನೀತಿಯ ಅನುಷ್ಠಾನ ಹಾಗೂ ಪಾಲನೆಯು, ಸಿ.ಎಸ್.ಆರ್. ಉದ್ದೇಶಗಳು ಹಾಗೂ ಕಂಪನಿಯ ನೀತಿಯ ಪ್ರಕಾರ ಅನುಸರಣೆಯಾಗಿವೆ ಎಂದು ಸದಸ್ಯರು ಹೇಳಿಕೆ ನೀಡಿದ್ದಾರೆ.

| | |
|---|---|
| **ಜಾವೇದ್ ಅಖ್ತರ್** | **ಪಿ. ರವಿಕುಮಾರ್** |
| ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು, ಸಿ.ಎಸ್.ಆರ್. ಸಮಿತಿ |

**ಬಿ.ಸತೀಶ್ ರಾವ್**
ಚಾರ್ಟೆರ್ಡ್ ಅಕೌಂಟೆಂಟ್

ನಂ.12/62, 1ನೇ ಮಹಡಿ, ರಿಸರ್ವಯರ್ ಸ್ಟ್ರೀಟ್ ಕ್ರಾಸ್
ಬಸವನಗುಡಿ, ಬೆಂಗಳೂರು 560 004.
ಫೋ:080 26622101

# ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ**

**IND-AS ರನ್ವಯ ಆರ್ಥಿಕ ಲೆಕ್ಕಪತ್ರಗಳ ಮೇಲಿನ ವರದಿ**

ನಾವು ಈ ವರದಿಯ ಜತೆ ಲಗತ್ತಿಸಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕಂಪನಿ)31ನೇ ಮಾರ್ಚ್ 2017 ರ, ಲಾಭ ನಷ್ಟ ತಖ್ತೆ (ಇತರೆ ಸಮಗ್ರ ಆದಾಯವನ್ನೊಳಗೊಂಡಂತೆ) ಆ ದಿನಾಂಕದಂದು ಅಂತ್ಯಗೊಂಡ ವರ್ಷದ ನಗದು ಹರಿವಿನ ವಿವರಣಾಪಟ್ಟಿ ಮತ್ತು ಗಮನಾರ್ಹ ಲೆಕ್ಕಪದ್ಧತಿ ತತ್ವಗಳು, ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿಗಳನ್ನೊಳಗೊಂಡ **IND-AS** ಆರ್ಥಿಕ ವಿವರಣೆಗಳ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. (ಇಲ್ಲಿಂದ ಮುಂದೆ **IND-AS** ನ ಆರ್ಥಿಕ ನಿರೂಪಣಾ ಪಟ್ಟಿಗಳು ಎಂದು ಉಲ್ಲೇಖಿಸಲಾಗುತ್ತದೆ)

**IND-AS ನ ಆರ್ಥಿಕ ನಿರೂಪಣಾ ಪಟ್ಟಿಗಳಿಗೆ ಆಡಳಿತ ಮಂಡಳಿಯ ಜವಾಬ್ದಾರಿ:**

ಕಂಪನಿ ಅಧಿನಿಯಮ(ಅಧಿನಿಯಮ), 2013ರ ಪರಿಚ್ಛೇಧ 134(5)ರಲ್ಲಿ ಸೂಚಿಸಿರುವಂತೆ, ಹಾಗೂ ಕಂಪನಿ (ಲೆಕ್ಕಗಳು) ನಿಯಮಾವಳಿಗಳು, 2014ರ ನಿಯಮ 7ರೊಂದಿಗೆ ಅನ್ವಯಿಸಲ್ಪಟ್ಟ ಅಧಿನಿಯಮದ ಪರಿಚ್ಛೇಧ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕವಿಧಾನದಂತೆ, ಭಾರತದಲ್ಲಿ ಸರ್ವಸಾಮಾನ್ಯವಾಗಿ ಒಪ್ಪಿತವಾಗಿರುವ ಲೆಕ್ಕಪದ್ಧತಿಗಳ ಪ್ರಕಾರಮತ್ತು **IND-AS** ರನ್ವಯ ಕಂಪನಿಯ ಆರ್ಥಿಕ ಸ್ಥಿತಿ, ಆರ್ಥಿಕ ಸಾಧನೆ ಹಾಗೂ ಹಣ ಚಲಾವಣೆಗಳ ಬಗ್ಗೆ ನೈಜ ಹಾಗೂ ತೃಪ್ತಿಕರ ಮಾಹಿತಿಯುಳ್ಳ ಈ **IND-AS** ಆರ್ಥಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ವರ್ಗಕ್ಕೆ ಸಂಬಂಧಿಸಿದೆ. ಈ ಜವಾಬ್ದಾರಿಯು, ಕಂಪನಿಯ ಆಸ್ತಿಗಳನ್ನು ಸುರಕ್ಷಿತಗೊಳಿಸಲು ಅಧಿನಿಯಮದ ಅವಕಾಶಗಳ ಪ್ರಕಾರ ಅಗತ್ಯ ಪ್ರಮಾಣದಲ್ಲಿ ಲೆಕ್ಕಪತ್ರಗಳ ದಾಖಲಾತೀತ ನಿರ್ವಹಣೆ, ಮೋಸ, ವಂಚನಾತೀತ ಹಾಗೂ ಇತರ ನಿಯಮ ವಿರುದ್ಧವಾದವುಗಳನ್ನು ಪತ್ತೆ ಹಚ್ಚಿ ತಡೆಗಟ್ಟುವುದು, ಯುಕ್ತ ಲೆಕ್ಕಪದ್ಧತಿ ತತ್ವಗಳನ್ನು ಆಯ್ಕೆ ಮಾಡಿ ಆನ್ವಯಿಸುವುದು, ವಿವೇಚನಾತೀತ ಹಾಗೂ ದೂರದೃಷ್ಟಿಯುಳ್ಳ ಅಂದಾಜು ಹಾಗೂ ತೀರ್ಮಾನ ತೆಗೆದುಕೊಳ್ಳುವುದು, ನಿಖರತೆ ಹಾಗೂ ಪರಿಪೂರ್ಣತೆಯ ಲೆಕ್ಕಪತ್ರ ದಾಖಲೆಗಳನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳ್ಳುತ್ತಿದ್ದ ವಿನ್ಯಾಸ, ಅನುಷ್ಠಾನ ಹಾಗೂ ನೈಜ ಮತ್ತು ತೃಪ್ತಿಕರ ಮಾಹಿತಿಗಳನ್ನು ಬಿಂಬಿಸುವ ಆಂತರಿಕ ಆರ್ಥಿಕ ನಿಯಂತ್ರಣ, ನೈಜ ಹಾಗೂ ನ್ಯಾಯಸಮ್ಮತ ದೃಷ್ಟಿಯನ್ನು ಬೀರುವ **IND-AS** ಆರ್ಥಿಕ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಿ, ಅವು ಮೋಸ, ವಂಚನೆ ಅಥವಾ ಭೌತಿಕ ಪರಿಣಾಮ ಬೀರುವಿಕೆಯಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಂಡು, ಮಂಡಿಸುವುದು ಇಂತಹವುಗಳನ್ನು ಒಳಗೊಂಡಿದೆ.

**ಲೆಕ್ಕ ಪರಿಶೋಧಕರ ಜವಾಬ್ದಾರಿ**

ನಮ್ಮ ಪರಿಶೋಧನಾ ಕಾರ್ಯದ ಪ್ರಕಾರ **IND-AS** ಆರ್ಥಿಕ ಲೆಕ್ಕಪತ್ರಗಳ ಮೇಲೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನಮ್ಮ ಜವಾಬ್ದಾರಿಯಾಗಿರುತ್ತದೆ.

ಲೆಕ್ಕಪರಿಶೋಧನೆ ನಡೆಸುವಾಗ, ಅಧಿನಿಯಮದ ಅವಕಾಶಗಳು, ಲೆಕ್ಕಪದ್ಧತಿ ಹಾಗೂ ಲೆಕ್ಕಪರಿಶೋಧನೆ ಮಾನಕ, ಅಧಿನಿಯಮದ ಅವಕಾಶಗಳ ಅಡಿಯಲ್ಲಿ ಹಾಗೂ ಸೂಚಿತ ನಿಯಮಗಳ ಅಡಿಯಲ್ಲಿ ಪರಿಶೋಧಿತ ವರದಿಯಲ್ಲಿ ಒಳಪಡಿಸಬೇಕಾದ ಅಗತ್ಯ ವಿಷಯಾಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ.

ಅಧಿನಿಯಮದ ಪರಿಚ್ಛೇಧ 143(10)ರಲ್ಲಿ ನಿರ್ದಿಷ್ಟಪಡಿಸಿರುವ ಪರಿಶೋಧನಾ ಗುಣಮಾನಕಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಿದ್ದೇವೆ. ಈ ಗುಣಮಾನಕಗಳು, ನಾವು ನೈತಿಕ ಯೋಜನಾತೀತ ಅಗತ್ಯತೆಯನ್ನು

ಪಾಲಿಸಿ **IND-AS**ನ ಆರ್ಥಿಕ ನಿರೂಪಣಾಪಟ್ಟಿಗಳು ಭೌತಿಕ ಪರಿಣಾಮಗಳಿಂದ ಹೊರತಾಗಿರುವ ಬಗ್ಗೆ ವಿವೇಚನಾತೀತ ದೃಢನಂಬಿಕೆಯನ್ನು ಪಡೆದುಕೊಳ್ಳಲು ಯೋಜನಾತೀತವಾಗಿ ಲೆಕ್ಕಪರಿಶೋಧನೆ ನಡೆಸಬೇಕೆನ್ನುವುದನ್ನು ಅಗತ್ಯಪಡಿಸುತ್ತವೆ.

ಲೆಕ್ಕಪರಿಶೋಧನೆಯು, ಆರ್ಥಿಕ ನಿರೂಪಣಾಪಟ್ಟಿಯಲ್ಲಿನ ಫಲಿತಾಂಶ ಪರಿಮಾಣ ಹಾಗೂ ಅವುಗಳ ಬಹಿರಂಗಪಡಿಸುವಿಕೆಯ ಬಗ್ಗೆ ಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆದುಕೊಳ್ಳಲು ಕಾರ್ಯಸಾಧನೆಯ ವಿಧಿವಿಧಾನಗಳನ್ನು ಒಳಗೊಳ್ಳುತ್ತದೆ. ಕಾರ್ಯವಿಧಾನದ ಆಯ್ಕೆಯು, **IND-AS** ನ ಆರ್ಥಿಕ ನಿರೂಪಣಾ ಪಟ್ಟಿಯಲ್ಲಿನ ಮೋಸ, ವಂಚನೆ ಅಥವಾ ದೋಷಗಳಂತಹ ಭೌತಿಕ ಪರಿಣಾಮಗಳ ಅಪಾಯಗಳನ್ನು ಗೊತ್ತುಪಡಿಸುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ನಿರ್ಣಯವನ್ನು ಅವಲಂಬಿಸಿರುತ್ತದೆ. ಅಂತಹ ಅಪಾಯಕರ ಮಾಹಿತಿಗಳನ್ನು ಗೊತ್ತುಪಡಿಸಿಕೊಳ್ಳಲು, ಸಂದರ್ಭಕ್ಕನುಗುಣವಾಗಿ ಸೂಕ್ತವಾದ ಲೆಕ್ಕ ಪರಿಶೋಧನೆಯ ಕಾರ್ಯಪ್ರಕ್ರಿಯೆಯನ್ನು ರೂಪಿಸಲು ಲೆಕ್ಕಪರಿಶೋಧಕರು, ಕಂಪನಿಯ **IND-AS** ಆರ್ಥಿಕ ನಿರೂಪಣಾಪಟ್ಟಿಯಲ್ಲಿ ಸಿದ್ಧಪಡಿಸಿ ನ್ಯಾಯಬದ್ಧವಾಗಿ ಮಂಡಿಸುವುದಕ್ಕೆ ಸಂಬಂಧವಾದ ಆಂತರಿಕ ನಿಯಂತ್ರಣಗಳನ್ನು ಪರಿಗಣಿಸುತ್ತಾರೆ, ಲೆಕ್ಕಪರಿಶೋಧನೆಯು, ಅನುಸರಿಸಿರುವ ಲೆಕ್ಕಪದ್ಧತಿ ತತ್ವಗಳ ಯುಕ್ತತೆಯ ಮೌಲ್ಯೀಕರಣ ಹಾಗೂ ಆಡಳಿತ ಮಂಡಳಿಯು ಕೈಗೊಂಡಿರುವ ಲೆಕ್ಕೀಕರಣ ಅಂದಾಜುಗಳ ಸಮಂಜಸತೆಯನ್ನು ಹಾಗೂ ಆರ್ಥಿಕ ನಿರೂಪಣಾಪಟ್ಟಿಗಳ ಸಮಗ್ರ ಮಂಡಿಸಿರುವಿಕೆಯನ್ನೂ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಿರುವ ಲೆಕ್ಕಪರಿಶೋಧನೆಯ ಸಾಕ್ಷ್ಯಾಧಾರಗಳು ನಮ್ಮ ಔಚಿತ್ಯ ಲೆಕ್ಕಪರಿಶೋಧನೆಯ ಅಭಿಪ್ರಾಯವನ್ನು ಸಲ್ಲಿಸಲು ಅವಶ್ಯಕ ಪ್ರಮಾಣದಲ್ಲಿ ಹಾಗೂ ಯುಕ್ತವಾಗಿವೆ ಎಂದು ನಂಬಿದ್ದೇವೆ.

**ಯುಕ್ತಾತೀತ ಅಭಿಪ್ರಾಯದ ಆಧಾರಗಳು:**

(i) ಟಿಪ್ಪಣಿ ಸಂಖ್ಯೆ: 2.5 (ಸಿ), 3.1, 3.2 ಮತ್ತು 3.3; ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು, ಮಾಲಿಕತ್ವ, ದಾಖಲಾತಿಕರಣ, ಭೌತಿಕ ನಿಯಂತ್ರಣಗಳು, ಗುತ್ತಿಗೆದಾರರಿಗೆ ಪ್ರೋತ್ಸಾಹ ಧನಕ್ಕೆ ಹವಣಿಕೆ ಮಾಡದಿರುವುದು, ನಿರ್ಮಾಣ ವೆಚ್ಚ, ಕಾಮಗಾರಿ ವೆಚ್ಚ, ಅನುಪಾತವಾರು ಬಂಡವಾಳೀಕರಣ, ಸಿಬ್ಬಂದಿ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು, ಮತ್ತು ಇತರೆ ಸಾಮಾನ್ಯ ಮೇಲು ವೆಚ್ಚಗಳು, ಎರವಲು ವೆಚ್ಚಗಳು, ಹಾಗೂ ಮೇಲ್ವಿಚಾರಣ ಶುಲ್ಕ, ಸ್ವ–ಕಾಮಗಾರಿಗಳ ಮೇಲೆ ವಸೂಲಿ ಮಾಡಲಾದ ಮೇಲ್ವಿಚಾರಣ ಶುಲ್ಕಗಳ ಸೂಕ್ತ ಅನುಪಾತದಲ್ಲಿ ಬಂಡವಾಳೀಕರಣ ಕಾರ್ಯ ವಿಮುಕ್ತಿ ವೆಚ್ಚವನ್ನು ಪ್ರಸ್ತುತ ಮೌಲ್ಯದ ಆಧಾರದ ಅನ್ವಯ ಅಂದಾಜು ಮಾಡಿ 'ಪ್ರಾರಂಭಿಕ ಹಂತದಲ್ಲಿ ಬಂಡವಾಳೀಕರಣಗೊಳಿಸುವುದು ಹಾಗೂ ಸರಿಯಾದ ದಿನಾಂಕದ ಆಧಾರದ ಮೇಲೆ ಬಂಡವಾಳೀಕರಣ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ನಿಯಮಗಳಡಿಯಲ್ಲಿ ಹೊರಡಿಸಿರುವ IND AS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)ರನ್ವಯ ನಿಗದಿಪಡಿಸಿರುವುದನ್ನು ಪಾಲಿಸಲಾಗಿರುವುದಿಲ್ಲ. ಹಾಗಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಹಾಗೂ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳನ್ನು ಲೆಕ್ಕೀಕರಿಸುವ ವಿಧಾನ ಇದರಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಾಗಾರಿಗಳು, ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳು ಮತ್ತು ಸವಕಳಿಗಳ ಮೇಲೆ ಉಂಟಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(ii) ಟಿಪ್ಪಣಿ ಸಂಖ್ಯೆ: 1.10 (ಡಿ); ಗಮನಾರ್ಹಾ ಲೆಕ್ಕ ಪದ್ದತಿ ತತ್ವಗಳಲ್ಲಿ ಸೂಚಿಸಿದಂತೆ ಮೇಲ್ವೀಚಾರಣ ಶುಲ್ಕ, ಪರೀಕ್ಷ ಶುಲ್ಕ, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು (Earth mat design charges) ಮಂಡಪ್ ಕೀಪರ್ ಶುಲ್ಕಗಳನ್ನು (Mandap Keeper Charges)ಗಳ ಆದಾಯಗಳ ಗುರುತಿಸುವಿಕೆ ನಗದು ಆಧಾರದ ಮೇಲೆ ಲೆಕ್ಕೀಕರಿಸಲಾಗಿದ್ದು ಸದರಿ ಲೆಕ್ಕೀಕರಣವು ಕಂಪನಿಯ ಕಾಯ್ದೆ (ಭಾರತೀಯ ಲೆಕ್ಕ ವಿಧಾನ) ನಿಯಮ 2015ರ ಅಡಿಯಲ್ಲಿ ಬಿಡುಗಡೆ ಮಾಡಲಾದ IND AS 18 ರಲ್ಲಿ ನಿಗಧಿ ಪಡಿಸಿರುವುದನ್ನು ಪಾಲಿಸದ ಕಾರಣ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(iii) ಟಿಪ್ಪಣಿ ಸಂಖ್ಯೆ: 27 ಇತರೆ ಆದಾಯ (17) ವಸೂಲಾತಿ ಇದರಲ್ಲಿ ಸೇರಿರುವ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ಪಡೆಯಲಾಗುತ್ತಿರುವ ಕಾರ್ಯ ಮತ್ತು ನಿರ್ವಹಣೆ ವೆಚ್ಚಗಳ ಮೊತ್ತ ರೂ.748.55 ಲಕ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಇದರ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಕಂಡುಕೊಳ್ಳಲು ಸಾಧ್ಯವಾಗಿರುವುದಿಲ್ಲ ಈ ಕಾರಣದಿಂದಾಗಿ ಲೆಕ್ಕ ಪತ್ರಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(iv) ಟಿಪ್ಪಣಿ ಸಂಖ್ಯೆ: 3.1 ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಂಡ ಸ್ವ-ಕಾಮಗಾರಿಗಳ ಕುರಿತು ಕಂಪನಿಯು ಸಾಕಷ್ಟು ಮಾಹಿತಿಯನ್ನು ಒದಗಿಸದ ಕಾರಣ ಇದರ ಕುರಿತು ಸಂಪೂರ್ಣತೆಯನ್ನು ಮತ್ತು ಸರಿಯಾಗಿರುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಮತ್ತು ಸದರಿ ಪರಿಣಾಮವು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಹೊಣೆಗಾರಿಕೆಗಳ ಮೇಲೆ ಸ್ವೀಕೃತಿಗಳು ಮತ್ತು ಆದಾಯಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(v) ಟಿಪ್ಪಣಿ ಸಂಖ್ಯೆ: 1.6 ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳಿಗೆ ಸಂಬಂಧಿಸಿದಂತೆ ಕಂಪನಿಯು ಹಿಂದಿನ ಅವಧಿಗೆ ಸಂಬಂಧಿಸಿದ ತಪ್ಪುಗಳನ್ನು ಪೂರ್ವಾನ್ವಯವಾಗಿ ಪುನಸ್ಥಾಪನೆ ಮಾಡದೆ ಮತ್ತು ಸದರಿ ಮೊತ್ತಗಳಿಗೆ ತುಲನಾತ್ಮಕ ಮೊತ್ತವನ್ನು ನೀಡಲಾಗದ ಕಾರಣ ಆರಂಭಿಕ ಶಿಲ್ಕು ಆಸ್ತಿ ಮತ್ತು ಹೊಣೆಗಾರಿಕೆ ಹಾಗೂ ಈಕ್ವಿಟಿಗಳ ಆರಂಭಿಕ ಶಿಲ್ಕುಗಳನ್ನು ಪುನಸ್ಥಾಪನೆಗೊಳಿಸದಿರುವುದು IND AS 8 'ಲೆಕ್ಕ ಪತ್ರ ನೀತಿಗಳು, ಲೆಕ್ಕ ಪತ್ರ ಅಂದಾಜುಗಳಲ್ಲಿ ಬದಲಾವಣೆಗಳು ಮತ್ತು ದೋಷಗಳು" ಅನ್ವಯ ನಿಗಧಿ ಪಡಿಸಲಾಗಿರುವುದನ್ನು ಪಾಲಿಸಿರುವುದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಆರ್ಥಿಕ ನಿರೂಪಣ ಪಟ್ಟಿಗಳ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

(vi) ಟಿಪ್ಪಣಿ ಸಂಖ್ಯೆ: 3.2 ಕಾರ್ಯಾರಂಭ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಕಂಪನಿಯು ಸಾಕಷ್ಟು ಮಾರ್ಗದರ್ಶಿ ಸೂತ್ರಗಳನ್ನು ಹೊಂದಿರುವುದಿಲ್ಲ ಹಾಗೂ ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರ ನೀಡುವ ಬಗ್ಗೆ ಮಾರ್ಗ ಸೂಚಿಗಳಿರುವುದಿಲ್ಲ ಇದರಿಂದಾಗಿ ಆಸ್ತಿ ಬಂಡವಾಳೀಕರಣಗೊಳಿಸಲು ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಬಗ್ಗೆ, ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ)ಗಳು ಸವಕಳಿ ಹಾಗೂ ನಿರ್ಮಾಣದ ಅವಧಿಯಲ್ಲಿನ ಸಾಲಗಳ ವೆಚ್ಚಗಳನ್ನು ಹಂಚಿಕೆ ಮಾಡುವ ಬಗ್ಗೆ ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿಲ್ಲ.

(vii) ಟಿಪ್ಪಣಿ ಸಂಖ್ಯೆ: 2.5 ಸ್ಥಿರಾಸ್ತಿ ಪುಸ್ತಕದ ಸಮನ್ವಯ ಬಾಕಿ ಇರುವುದರಿಂದ ಬಿಡುಗಡೆ ಮಾಡಲ್ಪಟ್ಟ ಸ್ವತ್ತುಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡುವಾಗ ಸಾಗಿಸುವ ಮೌಲ್ಯವನ್ನು ಪರಿಗಣಿಸುವ ಕಳಚಿದ ಆಸ್ತಿಗಳ, ಆಸ್ತಿಗಳ ಮಾರಾಟ ಇವುಗಳಿಗೆ ಇಳಿಸಿದ ಆಸ್ತಿ ಮೌಲ್ಯ (ಮೂಲ ಬೆಲೆ- ಸಂಚಿತ ಸವಕಳಿ) ಗುರುತಿಸಲಾಗುವುದಿಲ್ಲ. ಪದ್ಧತಿಯು ಹರಿಗಾಮು (Adhoc) ಪದ್ಧತಿಯಾಗಿರುತ್ತದೆ. ಮಾಹಿತಿಯ ಅನುಪಸ್ಥಿತಿಯಲ್ಲಿ ಪಿಪಿಇ, ಮಾರಾಟಕ್ಕಿರುವ ಆಸ್ತಿ, ಸವಕಳಿ ಇವುಗಳ ಮೇಲೆ ಬೀರಿರುವ ಲಾಭ/ನಷ್ಟಗಳ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(viii) ಟಿಪ್ಪಣಿ ಸಂಖ್ಯೆ: 2.1; ಗುತ್ತಿಗೆ ಆಧಾರದ ಮೇಲಿರುವ ಭೂಮಿ ಮತ್ತು ಮಾಲೀಕತ್ವ ಆಧಾರಿತ ಭೂಮಿ ಎಂದು ವರ್ಗೀಕರಿಸಿ ಸಮನ್ವಯಗೊಳಿಸುವುದು ಬಾಕಿ ಇರುವ ಕಾರಣ ಆರ್ಥಿಕ ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(ix) ಟಿಪ್ಪಣಿ ಸಂಖ್ಯೆ:1.9; ಗಮನಾರ್ಹ ಲೆಕ್ಕ ಪದ್ಧತಿ ತತ್ವ ಮತ್ತು ಟಿಪ್ಪಣಿ ಸಂಖ್ಯೆ: 32.1; ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿ ಇ ಆರ್ ಸಿ) ಅಧಿಸೂಚನೆ ಸಂಖ್ಯೆ: ಐ-1/144/2013/CERC dated: 05.11.2015 ರನ್ವಯ ಫೈಬರ್ ಆಪ್ಟಿಕ್‌ಗಳನ್ನು ಪ್ರತ್ಯೇಕವಾಗಿ ಬಂಡವಾಳೀಕರಣಗೊಳಿಸಿ ಸವಕಳಿಯನ್ನು ನಿಗಧಿತ ಶೇಕಡ 6.33ರಷ್ಟು ಪರಿಗಣಿಸದೆ ಕೇವಲ ಶೇಕಡ 5.28 ರಷ್ಟು ಪರಿಗಣಿಸಿ ಸವಕಳಿಯನ್ನು ಲೆಕ್ಕಿಕರಿಸಲಾಗಿದೆ. ಇದ್ದರಿಂದಾಗಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲೆ ಆಗುವ ಪರಿಣಾಮಗಳನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(x) ಟಿಪ್ಪಣಿ ಸಂಖ್ಯೆ: 1.15; ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ತೂಕದ ವಿಧಾನದ (Weighted Average) ಆಧಾರದ ಮೇಲೆ ಕಂಪನಿಯು ಪರಿಗಣಿಸಿರುತ್ತದೆ ಆದರೆ ಸದರಿ ವಿಧಾನವು 2015 ರನ್ವಯ ಹೊರಡಿಸುವ ಪ್ರಕಾರ IND AS 23, (ಭಾರತೀಯ ಲೆಕ್ಕ ವಿಧಾನ) ಸಮಂಜಸವಾಗಿರುವುದಿಲ್ಲ. ಆದ ಕಾರಣ ಅದರಿಂದಾಗುವ ಪರಿಣಾಮವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮತ್ತು ಅವುಗಳ ಮೇಲಿನ ಸವಕಳಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xi) ಟಿಪ್ಪಣಿ ಸಂಖ್ಯೆ:1.9 (ಜಿ) ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳನ್ವಯ ಮತ್ತು ಟಿಪ್ಪಣಿ ಸಂಖ್ಯೆ:2 (ಎ) 1 (ಬಿ) ಗಳನ್ವಯ ಬಿಡುಗಡೆಗೊಳಿಸಿದ ಆಸ್ತಿಗಳನ್ನು ಪುನುರ್‌ಉಪಯೋಗಿಸಿದಲ್ಲಿ ಸವಕಳಿಯನ್ನು ಪರಿಗಣಿಸುವಾಗ ನೂತನವಾಗಿ ಬಂಡವಾಳೀಕರಿಸಿದ ಆಸ್ತಿಗಳಗಿರುವಂತೆ ಮೂಲ ಬಾಳಿಕೆ ಅವಧಿಯನ್ನೇ ಗಣನೇಗೆ ತೆಗೆದುಕೊಳ್ಳಲಾಗುತ್ತಿದೆ. ಸದರಿ ನಿಯಮವು **IND AS** 16ರ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ಸವಕಳಿಗಳ ಬಗ್ಗೆ ನಿಗಧಿಪಡಿಸಿದಂತೆ ಪಾಲಿಸಲಾಗಿರುವುದಿಲ್ಲ. INDAS 16 ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ), ರನ್ವಯ ಬಿಡಿಗಡೆಗೊಳಿಸಿದ ಆಸ್ತಿಯನ್ನು ಮತ್ತೊಮ್ಮೆ ಬಂಡವಾಳಕರಿಸಿದಲ್ಲಿ ಉಳಿದ ಬಾಕಿ ವರ್ಷಗಳನ್ನು ಪರಿಗಣಿಸಿ ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ಪರಿಗಣಿಸಬೇಕಾಗಿರುತ್ತದೆ. ಸದರಿ ಬದಲಾವಣೆಯಿಂದ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಗಳ ಮೇಲೆ ಉಂಟಾದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

**(xii)** ಟಿಪ್ಪಣಿ ಸಂಖ್ಯೆ: 1.17 ಗಮನಾರ್ಹ ಲೆಕ್ಕ ಪದ್ಧತಿ ತತ್ವ ಹಾಗೂ ಟಿಪ್ಪಣಿ ಸಂಖ್ಯೆ: 38.7 ಆಸ್ತಿಗಳ ದುರ್ಬಲತೆ ನಷ್ಟ (Impairmentof Assets) ಕುರಿತು, ಕಂಪನಿಯಲ್ಲಿ ಯಾವುದೇ ದಾಖಲಾತಿಗಳನ್ನು ಅಳವಡಿಸಿಕೊಳ್ಳದೇ ಇರುವುದರಿಂದ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ಲೆಕ್ಕ ಪರಿಶೋಧಕ ನೀತಿಗಳನ್ವಯ ಹೊರಡಿಸುವ IND AS 36ರ ರಲ್ಲಿರುವಂತೆ ಆಸ್ತಿಗಳ ದುರ್ಬಲ ನಷ್ಟ ಕುರಿತು ಗಮನಾರ್ಹ ಲೆಕ್ಕ ಪದ್ಧತಿ ತತ್ವಗಳನ್ವಯ ಹಾಗೂ ನಿಗಧಿ ಪಡಿಸಿದಂತೆ ಕಂಪನಿಯಲ್ಲಿ ಆಸ್ತಿಗಳ ದುರ್ಬಲತೆ ನಷ್ಟ ಪರೀಕ್ಷೆಗೆ ತಾಂತ್ರಿಕ ಮೌಲ್ಯಮಾಪನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸದೇ ಇರುವ ಕಾರಣ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗುವುದಿಲ್ಲ.

(xiii) ಟಿಪ್ಪಣಿ ಸಂಖ್ಯೆ:2.5 (ಡಿ)ರಲ್ಲಿ ಹೇಳಿರುವಂತೆ ಹೂಡಿಕೆ ಮಾಡಲಾಗಿರುವ ಆಸ್ತಿಗಳ ಮೌಲ್ಯ ಗಮನಾರ್ಹವಾಗಿರುವುದಿಲ್ಲ. ಈ ಬಗ್ಗೆ ಕಂಪನಿಯು ಸೂಕ್ತವಾದ ದಾಖಲಾತಿಗಳನ್ನು ಒದಗಿಸದ ಕಾರಣ ಸದರಿ ಆಸ್ತಿಗಳ ಮುಂದುವರೆಸಿಕೊಂಡು ಹೋಗುವ ಮೌಲ್ಯವು (Carrying cost) ಕಂಪನಿಯ (ಭಾರತೀಯ ಲೆಕ್ಕ ವಿಧಾನ) IND AS 40 "ಹೂಡಿಕೆ ಮಾಡಲಾಗಿರುವ ಆಸ್ತಿಗಳು" ನಿಯಮ 2015 ಹೊರಡಿಸಿರುವ ಅನ್ವಯ ಸದರಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು (ಪಿಪಿಇ) ಮತ್ತು ಸವಕಳಿಯ ಮೇಲಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xiv) ಟಿಪ್ಪಣಿ ಸಂಖ್ಯೆ: 23.5 ಅಂತರ ಘಟಕ ಲೆಕ್ಕ ಶೀರ್ಷಿಕೆ ಜಮ/ ಖರ್ಚುಗಳ ನಿವ್ವಳ ಶಿಲ್ಕು

- ಅಂತರ ಘಟಕ ಲೆಕ್ಕ ಶೀರ್ಷಿಕೆ ಸಾಮಗ್ರಿಗಳು ರೂ. 1582.13/– ಲಕ್ಷಗಳು

- ಅಂತರ ಘಟಕ ಲೆಕ್ಕ ಶೀರ್ಷಿಕೆ ಬಿಡುಗಡೆಗೊಳಿಸಲಾದ ಆಸ್ತಿ ಮತ್ತು ಸ್ವತ್ತು ರೂ. 2187.01/– ಲಕ್ಷಗಳಲ್ಲಿ.

- ಅಂತರ ಘಟಕ ಲೆಕ್ಕ ಶೀರ್ಷಿಕೆ ಸಿಬ್ಬಂದಿ ಇತರೆ ಪ್ರಸಕ್ತ ಹೊಣೆಗಾರಿಕೆಗಳ ಟಿಪ್ಪಣಿ ಸಂಖ್ಯೆ:13.1 ಸಿಬ್ಬಂದಿ– ಖರ್ಚು ಶಿಲ್ಕು ರೂ.72.97/–ಲಕ್ಷಗಳನ್ನು ಇತರೆ ಪ್ರಸಕ್ತ ಆಸ್ತಿಗಳನ್ನು ವಿಂಗಡಿಸಲಾಗಿರುತ್ತದೆ. ಸದರಿ ಶಿಲ್ಕುಗಳನ್ನು ಅಂತರ ಘಟಕ ತೀರುವಳಿ ಲೆಕ್ಕ ಸಮನ್ವಯಗೊಳಿಸಿರುವುದಿಲ್ಲ ಹಾಗೂ ಹಿಂದಿನ ವರ್ಷದ ವಹಿವಾಟುಗಳನ್ನು ಒಳಗೊಂಡಿರುತ್ತದೆ. ಈ ಕಾರಣದಿಂದಾಗಿ ಹಣಕಾಸು ನಿರೂಪಣ ಪಟ್ಟಿ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xv) ಟಿಪ್ಪಣಿ ಸಂಖ್ಯೆ:27.1 ಗುತ್ತಿಗೆದಾರರಿಂದ ವಿಳಂಬ ಮನ್ನಾ ಮಾಡುವ ಅರ್ಜಿಗಳ ಮಾಹಿತಿಯ ಬಗ್ಗೆ ಸೂಕ್ತವಾದ ದಾಖಲೆಗಳನ್ನು ಒದಗಿಸದ ಕಾರಣ ಗುತ್ತಿಗೆದಾರರಿಗೆ ವಿಧಿಸಿರುವ ದಂಡಗಳ ಕುರಿತು ದಂಡಗಳಿಗೆ ಸಂಬಂಧಿಸಿದಂತೆ ರೂ.5899.92/– ಲಕ್ಷಗಳಷ್ಟು ಮೊತ್ತಗಳನ್ನು ಆದಾಯ ಎಂದು ಪರಿಗಣಿಸುವುದರಿಂದಾಗುವ ಪರಿಣಾಮವನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿಲ್ಲ.

(xvi) ಟಿಪ್ಪಣಿ ಸಂಖ್ಯೆ: 3.1 ರಲ್ಲಿ ಠೇವಣಿ ವಂತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗ್ರಾಹಕರ ಠೇವಣಿಯನ್ನು ಲೆಕ್ಕೀಕರಿಸುವ ಕುರಿತು ಸದರಿ ಕಾಮಗಾರಿಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 47.305 ಠೇವಣಿಗಳಿಂದ

ನಿವ್ವಳಗೊಳಸಲಾಗಿರುತ್ತದೆ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಮತ್ತು ಇತರೆ ಪ್ರಸಕ್ತ ಹೊಣೆಗಾರಿಕೆಗಳನ್ನು ಇರುವುದಕ್ಕಿಂತ ಕಡಿಮೆ ಬಿಂಬಿಸಲಾಗಿದೆ. ಮುಂದುವರೆದು ಠೇವಣಿ ವಂತಿಗೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಕ್ತಾಯಗೊಂಡ ಕಾಮಗಾರಿಗಳ ವಿಷಯದಲ್ಲಿ ಹೆಚ್ಚುವರಿ ಮೊತ್ತವನ್ನು ವಸೂಲಾತಿ ಮಾಡಿದ್ದಲ್ಲಿ ಗ್ರಾಹಕರಿಗೆ ಹಿಂದಿರುಗಿಸುವ ಕುರಿತು ಹಾಗೂ ಕಡಿಮೆ ಠೇವಣಿ ಮೊತ್ತವನ್ನು ವಸೂಲಾತಿ ಮಾಡಿದ್ದಲ್ಲಿ ಗ್ರಾಹಕರಿಂದ ವ್ಯತ್ಯಾಸದ ಮೊತ್ತವನ್ನು ವಸೂಲಾತಿ ಮಾಡುವ ವಿಷಯದಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸದ ಕಾರಣ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xvii) ಟಿಪ್ಪಣಿ ಸಂಖ್ಯೆ: 19.1, 17 ಮತ್ತು 24, ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳ ವಾಸ್ತವಿಕ ಮೌಲ್ಯಮಾಪನ ವರದಿಗೆ ಸಂಬಂಧಪಟ್ಟಂತೆ, ಸದರಿ ಮೌಲ್ಯಮಾಪನವನ್ನು ಪರಿಗಣಿಸುವಾಗ ಅಳವಡಿಸಿಕೊಂಡಿರುವ ಮಾಹಿತಿಗಳು, ಊಹೆಗಳು ಮತ್ತು ಬಹಿರಂಗಪಡಿಸುವಿಕೆಗಳು ಉದ್ಯೋಗಿಗಳ ಸಂಖ್ಯೆ ಸೂಕ್ತವಾಗಿರುವುದಿಲ್ಲ, ಪ್ರತಿ ವರ್ಗದ ನೌಕರರಿಗೆ ಸಂಬಂಧಪಟ್ಟಂತೆ ರಜೆ ನಗಧಿಕರಣ ದರ, ಪ್ಲಾನ್ ಅಸ್ಸೆಟ್‌ಗಳನ್ನು ಪರಿಗಣಿಸದಿರುವುದು, ಪರಿಗಣಿಸಿರುವ ಸಂಬಳ, ವಾರ್ಷಿಕ ವೇತನ ಬಡ್ತಿ ಮತ್ತು ವಾರ್ಷಿಕ ಗಳಿಕೆ ನಗಧೀಕರಣ ದಿನಗಳನ್ನು. ಪರಿಗಣಿಸದೇ ಇರುವುದರಿಂದ. ಹಣಕಾಸಿನ ನಿರೂಪಣ ಪಟ್ಟಿಗಳಲ್ಲಿ ಅದರ ಪರಿಣಾಮದ ಪರಿಣಾಮವು ಖಚಿತವಾಗಿರುವುದಿಲ್ಲ. ಮುಂದುವರೆದು, 01.04.2015 ಮತ್ತು 31.03.2016ರ ಅವಧಿಗೆ ದೀರ್ಘಾವಧಿಯ ಉದ್ಯೋಗಿ ಪ್ರಯೋಜನೆಗಳು ಮತ್ತು ನಿರ್ಧಿಷ್ಟವಾದ ಲಾಭದಾಯಕ ಯೋಜನೆಗಳ ಸಂಬಂಧಿಸಿದಂತೆ ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015 ನಿಯಮ ಅಡಿಯಲ್ಲಿ "ಉದ್ಯೋಗಿ ಲಾಭಗಳು" ಅನ್ವಯ ವಾಸ್ತವಿಕ ಮೌಲ್ಯಮಾಪನವನ್ನು ಮಾಡಿಸಿರುವುದಿಲ್ಲ. ಇದರಿಂದಾಗುವ ಪರಿಣಾಮವನ್ನು ಭಾರತೀಯ ಲೆಕ್ಕ ವಿಧಾನಗಳು" ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015ರ ನಿಯಮಗಳನ್ವಯ ಹೊರಡಿಸಲಾದ ಹಿಂದಿನ IND AS 101 ರಪ್ರಕಾರ ವರ್ಷಗಳ ಹಣಕಾಸಿನ ನಿರೂಪಣ ಪಟ್ಟಿಗಳ ಮೇಲಿನ ಯಾವುದೇ ಪರಿಣಾಮವನ್ನು ನೀಡಿರುವುದಿಲ್ಲ. ಇದರಿಂದಾಗುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xviii) ಟಿಪ್ಪಣಿ ಸಂಖ್ಯೆ: 23.6; ರಾಜ್ಯ ವಿದ್ಯುತ್ ರವಾನೆ ಕೇಂದ್ರವು (ಎಸ್ ಎಲ್ ಡಿ ಸಿ) "ಯು ಐ"ಶುಲ್ಕಕ್ಕೆ ಸಂಬಂಧಿಸಿದಂತೆ ಯು ಐ ವೆಚ್ಚ ಶೀರ್ಷಿಕೆಯಲ್ಲಿ ಜಮೆ ಮೊತ್ತ ರೂ. 424.29 ಲಕ್ಷಗಳಷ್ಟು ಶಿಲ್ಕು ಇದ್ದು ಸದರಿ ಶಿಲ್ಕಿಗೆ ಸಂಭಂದಿಸಿದಂತೆ ಬ್ಯಾಂಕ್ ಖಾತೆಯಲ್ಲಿ ರೂ. 374.27/- ಲಕ್ಷಗಳು ಮಾತ್ರ ಇರುವುದಾಗಿ ಬಿಂಬಿಸಲಾಗುತ್ತಿದೆ. ಇವುಗಳ ಸಮನ್ವಯ ಕಾರ್ಯವು ಬಾಕಿ ಇರುವುದರಿಂದ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xix) ಕವಿಪ್ರನಿನಿಯು ವಿಸಕಂಗಳಿಂದ ವಿಳಂಬವಾಗಿ ಪಾವತಿಸಿದ ಮೊತ್ತಗಳ ಮೇಲೆ ಅಧಿಕಕರ/ಮೇಲುಕರ (Surcharge) ಶೇಕಡ 1.25 ರಷ್ಟು ವಿಧಿಸಲಾಗಿರುವುದಿಲ್ಲ. ಸದರಿ ಮೇಲುಕರ/ ಅಧಿಕಕರವನ್ನು ವಿಧಿಸುವುದು ವಿಸಕಂಗಳಿಗೆ ಮಾಡಿಕೊಂಡ ಪ್ರಸರಣ ಒಪ್ಪಂದದನ್ವಯ ಹಾಗೂ ಕ.ವಿ.ನಿ.ಆಯೋಗದ ದರ ಪಟ್ಟಿ ನಿಯಮಾವಳಿ 2006ರಲ್ಲಿ ಸೂಚಿಸಿರುವಂತೆ ಪಾಲಿಸಲಾಗಿರುವುದಿಲ್ಲ. ಹಾಗೂ ವಿಳಂಬವಾಗಿ ಪಾವತಿಸಿರುವ ಪ್ರಸರಣ ಶುಲ್ಕಗಳಿಗೆ ಸಂಬಂಧಪಟ್ಟಂತೆ ಅವಶ್ಯವಿರುವ ಮಾಹಿತಿಯನ್ನು ಒದಗಿಸಲಾಗದ ಕಾರಣ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xx) ಟಿಪ್ಪಣಿ ಸಂಖ್ಯೆ: 8.2 ವಿಸಕಂಗಳೊಂದಿಗೆ ಮಾಡಿಕೊಳ್ಳಲಾಗಿರುವ ಪ್ರಸರಣ ಒಪ್ಪಂದ ಹಾಗೂ ಕ.ವಿ.ನಿ.ಆಯೋಗ 2006ರ ನಿಯಮಾವಳಿಗಳಲ್ಲಿನ ಕಲಮುನಲ್ಲಿರುವಂತೆ (Clause) ರಿಯಾಯಿತಿಯ ಕುರಿತು ವಿವಾದವಿರುವುದರಿಂದ ವಿಸಕಂಗಳಿಂದ ಸಕಾಲಕ್ಕೆ ಸರಿಯಾಗಿ ಪಾವತಿಸಿರುವ ಪ್ರಸರಣ ಶುಲ್ಕಕ್ಕೆ ಕ್ಲೇಮ್ ಮಾಡಿರುವ ರಿಯಾಯಿತಿ ಮೊತ್ತ ರೂ. 4198.15 ಲಕ್ಷಗಳು, ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxi) ಟಿಪ್ಪಣಿ ಸಂಖ್ಯೆ:26.1 ಮತ್ತು 8.3 (ಎ) ವಿದ್ಯುತ್ ಸಾಗಣೆ ಶುಲ್ಕಕ್ಕೆ (Wheeling Charges) ಕುರಿತು ಕವಿಪ್ರನಿನಿಯು ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸದೆ ಇರುವುದರಿಂದ ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ 2013-14 ನೇ ಸಾಲಿಗೆ

ಅನುಮೋದಿಸಲ್ಪಟ್ಟಿರುವ ದರದ ಮೇರೆಗೆ ದಿನಾಂಕ 1.04.2014 ರಿಂದ 31.03.2016 ರ ವರೆಗಿನ ವಿದ್ಯುತ್ ಸಾಗಣೆ ಶುಲ್ಕ ರೂ.3,679.49/– ಲಕ್ಷಗಳು ಹಾಗೂ ಆರ್ಥಿಕ ವರ್ಷ 2016–17ರ ಅವಧಿಗೆ ರೂ.3,213.55/– ಲಕ್ಷಗಳಿಗೆ ತಾತ್ಕಾಲಿಕವಾಗಿ ಲೆಕ್ಕೀಕರಿಸಲಾಗಿದೆ. ಈ ಕಾರಣದಿಂದಾಗಿ ಆದಾಯ, ವ್ಯವಹಾರದ ಸ್ವೀಕೃತಿಗಳ ಮೇಲೆ ಬೀರುವ ಪರಿಣಾಮವನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxii) ವಿದ್ಯುತ್ ಸಾಗಣೆ ಶುಲ್ಕ ರೂ.14,529.08/– ಲಕ್ಷಗಳಷ್ಟು ಕವಿಪ್ರನಿನಿಗೆ ವ್ಯವಹಾರ ಸ್ವೀಕೃತಿಗಳಡಿಯಲ್ಲಿ ಬರಬೇಕಾಗಿರುತ್ತದೆ. ಇದರಲ್ಲಿ ಟಿಪ್ಪಣಿ ಸಂಖ್ಯೆ: 8.3 (ಬಿ) ರಲ್ಲಿ ಸೂಚಿಸಿದಂತೆ ತಮಿಳುನಾಡು ವಿದ್ಯುಚ್ಛಕ್ತಿ ಮಂಡಳಿಯಿಂದ ಕವಿಪ್ರನಿನಿಗೆ ರೂ.252.87/– (ಪೂಲ್ ಮತ್ತು ಹಂಚಿಕೆ ಆಧಾರದ ಮೇಲೆ ಲೆಕ್ಕಹಾಕಿದ) (Calculated on Pooling and Sharing basis) ಲಕ್ಷಗಳಷ್ಟು ದಿನಾಂಕ:31.03.2011 ರಿಂದ ಬರಬೇಕಾಗಿರುವುದು ಸೇರಿರುತ್ತದೆ ಸದರಿ ಮೊತ್ತವು 31.03.2011 ರಿಂದ ಬಾಕಿಯಿರುವ ಹಿನ್ನಲೆಯಲ್ಲಿ ಸದರಿ ಮೊತ್ತದಲ್ಲಿ ತೊಡೆದು ಹಾಕಬಹುದಾದ (write off) ಮೊತ್ತವು ಒಳಗೊಂಡಿದೆಯೆ ಎಂಬುದನ್ನು ಖಾತರಿ ಪಡಿಸಿಕೊಳ್ಳಲಾಗಿರುವುದಿಲ್ಲ.

(xxiii) ಟಿಪ್ಪಣಿ ಸಂಖ್ಯೆ 38.10 (ii) ಪ್ರಸರಣ ವ್ಯವಸ್ಥೆಯ ದಕ್ಷತೆ ಹಾಗೂ ಲಭ್ಯತೆ ಮತ್ತು ಪ್ರಸರಣ ನಷ್ಟದ ಇಳಿಕೆಗಾಗಿ ಆರ್ಥಿಕ ವರ್ಷ 2017–18ನೇ ಸಾಲಿನಲ್ಲಿ ರೂ.1954.79/– ಲಕ್ಷಗಳನ್ನು ವಿಸಕಂಗಳಿಂದ ಕವಿಪ್ರನಿನಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹ ಧನವನ್ನು ಲೆಕ್ಕೀಕರಣೆ ಮಾಡದೇ ಇರುವ ಕ್ರಮವುಲೆಕ್ಕ ವಿಧಾನ 2015ರನ್ವಯ ಹೊರಡಿಸಲಾದ ಪ್ರಕಾರ IND AS 18 "ಕಂದಾಯ" (Revenue) ಕಂಪನಿಯ ಇರವುದರಿಂದಾಗಿ ಹಣಕಾಸಿನ ಹೇಳಿಕೆಗಳ ಮೇಲಾಗುವ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxiv) ಟಿಪ್ಪಣಿ ಸಂಖ್ಯೆ:27.1 (iv) ಆದಾಯ ತೆರಿಗೆ ಕಾಯ್ದೆಯ ನಮೂನೆ 26 AS ರಲ್ಲಿ ಮೂಲ ಆದಾಯದ ಮೇಲೆ ತೆರಿಗೆ ಕಡಿತ ಮಾಡಿದ ಮೊತ್ತ (TDS) ರೂ.57.51/– ಲಕ್ಷಗಳನ್ನು ಕವಿಪ್ರನಿನಿಯು ಸಮನ್ವಯಗೊಳಿಸದೆ ಇರುವುದರಿಂದ ಸದರಿ ಮೊತ್ತವನ್ನು ಆದಾಯವೆಂದು ಪರಿಗಣಿಸಲಾಗಿದ್ದು ಇದರಿಂದಾಗಿ ಆದಾಯ ಗ್ರಾಹಕರಿಂದ ಮತ್ತು ವ್ಯವಹಾರದ ಸ್ವೀಕೃತಿಗಳಿಂದ ಬಂದ ಮುಂಗಡದ ಮೇಲಾಗುವ ಪರಿಣಾಮವನ್ನು ಖಚಿತ ಪಡಿಸಿಕೊಳ್ಳಲಾಗಿರುವುದಿಲ್ಲ.

(xxv) ಟಿಪ್ಪಣಿ ಸಂಖ್ಯೆ: 23.1ರಲ್ಲಿ ಮೈಕ್ರೋ, ಸ್ಮಾಲ್ ಅಂಡ್ ಮೀಡಿಯಮ್ ಎಂಟರ್ಪ್ರೈಸಸ್ ಡೆವಲಪ್ಮೆಂಟ್ ಆಕ್ಟ್, 2006 (MSME Act 2006) ರಡಿಯಲ್ಲಿ ಮಾರಾಟಗಾರರ ಮಾಹಿತಿಯನ್ನು ಬಹಿರಂಗ ಪಡಿಸುವ ಕುರಿತು ಕಂಪನಿಯು ಸೂಕ್ತ ದಾಖಲೆಗಳನ್ನು ಒದಗಿಸಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸು ನಿರೂಪಣ ಪಟ್ಟಿಯ ಮೇಲೆ ಬೀರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxvi) ಟಿಪ್ಪಣಿ ಸಂಖ್ಯೆ:21.1 ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ EN 67 PSR 2017 Dated:31.07.2017ರನ್ವಯ ವರ್ಗಾವಣೆಯಾಗಬೇಕಾದ ಕರ್ನಾಟಕ ಸರ್ಕಾರದಿಂದ ಕವಿಪ್ರನಿನಿಗೆ ಸ್ವೀಕೃತವಾಗಬೇಕಾಗಿರುವ RE ಸಹಾಯ ಧನ ರೂ.986.50/– ಕೋಟಿಗಳಷ್ಟು, ವಿದ್ಯುತ್ ಖರೀದಿ ಬಾಕಿ– ಕವಿನಿನಿ ರವರಿಗೆ ಪಾವತಿಸುವ ಮೊತ್ತ ರೂ.888.78/– ಕೋಟಿಗಳಷ್ಟು ಮತ್ತು ಅದರ ಮೇಲಿನ ಬಡ್ಡಿ ರೂ.467.52/– ಕೋಟಿಗಳು ಇದನ್ನು ಸಂಬಂಧಿಸಿದಂತೆ ಕವಿಪ್ರನಿನಿಯು 2006–07ರಿಂದ 2015–16ರ ವರೆಗಿನ ವಿದ್ಯುತ್ ಖರೀದಿ ಮೊತ್ತ 888.78/–ಕೋಟಿಗಳ ಮೇಲೆ ಪಾವತಿಸಬೇಕಾದ ಬಡ್ಡಿ ಮೊತ್ತ ರೂ.1136.05/– ಕೋಟಿಗಳಷ್ಟು ಲೆಕ್ಕೀಕರಿಸಿದೆ.

ಮೇಲೆ ಹೇಳಿರುವ ಸರ್ಕಾರದ ಆದೇಶದನ್ವಯ ಆರ್ಥಿಕ ವರ್ಷ 2016–17ರಲ್ಲಿ ರೂ.467.52/– ಕೋಟಿಗಳಷ್ಟು ಮೊತ್ತವನ್ನು ಆದಾಯವೆಂದು ಪರಿಗಣಿಸಲಾಗಿದೆ ಆದ್ಯಾಗ್ಯೂ ನಮ್ಮ ಅಭಿಪ್ರಾಯದ ಪ್ರಕಾರ ಹಿಂದಿನ ವರ್ಷಗಳಲ್ಲಿ ರೂ.1136.05/– ಕೋಟಿಗಳನ್ನು ಖರ್ಚು ಎಂದು ನಮೂದಿಸಿ ಲೆಕ್ಕೀಕರಿಸುವುದು ಕರ್ನಾಟಕ ಸರ್ಕಾರದ ಶಾಸನ ಬದ್ಧ ಆದೇಶ G.O No.EN 131 PSR 2003 Dated:10.05.2005 ಮತ್ತು ಕವಿನಿಆಯೋಗ ದರದ ಆದೇಶ ದಿನಾಂಕ 25.11.2009 ರನ್ವಯ ಸೂಕ್ತವಲ್ಲ.

ಮೇಲೆ ಹೇಳಿದ ಆದೇಶಗಳನ್ವಯ ಕವಿಪ್ರನಿನಿಯ ವಿದ್ಯುತ್ ಖರೀದಿ ಮತ್ತು ಮಾರಾಟ ಮಾಡುವ ಕಾರ್ಯವು ಕವಿಪ್ರನಿನಿಯಿಂದ ವಿಸಕಂಗಳಿಗೆ ವರ್ಗಾಯಿಸಲಾಗಿರುವುದರಿಂದ ವಿದ್ಯುತ್ ಖರೀದಿಗೆ

ಸಂಬಂಧಿಸಿದ ಎಲ್ಲಾ ಹೊಣೆಗಾರಿಕೆಗಳನ್ನು ವಿಸಕಂಗಳೇ ಬರಿಸಬೇಕಾಗಿರುತ್ತದೆ.ಈ ಕಾರಣದಿಂದಾಗಿ ನಮ್ಮ ಅಭಿಪ್ರಾಯದಂತೆ ವಿದ್ಯುತ್ ಖರೀದಿಗೆ ಸಂಬಂಧಿಸಿದ ಬಾಕಿಯಿರುವ ಹೊಣೆಗಾರಿಕೆ ಮೊತ್ತ ರೂ.668.53/- ಕೋಟಿಗಳು ಮತ್ತು ರಿವರ್ಸ್‌ಲ್ ಮಾಡಿರುವ ಮೊತ್ತ ರೂ.467.52/- ಕೋಟಿಗಳನ್ನು ಅಸಧಾರಣೆಯ ಆದಾಯ ಎಂದು ಪರಿಗಣಿಸಿರುವುದು ಪ್ರಾರಂಭಿಕ ಮೀಸಲನ್ನು ಕಡಿಮೆಯಾಗಿಯು ಪ್ರಾರಂಭಿಕ ವ್ಯವಹಾರ ಪಾವತಿಗಳ ಮೇಲೆ ರೂ.1136.05/- ಕೋಟಿಗಳು ಹೆಚ್ಚಾಗಿಯೂ ರೂ.467.52 ಕೋಟಿಗಳ ಹಿಂದಿನ ಅವಧಿಯ ಖರ್ಚುಗಳನ್ನು ತಪ್ಪಾಗಿ ತೋರಿಸಲಾಗಿದೆ.

(xxvii) ಉಗ್ರಾಣ ಹಾಗೂ ಬಿಡಿ ಭಾಗಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಆರ್ಥಿಕ ವರ್ಷ 2014-15ರಲ್ಲಿ ಕಂಪನಿಯು ಮೌಲ್ಯೀಕರಣ ನೀತಿಯನ್ನು ಮಾರ್ಪಾಡುಗೊಳಿಸಿದೆ. ಆರ್ಥಿಕ ವರ್ಷ 2013-14ರವರೆಗೆ ಉಗ್ರಾಣ ಹಾಗೂ ಬಿಡಿ ಭಾಗಗಳನ್ನು ನಿಗಧಿತ ದರದಲ್ಲಿ, ಅಥವಾ ನಿಗಧಿತ ದರಗಳು ಲಭ್ಯವಿಲ್ಲದಿದ್ದಲ್ಲಿ ಖರೀದಿ ದರದಂತೆ ಮೌಲ್ಯೀಕರಣ ಮಾಡಲಾಗುತ್ತಿತ್ತು ಆರ್ಥಿಕ ವರ್ಷ 2014-15ರಿಂದ ಉಗ್ರಾಣ ಹಾಗೂ ಬಿಡಿ ಭಾಗಗಳನ್ನು ಖರೀದಿ ದರ ಅಥವಾ ನಿವ್ವಳ ಸಿದ್ಧಿತ ಮೌಲ್ಯ ಇವೆರಡರಲ್ಲಿ ಕಡಿಮೆ ದರದ ಪ್ರಕಾರ ಮೌಲ್ಯೀಕರಣ ಮಾಡಲಾಗುತ್ತಿದೆ. ಆದಾಗಿಯೂ ದಿನಾಂಕ:31.03.2014ರಿಂದ ದಾಸ್ತಾನಿನಲ್ಲಿ ಮುಂದುವರೆದು 31.03.2017ರ ವರೆಗೆ ಉಪಯೋಗಿಸಿರದ ಉಗ್ರಾಣ ಹಾಗೂ ಬಿಡಿ ಭಾಗಗಳಿಗೆ ಸಂಬಂಧಿಸಿದಂತೆ ಲೆಕ್ಕ ಪದ್ಧತಿ ನೀತಿ ಅನ್ವಯಿಸುವಿಕೆಯ ಬದಲಾವಣೆಯಿಂದ ಉಂಟಾದ ಪರಿಣಾಮವನ್ನು ಗೊತ್ತುಪಡಿಸಿಲ್ಲ ಹಾಗೂ ಲೆಕ್ಕ ಪುಸ್ತಕಗಳಲ್ಲಿ ನಮೂದಿಸಿಲ್ಲ. ಸದರಿ ಪರಿಣಾಮಗಳಿಂದ ಹಣಕಾಸಿನ ಹೇಳಿಕೆಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ.

(xxviii) ಟಿಪ್ಪಣಿ ಸಂಖ್ಯೆ:7.4 ರಲ್ಲಿ ನಿಗಮವು ಬಂಡವಾಳ ಕಾಮಗಾರಿ ಸಾಮಾಗ್ರಿಗಳ ಬಿಡಿ ಭಾಗಗಳನ್ನು ಖರೀದಿಯ ಸಮಯದಲ್ಲಿಯೇ ಬಂಡವಾಳೀಕರಣ ಮಾಡದ ಒಂದು ನೀತಿಯನ್ನು ಅನುಸರಿಸುತ್ತಿದೆ.ಮಾಹಿತಿಯ ಅನುಪಸ್ಥಿತಿಯಲ್ಲಿ ಹಣಕಾಸಿನ ನಿರೂಪಣ ಪಟ್ಟಿಯ ಮೇಲೆ ಆದ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಲಿಲ್ಲ

(xxix) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಡೆಯಬೇಕಾದ ಮೊತ್ತ ರೂ.15382.47/- ಲಕ್ಷ (ಟಿಪ್ಪಣಿ ಸಂಖ್ಯೆ: 12) ಹಾಗೂ ಪಾವತಿಸಬೇಕಾದ ಮೊತ್ತ ರೂ.13684.39/- ಲಕ್ಷ (ಟಿಪ್ಪಣಿ ಸಂಖ್ಯೆ:23) ಟಿಪ್ಪಣಿ ಸಂಖ್ಯೆ: 38.12 (ಬಿ) ಬಗ್ಗೆ ಗಮನ ಸೆಳೆಯುತ್ತಾ ಪಡೆಯಬೇಕಾಗಿರುವ ಲೆಕ್ಕ ಶೀರ್ಷಿಕೆಯಲ್ಲಿ ರೂ.1698.07/- ಲಕ್ಷಗಳಷ್ಟು ಸಮನ್ವಯಗೊಳ್ಳದ ಬಾಕಿಯಿದೆ. ಸಮನ್ವಯಗೊಳಿಸುವಿಕೆ ಹಾಗೂ ಸ್ಥಿರೀಕರಣ ಕಾರ್ಯವು ಬಾಕಿಯಿದ್ದು ಸಮನ್ವಯಗೊಳಿಸುವಿಕೆ ಹಾಗೂ ಸ್ಥಿರೀಕರಣಕ್ಕೆ ಒಳಪಟ್ಟಂತೆ ಲೆಕ್ಕಗಳ ಮೇಲೆ ಬೀರಿರುವ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ.

(xxx) ಟಿಪ್ಪಣಿ ಸಂಖ್ಯೆ : ನಿಗಮದಲ್ಲಿ ಆರ್ಥಿಕ ವರ್ಷ 2014-15,2015-16 ಮತ್ತು ಹಿಂದಿನ ವರ್ಷಗಳಲ್ಲಿ ಮುಂದೂಡಲ್ಪಟ್ಟ ತೆರಿಗೆಯನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಆರ್ಥಿಕ ವರ್ಷ 2016-17ರಲ್ಲಿ ಕವಿಪ್ರನಿನಿಯು ತನ್ನ ಲೆಕ್ಕ ಪತ್ರಗಳನ್ನು IND ASಗೆ ಅಳವಡಿಸಿಕೊಂಡು ತಯಾರಿಸಲಾಗಿರುತ್ತದೆ. IND AS101 ಕಂಪನಿಯ (ಭಾರತೀಯ ಲೆಕ್ಕ ವಿಧಾನ) 2015ರ ನಿಯಮಗಳನ್ವಯ ಹೊರಡಿಸಿರವ ಭಾರತೀಯ ಲೆಕ್ಕ ವಿದಾನಗಳು ಮೊದಲ ಬಾರಿಗೆ ಅಳವಡಿಸಿಕೊಳ್ಳುವಿಕೆ ಹಿಂದಿನ ಆರ್ಥಿಕ ವರ್ಷದ ಹಣಕಾಸಿನ ನಿರೂಪಣ ಪಟ್ಟಿಯ ಮೇಲೆ ಯಾವುದೇ ಪರಿಣಾಮವನ್ನು ನೀಡಲಾಗಿಲ್ಲ. ಮುಂದೂಡಲ್ಪಟ್ಟ ತೆರಿಗೆಯ ಮೊತ್ತವನ್ನು ಪ್ರಸಕ್ತ ಹಣಕಾಸಿನ ವರ್ಷದಲ್ಲಿಯೇ ಲೆಕ್ಕೀಕರಿಸಲಾಗಿದ್ದು ಅದರ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲಾಗಿರುವುದಿಲ್ಲ.

(xxxi) ಟಿಪ್ಪಣಿ ಸಂಖ್ಯೆ:21ರಲ್ಲಿ ವಿದ್ಯುತ್ ಖರೀದಿಗಾಗಿ ವಿವಿಧ ದೇಣಿದಾರರು ಶೀರ್ಷಿಕೆಯಲ್ಲಿ ರೂ.4224.97/- ಲಕ್ಷಗಳನ್ನು (ಕೆಪಿಸಿಗೆ ಪಾವತಿಸಬೇಕಾದ ಬಡ್ಡಿ 66853.20 ಲಕ್ಷಗಳನ್ನು ಹೊರತುಪಡಿಸಿ) 9.06.2005ರ ವರೆಗಿನ ವಿದ್ಯುತ್ ಖರೀದಿಗೆ ಸಂಬಂಧಿಸಿದ ಪಾವತಿಯಾಗಬೇಕಾಗಿರುವ ಬಾಕಿಯೆಂದು ತೋರಿಸಲ್ಪಟ್ಟಿದ್ದು ಸದರಿ ಹೊಣೆಗಾರಿಕೆ ಅಥವಾ ಹೆಚ್ಚುವರಿ ಹೊಣೆಗಾರಿಕೆಗಳದ್ದಲ್ಲಿ ಅದರ ನಿಖರತೆಯನ್ನು ನಾವು ಗೊತ್ತುಪಡಿಸಿಕೊಳ್ಳಲಾಗಿಲ್ಲ.

(xxxii) ಕರ್ನಾಟಕ ಸರ್ಕಾರದಿಂದ ಹೊಂದಾಣಿಕೆಯ ಅಧಿಸೂಚನೆಯು ಬಾಕಿ ಇದ್ದು, ಟಿಪ್ಪಣಿ ಸಂಖ್ಯೆ:19.5ರಲ್ಲಿ

ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ರೂ.4238.43ಲಕ್ಷ ಶಿಲ್ಕನ್ನು ತೋರಿಸಿದ್ದು, ಇದು, ದಿನಾಂಕ 01.06.2002 ರಿಂದ ಅಂತಿಮ ಆರಂಭ ಶಿಲ್ಕನ್ನು ಅಧಿಸೂಚಿಸಿದ ನಂತರ ಮಾಡಿದ ಹೊಂದಾಣಿಕೆಯನ್ನು ಬಿಂಬಿಸುತ್ತದೆ. ದಿನಾಂಕ 14.06.2012ರ ಕರ್ನಾಟಕ ಸರ್ಕಾರದ ಪತ್ರದ ಪ್ರಕಾರ, ಮೇಲಿನ ಶಿಲ್ಕುಗಳನ್ನು ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಲೆಕ್ಕ ಸಮನ್ವಯಗೊಳಿಸಿಕೊಂಡು, ಅನುಮೋದನೆಗಾಗಿ ಪರಿಷ್ಕೃತ ಪ್ರಸ್ತಾಪವನ್ನು ಸಲ್ಲಿಸಬೇಕೆಂದು ಸರ್ಕಾರವು ಕ.ವಿ.ಪ್ರ.ನಿ.ನಿ.ಗೆ ನಿರ್ದೇಶನ ನೀಡಿದೆ. ದಿನಾಂಕ:31.03.2017ರಂದು ಇದ್ದಂತೆ, ಮೇಲಿನ ಲೆಕ್ಕಗಳ ಲೆಕ್ಕಸಮನ್ವಯ ಗೊಳಿಸುವಿಕೆಯು ಪ್ರಗತಿಯಲ್ಲಿದ್ದು, ನಿವ್ವಳ ಮೌಲ್ಯದ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗಲಿಲ್ಲ.

**ಅಂಗೀಕಾರ್ಹ ಅಭಿಪ್ರಾಯ**

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ,ಯುಕ್ತಾತೀತ ಅಭಿಪ್ರಾಯದ ಆಧಾರಗಳ ಅಡಿಯಲ್ಲಿ ವಿವರಿಸಿರುವ ಅಂಶಗಳ ಪರಿಣಾಮಗಳ ವಿನಃ, ಮೇಲೆ ತಿಳಿಸಿರುವ ಆರ್ಥಿಕ ನಿರೂಪಣಾಪಟ್ಟಿಗಳು ಕಂಪನಿ ಕಾಯ್ದೆಯು ಅಗತ್ಯಪಡಿಸುವ ಪ್ರಕಾರ ಮಾಹಿತಿಯನ್ನು ಒದಗಿಸಿವೆ ಮತ್ತು ಭಾರತ ದೇಶದಲ್ಲಿ ಸಾಮಾನ್ಯವಾಗಿ ಅಳವಡಿಸಿಕೊಂಡಿರುವ ಲೆಕ್ಕ ತತ್ವಗಳಿಗೆ ಅನುಗುಣವಾಗಿ ಕೆಳಕಂಡ ವಿಷಯಗಳ ಬಗ್ಗೆ, ಅಂತಹ ಅಗತ್ಯವಿರುವ ನೈಜ ಹಾಗೂ ತೃಪ್ತಿಕರ ಮಾಹಿತಿಯನ್ನು ನೀಡುತ್ತವೆ. ಮಾರ್ಚ್ 31, 2017ಕ್ಕೆ ಇದ್ದ ಕಂಪನಿ ವ್ಯವಹರಣೆಗಳ ಆಸ್ತಿ–ಹೊಣೆ ಪಟ್ಟಿಯ ವಿಷಯದಲ್ಲಿ, ಲಾಭ ಮತ್ತು ನಷ್ಟದ ವಿಷಯದಲ್ಲಿ, ಆ ದಿನಾಂಕದಂದು ಮುಕ್ತಾಯಗೊಂಡ ಕಂಪನಿಯ ಲಾಭದ ಬಗ್ಗೆ, ಹಣ ಚಲಾವಣೆ ವಿಷಯದಲ್ಲಿ, ಆ ದಿನಾಂಕದಂದು ಮುಕ್ತಾಯಗೊಂಡ ಕಂಪನಿಯ ಹಣ ಚಲಾವಣೆ ಬಗ್ಗೆ.

**ನಿರೂಪಣಾ ವಿಷಯದ ಸ್ಪಷ್ಟೀಕರಣ:**

ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ಪಡೆಯದೆ ಆರ್ಥಿಕ ನಿರೂಪಣಾಪಟ್ಟಿಯ ಕೆಳಕಂಡ ಟಿಪ್ಪಣಿಗಳತ್ತ ಗಮನ ಸೆಳೆಯಲಾಗಿದೆ.

ಎ) ಟಿಪ್ಪಣಿ 19.3: ಹಿಂದಿನ ವರ್ಷದಲ್ಲಿ ರೂ. 26243.84 ಲಕ್ಷ ಮೊಬಲಗಿಗೆ ಬಿಲ್ ಮಾಡಿ ಲೆಕ್ಕೀಕರಿಸಿರುವ ಪ್ರಸರಣ ಶುಲ್ಕದಲ್ಲಿನ ವ್ಯತ್ಯಾಸವನ್ನು ಇತರ ದೀರ್ಘಾವಧಿ ಹೊಣೆಗಾರಿಕೆಗಳ ಅಡಿಯಲ್ಲಿ ತೋರಿಸಿದ್ದು, ಈ ಬಗ್ಗೆ ಕ.ವಿ.ನಿ.ಆಯೋಗವು, ಭಾರತದ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದೆ.

ಬಿ) ಟಿಪ್ಪಣಿ 5 ಮತ್ತು 19.4: ಕಂಪನಿಯು ಟಿ.ಬಿ.ಪಿ.ಸಿ.ಎಲ್.ಗೆ ಪಾವತಿಸಿರುವ ರೂ.543.84 ಲಕ್ಷ ಮೊಬಲಗನ್ನು ಹೆಚ್ಚುವರಿ ನಿಗದಿತ ಶುಲ್ಕವನ್ನು ನಿಯಂತ್ರಿತ ಆಸ್ತಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲು ಮಾಡಬೇಕಾದ್ದು ಎಂದು ಲೆಕ್ಕೀಕರಿಸಿರುವ ಬಗ್ಗೆ.

ಸಿ) ಟಿಪ್ಪಣಿ 2.4 (ಎ): ಭೋಗ್ಯದ ಮೇಲೆ ಹಿಂದೆ ಪಡೆದಿದ್ದ, ಆದರೆ ಲೆಕ್ಕಪತ್ರಗಳಲ್ಲಿ ಅವಕಾಶ ಕಲ್ಪಿಸಿಲ್ಲದ ಆಸ್ತಿಗಳ ಹಕ್ಕುಪತ್ರಗಳ ವರ್ಗಾವಣೆ, ಭೋಗ್ಯದ ಒಪ್ಪಂದಾ ಅವಧಿಯನ್ನು ರದ್ದುಪಡಿಸಿ, ಆಸ್ತಿಗಳನ್ನು ಪುನರ್‌ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಗಳು ಹೊಂದಿರುವ ರೂ.59.60ಲಕ್ಷ ಮೌಲ್ಯದ ಆಸ್ತಿಗಳನ್ನೂ ಒಳಗೊಂಡಂತೆ, ಲೆಸ್ಸರ್ ಸಲ್ಲಿಸಿರುವ ಬೇಡಿಕೆ ಮೊಬಲಗು ರೂ.112.50 ಲಕ್ಷದ ಬಗ್ಗೆ ವ್ಯವಹರಣೆಯು ಪ್ರಗತಿಯಲ್ಲಿರುವ ಬಗ್ಗೆ.

ಡಿ) ಟಿಪ್ಪಣಿ 2.4 (ಬಿ)ಸ್ಥಾವರ ಮತ್ತು ಉಪಕರಣಗಳ ಅವಧಿಯ ಮುಕ್ತಾಯದ ನಂತರ ಕಂಪನಿಯು ಉಳಿಸಿಕೊಂಡಿರುವ ಆಸ್ತಿಗಳ ವೆಚ್ಚ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್ (ಈಗ ಕೊಟಾಕ್ ಮಹೀಂದ್ರಾ ಬ್ಯಾಂಕ್) ಯಿಂದ ಹಿಡುವಳಿ ಆಸ್ತಿಯ ವೆಚ್ಚವನ್ನು ಒಳಗೊಂಡಿರುವುದಿಲ್ಲ ಮತ್ತು ಆಸ್ತಿಗಳು ಅವುಗಳ ಉಳಿದ ಮೌಲ್ಯವನ್ನು ತಲುಪಿದವು ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿವೆ ಮತ್ತು ಅಂತಹ ಆಸ್ತಿಗಳ ನಿಖರವಾದ ಸ್ಥಳವು ಗುರುತಿಸಲ್ಪಡುವುದಿಲ್ಲ.

ಇ) ಟಿಪ್ಪಣಿ 23.3: ವಿವಿಧ ಹೊಣೆಗಾರಿಕೆ ಮೊತ್ತದಲ್ಲಿ, 30.11.2012ರ ನಂತರ ಸಂಗ್ರಹಿಸಿದ ನೆಟ್‌ವರ್ಕ್ ಆಗ್‌ಮೆಂಟೇಷನ್ ಶುಲ್ಕದ ಮೊತ್ತ ರೂ.2055.99ಲಕ್ಷಗಳು ಒಳಗೊಂಡಿದ್ದು ಸದರಿ ಮೊತ್ತವನ್ನು ಕವಿನಿ ಆಯೋಗ ರವರ ಆದೇಶ ಸಂಖ್ಯೆ: ಎನ್/64/11 ದಿನಾಂಕ: 30.11.2012ರ ಅನ್ವಯ ಪೂರಕ ಉತ್ಪಾದಕರಿಗೆ ಪಾವತಿಸಬೇಕಾಗಿರುತ್ತದೆ ಹಾಗೂ ಸದರಿ ನೆಟ್‌ವರ್ಕ್ ಆಗ್‌ಮೆಂಟೇಷನ್ ಶುಲ್ಕಗಳನ್ನು ಕವಿಪ್ರನಿನಿಯು

ಪೂರಕ ಉತ್ಪಾದಕರಿಂದ ವಸೂಲಾತಿ ಮಾಡಲು ಕಂಪನಿಗೆ ಅಧಿಕಾರವಿರುವುದಿಲ್ಲ.

ಎಫ್) ಟಿಪ್ಪಣಿ 38.12(ಎ): ಆರ್ಥಿಕ ಸಂಸ್ಥೆಗಳು ಹಾಗೂ ಬ್ಯಾಂಕುಗಳಿಂದ ಪಡೆದ ಸಾಲ, ಬ್ಯಾಂಕಿನಲ್ಲಿರುವ ಶಿಲ್ಕಿನ ಬಗ್ಗೆ ಮಾತ್ರ ಶಿಲ್ಕು ದೃಢೀಕರಣವನ್ನು ಪಡೆಯಲಾಗಿದೆ. ತತ್ಪರಿಣಾಮವಾಗಿ, ಲೆಕ್ಕಗಳಲ್ಲಿ ತೋರಿಸಿರುವ ಸ್ವೀಕೃತಿಗಳು/ವ್ಯವಹರಣೆ ಪಾವತಿಗಳು/ಸಾಲ ಹಾಗೂ ಮುಂಗಡಗಳು/ಇತರ ಹೊಣೆಗಾರಿಕೆ ಇತ್ಯಾದಿಗಳ ಶಿಲ್ಕುಗಳು ದೃಢೀಕರಣಕ್ಕೊಳಪಟ್ಟಿವೆ.

ಜಿ) ಟಿಪ್ಪಣಿ: 23.2: 2014-15 ನೇ ಸಾಲಿನ ನೌಕರರಿಗೆ ಅನುಗ್ರಹವನ್ನು ಪಾವತಿಸಿ ಕರ್ನಾಟಕ ಸರ್ಕಾರದಿಂದ ಘಟನೋತ್ತರ ಅನುಮೋದನೆಯ ಅನುಸಮರ್ಥನೆ/ಸ್ಥಿರೀಕರಣ ಪಡೆಯುವುದನ್ನು ಗಮನ ಸೆಳೆದಿದೆ.

**ಇತರೆ ವಿಷಯಗಳು:**

IND-ASನ ಆರ್ಥಿಕ ನಿರೂಪಣಾಪಟ್ಟಿಯಲ್ಲಿನ 31ನೇ ಮಾರ್ಚ್, 2016 ಕ್ಕೆ ಅಂತ್ಯಗೊಂಡಂತೆ ಕಂಪನಿಯ ಹೋಲಿಕೆ ಆರ್ಥಿಕ ನಿರೂಪಣಾಪಟ್ಟಿ ಮತ್ತು IND-ASರನ್ವಯ ಸಿದ್ಧಪಡಿಸಿದ 1ನೇ ಏಪ್ರಿಲ್, 2015 ರಂದು ಇದ್ದ ಆರ್ಥಿಕ ನಿರೂಪಣಾಪಟ್ಟಿಯಹಿಂದಿನ ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧಿಸಲ್ಪಟ್ಟಿದೆ. ಹೋಲಿಕೆ ಆರ್ಥಿಕ ನಿರೂಪಣಾಪಟ್ಟಿಯ ಮತ್ತು ಪ್ರಾರಂಭಿಕ ಆಯವ್ಯಯ ಪಟ್ಟಿಯು ಸದರಿ IND-ASಆರ್ಥಿಕ ಲೆಕ್ಕ ಪತ್ರಗಳಲ್ಲಿ ಒಳಗೊಂಡಿದ್ದು ಸದರಿ ಲೆಕ್ಕ ಪತ್ರಗಳು ಹಿಂದಿನ ಲೆಕ್ಕ ಪರಿಶೋಧನೆಗೆ ಒಳಪಟ್ಟಿದೆ. ಹೋಲಿಕೆ ಆರ್ಥಿಕ ನಿರೂಪಣಾಪಟ್ಟಿಯ ಮತ್ತು ಪ್ರಾರಂಭಿಕ ಆಯವ್ಯಯ ಪಟ್ಟಿಯ ಮಾರ್ಪಾಟಾದ ಅಭಿಪ್ರಾಯದ ವರದಿಯನ್ನುನೀಡಲಾಗಿದೆ.

**ಇತರೆ ಕಾನೂನು ಮತ್ತು ನಿಯಂತ್ರಕ ಅವಶ್ಯಕತೆಗಳ ಮೇಲೆ ವರದಿ:**

1. ಕಾಯ್ದೆಯ ಪ್ರಕರಣ 143(11)ರನ್ವಯ ಕೇಂದ್ರ ಸರ್ಕಾರದಿಂದ ಹೊರಡಿಸಲ್ಪಟ್ಟ ಕಂಪನಿ (ಲೆಕ್ಕ ಪರಿಶೋಧಕ ವರದಿ) ಆದೇಶ, 2016 ರ ಪ್ರಕಾರ, ಆದೇಶ ಕಂಡಿಕೆ 3 ಮತ್ತು 4 ರಲ್ಲಿ ನಿಗದಿ ಪಡಿಸಿರುವ ವಿಷಯಗಳ ಮೇಲೆ ನಾವು ಅನುಬಂಧ "ಎ" ರಲ್ಲಿ ವಿವರಣೆಯನ್ನು ನೀಡಿರುತ್ತೇವೆ.

2. ಕಾಯ್ದೆ ಪ್ರಕರಣ 143(3) ರ ಅಗತ್ಯ ಪಡಿಸುವಂತೆ ಹೀಗೆ ವರದಿ ಸಲ್ಲಿಸುತ್ತೇವೆ:

(ಅ) ವಿಷಯಗಳು/ಪರಿಣಾಮಗಳು/ಪರಿಮಿತಿ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ವಿಷಯಗಳ ಪರಿಣಾಮಗಳನ್ನು ಹೊರತುಪಡಿಸಿ ನಮ್ಮ ಅರಿವು ಮತ್ತು ನಂಬಿಕೆಗೆ ಅವಶ್ಯವಿರುವಂತೆ ಲೆಕ್ಕ ಪರಿಶೋಧನೆ ವರದಿ ಉದ್ದೇಶಕ್ಕೆ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಯನ್ನು ನಾವು ಕೋರಿರುತ್ತೇವೆ.

(ಆ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ನಾವು ಪುಸ್ತಕಗಳನ್ನು ತನಿಖೆ ಮಾಡಿರುವ ಪ್ರಕಾರ, ಕಂಪನಿಯು ಕಾನೂನಿಗೆ ಅವಶ್ಯವಾದ ಸೂಕ್ತ ಪ್ರಕಾರದ ಲೆಕ್ಕಪುಸ್ತಕಗಳನ್ನು ಹೊಂದಿದೆ.

(ಇ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ಪರಿಶೀಲಿಸಿದಂತೆ ಆರ್ಥಿಕ ವಿವರಪಟ್ಟಿಯು ಲೆಕ್ಕದ ವಹಿ ಜೊತೆ ತಾಳೆ ಹೊಂದುತ್ತದೆ.

(ಈ) ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಾಂಶಗಳ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಂತೆ, ಮೇಲೆ ತಿಳಿಸಿರುವ ಇಂಡ್-ಎಎಸ್ ಆರ್ಥಿಕ ವಿವರಣಾಪಟ್ಟಿ ಹೇಳಿಕೆಗಳು, ಅಧಿನಿಯಮದ ಪ್ರಕರಣ 133 ಮತ್ತು ಅದರಡಿ ಹೊರಡಿಸಲಾದ ನಿಯಮಾವಳಿಗಳೊಂದಿಗೆ ಓದಿಕೊಂಡಂತೆ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿರುತ್ತವೆ.

(ಉ) ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ದಿನಾಂಕ 5ನೇ ಜೂನ್, 2016 ರಂದು ಹೊರಡಿಸಿದ ಜಿಎಸ್‌ಆರ್-463(ಇ) ರ ಪ್ರಕಾರ, ಕಂಪನಿಯು ಸರ್ಕಾರಿ ಸಂಸ್ಥೆಯಾಗಿರುವುದರಿಂದ ನಿರ್ದೇಶಕರ ಅನರ್ಹತೆಯು ಕಂಪನಿಗಳ ಕಾಯ್ದೆ, 2013ರ ಪ್ರಕರಣ 164(2) ರಂತೆ ನಿರ್ದೇಶಕರ ಅನರ್ಹತೆಯು

ಅನ್ವಯಿಸುವುದಿಲ್ಲ.

(ಊ) ಲೆಕ್ಕಪತ್ರ ಹಾಗು ತತ್ಸಂಬಂಧ ದಾಖಲೆ ದಸ್ತಾವೇಜುಗಳ ನಿರ್ವಹಣೆಗೆ ಸಂಬಂಧಿಸಿದ ಅರ್ಹತಾದಾಯಕಗಳು, ಮೇಲಿನ ಅಂಗೀಕಾರ್ಹ ಅಭಿಪ್ರಾಯದ ಕಂಡಿಕೆಗಳಲ್ಲಿ ತಿಳಿಯಪಡಿಸಿರುವ ಪ್ರಕಾರ ಇವೆ.

(ಋ) ಕಂಪನಿಯ ಆರ್ಥಿಕ ನಿರೂಪಣಾ ವರದಿಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳಿಗೆ ಸಂಬಂಧಿಸಿದಂತೆ, "ಅನುಬಂಧ–ಬಿ"ನಲಿನ ನಮ್ಮ ಪ್ರತ್ಯೇಕ ವರದಿಯನ್ನು ಪರಾಮರ್ಶಿಸುವುದು.

(ಎ) ಕಂಪನಿ(ಲೆಕ್ಕಪರಿಶೋಧನೆ ಹಾಗೂ ಲೆಕ್ಕ ಪರಿಶೋಧಕರು)ನಿಯಮಗಳು 2014ರ ನಿಯಮ11ರ ಪ್ರಕಾರ, ಲೆಕ್ಕಪರಿಶೋಧಕರ ವರದಿಯಲ್ಲಿ ಒಳಪಡಿಸಬೇಕಾದ ಇತರ ವಿಷಯಾಂಶಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಂತೆ, ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ :

(1) ಅಂಗೀಕಾರ್ಹ ಅಭಿಪ್ರಾಯದ ಪ್ಯಾರಾಗಳಲ್ಲಿ ವಿವರಿಸಿರುವ ವಿಷಯಗಳ ವಿನಃ, ಕಂಪನಿಯು ಆರ್ಥಿಕ ನಿರೂಪಣಾಪಟ್ಟಿಯ ಟಿಪ್ಪಣಿ 38.9 ಮತ್ತು 38.10 ರಲ್ಲಿ ವಿವರಿಸಿರುವಂತೆ, ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಅದರ ಆರ್ಥಿಕ ಪರಿಸ್ಥಿತಿಯ ಮೇಲೆ ಅಂದಾಜು ಮಾಡಿರುವಂತೆ ಅದರ ಪರಿಣಾಮವನ್ನು ನಮೂದಿಸಿದೆ.

(2) ಕಂಪನಿಯು ಭವಿಷ್ಯದಲ್ಲಿ ಸಂಭವಿಸಬಹುದಾದ ಯಾವುದೇ ನಿಷ್ಪತ್ತಿ (foreseeable) ನಷ್ಟವನ್ನು ಉಂಟುಮಾಡಬಹುದಾದ ಯಾವುದೇ ದೀರ್ಘಾವಧಿ ಗುತ್ತಿಗೆಯನ್ನು ಹೊಂದಿರುವುದಿಲ್ಲ.

(3) ಕಂಪನಿಯು ಹೂಡಿಕೆದಾರರ ತಿಳಿವಳಿಕೆ ಹಾಗೂ ಸುರಕ್ಷತೆ ಸಂಬಂಧವಾದ ಯಾವುದೇ ನಿಧಿಗೆ ವರ್ಗಾಯಿಸುವ ಅಗತ್ಯತೆ ಇರುವುದಿಲ್ಲ.

(4) ಕಂಪನಿಯು ನಿರ್ದಿಷ್ಟ ಬ್ಯಾಂಕ್ ನೋಟುಗಳನ್ನು 8.11.2016 ರಿಂದ 30.12.2016 ರ ಅವಧಿಯಲ್ಲಿ ಜಮೆ ಮಾಡಿರುವುದನ್ನು ಹೊರತುಪಡಿಸಿ, ಸದರಿ ಅವಧಿಯಲ್ಲಿ ನಿರ್ದಿಷ್ಟ ಬ್ಯಾಂಕ್ ನೋಟುಗಳನ್ನು ಹೊಂದಿರುವ ಮತ್ತು ವ್ಯವಹರಿಸಿರುವ ಬಗ್ಗೆ ಕಂಪನಿಯು ಅದರ ಆರ್ಥಿಕ ನಿರೂಪಣಾಪಟ್ಟಿಯಲ್ಲಿ ಅವಶ್ಯವಾದ ಮಾಹಿತಿಯನ್ನು ಪ್ರಕಟಗೊಳಿಸಿರುವುದಿಲ್ಲ. ನಮಗೆ ಒದಗಿಸಿದ ಮಾಹಿತಿಯ ಕೊರತೆಯಿಂದಾಗಿ, ಈ ಅವಧಿಯಲ್ಲಿ ನಗದು ಹೊಂದಿರುವ ಬಗ್ಗೆ ಮತ್ತು ವ್ಯವಹರಿಸಿರುವ ಬಗ್ಗೆ ನಾವು ವ್ಯಾಖ್ಯಾನ ಮಾಡಲು ಸಾಧ್ಯವಾಗಿರುವುದಿಲ್ಲ.

(ಐ) ಕಂಪನಿಯ ಕಾಯ್ದೆಯ ಪ್ರಕರಣ 143(5) ರ ಪ್ರಕಾರ, ನಾವು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ಹೊರಡಿಸಿರುವ ನಿರ್ದೇಶನದ ಮೇಲೆ ತೆಗೆದುಕೊಂಡಿರುವ ಕ್ರಮವನ್ನು ಪರಿಶೀಲಿಸಿರುತ್ತೇವೆ ಮತ್ತು ಕಂಪನಿಯ ಲೆಕ್ಕ ಮತ್ತು ಆರ್ಥಿಕ ನಿರೂಪಣಾಪಟ್ಟಿಯ ಮೇಲೆ ಅದರ ಪರಿಣಾಮವನ್ನು ಅನುಬಂಧ–"ಸಿ" ಯಲ್ಲಿ ನೀಡಲಾಗಿದೆ.

**ಬಿ.ಪಿ. ರಾವ್ & ಕಂ. ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್,
ಸಂಸ್ಥೆ ನೋ.ಸಂ.: 003116S

**ಬಿ. ಸತೀಶ್ ರಾವ್,**
ಪಾಲುದಾರರು,
ಸದಸ್ಯತ್ವ ಸಂ.: 024559

ಸ್ಥಳ: ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2018

**ನಮ್ಮ ವರದಿಯ ಸಮ ಸಂಖ್ಯೆ ದಿನಾಂಕದ ಕಂಡಿಕೆ 1 ರಲ್ಲಿ "ಇತರೆ ಕಾನೂನು ಮತ್ತು ನಿಯಂತ್ರಿತ ಅಗತ್ಯತೆಗಳು" ರಲ್ಲಿ ಉಲ್ಲೇಖಿಸಲ್ಪಟ್ಟ ಅನುಬಂಧ A**

**(i) ನಿಶ್ಚಿತ ಆಸ್ತಿಗಳು:**

(ಅ) ಕೆಲವು ಆವರಣಗಳಿಗೆ ಸಂಬಂಧಿಸಿದಂತೆ, ಜಮೀನಿನ ಪೂರ್ಣ ವಿವರಗಳು ಲಭ್ಯವಿಲ್ಲದವುಗಳನ್ನು ಹೊರತುಪಡಿಸಿ, ಉಳಿದ ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳನ್ನು ಒಳಗೊಂಡಂತೆ, ಸಂಪೂರ್ಣ ಮಾಹಿತಿಗಳನ್ನೊಳಗೊಂಡ ದಾಖಲೆಗಳನ್ನು ಕಂಪನಿಯು ನಿರ್ವಹಿಸುತ್ತಿದೆ.ಮುಂದುವರೆದು ಕಂಪನಿಯು ಲೆಕ್ಕಗಳ ಪುಸ್ತಕಗಳಲ್ಲಿ ವರ್ಗೀಕರಣ ಮಾಡಲು ಭೂಮಿಯನ್ನು ಸ್ವತಂತ್ರ ಹಿಡುವಳಿ ಅಥವಾ ಗುತ್ತಿಗೆ ಹಿಡುವಳಿಗೆ ಸಂಬಂಧಿಸಿದಂತೆ ಪೂರ್ತಿ ಅಥವಾ ಸಾಕಷ್ಟು ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(ಆ) (1) ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ, ವಿದ್ಯುತ್ ಮಾರ್ಗಗಳಂತಹ ಆಸ್ತಿಗಳು ಅರಣ್ಯ ಪ್ರದೇಶ ಹಾಗೂ ರಾಜ್ಯಾದ್ಯಂತ ವಿಸ್ತೃತಗೊಂಡು, ನಿರಂತರವಾಗಿ ಕಾರ್ಯನಿರ್ವಹಣೆಗೆ ಒಳಗೊಳ್ಳುವುದರಿಂದ, ಭೌತಿಕವಾಗಿ ನಿಯತ ತಪಾಸಣೆಗೆ ಒಳಪಡಲಾಗದಿರುವುದರಿಂದ, ವಿದ್ಯುತ್ ಸರಬರಾಜು ಹಾಗೂ ಪ್ರಸರಣೆ ಸಂಬಂಧವಾಗಿ ಬಳಕೆಗೊಳಪಡಿಸಿರುವ ಅಂತಹ ಆಸ್ತಿ/ ಸ್ಥಾಪನಗಳು ಭೌತಿಕವಾಗಿ ಲಭ್ಯವಿವೆ.

(2) ಕಂಪನಿಯು, ಪ್ರತಿ ವರ್ಷ ಸನ್ನಾಹ ಹಾಗೂ ಪೀಠೋಪಕರಣಗಳ ಭೌತಿಕ ಪರಿಶೀಲನಾ ಕಾರ್ಯವ್ಯವಸ್ಥೆಯನ್ನು ಹೊಂದಿದೆ.

(3) ವಿಭಾಗಗಳಲ್ಲಿನ ಆಸ್ತಿ ದಾಖಲೆಗಳನ್ನು ನಿಗಮ ಕಾರ್ಯಾಲಯದಲ್ಲಿ ಹೊಂದಿರುವ ದಾಖಲೆಗಳೊಂದಿಗೆ ಸಮನ್ವಯಗೊಳಸಬೇಕಾಗಿದೆ.

(4) ನಮ್ಮ ಅಭಿಪ್ರಾಯದ ಪ್ರಕಾರ, ಸ್ಥಿರಾಸ್ತಿಗಳು, ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು (ಟರ್ನ್ ಕೀ ಆಧಾರದ ಮೇಲೆ ಖರೀದಿಸಿರುವ ಸಾಮಗ್ರಿಗಳನ್ನೂ ಒಳಗೊಂಡು), ಬಳಕೆಯಲ್ಲಿರದ ಆಸ್ತಿಗಳ ಬಗ್ಗೆ ಕಂಪನಿಯು ನಿಯತ ಭೌತಿಕ ತಪಾಸಣೆಯ ವ್ಯವಸ್ಥೆಯನ್ನು ಹೊಂದತಕ್ಕದ್ದು

(ಇ) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯ 446 ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಲೀಕತ್ವದ ಪತ್ರಗಳನ್ನು ಹೊಂದಿರುವುದಿಲ್ಲ. ಮಂದುವರೆದು, ಕಂಪನಿಯು ಕೆ.ಐ.ಎ.ಡಿ.ಬಿ. ಮಾರಾಟ ಹಾಗೂ ಗುತ್ತಿಗೆ ಕರಾರಿನ ಮೂಲಕ ಸ್ವಾಧೀನ ಪಡೆದುಕೊಂಡ ರೂ. 5379.70 ಲಕ್ಷಗಳ ಮೌಲ್ಯ 252.23 ಎಕರೆ ಭೂಮಿಗೆಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಆದೇಶ ಸಂ. ಸಿಐ 15 ಎಸ್‌ಪಿಕ್ಯೂ 2017 ದಿನಾಂಕ 09.03.2017ರನ್ವಯ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರಸ್ತುತ ಗುತ್ತಿಗೆ ಹಾಗೂ ಮಾರಾಟದ 99 ವರ್ಷದ ಅವಧಿಯನ್ನು ಕನಿಷ್ಠ ಎರಡು ವರ್ಷಗಳಿಗೆ ನಿಗದಿ ಮಾಡಿ ಬದಲಾವಣೆ ಮಾಡುವ ಪ್ರಕ್ರಿಯೆಯಲ್ಲಿದೆ.

**(ii) ಸರಕು ಸಾಮಾನುಗಳ ಪಟ್ಟಿ:**

(ಅ) ನಮಗೆ ಒದಗಿಸಿರುವ ಮಾಹಿತಿಯ ಪ್ರಕಾರ, ಕಂಪನಿಯು ಪ್ರತಿ ವರ್ಷ ಹಾಗೂ ಜವಾಬ್ದಾರಿಯನ್ನು ವಹಿಸುವ ಸಂದರ್ಭಗಳಲ್ಲಿ ಉಗ್ರಾಣ, ಬಿಡಿ ಭಾಗಗಳು, ಸನ್ನಾಹ ಹಾಗೂ ಸ್ಥಾವರಗಳ ಭೌತಿಕ ತಪಾಶೀಲನಾ ಕಾರ್ಯದ ವ್ಯವಸ್ಥೆಯನ್ನು,ಸಮಂಜಸವಾದ ಮಧ್ಯಂತರಗಳಲ್ಲಿ ಭೌತಿಕ ತಪಾಸಣೆ ನಡೆಸುತ್ತದೆ.

(ಆ) ನಮಗೆ ವಿವರಿಸಿರುವ ಪ್ರಕಾರ, ಲೆಕ್ಕಪುಸ್ತಕಗಳಿಗೆ ಹೋಲಿಸಿದರೆ, ಉಗ್ರಾಣದ ಭೌತಿಕ ಪರಿಶೀಲನೆಯಲ್ಲಿನ ವ್ಯತ್ಯಾಸಗಳಿಗೆ ಲೆಕ್ಕಪುಸ್ತಕಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

**(iii) ಸಾಲಗಳು ಮತ್ತು ಮುಂಗಡಗಳು:**

ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ,, ಕಂಪನಿ ಕಾಯಿದೆ 2013ರ ಪರಿಚ್ಛೇಧ (189)ರ ಅಡಿಯಲ್ಲಿ ಒಳಗೊಂಡಿರುವ ಕಂಪನಿಗಳು, ಸಂಸ್ಥೆಗಳು, ನಿಯಮಿತ ಹೊಣೆಗಾರಿಕೆ ಪಾಲುದಾರಿಕೆಗಳು ಅಥವಾ ಇನ್ನಿತರ ವ್ಯಕ್ತಿಗಳಿಗೆ ಕಂಪನಿಯು .ಯಾವುದೇ ಸಾಲ, ಸುರಕ್ಷಿತ ಅಥವಾ

ಸುರಕ್ಷಿತವಲ್ಲದ ಸಾಲವನ್ನು ನೀಡಿರುವುದಿಲ್ಲ. ತದನುಸಾರವಾಗಿ, ಆದೇಶದ ಕಲಮು 3(iii)ರನ್ವಯ,ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ನಾವು ವರದಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**(iv) ಸಾಲಗಳು, ಹೂಡಿಕೆ ಮತ್ತು ಖಾತರಿಗಳು:**

ನಮಗೆ ತಿಳಿಸಿರುವಂತೆ, ಕಂಪನಿ ಕಾಯ್ದೆ, 2013ರ ಪರಿಚ್ಛೇಧ 185 ಮತ್ತು 186ರಲ್ಲಿ ಒಳಪಟ್ಟಿರುವ ಪಕ್ಷಕಾರರಿಗೆ ಕಂಪನಿಯು ಯಾವುದೇ ಸಾಲ ನೀಡಿಲ್ಲ ಹಾಗೂ ಅಂತಹವರೊಂದಿಗೆ ಯಾವುದೇ ಹೂಡಿಕೆ ಮಾಡಿಲ್ಲ, ಖಾತರಿ ಅಥವಾ ಭದ್ರತೆಗಳನ್ನು ಒದಗಿಸಿಲ್ಲ. ಆದ್ದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(iv) ರ ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**(v) ಠೇವಣಿಗಳು:**

ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು 2013ರ ಕಂಪನಿಗಳ ಕಾಯ್ದೆ ಕಲಂ 73 ರಿಂದ 76 ಅಡಿಯಲ್ಲಿ ಒಳಪಡುವ ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನು ಅಂಗೀಕರಿಸಿರುವುದಿಲ್ಲ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(5)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**(vi) ವೆಚ್ಚ ದಾಖಲೆಗಳು:**

ವಿದ್ಯುಚ್ಛಕ್ತಿ/ವಿದ್ಯುತ್ ಪ್ರಸರಣದ ದರ ದಾಖಲೆಗಳ ಲೆಕ್ಕ ನಿರ್ವಹಣೆಯನ್ನು ಸರ್ಕಾರವು ಕಂಪನಿ(ದರ ದಾಖಲೆ ಮತ್ತು ಪರಿಶೋಧನೆ)ನಿಯಮಗಳು, 2014ರೊಂದಿಗೆ ಅನ್ವಯಿಸಲ್ಪಟ್ಟ ಕಂಪನಿ ಅಧಿನಿಯಮ, 2013ರ ಪರಿಚ್ಛೇಧ 148ರ ಉಪಪರಿಚ್ಛೇಧ(1)ರ ಅಡಿಯಲ್ಲಿ ನಿಗದಿಪಡಿಸಿದೆ. ಕಂಪನಿಯು ಪ್ರತ್ಯೇಕ ವೆಚ್ಚ ರಿಜಿಸ್ಟರುಗಳು ಹಾಗೂ ವೆಚ್ಚ ದರದಾಖಲೆಗಳ ರಿಜಿಸ್ಟರುಗಳನ್ನು ಹೊಂದಿಲ್ಲ, ಆರ್ಥಿಕ ಲೆಕ್ಕೀಕರಣ ಪುಸ್ತಕ ನಿರ್ವಹಣೆ ಹಾಗೂ ದಾಖಲೆಗಳನ್ನು ಆಧರಿಸಿ ವೆಚ್ಚ ದರ ದಾಖಲೆ ನಿರೂಪಣಾ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ನಮಗೆ ತಿಳಿಸಲಾಯಿತು

**(vii) ಶಾಸನಬದ್ಧ ಬಾಕಿಗಳು:**

ಎ) ನಾವು ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿರುವ ಪ್ರಕಾರ ಹಾಗೂ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೀಮಾ ಶುಲ್ಕ, ಅಬಕಾರಿ ಶುಲ್ಕ, ಮೌಲ್ಯ ವರ್ಧಿತ ತೆರಿಗೆ, ಸೇವಾ ಸುಂಕಗಳನ್ನೂ ಒಳಗೊಂಡಂತೆ, ಅವಿವಾದಿತ ಶಾಸನಬದ್ಧ ಬಾಕಿ ಹಾಗೂ ಇನ್ನಿತರ ಯಾವುದೇ ಅನ್ವಯಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ನಿಯತವಾಗಿ ಪಾವತಿಸಲಾಗುತ್ತಿದೆ. ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಆಯವ್ಯಯ ಪಟ್ಟಿ ದಿನಾಂಕದಿಂದ ಪಾವತಿಸಬೇಕಾಗಿ ಬಂದ ದಿನಾಂಕದಿಂದ 6 ತಿಂಗಳುಗಳಿಗೂ ಹೆಚ್ಚಿನ ಅವಧಿಗೆ ಯಾವುದೇ ಅವಿವಾದಿತ ಶಾಸನಬದ್ಧ ಬಾಕಿ ಇರುವುದಿಲ್ಲ ಈ ಕೆಳಕಂಡವುಗಳನ್ನು ಹೊರತುಪಡಿಸಿ.:

| ಕ್ರ.ಸಂ. | ಶಾಸನದ ಹೆಸರು | ಶಾಸನಬದ್ಧ ಬಾಕಿಯ ಸ್ವರೂಪ | ಮೊತ್ತ ರೂ.ಗಳಲ್ಲಿ |
|---|---|---|---|
| 1 | ಆದಾಯ ತೆರಿಗೆ ಅಧಿನಿಯಮ, 1961 | ಮೂಲದಲ್ಲಿ ಕಡಿತಗೊಳಿಸಲಾದ ತೆರಿಗೆ (ಟಿಡಿಎಸ್) | 22,05,112/- |
| 2 | ಸೇವಾ ತೆರಿಗೆ | ಸೇವಾ ತೆರಿಗೆ | 9,66,995/- |
| 3 | ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 | ಕರ್ನಾಟಕ ಮೌಲ್ಯವರ್ಧಿತ ತೆರಿಗೆ | 3,02,680/- |
| | ಒಟ್ಟು | | 34,74,787/- |

ಬಿ) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ, ಕೆಳಗೆ ತಿಳಿಸಿರುವ ವಿವಾದಿತ ಸೇವಾ ತೆರಿಗೆಯನ್ನು ಹೊರತುಪಡಿಸಿದಂತೆ, ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಹೂಡಿಕೆದಾರರ ಶಿಕ್ಷಣ

ಮತ್ತು ಸುರಕ್ಷೆ ನಿಧಿ, ಆದಾಯ ತೆರಿಗೆ, ಐಶ್ವರ್ಯ ತೆರಿಗೆ, ಮೌಲ್ಯ ವರ್ಧಿತ ತೆರಿಗೆ, ಸೀಮಾ ಶುಲ್ಕ, ಅಬಕಾರಿ ಶುಲ್ಕ, ಸುಂಕ ಹಾಗೂ ಇತರ ಶಾಸನಬದ್ಧ ಬಾಕಿಗಳು ವಿವಾದಿತಗೊಂಡ ಬಾಕಿಗಳೆಂದು ಪಾವತಿಯಾಗದೇ ಉಳಿದಿರುವುದಿಲ್ಲ ಈ ಕೆಳಗಿನವುಗಳನ್ನು ಹೊರತುಪಡಿಸಿ.

| ಶಾಸನದ ಹೆಸರು | ಬಾಕಿಯ ಸ್ವರೂಪ | ಮೊತ್ತ ರೂ.ಗಳಲ್ಲಿ | ಅವಧಿ | ವಿವಾದ ಬಾಕಿ ಇರುವ ವೇದಿಕೆ |
|---|---|---|---|---|
| ಸೇವಾ ತೆರಿಗೆ | ಸೇವಾ ತೆರಿಗೆ ಮತ್ತು ಬಡ್ಡಿ (VSAT ಶುಲ್ಕಗಳು) | 24,05,834/- | 2006-07 ರಿಂದ 2010-11 | CESTAT |
| | | 2,71,909/- | 2011-12 | |
| | ಸೇವಾ ತೆರಿಗೆ ಸೇವಾ ತೆರಿಗೆ (ಸ್ಥಿರಾಸ್ತಿಯ ಬಾಡಿಗೆ) | 1,02,03,581/- | 2007-08 ರಿಂದ 2009-10 | CESTAT |
| | | 16,28,588/- | ಏಪ್ರಿಲ್ 2010 ರಿಂದ ಮಾರ್ಚ್ 2011 | |
| | | 37,70,652/- | ಏಪ್ರಿಲ್ 2011 ರಿಂದ ಮಾರ್ಚ್ 2012 | |
| | | 12,30,928/- | 01.04.2012 ರಿಂದ 30.06.2012 | ಆಯುಕ್ತರು (ಅಪೀಲುಗಳು) |
| ಸೇವಾ ತೆರಿಗೆ | ಸೇವಾ ತೆರಿಗೆ ಬಡ್ಡಿ ಮತ್ತು ದಂಡ (ಸ್ಥಿರಾಸ್ತಿಯ ಬಾಡಿಗೆ) | 25,03,006/- | ಜುಲೈ 2012 ರಿಂದ ಸೆಪ್ಟೆಂಬರ್ 2013 | ಅಪರ ಆಯುಕ್ತರು, ಸಿಇ&ಎಸ್‌ಟಿ, ಎಲ್‌ಟಿಯು, ಬೆಂಗಳೂರು |
| ಸೇವಾ ತೆರಿಗೆ | ಸೇವಾ ತೆರಿಗೆ (ತಾಂತ್ರಿಕ ಪರಿವೀಕ್ಷಣೆಯ ಮತ್ತು ಪ್ರಮಾಣೀಕರಣ ಸಂಬಂಧ ಹೋಗಿ ಬರುವ (to and fro) ಶುಲ್ಕಗಳು) | 14,63,998/- | 17.05.2007 ರಿಂದ 2009-10 | CESTAT |
| | | 3,62,972/- | ಏಪ್ರಿಲ್ 2010 ರಿಂದ ಸೆಪ್ಟೆಂಬರ್ 2010 | |
| | | 1,94,104/- | ಏಪ್ರಿಲ್ 2011 ರಿಂದ ಸೆಪ್ಟೆಂಬರ್ 2012 | |
| | | 3,75,086/- | ಅಕ್ಟೋಬರ್ 2011 ರಿಂದ ಮಾರ್ಚ್ 2012 | |
| ಸೇವಾ ತೆರಿಗೆ | ಸೇವಾ ತೆರಿಗೆ, (ಠೇವಣಿಗಳು, ಧಾರಣ ಹಣ ಮತ್ತು ದಂಡ ಮರುಪಾವತಿಗೆ ಬಾಕಿ ಉಳಿದಿರುವ ನಿಧಾರವನ್ನು ಮೂರು ವರ್ಷಗಳ ನಂತರ ಆದಾಯಕ್ಕೆ ವರ್ಗಾಯಿಸಲಾಯಿತು) | 14,86,38,823/- | 01.07.2012ರಿಂದ 30.03.2015 | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ |
| ಆದಾಯ ತೆರಿಗೆ ಅಧಿನಿಯಮ 1961 | ಆದಾಯ ತೆರಿಗೆ (ಮರುಪಾವತಿಯಿಂದ ಬಾಕಿ ಹೊಂದಾಣಿಕೆ) | 86,26,972/- | ಮೌಲ್ಯಮಾಪನ ವರ್ಷ 2009–10 | ಸಹಾಯಕ ಆಯುಕ್ತರು, ಆದಾಯ ತೆರಿಗೆ |
| | | 73,03,387/- | ಮೌಲ್ಯಮಾಪನ ವರ್ಷ 2009–10(ಎಫ್‌ಬಿಟಿ) | |
| | | 33,013/- | ಮೌಲ್ಯಮಾಪನ ವರ್ಷ 2012–13 | |
| | | 80,73,980/- | ಮೌಲ್ಯಮಾಪನ ವರ್ಷ 2015–16 | |

(viii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಬ್ಯಾಂಕುಗಳು ಹಣಕಾಸು ಸಂಸ್ಥೆಗಳು ಮತ್ತು ಸರ್ಕಾರದ ಸಾಲಗಳು ಅಥವಾ ಎರವಲುಗಳನ್ನು ಮರುಪಾವತಿಸಲು ಕಂಪನಿ ವಿಫಲವಾಗಿಲ್ಲ. ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಯ ಪ್ರಕಾರ ಕಂಪನಿಯು ಸಾಲಪತ್ರಗಳ ವಿತರಣೆಯ ಮೂಲಕ ಯಾವುದೇ ಸಾಲಗಳನ್ನು ಸಂಗ್ರಹಿಸಿರುವುದಿಲ್ಲ.

(ix) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಗಳ ಪ್ರಕಾರ, ಕಂಪನಿಯು, ಪ್ರಾರಂಭಿಕವಾಗಿ ಸಾರ್ವಜನಿಕ ವಿತರಣೆ ಅಥವಾ ಮುಂದುವರಿದ ಸಾರ್ವಜನಿಕ ವಿತರಣೆ ಮೂಲಕ (ಸಾಲ ಆಖಿತ ಪತ್ರವನ್ನೂ ಒಳಗೊಂಡು) ಹಣವನ್ನು ಸಂಗ್ರಹಿಸಿಲ್ಲ.

ಬ್ಯಾಂಕುಗಳಿಂದ ನಿರ್ದಿಷ್ಟ ಅವಧಿ ಸಾಲಗಳಿಗೆ ಸಂಬಂಧಿಸಿದಂತೆ, ಸಾಲವನ್ನು ಪಡೆದುಕೊಂಡ ನಿರ್ದಿಷ್ಟ ಬಂಡವಾಳ ಕಾರ್ಯಗಳನ್ನು ಹೊರತುಪಡಿಸಿ ಇದನ್ನು ಅದೇ ರೀತಿ ಬಳಸಿಕೊಳ್ಳಲಾಗಿದೆ ಮತ್ತು ಲಭ್ಯವಿರುವ ಮಾಹಿತಿಯೊಂದಿಗೆ, ಅದನ್ನು ಖಚಿತಪಡಿಸಲಾಗುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

(x) ನಮ್ಮ ಅತ್ಯುತ್ತಮ ಜ್ಞಾನ ಮತ್ತು ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಪನಿಯ ಮೇಲೆ ಅಥವಾ ಕಂಪನಿಯಿಂದ ಯಾವುದೇ ವಂಚನೆಗಳು ಆಗಿರುವುದು ಕಂಡು ಬಂದಿರುವುದಿಲ್ಲ ಹಾಗೂ ಅಂತಹ ಯಾವುದೇ ಪ್ರಕರಣಗಳ ಕುರಿತು ಆಡಳಿತ ಮಂಡಳಿಯು ನಮಗೆ ವರದಿ ಮಾಡಿರುವುದಿಲ್ಲ.

ಕೆಲವು ಉದ್ಯೋಗಿಗಳ ವಿರುದ್ಧವಾಗಿ ವಿಚಾರಣೆ ಪ್ರಾರಂಭವಾಗಿರುವ ಗಂಭಿರ ಪ್ರಕರಣಗಳ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ,ವಿಚಾರಣೆ ಪೂರ್ಣಗೊಂಡ ನಂತರವಷ್ಟೇ ಪ್ರಕರಣದ ಸ್ವರೂಪವನ್ನು ಗೊತ್ತುಪಡಿಸಿಕೊಳ್ಳಬಹುದಾಗಿದೆ ಎಂದು ನಮಗೆ ತಿಳಿಸಲ್ಪಟ್ಟಿದೆ.

(xi) ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ, ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್‌ಆರ್ 463 (ಎಫ್) ದಿನಾಂಕ 5ನೇ ಜೂನ್, 2015ರನ್ವಯ ಆಡಳಿತಾತ್ಮಕ ಸಂಭಾವನೆಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013 ಕಲಂ 197ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(11)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xii) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(12)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiii) ಕಂಪನಿಯು ಸರ್ಕಾರಿ ಕಂಪನಿಯಾಗಿರುವುದರಿಂದ, ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯದ ಅಧಿಸೂಚನೆ ಸಂ. ಜಿಎಸ್‌ಆರ್ 403(ಇ) ದಿನಾಂಕ 5.6.2015ರನ್ವಯ ಸಂಬಂಧಿತ ಪಕ್ಷಕಾರರೊಂದಿಗಿನ ವ್ಯವಹಾರದಲ್ಲಿ ಕಂಪನಿಗಳ ಕಾಯ್ದೆ2013 ಕಲಂ 177 ಮತ್ತು 188ರನ್ವಯ ವಿನಾಯಿತಿ ಹೊಂದಿರುತ್ತದೆ. ಆದುದರಿಂದ, ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ, 2016 ಕಂಡಿಕೆ 3(13)ರಡಿಯಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಬಗ್ಗೆ ವರದಿಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

(xiv) ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ದಾಖಲೆಗಳ ಪರಿಶೀಲನೆಯನ್ವಯ, ಕಂಪನಿಯು ಯಾವುದೇ ಆದ್ಯತಾ ಹಂಚಿಕೆ ಅಥವಾ, ಷೇರುಗಳ ಖಾಸಗಿ ಹೂಡಿಕೆ, ಅಥವಾ ಭಾಗಶ: ಅಥವಾ ಪೂರ್ಣವಾಗಿ ಬದಲಾಯಿಸಬಹುದಾದ ಡಿಬೆಂಚರ್‌ಗಳ ಮೇಲೆ ಪ್ರಸಕ್ತ ವರ್ಷದಲ್ಲಿ ಹೂಡಿಕೆ ಮಾಡಿರುವುದಿಲ್ಲ. ಮುಂದುವರೆದು, ಕಂಪನಿಯು ದಿನಾಂಕ 31.03.2017 ರಂತೆ, 2014-15, 2015-16ರಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಹಂಚಿಕೆಯಾಗದ ಷೇರು ಅರ್ಜಿ ಹಣವನ್ನು ತತ್ಪರಿಣಾಮವಾಗಿ ಕಂಪನಿಗಳ ಕಾಯ್ದೆ 2013 ಕಲಂ 42ರ ಅನುಸರಣೆಯಾಗುವುದಿಲ್ಲ. ಆದಾಗ್ಯೂ, ಕಂಪನಿಗಳ ಕಾಯ್ದೆ 2013 ಕಲಂ 42ರನ್ವಯ ಠೇವಣಿ ಕಾನೂನುಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(xv) ನಮಗೆ ಒದಗಿಸಿರುವ ಮಾಹಿತಿ ಹಾಗೂ ವಿವರಣೆಯ ಪ್ರಕಾರ, ಕಂಪನಿಯು ಪ್ರಸಕ್ತ ವರ್ಷದಲ್ಲಿ, ಸಂಬಂಧಿತ ನಿರ್ದೇಶಕರುಗಳು ಅಥವಾ ವ್ಯಕ್ತಿಗಳೊಂದಿಗೆ ಯಾವುದೇ ನಗದು ರೂಪದಲ್ಲಿಲ್ಲದ ವ್ಯವಹರಣೆಗಳನ್ನು ಕೈಗೊಂಡಿಲ್ಲ ಅದ್ದರಿಂದ, ಕಂಪನಿಗಳ ಅಧಿನಿಯಮ, 2013ರ ಪ್ರಕರಣ 192ರ ನಿಬಂಧನೆಗಳನುಸಾರ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ 2016 ಷರತ್ತು 3(xv) ರಲ್ಲಿ ಉಲ್ಲೇಖಿಸಲಾದ ವಿಷಯದ ಮೇಲೆ ನಮ್ಮ ವರದಿಗಾರಿಕೆಯ ಮಾಡುವುದು ಉದ್ಭವಿಸುವುದಿಲ್ಲ.

(xvi) ಕಂಪನಿಯು ಬ್ಯಾಂಕೇತರ ಹಣಕಾಸು ಕಂಪನಿಯಾಗಿರುತ್ತದೆ ಆದುದರಿಂದ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಕಲಂ 45-IA ರಡಿಯಲ್ಲಿ ನೊಂದಾಯಿಸಬೇಕಾದ ಅವಶ್ಯಕತೆ ಇರುವುದಿಲ್ಲ.

**ಬಿ.ಪಿ. ರಾವ್ & ಕಂ. ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್,
ಸಂಸ್ಥೆ ನೋ.ಸಂ.: 003116S

ಸ್ಥಳ: ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2017

**ಬಿ. ಸತೀಶ್ ರಾವ್,**
ಪಾಲುದಾರರು,
ಸದಸ್ಯತ್ವ ಸಂ.: 024559

# ನಮ್ಮ ಸಮ ಸಂಖ್ಯೆ ದಿನಾಂಕದ ವರದಿ "ಇತರೆ ಕಾನೂನು ಮತ್ತು ನಿಯಂತ್ರಣ ಅವಶ್ಯಕತೆಗಳು" ರ ಕಂಡಿಕೆ 2(ಜಿ)ಗೆ ಉಲ್ಲೇಖಿಸಿದ ಅನುಬಂಧ "ಬಿ"

## ಕಂಪನಿಗಳ ಕಾಯ್ದೆ 2013 ("ಕಾಯ್ದೆ") ಕಲಂ 143ರ ಉಪ ಕಲಂ (3) ರ ಕಂಡಿಕೆ 4 ರಡಿಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ವರದಿ

31ನೇ ಮಾರ್ಚ್, 2017 ರಂತೆ ನಾವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕಂಪನಿ) ಆರ್ಥಿಕ ವರದಿ ಮೇಲೆ ಆಂತರಿಕೆ ನಿಯಂತ್ರಣಗಳನ್ನು, ಆ ದಿನಾಂಕದಂದು ಅಂತ್ಯಗೊಂಡ ವರ್ಷಕ್ಕೆ IND-AS ನ ಆರ್ಥಿಕ ನಿರೂಪಣಾಪಟ್ಟಿಗಳ ಜೊತೆ ಲೆಕ್ಕ ಪರಿಶೋಧನೆ ನಡೆಸಿರುತ್ತೇವೆ.

**ಆಂತರಿಕ ಆರ್ಥಿಕ ನಿಯಂತ್ರಣಗಳ ಮೇಲೆ ಆಡಳಿತವರ್ಗದ ಜವಾಬ್ದಾರಿ:**

ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ವರದಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅನುಷ್ಠಾನಗೊಳಿಸಿರುವ ಆರ್ಥಿಕ ನಿರೂಪಣಾ ವರದಿಯ ಅಂಶಗಳ ಮೇಲಿನ ಆಂತರಿಕ ನಿಯಂತ್ರಣವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅನುಷ್ಠಾನಗೊಳಿಸುವುದು ಕಂಪನಿಯ ವ್ಯವಸ್ಥಾಪಕ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪನಿ ಕಾಯ್ದೆ 2013ರಲ್ಲಿ ಅಗತ್ಯಪಡಿಸಿರುವಂತೆ, ಈ ಜವಾಬ್ದಾರಿಗಳು ವಿನ್ಯಾಸ, ಕಂಪನಿಯ ಕಾರ್ಯನೀತಿಯನ್ನು ಪಾಲಿಸುವುದನ್ನೂ ಒಳಗೊಂಡಂತೆ ವ್ಯವಹರಣೆಯನ್ನು ಅನುಕ್ರಮವಾಗಿ ಮತ್ತು ದಕ್ಷರೀತಿಯಿಂದ ನಡೆಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಯಾಚರಣೆಗೊಳಿಸುತ್ತಿದ್ದ ಆಂತರಿಕ ಆರ್ಥಿಕ ನಿಯಂತ್ರಣವನ್ನು ಸಾಕಷ್ಟು ಪ್ರಮಾಣದಲ್ಲಿ ಅನುಷ್ಠಾನ ಹಾಗೂ ನಿರ್ವಹಣೆ, ಆಸ್ತಿಗಳನ್ನು ಸುರಕ್ಷಿತಗೊಳಿಸುವುದು, ಮೋಸ,ವಂಚನೆ ಹಾಗೂ ಲೋಪಗಳನ್ನು ಪತ್ತೆ ಮಾಡಿ ತಡೆಗಟ್ಟುವುದು, ಲೆಕ್ಕೀಕರಣ ದಾಖಲೆಗಳ ನಿಖರತೆ ಹಾಗೂ ಪರಿಪೂರ್ಣತೆ, ನಂಬಿಕೆಯುಕ್ತ ಆರ್ಥಿಕ ಮಾಹಿತಿಗಳನ್ನು ಸಕಾಲದಲ್ಲಿ ಸಿದ್ಧಪಡಿಸುವುದು ಇವುಗಳನ್ನು ಒಳಗೊಂಡಿದೆ.

**ಲೆಕ್ಕಪರಿಶೋಧಕರ ಜವಾಬ್ದಾರಿ:**

ನಮ್ಮ ಪರಿಶೋಧನೆಯನ್ನು ಆಧರಿಸಿದಂತೆ, ಆರ್ಥಿಕ ವರದಿಗಳ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐ.ಸಿ.ಐ.ಎ) ಹೊರಡಿಸಿರುವ ಮಾರ್ಗದರ್ಶಕ ಟಿಪ್ಪಣಿ ಹಾಗೂ ಗುಣಮಾನಕಗಳ ಪ್ರಕಾರ ನಾವು ನಮ್ಮ ಪರಿಶೋಧನೆಯನ್ನು ನಡೆಸಿದ್ದು, ಪರಿಶೋಧನೆಯು ಕಂಪನಿ ಕಾಯ್ದೆ, 2013ರ ಪ್ರಕರಣ 143(10)ರ ಅಡಿಯಲ್ಲಿ ನಿಗದಿಪಡಿಸಿರುವಂತೆ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆಗೆ ಅನ್ವಯಿಸುವ ಹಾಗೂ ಐ.ಸಿ.ಐ.ಎ.ಹೊರಡಿಸಿರುವ ಮಟ್ಟಿಗೆ ಇದೆ ಎಂದು ಭಾವಿಸಲಾಗಿದೆ. ಈ ಗುಣಮಾನಕಗಳು ಹಾಗೂ ಮಾರ್ಗದರ್ಶಕ ಟಿಪ್ಪಣಿಗಳು ನಾವು ನೈತಿಕ ಯೋಜನಾತೀತ ಅಗತ್ಯತೆ ಹಾಗೂ ಯೋಜನೆಗಳನ್ನು ಪಾಲಿಸಿ, ಆರ್ಥಿಕ ವರದಿಗಳ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣ ಸಾಕಷ್ಟು ಪ್ರಮಾಣದಲ್ಲಿ ಇತ್ತೇ ಹಾಗೂ ನಿರ್ವಹಿತಗೊಂಡಿತ್ತೇ ಹಾಗೂ ಅಂತಹ ನಿಯಂತ್ರಣಗಳು ಎಲ್ಲ ಭೌತಿಕ ಅಂಶಗಳ ವಿಷಯದಲ್ಲಿ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಂಡಿತ್ತೇ ಎಂಬುದರ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಪಡೆದುಕೊಳ್ಳಲು ಪರಿಶೋಧನೆಯನ್ನು ನಡೆಸಬೇಕು.

ನಮ್ಮ ಪರಿಶೋಧನೆಯು, ಆರ್ಥಿಕ ವರದಿ ಸಲ್ಲಿಕೆ ಹಾಗೂ ಅವುಗಳ ಕಾರ್ಯಾಚರಣೆ ಪರಿಣಾಮದ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದ ಪ್ರಮಾಣಬದ್ಧತೆಯ ಬಗ್ಗೆ ಪರಿಶೋಧಿತ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವ ಕಾರ್ಯಪ್ರಕ್ರಿಯೆಯನ್ನು ಒಳಗೊಂಡಿದೆ. ಆರ್ಥಿಕ ವರದಿ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಸಂಬಂಧದ ನಮ್ಮ ಪರಿಶೋಧನೆಯು, IND-AS ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ಭೌತಿಕ ಕೊರತೆಯ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದು, ಹೀಗೆ ಗೊತ್ತುಪಡಿಸಿಕೊಂಡ ಅಪಾಯವನ್ನು ಆಧರಿಸಿದ ಆಂತರಿಕ ಆರ್ಥಿಕ ನಿಯಂತ್ರಣದ ಕಾರ್ಯಾಚರಣೆ ಪರಿಣಾಮ, ವಿನ್ಯಾಸವನ್ನು ಪರೀಕ್ಷಿಸಿ ಮೌಲ್ಯೀಕರಿಸುವುದು, ಇವುಗಳನ್ನು ಒಳಗೊಂಡಿದೆ. ಆಯ್ಕೆ ಮಾಡಿಕೊಂಡಿರುವ ಕಾರ್ಯಪ್ರಕ್ರಿಯೆಯು, ಮೋಸ ಅಥವಾ ಲೋಪದಿಂದಲೇ ಆಗಿದ್ದರೂ, IND-AS ಆರ್ಥಿಕ ನಿರೂಪಣಾಪಟ್ಟಿಗಳ ಭೌತಿಕ ಲೋಪಯುಕ್ತ ನಿರೂಪಣೆಗಳ ಸಂಬಂಧವಾದ ಅಪಾಯವನ್ನು ಗೊತ್ತುಪಡಿಸಿಕೊಳ್ಳುವುದನ್ನೂ ಒಳಗೊಂಡಂತೆ, ಪರಿಶೋಧಕರ ನಿರ್ಣಯವನ್ನು ಅವಲಂಬಿಸಿದೆ.

ಆರ್ಥಿಕ ನಿರೂಪಣೆ ವರದಿಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣ ವ್ಯವಸ್ಥೆ ಸಂಬಂಧವಾಗಿ ನಮ್ಮ ಯುಕ್ತ ಪರಿಶೋಧಿತ ಅಭಿಪ್ರಾಯವನ್ನು ಒದಗಿಸಲು ನಾವು ಪಡೆದುಕೊಂಡಿರುವ ಪರಿಶೋಧಿತ ಸಾಕ್ಷ್ಯಾಧಾರಗಳು ಅಗತ್ಯ ಪ್ರಮಾಣದಲ್ಲಿವೆ ಹಾಗೂ ಸೂಕ್ತವಾಗಿವೆ ಎಂದು ನಂಬಿದ್ದೇವೆ.

**ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅರ್ಥ:**

ಒಂದು ಕಂಪನಿಯು ತನ್ನ ಆರ್ಥಿಕ ವರದಿಯ ಮೇಲೆ ಹೊಂದಿರುವ ಆಂತರಿಕ ಆರ್ಥಿಕ ನಿಯಂತ್ರಣವು ಒಂದು ಕಾರ್ಯಪ್ರಕ್ರಿಯೆಯಾಗಿದ್ದು, ಇದನ್ನು ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕೀಕರಣ ತತ್ವಗಳ ಪ್ರಕಾರ, ಆರ್ಥಿಕ ವರದಿ ಸಲ್ಲಿಕೆಯ ಭರವಸೆ ಹಾಗೂ ನಂಬಿಕೆ, ಬಾಹ್ಯ ಉದ್ದೇಶಗಳಿಗಾಗಿ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಯುಕ್ತ ಖಚಿತತೆಯನ್ನು ಲಭ್ಯವಾಗಿಸುವ ವಿನ್ಯಾಸವಾಗಿದೆ. ಒಂದು ಕಂಪನಿಯ ಆರ್ಥಿಕ ವರದಿ ಸಲ್ಲಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು (1) ಕಂಪನಿಯ ಆಸ್ತಿಗಳ ವ್ಯವಹರಣೆ ಹಾಗೂ ವಿಲೇವಾರಿ ಸಂಬಂಧವಾಗಿ ವಿವರವಾದ, ನಿಖರವಾದ ಹಾಗೂ ನ್ಯಾಯಸಮ್ಮತ ದಾಖಲೆಗಳನ್ನು ಬಿಂಬಿಸುವುದಕ್ಕೆ ಸಂಬಂಧಿಸಿದ, (2) ಸರ್ವಸಾಮಾನ್ಯವಾಗಿ ಒಪ್ಪಿಕೊಂಡಿರುವ ಲೆಕ್ಕತತ್ವಗಳ ಪ್ರಕಾರ ಆರ್ಥಿಕ ನಿರೂಪಣಾ ಪಟ್ಟಿಗಳನ್ನು ಸಿದ್ಧಪಡಿಸಲು ಅಗತ್ಯವಾದ ವ್ಯವಹರಣೆಗಳನ್ನು ದಾಖಲಿಸಲು ಹಾಗೂ ಕಂಪನಿಯ ವ್ಯವಸ್ಥಾಪಕ ಮಂಡಳಿ ಮತ್ತು ನಿರ್ದೇಶಕರುಗಳ ಅಧಿಕೃತ ಒಪ್ಪಿಗೆಯೊಂದಿಗೆ ಕಂಪನಿಯ ಸ್ವೀಕೃತಿ ಮತ್ತು ವೆಚ್ಚಗಳನ್ನು ಕೈಗೊಳ್ಳುತ್ತಿರುವ ಬಗ್ಗೆ ಯುಕ್ತಾತೀತ ಖಚಿತತೆಯನ್ನು ಒದಗಿಸಲು, (3) ಕಂಪನಿಯ IND-AS ಆರ್ಥಿಕ ನಿರೂಪಣಾಪಟ್ಟಿಗಳ ಮೇಲೆ ಪರಿಣಾಮ ಬೀರಬಹುದಾದ ಆಸ್ತಿಗಳ ಅನಧಿಕೃತ ವಶಪಡಿಸಿಕೊಳ್ಳುವಿಕೆ, ಬಳಕೆ ಅಥವಾ ವಿಲೇವಾರಿಗಳನ್ನು ಸಕಾಲದಲ್ಲಿ ಪತ್ತೆ ಮಾಡುವುದು ಅಥವಾ ತಪ್ಪಿಸಲು ಯುಕ್ತಾತೀತ ಖಚಿತತೆಯನ್ನು ಒದಗಿಸಲು ಅಗತ್ಯವಾದ ಕಾರ್ಯನೀತಿ ಹಾಗೂ ಕಾರ್ಯಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

**ಆರ್ಥಿಕ ವರದಿ ಸಲ್ಲಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳು:**

ನಿಯಂತ್ರಣಗಳ ಮೇಲೆ ಅಸೂಕ್ತವಾದ ನಿರ್ವಹಣಾ ಅಧಿಕಾರ, ಒಳಸಂಚನ್ನೂ ಒಳಗೊಂಡಂತೆ, ಆರ್ಥಿಕ ವರದಿ ಸಲ್ಲಿಕೆಗಳ ಮೇಲೆ ಇರುವ ಆಂತರಿಕ ಆರ್ಥಿಕ ನಿಯಂತ್ರಣಗಳ ಅಂತರ್ಗತ ಸೀಮಿತಗಳ ಕಾರಣ ಲೋಪ ಅಥವಾ ಮೋಸದ ಭೌತಿಕ ತಪ್ಪು ನಿರೂಪಣೆಗಳು ಉಂಟಾಗುವ ಸಾಧ್ಯತೆಗಳಿದ್ದು, ಅವು ಕಂಡುಹಿಡಿಯಲು ಆಗದಂತಹದ್ದಾಗಿರಬಹುದಾಗಿದೆ. ಅಲ್ಲದೆ ಭವಿಷ್ಯದ ಅವಧಿಗಳಿಗೆ ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ಮೌಲ್ಯೀಕರಣ ತೋರಿಕೆಗಳು ಅಪಾಯಕ್ಕೆ ಒಳಪಡಬಹುದಾಗಿದ್ದು, ಪರಿಸ್ಥಿತಿಯ ಬದಲಾವಣೆ, ಕಾರ್ಯನೀತಿ ಅಥವಾ ಕಾರ್ಯಪ್ರಕ್ರಿಯೆಗಳ ಅನುಸರಣೆಯ ಪ್ರಮಾಣವು ಕ್ಷೀಣಗೊಳ್ಳಬಹುದಾದ ಕಾರಣ, ಆರ್ಥಿಕ ವರದಿ ಸಲ್ಲಿಕೆ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣವು ಕೊರತೆಯಿಂದ ತುಂಬಿದ್ದಿರಬಹುದಾಗಿದೆ.

**ಅಂಗೀಕಾರ್ಹ ಅಭಿಪ್ರಾಯ**

ನಮ್ಮ ಅಭಿಪ್ರಾಯದಂತೆ, ನಮಗೆ ಒದಗಿಸಿರುವ ಹಾಗೂ ವಿವರಿಸಿರುವ ಮಾಹಿತಿ ಪ್ರಕಾರ ಹಾಗೂ ನಮ್ಮ ಪರಿಶೋಧನೆಯನ್ನು ಆಧರಿಸಿ, 2017ರ ಮಾರ್ಚ್ 31ರಂದಿಗೆ ಇದ್ದಂತೆ, ಆರ್ಥಿಕ ವರದಿ ಸಲ್ಲಿಕೆಯ ಮೇಲಿನ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ, ಪರಿಣಾಮಕಾರಿ ಕಾರ್ಯಾಚರಣೆ ಹಾಗೂ ಅಗತ್ಯ ಪ್ರಮಾಣದಲ್ಲಿರುವಿಕೆಗೆ ಸಂಬಂಧಿಸಿದಂತೆ ಕೆಳಕಂಡ ಭೌತಿಕ ಕೊರತೆಯನ್ನು ಗುರುತಿಸಲಾಗಿದೆ:

**<u>ಆಸ್ತಿ ಸ್ಥಾವರ ಮತ್ತು ಉಪಕರಣ:</u>**

1. ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಕಂಪನಿಯು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ:
   - ಅ. ಕಾಲ ಕಾಲಕ್ಕೆ ಆಸ್ತಿ ಪುಸ್ತಕಗಳನ್ನು ಪ್ರತಿಯೊಂದು ಆಸ್ತಿಗೆ ಸಂಬಂಧಿಸಿದ ಮಾಹಿತಿಯೊಂದಿಗೆ ನವೀಕರಿಸದಿರುವುದು.
   - ಆ. ವರದಿಯ ದಿನಾಂಕದಂದು ದುರ್ಬಲಗೊಂಡ ಆಸ್ತಿಗಳ ಗುರುತಿಸುವಿಕೆ.
   - ಇ. ಚರಾಸ್ತಿಗಳನ್ನು ಹೊರತು ಪಡಿಸಿ ಸ್ತಿರಾಸ್ಥಿಗಳ ಭೌತಿಕ ಪರೀಶೀಲನೆ ವರದಿ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯರೂಪ ಇಲ್ಲದೆ ಇರುವುದು.
   - ಈ. ಚರಾಸ್ತಿ ಪರೀಶೀಲನಾ ಮಾಹಿತಿಯನ್ನು ಆಸ್ತಿ ಪುಸ್ತಕದೊಂದಿಗೆ ಸಮನ್ವಯಗೊಳಸದೇ ಇರುವುದು ಮೇಲಿನ ಕೊರತೆಗಳು ಹಣಕಾಸಿನ ನಿರೂಪಣಾಪಟ್ಟಿಯಲ್ಲಿನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಗ್ಗೆ ಗಮನಾರ್ಹ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಡಬಹುದಾಗಿದೆ.
2. ಭೂಮಿಯ ಮಾಲಿಕತ್ವ ಗುರುತಿಸುವಿಕೆಯಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲದ ಕಾರಣ ಭೂಮಿಯನ್ನು ಸೂಕ್ತವಾಗಿ ಗುತ್ತಿಗೆ ಆಧಾರಿತ ಭೂಮಿ ಮತ್ತು ಮಾಲೀಕತ್ವ ಭೂಮಿ ಎಂದು ವರ್ಗೀಕರಿಸದ ಕಾರಣ ಹಾಗೂ ಅದರ ಋಣಮುಕ್ತತೆಯ ಬಗ್ಗೆ ಹಣಕಾಸಿನ ನಿರೂಪಣಾಪಟ್ಟಿಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶವಾಗಬಹುದಾಗಿದೆ.
3. ಕಂಪನಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ (ಪಿಪಿಇ) ಬೆಲೆಯನ್ನು ಕಾರ್ಯಾರಂಭಗೊಂಡ

ದಿನಾಂಕದಂದು ಪೂರ್ಣವಾಗಿ ಬಂಡವಾಳೀಕರಿಸುವ ಕುರಿತು ಸಾಕಷ್ಟು ವಿಧಾನಗಳನ್ನು ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ನಿರೂಪಣಾ ಪಟ್ಟಿಯಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಬೆಲೆ ತಗ್ಗಿಸಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

4. ಕಂಪನಿಯು ಸಾಲಗಳ ವೆಚ್ಚವನ್ನು ಬಂಡವಾಳೀಕರಿಸುವ ನಿಯಮವನ್ನು ಸರಾಸರಿ ವಿಧಾನದ (Weighted Average) ಆಧಾರದ ಮೇಲೆ 2015ರಡಿಯಲ್ಲಿ ಹೊರಡಿಸಿರುವ IND AS 23 Borrowing Cost ಅನ್ವಯ ಕಂಪನಿಯ ನಿಯಮ ಪಾಲಿಸುತ್ತಿರುವ ಬಗ್ಗೆ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಮೇಲಿನ ಸವಕಳಿಗಳು, ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

5. ಕಂಪನಿಯು ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಬಂಡವಾಳೀಕರಿಸುವಾಗ ಸಿಬ್ಬಂದಿ ವೆಚ್ಚಗಳು, ಸಾಲಗಳ ವೆಚ್ಚಗಳನ್ನು ಅನುಪಾತದಲ್ಲಿ ಹಂಚಿಕೆ ಮಾಡುವಾಗ ಅಸಂಗತವಾಗಿ ಒಂದೊಂದು ಘಟಕದಲ್ಲಿ ಒಂದೊಂದು ರೀತಿಯಲ್ಲಿ ಪಾಲಿಸಲಾಗುತ್ತಿದ್ದು ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ, ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

6. ಕಂಪನಿಯು ನಿಗಧಿತ ಸಮಯದಲ್ಲಿ ಕಾರ್ಯಾರಂಭ ಪ್ರಮಾಣ ಪತ್ರವನ್ನು ನಿಗಧಿತ ಅವಧಿಯಲ್ಲಿ ನೀಡುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ನಿರ್ಮಾಣ ಹಂತದಲ್ಲಿರುವ ವೆಚ್ಚಗಳು (EDC), ಸಾಲಗಳ ವೆಚ್ಚವನ್ನು ಒಳಗೊಂಡಂತೆ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

7. ಕಂಪನಿಯು ಸ್ಥಾಪನ ವೆಚ್ಚಗಳು ಮತ್ತು ಕಾಮಾಗಾರಿ ಬಿಲ್ಲುಗಳನ್ನು ಸಂಬಂಧಪಟ್ಟ ಆಸ್ತಿಯ ಭಾಗಗಳಿಗೆ ಬಂಡವಾಳೀಕರಣಗೊಳಿಸುವ ಬಗ್ಗೆ ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೌಲ್ಯದ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

8. ಕಂಪನಿಯು ಆಸ್ತಿ ಕಳಚುವ ವೆಚ್ಚ (De commissioning Cost) ಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ವೆಚ್ಚದ ಒಂದು ಭಾಗವೆಂದು ಅಂದಾಜು ಮಾಡಲು ಪರಿಣಾಮಕಾರಿಯಾದ ವಿಧಾನವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

9. ಕಂಪನಿಯು ಬಿಡುಗಡೆಗೊಳಿಸಿದ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆದು ಆಸ್ತಿಗಳನ್ನು ಇಳಿಸಿದ ಮೌಲ್ಯದಲ್ಲಿ ಬೇರೆ ಲೆಕ್ಕ ಘಟಕಕ್ಕೆ ವರ್ಗಾಯಿಸಿದಲ್ಲಿ ಅದರ ಮೇಲಿನ ಸವಕಳಿಯನ್ನು ಹಾಗೂ ಆಸ್ತಿಯ ಬೆಲೆಯನ್ನು ಸೂಕ್ತವಾಗಿ ಪರಿಗಣಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಸುವ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

10. ಕಂಪನಿಯ ಸಿಬ್ಬಂದಿ ವೆಚ್ಚ ಬೃಹತ್ ಕಾಮಗಾರಿ ವಿಭಾಗಗಳಲ್ಲಿ ಮೇಲ್ವಿಚಾರಣ ಶುಲ್ಕದೊಂದಿಗೆ ನಿವ್ವಳಗೊಳಿಸುತ್ತಿರುವುದನ್ನು ತಾಂತ್ರಿಕವಾಗಿ ರೂಪಿಸುವ ವಿಷಯಗಳಲ್ಲಿ ಸಾಕಷ್ಟು ಪರಿಣಾಮಕಾರಿಯಾದ ನಿಯಮ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮೇಲೆ ಸಿಬ್ಬಂದಿ ವೆಚ್ಚವನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡದೆ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ಮೇಲೆ ಸಿಬ್ಬಂದಿ ವೆಚ್ಚವು ಉತ್ಪ್ರೇಕ್ಷಿತವಾಗಿ (Over Statement) ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

11. ಕಂಪನಿಯಲ್ಲಿ ಯೋಜನೆಗಳ ಸಮೀಕ್ಷ ವರದಿ/ಕಾರ್ಯಸಾಧ್ಯತೆಗಳನ್ನು ನಿಯತ ಕಾಲಿಕವಾಗಿ ಪರಾಮರ್ಶಿಸುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ: ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ನಿವ್ವಳ ಮೌಲ್ಯ ಬಂಡವಾಳೀಕರಣ ಹಾಗೂ ಅದರ ಸವಕಳಿಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

12. ಕಂಪನಿಯು ಬಾಡಿಗೆ ನೀಡಿರುವ ಕಛೇರಿ ಕಟ್ಟಡಗಳು/ಸಿಬ್ಬಂದಿಯ ವಸತಿ ಗೃಹಗಳನ್ನು ಹೂಡಿಕೆ ಮಾಡಲಾಗಿರುವ ಆಸ್ತಿಗಳೆಂದು ಪರಿಗಣಿಸುವ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ಹೂಡಿಕೆ ಆಸ್ತಿಗಳ ವಿಷಯದಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

**ಸ್ವಂತ ವೆಚ್ಚ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು:**

13. ಕಂಪನಿಯು ಪ್ರತಿಯೊಂದು ಸ್ವಯಂ ಕಾಮಗಾರಿವಾರು ಮತ್ತು ಠೇವಣಿವಂತಿಗೆ ಕಾಮಗಾರಿವಾರು ಸಂಬಂಧಪಟ್ಟ ಮಾಹಿತಿಗಳನ್ನೊಳಗೊಂಡ ನಿಗಧಿತ ನಮೂನೆಯಲ್ಲಿ ನೋಂದಣಿ ಪುಸ್ತಕಗಳನ್ನು ನಿರ್ವಹಿಸುವ ಮತ್ತು ಖಚಿತ ಪಡಿಸಿಕೊಳ್ಳುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸು ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮತ್ತು ನಿಗಧಿತ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಬಗ್ಗೆ, ಸವಕಳಿ ಮತ್ತು ಆದಾಯ ಗುರುತಿಸುವಿಕೆಯಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

14. ಕಂಪನಿಯು ಮೇಲ್ವಿಚಾರಣ ಶುಲ್ಕವನ್ನು ಲೆಕ್ಕೀಕರಿಸುವ ವಿಷಯದಲ್ಲಿ ಕಂಪನಿಯು ಶೇಕಡವಾರು ಕಾಮಗಾರಿ ಪೂರ್ಣಗೊಂಡ ವಿಧಾನದನ್ವಯ ಕ್ರಮ ವಹಿಸುವ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಮುಂಚಿತವಾಗಿಯೇ ಆದಾಯವೆಂದು ಗುರುತಿಸಲಾಗುತ್ತಿದೆ ಇದರಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

15. ಕಂಪನಿಯು ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ (IPP) ವಸೂಲಾತಿ ಮಾಡಲಾಗುವ ಕಾರ್ಯ ಮತ್ತು ಪಾಲನ ವೆಚ್ಚಗಳ ನಿಖರತೆ ಹಾಗೂ ಪರಿಪೂರ್ಣತೆಗಳ ಬಗ್ಗೆ ಪರೀಶೀಲನೆ ಮಾಡುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಮತ್ತು ಆಂತರಿಕ ಹಣಕಾಸಿನ ನಿಯಂತ್ರಣವನ್ನು ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಕಂಪನಿಯ ಲಾಭಗಳ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

16. ಕಂಪನಿಯು ಗ್ರಾಹಕರಿಂದ ಠೇವಣಿವಂತಿಗೆ ಕಾಮಾಗಾರಿಗಾಗಿ ವಸೂಲಾತಿ ಮಾಡಿದ ವಂತಿಗೆಯನ್ನು ಸೂಕ್ತವಾಗಿ ಲೆಕ್ಕೀಕರಿಸದಿರುವ ವಿಷಯಗಳಲ್ಲಿ ಪರಿಣಾಮಕಾರಿಯಾದ ವಿಧಾನ ಹೊಂದಿರುವುದಿಲ್ಲ. ಈ ಕಾರಣದಿಂದಾಗಿ ಹಣಕಾಸಿನ ಹೇಳಿಕೆಗಳಲ್ಲಿ ಆಸ್ತಿ ಸ್ಥಾವರ ಮತ್ತು ಉಪಕರಣಗಳು, ಅದರ ಮೇಲಿನ ಸವಕಳಿ ಮತ್ತು ಗ್ರಾಹಕರ ಸ್ವೀಕೃತಿಗಳು ಹಾಗೂ ಪಾವತಿಗಳ ಬಗ್ಗೆ ತಪ್ಪು ನಿರೂಪಣೆಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

**ಕಾಮಾಗಾರಿಗಳ ಬಿಲ್ಲುಗಳ ಪ್ರಕ್ರಿಯೆ ಕುರಿತು:**

17. ಕಂಪನಿಯು ಗುತ್ತಿಗೆದಾರರ ಬಿಲ್ಲುಗಳ ಪ್ರಕ್ರಿಯೆಯಲ್ಲಿ ಈ ಕೆಳಗೆ ಸೂಚಿಸಿರುವ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಲಾಗಿರುವುದಿಲ್ಲ.

A. ಕಾಮಾಗಾರಿಗಳ ಅಳತೆ ಸಂಬಂಧವಾಗಿ, ಕವಿಪ್ರನಿನಿಯ ಅಳತೆ ನಿಯಮ ಪುಸ್ತಕದ ಕಲಮು–5ರ ಪ್ರಕಾರ, ಎಲ್ಲಾ ಅಳತೆಗಳನ್ನು ಕೆಲಸ ಮಾಡುವ ಸ್ಥಳದಲ್ಲೇ, ಆ ಕೆಲಸವು ಪ್ರಗತಿಯಲ್ಲಿರುವಾಗಲೇ ದಾಖಲಿಸತಕ್ಕದ್ದು. ಆದರೆ, ಅಭ್ಯಾಸ ಕ್ರಮದ ಪ್ರಕಾರ, ಚಾಲ್ತಿ ಬಿಲ್ಲುಗಳನ್ನು ಸಿದ್ದಪಡಿಸಿ/ ಸ್ವೀಕರಿಸಿದ ನಂತರವಷ್ಟೇ ಅಳತೆ ಪುಸ್ತಕದಲ್ಲಿ ದಾಖಲಿಸಿ ಪರಿಪೂರ್ಣಗೊಳಿಸಲಾಗುತ್ತಿದೆ.

B. ಲೆಕ್ಕ ಪತ್ರಗಳ ವರದಿಯ ದಿನಾಂಕದಂದು ಪೂರ್ಣಗೊಂಡ ಬಂಡವಾಳ ಕಾಮಗಾರಿಗಳು/ ನವೀಕರಿಸಲಾದ ಕಾಮಗಾರಿಗಳು/ಆಧುನಿಕರಿಸಲಾದ ಕಾಮಗಾರಿಗಳು/ದುರಸ್ತಿ ಮತ್ತು ನಿರ್ವಹಣ ಕಾಮಗಾರಿಗಳು ಪೂರ್ಣಗೊಂಡ ಬಗ್ಗೆ ಲೆಕ್ಕಗಳಲ್ಲಿ ಸೂಕ್ತವಾದ ಅವಕಾಶ ಕಲ್ಪಿಸಲಾಗಿರುವುದಿಲ್ಲ.

C. ದರ ವ್ಯತ್ಯಾಸದ ಬಿಲ್ಲುಗಳು ಮತ್ತು ಪರಿಮಾಣ ವ್ಯತ್ಯಾಸದ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪ್ರಕ್ರೀಯೆಗೊಳಿಸದಿರುವ ಬಗ್ಗೆ.

D. ಕಾಮಗಾರಿಗಳು ಆರ್.ಎ. ಬಿಲ್ಲುಗಳನ್ನು ಆಂತರಿಕ ಪರಿಶೋಧಕರು ಪರಿಶೀಲಿಸುತ್ತಿಲ್ಲ, ಕೇವಲ ಅಂತಿಮ ಬಿಲ್ಲುಗಳನ್ನು ಪರಿಶೀಲಿಸಲಾಗುತ್ತಿದೆ .

**ಆಂತರಿಕ ಪರಿಶೋಧನೆ ವ್ಯವಸ್ಥೆ**

18. ಸೂಕ್ತವಾದ ಮತ್ತು ಗುಣಮಟ್ಟದ ಮಾನವಶಕ್ತಿಯ, ಲಭ್ಯತೆ ವ್ಯವಹಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೋಧನೆ ಇಲಾಖೆಯನ್ನು ಬಲಪಡಿಸಬೇಕಾಗಿದೆ. ಆಂತರಿಕ ಲೆಕ್ಕ ಪರಿಶೋಧಕರು, ಆರ್.ಎ. ಬಿಲ್ಲುಗಳನ್ನು ಪರಿಶೀಲಿಸುವುದಿಲ್ಲ. ಆದರೆ ಅಂತಿಮ ಬಿಲ್ಲುಗಳನ್ನು ಮಾತ್ರ ಪರಿಶೀಲಿಸುತ್ತಾರೆ. ಮುಂದುವರೆದು, ಪ್ರಸ್ತುತ ಅತ್ಯಂತ ಪ್ರಮುಖ ಕ್ಷೇತ್ರಗಳಾದ ಆದಾಯ ಮತ್ತು ಖರ್ಚಿನ ಗುರುತಿಸುವಿಕೆಗೆ

ಸಂಬಂಧಿಸಿದಂತೆ ಇದರ ಕಾರ್ಯ ವ್ಯಾಪ್ತಿಯು, ಆಂತರಿಕ ಪರಿಶೋಧನೆಗೆ ಒಳಪಟ್ಟಿರುವುದಿಲ್ಲ. ಆಂತರಿಕ ಪರಿಶೋಧನೆ ಸಿಬ್ಬಂದಿಗಳಿಗೆ ನಿರಂತರವಾಗಿ ಸೂಕ್ತವಾದ ಕೌಶಲ್ಯಗಳು ಹಾಗೂ ಇತ್ತೀಚಿನ ತಂತ್ರಜ್ಞಾನಗಳೊಂದಿಗೆ ತರಬೇತಿಗೊಳಿಸುವಂತೆ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿರುತ್ತದೆ.

19. ಕಂಪನಿಯು ಲೆಕ್ಕ ಪತ್ರಗಳಲ್ಲಿ ಆ ವರ್ಷದಲ್ಲಿ ಜಾರಿಯಾದ ಸಂಪೂರ್ಣ ವ್ಯವಹಾರದ ವರದಿಯನ್ನು ಖಚಿತಪಡಿಸಿಕೊಳ್ಳಲು ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಆದಾಯ, ವೆಚ್ಚ, ಸ್ವತ್ತು ಮತ್ತು ಹೊಣೆಗಾರಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

20. ವಿದ್ಯುತ್ ಸರಬರಾಜು ಕಂಪನಿ ಮತ್ತು ಕೆಇಆರ್‌ಸಿ (ಪ್ರಸರಣ ದರಗಳ ನಡುವೆ ನಿರ್ಧರಿಸುವ ನಿಬಂಧನೆಗಳು ಮತ್ತು ಷರತ್ತುಗಳು) ನಿಬಂಧನೆ 2006ರನ್ವಯ ಇರುವ ಪ್ರಸರಣ ಒಪ್ಪಂದದ ಅನ್ವಯ ವಿಳಂಬವಾಗಿ ಪಾವತಿಸಲ್ಪಟ್ಟ (surcharge)/ರಿಯಾಯಿತಿಗಳನ್ನು ಸಂಗ್ರಹಿಸಲು ಅಥವಾ ಪಾವತಿಸಲು ಕಂಪನಿಯಲ್ಲಿ ಸೂಕ್ತವಾದ ಕಾರ್ಯ ನೀತಿಗಳು, ಕಾರ್ಯ ವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ.

21. ಕಂಪನಿಯು (O & M) ಶುಲ್ಕಗಳು, ವೀಲಿಂಗ್ ಶುಲ್ಕಗಳು, ಮೇಲ್ವಿಚಾರಣೆ ಶುಲ್ಕಗಳು, ಪ್ರೋತ್ಸಾಹಕ ಧನಗಳು, ದಂಡ ವಸೂಲಾತಿ ಮುಂತಾದ ಇತರೆ ಆದಾಯಗಳಿಂದ ಬರುವ ಲೆಕ್ಕಗಳ ಮೇಲೆ ಸಂಚಿತ ಆಧಾರದ ಮೇಲೆ ಸೂಕ್ತ ನಿಯಂತ್ರಣವನ್ನು ಹೊಂದಿಲ್ಲ.

22. ಕಂಪನಿಯು IND ASನ್ನು ಮೊದಲ ಬಾರಿಗೆ ಅಳವಡಿಸಿಕೊಂಡಿರುವ ಬಗ್ಗೆ ಯಾವುದೇ ಪ್ರಸ್ತುತಿ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಹಿರಂಗಗೊಳಿಸದೇ ಇರುವುದರ ಬಗ್ಗೆ ಸೂಕ್ತವಾದ ಪ್ರಯತ್ನಗಳನ್ನು ಮಾಡಿಲ್ಲ.

**ಇತರೆ**

23. ಕಂಪನಿಯು ಇ ಎಮ್ ಡಿ ಮತ್ತು ಇತರೆ ಠೇವಣಿಗಳ ಕುರಿತು ದೃಢೀಕರಣ ಮತ್ತು ಸಮನ್ವಯ ಬಗ್ಗೆ ಸೂಕ್ತವಾದ ಆಂತರಿಕ ನಿಯಂತ್ರಣ ಹೊಂದಿಲ್ಲ. ಇದರಿಂದ ನಿಖರವಾಗಿ ಆರ್ಥಿಕ ಪಟ್ಟಿಯಲ್ಲಿ ಪ್ರಸ್ತುತ ಹೊಣೆಗಾರಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

24. ಕಂಪನಿಯು, ಮೈಕ್ರೋ, ಸಣ್ಣ ಮತ್ತು ಮಧ್ಯಮ ಎಂಟರ್‌ಪ್ರೈಸಸ್ ಡೆವಲಪ್‌ಮೆಂಟ್ ಆಕ್ಟ್ 2006ರ ಅಡಿ ಗುತ್ತಿಗೆದಾರರನ್ನು ಗುರುತಿಸಿ ಆರ್ಥಿಕ ಪಟ್ಟಿಯಲ್ಲಿ ಮಾಹಿತಿಯನ್ನು ಬಹಿರಂಗಪಡಿಸಲು ಸೂಕ್ತವಾದ ಯಾವುದೇ ಕಾರ್ಯ ನೀತಿ ಮತ್ತು ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಗುತ್ತಿಗೆದಾರರ ಮಾಹಿತಿಯು ಬಹಿರಂಗಗೊಳ್ಳದೆ ತಪ್ಪು ಉಂಟಾಗುವ ಸಾಧ್ಯತೆ ಇದೆ.

25. ಕಂಪನಿಯು ಪ್ರಚಲಿತ/ ಅಪ್ರಚಲಿತ ಆಸ್ತಿ/ಹೊಣೆಗಾರಿಕೆಗಳನ್ನು ಗುರುತಿಸಲು ಯಾವುದೇ ಕಾರ್ಯನೀತಿ, ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಗಳ ಪ್ರಸ್ತುತಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

26. ಕಂಪನಿಯು ಹಿಂದಿನ ಅವಧಿಯ ವಸ್ತುಗಳ ಗುರುತಿಸುವಿಕೆ ಮತ್ತು ವರದಿ ಮಾಡುವ ಬಗ್ಗೆ ಸೂಕ್ತವಾದ ಕಾರ್ಯನೀತಿ ಮತ್ತು ಕಾರ್ಯವಿಧಾನಗಳನ್ನು ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂಪನಿಯ ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟಗಳ ವರದಿ ತಪ್ಪಾಗಿರುವ ಸಾಧ್ಯತೆ ಇರುತ್ತದೆ.

27. ಕಂಪನಿಯು, ಸಿಇಆರ್‌ಸಿ/ಕೆಇ ಆರ್‌ಸಿಯಿಂದ ನಿಯಮಿತವಾಗಿ ಹೊರಡಿಸುವ ಹೊಸ ನಿಯಮಾವಳಿಗಳು/ಅಧಿಸೂಚನೆ/ಆದೇಶ/ತಿದ್ದುಪಡಿಗಳನ್ನು ಅಳವಡಿಸಿಕೊಳ್ಳಲು ಸೂಕ್ತವಾದ ಕಾರ್ಯ ವಿಧಾನಗಳನ್ನು ಹೊಂದಿರುವುದಿಲ್ಲ. (ಇದರಿಂದ ಆರ್ಥಿಕ ಪಟ್ಟಿಯಲ್ಲಿ ಕಂದಾಯ ಮತ್ತು ಪ್ರಸ್ತುತ ಆಸ್ತಿಗಳ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

28. ಕಂಪನಿಯು, ಗುತ್ತಿಗೆದಾರರಿಂದ ಬಂದಿರುವ ವಿಳಂಬ ಮನ್ನಾ ಅರ್ಜಿಗಳನ್ನು ಸೂಕ್ತವಾದ ದಾಖಲಾತಿಗಳೊಂದಿಗೆ ನಿರ್ವಹಿಸಲು ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣಗಳನ್ನು ಹೊಂದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ದಂಡ ಮುರಿದುಕೊಳ್ಳುವಿಕೆ ಮತ್ತು ಕಂದಾಯ ಗುರುತಿಸುವಿಕೆಯಲ್ಲಿ ತಪ್ಪು ಉಂಟಾಗುವ ಸಾಧ್ಯತೆ ಇದೆ.

29. ಕಂಪನಿಯು IND AS ನಿಯಮಗಳು 2015ರ ಅಡಿಯಲ್ಲಿ ನೀಡಿರುವ IND AS 19 ನೌಕರರ ಲಾಭಗಳ ಅನುಸಾರವಾಗಿ ನೌಕರರ ಸವಲತ್ತುಗಳಿಗೆ ಸಂಬಂಧಿಸಿದಂತೆ ಸಂಭವನೀಯ ಮತ್ತು ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ.

30. ಕಂಪನಿಯು, ಇತರರಿಂದ (Form 26 AS) ಟಿಡಿಎಸ್ ಮುರಿತ ಮಾಡಿರುವ ಲೆಕ್ಕ ಮತ್ತು ಸಮನ್ವಯಗಳ ಬಗ್ಗೆ ಯಾವುದೇ ಕಾರ್ಯ ವಿಧಾನ ಮತ್ತು ಆಂತರಿಕ ನಿಯಂತ್ರಣ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಮುಂಚಿತವಾಗಿ ತೆರಿಗೆ ಪಾವತಿಸಿರುವ ಬಗ್ಗೆ ತಪ್ಪಾಗುವ ಸಾಧ್ಯತೆ ಇದೆ.

31. ದಾಸ್ತಾನು ಮೌಲ್ಯದ ಸ್ಥಿರತೆಯ ಮೇಲೆ ಪರಿಣಾಮಕಾರಿಯಾದ ಕಾರ್ಯವಿಧಾನಗಳು ಮತ್ತು ಆಂತರಿಕ ನಿಯಂತ್ರಣಗಳ ಕೊರತೆಯಿಂದ ದಾಸ್ತಾನು ಮೌಲ್ಯಮಾಪನದಲ್ಲಿ ವರದಿ ದಿನಾಂಕದ ತನಕ ತಪ್ಪು ಉಂಟಾಗುವ ಸಾಧ್ಯತೆ ಇರುತ್ತದೆ.

32. ಕಂಪನಿಯು ಸಾಮಾಗ್ರಿಗಳ ಬಿಡಿಭಾಗಗಳನ್ನು ಖರೀದಿಸುವ ಸಮಯದಲ್ಲಿ ಬಂಡವಾಳೀಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸೂಕ್ತವಾದ ಕಾರ್ಯವಿಧಾನಗಳಾಗಲಿ, ಆಂತರಿಕ ನಿಯಂತ್ರಣ ಗಳನ್ನಾಗಲಿ ಹೊಂದಿಲ್ಲ. ಸದರಿ ಮಾಹಿತಿಯ ಅನುಪಸ್ಥಿತಿಯಲ್ಲಿ ಲೆಕ್ಕಗಳ ಮೇಲಿನ ಪರಿಣಾಮವನ್ನು ಗೊತ್ತುಪಡಿಸಿಕೊಳ್ಳಲು ಆಗುವುದಿಲ್ಲ. ಇದರಿಂದ ಸಾಮಾಗ್ರಿ ವಿವರಣಾ ಪಟ್ಟಿಯಲ್ಲಿ ಹೆಚ್ಚು ವಿವರಣೆ ಮತ್ತು ಕ್ಯಾಪಿಟಲ್ ವರ್ಕ್ಸ್ ಇನ್ ಪ್ರೋಗ್ರೆಸ್‌ಗಳ ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

33. ಸಂಬಂಧಿಸಿದ ಗ್ರಾಹಕರು/ಗುತ್ತಿಗೆದಾರರು/ ಸರಬರಾಜುದಾರರ ವರದಿಯ ದಿನಾಂಕದಿಂದ ಬಾಕಿ ಮೊತ್ತವನ್ನು ಸಮನ್ವಯಗೊಳಿಸುವುದಕ್ಕೆ ಕಂಪನಿಯು ಸೂಕ್ತವಾದ ಕಾರ್ಯವಿಧಾನ ಮತ್ತು ಆಂತರಿಕ ನಿಯಂತ್ರಣಾ ಹೊಂದಿರುವುದಿಲ್ಲ. ಇದರಿಂದ ಆರ್ಥಿಕ ಪಟ್ಟಿಯಲ್ಲಿ ಆಸ್ತಿ/ಹೊಣೆಗಾರಿಕೆಯಲ್ಲಿ ಹೆಚ್ಚು/ಕಡಿಮೆ ವಿವರಣೆಯಿಂದ ತಪ್ಪಾಗುವ ಸಾಧ್ಯತೆ ಇದೆ.

**ಗಣಕೀಕರಣ**

34. ಗಣಕೀಕರಣದ ಅನುಪಸ್ಥಿತಿಯು ಕಂಪನಿಯ ಆರ್ಥಿಕ ಚಟುವಟಿಕೆಗಳನ್ನು ಸಮರ್ಥವಾಗಿ ನಿಯಂತ್ರಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಹಾಗೂ ಸಕಾಲದಲ್ಲಿ ಆರ್ಥಿಕ ವರದಿಗಳನ್ನು ನಿಖರವಾಗಿ ಹಾಗೂ ನಂಬಿಕೆಗೆ ಅರ್ಹವಾದ ರೀತಿಯಲ್ಲಿ ಸಿದ್ಧಪಡಿಸುವಲ್ಲಿ ಪರಿಣಾಮ ಬೀರಬಹುದಾಗಿದೆ.

ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣದಲ್ಲಿ " ಭೌತಿಕ ಹೀನತೆಯು " ಒಂದು ಕೊರತೆ ಅಥವಾ ಕೊರತೆಗಳ ಸಂಯೋಗವಾಗಿದ್ದು, ಇದರಿಂದ, ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಆರ್ಥಿಕ ನಿರೂಪಣಾ ಪಟ್ಟಿಗಳ ಭೌತಿಕವಾಗಿ ನೈಜವಲ್ಲದ ನಿರೂಪಣೆಗೆ ಸಹಜ ಅವಕಾಶವಾಗಬಹುದಾಗಿದ್ದು, ಇದನ್ನು ಕಾಲಾನುಕ್ರಮವಾಗಿ ತಡೆಯಲಾಗುವುದಿಲ್ಲ ಅಥವಾ ಕಂಡುಹಿಡಿಯಲಾಗುವುದಿಲ್ಲ.

ನಮ್ಮ ಅಭಿಪ್ರಾಯದ ಪ್ರಕಾರ, ನಿಯಂತ್ರಣ ಅಂಶಗಳ ಉದ್ದೇಶಗಳ ಸಾಧನೆಯ ಮೇಲೆ ಬೀರಬಹುದಾದ ಮೇಲೆ ಸೂಚಿಸಿರುವ ಭೌತಿಕ ಕೊರತೆಯ ಪರಿಣಾಮಗಳನ್ನು ಹೊರತುಪಡಿಸಿದಂತೆ, ಕಂಪನಿಯು ಎಲ್ಲ ಭೌತಿಕ ವಿಷಯಗಳಲ್ಲಿ, ಆರ್ಥಿಕ ವರದಿ ಸಲ್ಲಿಕೆ ಸಂಬಂಧವಾಗಿ ಅಗತ್ಯ ಪ್ರಮಾಣದ ಆಂತರಿಕ ಆರ್ಥಿಕ ನಿಯಂತ್ರಣವನ್ನು ನಿರ್ವಹಿಸುತ್ತಿದ್ದು, ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಅಂತಹ ಆಂತರಿಕ ನಿಯಂತ್ರಣಗಳು 2017ರ ಮಾರ್ಚ್ 31ರಂದಿಗೆ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ "ಆರ್ಥಿಕ ನಿರೂಪಣಾ ವರದಿ"ಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಪರಿಶೋಧನೆ ಮೇಲಿನ ಮಾರ್ಗದರ್ಶಕ ಟಿಪ್ಪಣಿಯಲ್ಲಿ ಸೂಚಿಸಿರುವ ಆಂತರಿಕ ನಿಯಂತ್ರಣಗಳ ಅಗತ್ಯ ಅಂಶಗಳನ್ನು ಪರಿಗಣಿಸಿ, ಕಂಪನಿಯು ಅಳವಡಿಸಿಕೊಂಡಿರುವ ಆರ್ಥಿಕ ವರದಿ ಸಲ್ಲಿಕೆಗಳ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣ ಅಂಶಗಳನ್ನು ಆಧರಿಸಿ ಪರಿಣಾಮಕಾರಿಯಾಗಿ ನಿರ್ವಹಿತಗೊಳ್ಳುತ್ತಿವೆ.

2017ರ ಮಾರ್ಚ್ 31ರಂದಿಗೆ, ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ನಮ್ಮ ಪರಿಶೋಧನೆಯಲ್ಲಿ ಅನ್ವಯಿಸಿರುವ ಸ್ವರೂಪ, ಕಾಲಬದ್ಧತೆ ಹಾಗೂ ಪರಿಶೋಧನಾ ಪರೀಕ್ಷೆಯನ್ನು ಗೊತ್ತುಪಡಿಸಿಕೊಳ್ಳುವುದಕ್ಕೆ ಮೇಲೆ ವರದಿ ಮಾಡಿ ಗುರುತಿಸಲ್ಪಟ್ಟಿರುವ ಭೌತಿಕ ಕೊರತೆಗಳನ್ನು ನಾವು ಪರಿಗಣಿಸಿದ್ದು, ಇಂತಹ ಭೌತಿಕ ಕೊರತೆಗಳು ಕಂಪನಿಯ ಆರ್ಥಿಕ ನಿರೂಪಣಾ ಪಟ್ಟಿಗಳ ಮೇಲಿನ ನಮ್ಮ ಅಭಿಪ್ರಾಯಗಳಿಗೆ ಪರಿಣಾಮ ಬೀರಿರುವೆಡೆಯಲ್ಲೆಲ್ಲಾ, ನಾವು ನಮ್ಮ ಅಂಗೀಕಾರ್ಹ ಅಭಿಪ್ರಾಯವನ್ನು ನೀಡಿದ್ದೇವೆ.

**ಬಿ.ಪಿ. ರಾವ್ & ಕಂ. ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್,
ಸಂಸ್ಥೆ ನೋ.ಸಂ.: 003116S

ಸ್ಥಳ: ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2017

**ಬಿ. ಸತೀಶ್ ರಾವ್,**
ಪಾಲುದಾರರು,
ಸದಸ್ಯತ್ವ ಸಂ.: 024559

**ಅನುಬಂಧ "ಸಿ": ನಮ್ಮ ಸಮ ದಿನಾಂಕದ ವರದಿಯ ಪ್ರಕರಣದ ಕಂಡಿಕೆ 2(i) ರಲ್ಲಿ ಉಲ್ಲೇಖಿಸಿರುವಂತೆ ಇತರ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳು" ವಿಷಯಗಳ ಮೇಲಿನ ವರದಿಯ ಕಂಡಿಕೆ 2(i)ಕ್ಕೆ ಉಲ್ಲೇಖಿಸಿರುವಂತೆ**

**(ಸಿ&ಎಜಿ ಅವರ ವರದಿ ಮೇಲೆ/ನಿರ್ದೇಶನಗಳಿಗೆ ಉತ್ತರಗಳು/ಹೆಚ್ಚುವರಿ ನಿರ್ದೇಶನಗಳಿಗೆ ಇಟಾಲಿಕ್ಸ್ ಅಕ್ಷರಗಳಲ್ಲಿ ಉತ್ತರ ನೀಡಲಾಗಿದೆ)**

**ಎ. ನಿರ್ದೇಶನಗಳು:**

ಕಂಪನಿಗಳ ಅಧಿನಿಯಮ 2013ರ ಪ್ರಕರಣ 143(5) ಅಡಿಯಲ್ಲಿ ಕಂಪ್ಟ್ರೋಲರ್& ಆಡಿಟರ್ ಜನರಲ್ ಆಫ್ ಇಂಡಿಯಾ ರವರು 2016–17ನೇ ಸಾಲಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಮಯದಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಪರೀಕ್ಷಿಸಬೇಕಾದ ಪ್ರದೇಶಗಳನ್ನು ಸೂಚಿಸುವ ನಿರ್ದೇಶನಗಳು.

| ಕ್ರ. ಸಂ.. | ಪರೀಕ್ಷಿಸಲಾದ ಪ್ರದೇಶಗಳು | ವೀಕ್ಷಣೆ /ಶೋಧನೆ |
|---|---|---|
| 1 | ಕಂಪನಿಯು ಬಂಡವಾಳ ವಾಪಸಾತಿಗಾಗಿ ಆಯ್ಕೆಗೊಂಡಿದ್ದರೆ, ಆಸ್ತಿಗಳ (ಅಗೋಚರ ಆಸ್ತಿಗಳು ಹಾಗೂ ಭೂಮಿಯನ್ನೂ ಒಳ ಗೊಂಡು) ಹಾಗೂ ಹೊಣೆಗಾರಿಕೆಗಳ (ಬದ್ಧಗೊಂಡ ಹಾಗೂ ಸಾಮಾನ್ಯ ಮೀಸಲು) ಮೌಲ್ಯೀಕರಣದ ವಿಶಿಷ್ಟ್ಯತೆಯಂತೆ, ಯಥಾ ಸ್ಥಿತಿಯ ಪೂರ್ಣವರದಿಯನ್ನು, ಬಂಡವಾಳ ವಾಪಸಾತಿ ಕಾರ್ಯಪ್ರಕ್ರಿಯೆಯ ಪ್ರಸಕ್ತ ಮಟ್ಟ ಹಾಗೂ ವಿಧಾನವನ್ನು ಪರಿಶೀಲಿಸಬಹುದಾಗಿದೆ. | ಕಂಪನಿಯು ಬಂಡವಾಳ ಹಿಂತೆಗೆತಕ್ಕೆ ಆಯ್ಕೆಯಾಗಿರುವುದಿಲ್ಲ |
| 2 | ಬಾಕಿ/ಸಾಲ/ಬಡ್ಡಿ ಇತ್ಯಾದಿಗಳ ತೊಡೆದು ಹಾಕುವಿಕೆ ಅಥವಾ ಮನ್ನಾ ಮಾಡಿರುವ ಪ್ರಕರಣಗಳಿವೆಯೇ ಎಂಬುದರ ಬಗ್ಗೆ ವರದಿ ಸಲ್ಲಿಸಿ. ಹೌದಾದರೆ, ಒಳಪಟ್ಟಿರುವ ಮೊಬಲಗು ಹಾಗೂ ಕಾರಣವನ್ನು ತಿಳಿಸಿ. | ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಯಾವುದೆ ಸಾಲ ಮನ್ನಾ/ಸಾಲಗಳ ವಜಾ/ಸಾಲಗಳು/ಬಡ್ಡಿಗಳು ಇತರೆ, ಪ್ರಕರಣಗಳು ಇರುವುದಿಲ್ಲ ರೂ.109.81 ಲಕ್ಷಗಳಷ್ಟು ಹವಣಿಕೆಯ ಮೊತ್ತವನ್ನು ಹೊರತುಪಡಿಸಿ |
| 3 | ಮೂರನೆಯ ವ್ಯಕ್ತಿಗಳೊಂದಿಗೆ ಇರುವ ಉಗ್ರಾಣ ತಪಶೀಲು ಹಾಗೂ ಸರ್ಕಾರ ಮತ್ತು ಇತರ ಪ್ರಾಧಿಕಾರಿಗಳಿಂದ ಕೊಡುಗೆಯ ರೂಪದಲ್ಲಿ ಸ್ವೀಕರಿಸಿರಬಹುದಾದ ಆಸ್ತಿಗಳಿಗೆ ಸೂಕ್ತ ದಾಖಾಲೆಗಳನ್ನು ನಿರ್ವಹಿಸಲಾಗಿದೆಯೇ. | ಆಡಳಿತಮಂಡಳಿಯು ಒದಗಿಸಿರುವ ಮಾಹಿತಿ ಮತ್ತು ನಮ್ಮ ಪರಿಶೀಲನೆಯ ಆಧಾರದ ಪ್ರಕಾರ ಮೂರನೇ ವ್ಯಕ್ತಿಗಳೊಂದಿಗೆ ಇರುವ ಉಗ್ರಾಣ ತಪಶೀಲು/ಆಸ್ತಿಗಳ ಪರಿಶೀಲನೆಗಾಗಿ, ದಾಖಲೆ ಪುಸ್ತಕಗಳನ್ನು ನಿರ್ವಹಿಸಲಾಗುತ್ತಿದೆ. ಸರ್ಕಾರ ಹಾಗೂ ಇತರ ವ್ಯಕ್ತಿಗಳಿಂದ ಕೊಡುಗೆಯ ರೂಪದಲ್ಲಿ ಸ್ವೀಕರಿಸಿರುವ ಆಸ್ತಿಗಳ ಬಗ್ಗೆ ಲೆಕ್ಕ ಘಟಕಗಳಲ್ಲಿ ಆಸ್ತಿ ನಿರ್ವಹಣೆ ನಿರ್ವಹಣೆ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ ನಿರ್ವಹಿಸಲಾಗುತ್ತಿದೆ. ಆದರೂ, ನಮ್ಮ ಪರಿಶೀಲನೆಯ ಪ್ರಕಾರ, ದುರಸ್ತಿಗಾಗಿ ಕಳುಹಿಸಿದ ಪರಿವರ್ತಕಗಳ ಬಗ್ಗೆ ನಿಯತ ಅನುಸರಣೆ ಅಥವಾ ತಪಾಸಣೆ ಇಲ್ಲ, ಅಥವಾ ಸಂಬಂಧಿತ ವ್ಯಕ್ತಿಗಳಿಂದ ಸ್ಥಿರೀಕರಣವೂ ಇಲ್ಲ. |
| 4 | ಕಾರಣಗಳ ಸಹಿತ ತೀರ್ಮಾನಕ್ಕೆ ಬಾಕಿ ಇರುವ ವಯಸ್ಸುವಾರು ಕಾನೂನು/ನ್ಯಾಯಪಂಚಾಯ್ತಿ ಪ್ರಕರಣಗಳ ವಿಶ್ಲೇಷಣಾ ವರದಿ ಮತ್ತು ಎಲ್ಲಾ ಕಾನೂನು ಪ್ರಕರಣಗಳ (ವಿದೇಶ ಮತ್ತು ಸ್ಥಳೀಯ) ವೆಚ್ಚಕ್ಕಾಗಿ ನಿರ್ವಹಣಾ ವ್ಯವಸ್ಥೆಯ ಅಸ್ತಿತ್ವ/ ಪರಿಣಾಮಕಾರಿತ್ವವನ್ನು ಒದಗಿಸುವುದು. | (see table below) |

| ಅವಧಿ | ನೌಕರರಿಗೆ ಸಂಬಂಧಿಸಿದವುಗಳು | ಇತರೆ |
|---|---|---|
| < 1 ವರ್ಷ | 80 | 69 |
| 1-3 ವರ್ಷಗಳು | 161 | 150 |
| 3-5 ವರ್ಷಗಳು | 34 | 27 |
| 5 ವರ್ಷಗಳಿಗೆ ಮೇಲ್ಪಟ್ಟ | 18 | 38 |

ಪ್ರಕರಣಗಳು ವಿವಿಧ ನ್ಯಾಯಾಂಗ ವೇದಿಕೆಗಳಲ್ಲಿ ಬಾಕಿ ಇವೆ ಮತ್ತು ಕಂಪನಿಯು ಪ್ಯಾನಲ್ ಅಡ್ವೋಕೇಟ್‌ಗಳ ಮೂಲಕ ಅನುಸರಣಾ ಕ್ರಮ ಕೈಗೊಳ್ಳುತ್ತಿದೆ. ಎಲ್ಲ ಕಾನೂನು ಪ್ರಕರಣಗಳ ಮೇಲೆ ಮಾಡಲಾದ ಖರ್ಚಿಗೆ ಪರಿಣಾಮಕಾರಿಯಾದ ಮೇಲ್ವಿಚಾರಣಾ ವ್ಯವಸ್ಥೆ ಅಸ್ತಿತ್ವದಲ್ಲಿದೆ ಮತ್ತು ನಿರ್ದೇಶಕ ಮಂಡಳ ನಿಗದಿಪಡಿಸಿರುವ ಷೆಡ್ಯೂಲ್ ದರಗಳನ್ವಯ ಕಾನೂನು ಶುಲ್ಕಗಳನ್ನು ಪಾವತಿಸಲಾಗಿದೆ.

**ಕಂಪನಿಯ ಹೆಚ್ಚುವರಿ ನಿರ್ದಿಷ್ಟ ನಿರ್ದೇಶನಗಳು:**

(ಎ) ಕಂಪನಿಯ ಮಾಲೀಕತ್ವದಲ್ಲಿ ನಿರುಪಯುಕ್ತವಾದ ಜಮೀನಿನ ಅತಿಕ್ರಮಣವನ್ನು ನಿಲ್ಲಿಸಲು ಅಗತ್ಯ ಕ್ರಮವಹಿಸುವುದನ್ನು ಪರಿಶೀಲಿಸಬಹುದಾಗಿದೆ. ಕಂಪನಿಯ ಜಮೀನು ಅತಿಕ್ರಮಣವಾಗಿದ್ದಲ್ಲಿ, ನ್ಯಾಯಾಲಯದಲ್ಲಿ ಪ್ರಕರಣ ಇದ್ದರೆ, ಉಪಯೋಗಿಸದೇ ಇದ್ದರೆ ಅಥವಾ ಹೆಚ್ಚುವರಿ ಎಂದು ಘೋಷಿಲ್ಪಟ್ಟರೆ, ವಿವರಗಳನ್ನು ಒದಗಿಸಬಹುದು:

ನಮಗೆ ತಿಳಿಸಿದಂತೆ ಒಟ್ಟು 80 ಎಕರೆ 67 ಗುಂಟೆಗಳನ್ನು ಅತಿಕ್ರಮಿಸಲಾಗಿದೆ ಮತ್ತು ಅತಿಕ್ರಮಣವನ್ನು ತೆರವುಗೊಳಿಸಲು ಅಗತ್ಯ ಪ್ರಯತ್ನ ಮತ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

(ಬಿ) ಪ್ರಸರಣೆಗಾಗಿ ಲಭ್ಯವಿರುವ ವಿದ್ಯುತ್ತಿಗೆ ಎದಿರಾಗಿ, ವಿದ್ಯುತ್ ಬಳಕೆಯ ಪದ್ಧತಿಯು ಉತ್ಪಾದನಾ ಕಂಪನಿಗಳೊಂದಿಗೆ ಅನುಗುಣವಾಗಿದೆಯೇ? ಇಲ್ಲದಿದ್ದರೆ, ಯಾವುದೇ ನಷ್ಟದ ಪ್ರಯುಕ್ತ, ವಿದ್ಯುತ್ ಉತ್ಪಾದನಾ ಕಂಪನಿಗಳು ಮಾಡಿರುವ ಕ್ಲೇಮಿನ ಬಗ್ಗೆ ಅಭಿಪ್ರಾಯ ಸಲ್ಲಿಸಬಹುದಾಗಿದೆ.

ಹೌದು. ನಮಗೆ ತಿಳಿಸಿರುವ ಪ್ರಕಾರ

(ಸಿ) ಪ್ರಸಕ್ತ ವರ್ಷದಲ್ಲಿ, ನಿಗದಿತ ಪ್ರಮಾಣಕ್ಕೆದಿರಾಗಿ, ಅಧಿಕ್ಯವಾಗಿರುವ ಪ್ರಸರಣ ನಷ್ಟ ಪ್ರಮಾಣವನ್ನು ಎಷ್ಟರ ಮಟ್ಟಿಗೆ ಭರಿಸಲಾಗಿದೆ, ಹಾಗೂ ಲೆಕ್ಕಪುಸ್ತಕಗಳಲ್ಲಿ ಸೂಕ್ತ ಕ್ರಮದಂತೆ ಲೆಕ್ಕೀಕರಿಸಲಾಗಿದೆಯೇ?

ನಮಗೆ ನೀಡಿದ ಮಾಹಿತಿ ಮತ್ತು ವಿವರಣೆ ಪ್ರಕಾರ 2016-17ನೇ ಸಾಲಿನ ಆರ್ಥಿಕ ವರ್ಷಕ್ಕೆ ಕೆ.ಇ.ಆರ್.ಸಿ. ಇಂದ ಅನುಮೋದಿಸಲ್ಪಟ್ಟ ಶೇ.3.47% ರ ಮಿತಿಯೊಳಗೆ ನಿಖರವಾದ ಪ್ರಸರಣ ನಷ್ಟ ಶೇ.3.28% ಇದೆ.

(ಡಿ) ಸಾಲ/ಅನುದಾನ/ಸಹಾಯ ಧನದ ಪರಿಣಾಮಕಾರಿ ಬಳಕೆಯ ಬಗ್ಗೆ ಪರಿಶೀಲಿಸುವುದು. ನಿಧಿ ಬಳಕೆಯಲ್ಲಿ ಮಾರ್ಪಾಡಾಗಿರುವ ಪ್ರಕರಣಗಳ ಪಟ್ಟಿ ಮಾಡುವುದು.

ಕಂಪನಿಯು ನಮಗೆ ಒದಗಿಸಿದ ಮಾಹಿತಿ ಮತ್ತು ನಮ್ಮ ಪರಿಶೀಲನೆ ಪ್ರಕಾರ ಅನುದಾನ/ಸಾಲದ ಬಳಕೆ ಮಾಡಲು ಪರಿಣಾಮಕಾರಿ ವ್ಯವಸ್ಥೆ ಇದೆ. ಕಂಪನಿಯು ಪ್ರಸಕ್ತ ವರ್ಷದಲ್ಲಿ ಯಾವುದೇ ಸಬ್ಸಿಡಿ ಸ್ವೀಕರಿಸಿರುವುದಿಲ್ಲ. ಅವಧಿ ಸಾಲಗಳ ಮೂಲಕ ಮಾಡಲಾದ ಸಾಲಗಳನ್ನು ಸಾಮಾನ್ಯವಾಗಿ ಸಾಲ ಪಡೆದ ಉದ್ದೇಶಕ್ಕಾಗಿಯೇ ಬಳಸಿಕೊಳ್ಳಲಾಗಿದೆ. ಕೆಲವು ಪ್ರಕರಣಗಳಲ್ಲಿ, ಅವಧಿ ಸಾಲಗಳನ್ನು ಯಾವ ಯೋಜನೆಗೋಸ್ಕರ ಸಾಲ ಮಂಜೂರಾಗಿದೆಯೋ ಆ ಉದ್ದೇಶಕ್ಕೆ ಸಂಪೂರ್ಣವಾಗಿ ಬಳಕೆ ಯಾಗಿರುವುದಿಲ್ಲ.

ಕಂಪನಿಯು ಪ್ರಸಕ್ತ ವರ್ಷದಲ್ಲಿ ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಗೆ ಅಂತರ ರಾಜ್ಯ ಪ್ರಸರಣ ವ್ಯವಸ್ಥೆಯನ್ನು ಸ್ಥಾಪಿಸಲು ರೂ. 7681.00 ಲಕ್ಷಗಳನ್ನು ಪಡೆದಿದೆ. ಸದರಿ ಅನುದಾನವು ದಿನಾಂಕ 31.03.2017ರಂದು ಸ್ವೀಕರಿಸಲ್ಪಟ್ಟಿದ್ದರಿಂದ ಕಂಪನಿಯು 31.03.2017ರಂತೆ ಯಾವುದೇ ಹಣವನ್ನು ಖರ್ಚು ಮಾಡಲು ಸಾಧ್ಯವಾಗಲಿಲ್ಲ.

ಕಂಪನಿಯು ಪ್ರಸಕ್ತ ವರ್ಷದಲ್ಲಿ ಪಿ.ಎಸ್.ಡಿ.ಎಫ್. ಯೋಜನೆ ಅಡಿಯಲ್ಲಿ 400 ಕೆವಿ ಮತ್ತು 220 ಕೆವಿ ಸಬ್ ಸ್ಟೇಷನ್‌ಗಳಲ್ಲಿ ನವೀಕರಣ ಮತ್ತು ರಕ್ಷಣಾ ವ್ಯವಸ್ಥೆಯ ಉನ್ನತೀಕರಣಕ್ಕಾಗಿ ರೂ. 604.20 ಲಕ್ಷಗಳನ್ನು ಪಡೆದಿರುತ್ತದೆ. ಸದರಿ ಅನುದಾನವು ದಿನಾಂಕ 31.03.2017ರಂದು ಸ್ವೀಕರಿಸಲ್ಪಟ್ಟಿದ್ದರಿಂದ ಕಂಪನಿಯು 31.03.2017ರಂತೆ ಯಾವುದೇ ಹಣವನ್ನು ಖರ್ಚು ಮಾಡಲು ಸಾಧ್ಯವಾಗಲಿಲ್ಲ.

(ಇ) ಐ.ಆರ್.ಆರ್. ಹಾಗೂ ಹಿಂಪಾವತಿ ಅವಧಿಯನ್ನೂ ಒಳಗೊಂಡಂತೆ ಪ್ರಮುಖ ಬಂಡವಾಳ ವೆಚ್ಚಗಳು/ ವಿಸ್ತರಣೆಯ ವೆಚ್ಚ ಪ್ರಯೋಜನ ವಿಶ್ಲೇಷಣೆಯನ್ನು ತಪಾಸಣೆಗೊಳಿಸಿ

ವಿದ್ಯುತ್ ಸರಬರಾಜು ಕಂಪನಿಗಳ ಮನವಿಯ ಮೇರೆಗೆ ಸಬ್-ಸ್ಟೇಷನ್‌ನ ಪ್ರಸರಣ ಮೂಲಸೌಕರ್ಯ ಮತ್ತು ಸಂಬಂದಿಸಿದ ಮಾರ್ಗ ಕಾಮಗಾರಿಗಳನ್ನು ಕಂಪನಿಯು ಸೃಜಿಸಿದೆ ಎಂದು ಆಡಳಿತ ಮಂಡಳಿಯು ನಮಗೆ ತಿಳಿಸಿರುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಎಆರ್‌ಆರ್ ಗಳನ್ನು ಆಧರಿಸಿ ಎಲ್ಲ ದರಗಳನ್ನು ನಿಗದಿಪಡಿಸುತ್ತದೆ, ಅದು ಸಂಬಂಧಿಸಿದ ಎಲ್ಲ ಕಾರ್ಯಾಚರಣೆ ವೆಚ್ಚಗಳನ್ನು ಮತ್ತು ಬಂಡವಾಳ ವೆಚ್ಚದ ಕಡೆಗೆ ಸವಕಳಿಯನ್ನು ಒಳಗೊಂಡಿರುತ್ತದೆ. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಕೆ.ಇ.ಆರ್.ಸಿ. ಯಿಂದ ನಿಗದಿಪಡಿಸಲಾದ ಸುಂಕದ ಭಾಗವಾಗಿ ಅದರ ಬಂಡವಾಳ ವೆಚ್ಚವನ್ನು ಮುಂಬರುವ ವರ್ಷಗಳಲ್ಲಿ ಪಡೆದುಕೊಳ್ಳುತ್ತದೆ.

**ಬಿ.ಪಿ. ರಾವ್ & ಕಂ. ಪರವಾಗಿ**
ಚಾರ್ಟರ್ಡ್ ಅಕೌಂಟೆಂಟ್ಸ್,
ಸಂಸ್ಥೆ ನೋ.ಸಂ.: 003116S

ಸ್ಥಳ: ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2017

**ಬಿ. ಸತೀಶ್ ರಾವ್,**
ಪಾಲುದಾರರು,
ಸದಸ್ಯತ್ವ ಸಂ.: 024559

**ನಮೂನೆ ಎಂ ಆರ್-3**

**ಸೆಕ್ರೇಟೇರಿಯಲ್ ಪರಿಶೋಧನಾ ವರದಿ**

**2017ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ**

**[ಕಂಪನಿ ಕಾಯ್ದೆ 2013ರ ಪ್ರಕರಣ 204(1) ಹಾಗೂ ಕಂಪನಿ (ನೇಮಕಾತಿ ಮತ್ತು ಸಿಬ್ಬಂದಿಯ ಸಂಭಾವನೆ) ನಿಯಮಗಳು, 2014ರ ನಿಯಮ 9ರ ಅನುಸಾರವಾಗಿ ]**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ,

ಅನ್ವಯಿತ ಶಾಸನಬದ್ಧ ಅವಕಾಶಗಳ ಪಾಲನೆಯಾಗಿ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಸಿಐಎನ್‌ಯು40109ಕೆಎ1999ಎಸ್‌ಜಿಸಿ025521) ಕಾವೇರಿ ಭವನ ಕೆ.ಜಿ ರೋಡ್ ಬೆಂಗಳೂರು ಕರ್ನಾಟಕ 560009 ಭಾರತದಲ್ಲಿ ನೊಂದಾಯಿತ ಕಛೇರಿಯನ್ನು ಹೊಂದಿದೆ. (ಇನ್ನು ಮುಂದೆ ಕಂಪನಿ ಎಂದು ಕರೆಯಲ್ಪಡುತ್ತದೆ) ಉತ್ತಮ ಆಚರಣೆಯ ಅನುಸಾರವಾಗಿ ನಾನು ಸೆಕ್ರೇಟೇರಿಯಲ್ ಪರಿಶೋಧನೆಯನ್ನು ನಡೆಸಿದ್ದೇನೆ. ನಿಗಮದ ವ್ಯವಹರಣೆ/ಶಾಸನಬದ್ಧ ಅನುಸರಣಾ ಪಾಲನೆಗಳ ಮೌಲ್ಯೀಕರಣವನ್ನು ಗೊತ್ತುಪಡಿಸಿಕೊಳ್ಳಲು ಯುಕ್ತ ಕಾರಣಗಳನ್ನು ಲಭ್ಯವಾಗಿಸುವ ರೀತಿಯಲ್ಲಿ ಸೆಕ್ರೇಟೇರಿಯಲ್ ಪರಿಶೋಧನೆಯನ್ನು ನಡೆಸಿ ತದನುಸಾರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇನೆ.

ಕಂಪನಿಯು ಷೇರು ಪೇಟೆಯಲ್ಲಿ ನೊಂದಾಯಿಸಲ್ಪಡದ ಕರ್ನಾಟಕ ಸರ್ಕಾರದ ಒಡೆತನದ ಸಾರ್ವಜನಿಕ ಕಂಪನಿಯಾಗಿದೆ. ಕಂಪನಿಯು ವಿದ್ಯುತ್ ಪ್ರಸರಣ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ. ಕಂಪನಿಗಳ ಕಾಯ್ದೆ ಮತ್ತು ಇತರ ಅನ್ವಯಿಸುವ ಕಾನೂನುಗಳನ್ನು ಒಳಗೊಂಡಂತೆ ಕಂಪನಿಯು ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳನ್ನು ಪಾಲಿಸುತ್ತಿದೆ. ಕಂಪನಿಯು ಯಾವುದೇ ವಿದೇಶಿ ಹೂಡಿಕೆಗಳನ್ನು ಹೊಂದಿರುವುದಿಲ್ಲ.ಅಧಿಸೂಚನೆ ಸಂಖ್ಯೆ GSR 463 (E) dated: 05.06.2015 and dated: 13.06.2017 ರನ್ವಯ ಸರ್ಕಾರಿ ಕಂಪನಿಗಳಿಗೆ ನೀಡಿರುವ ಕೆಲವು ಅವಕಾಶಗಳನ್ನು ಕಂಪನಿ ಕಾಯ್ದೆ 2013 ಮತ್ತು ನಿಯಮಗಳ ಅನುಸಾರ ವಿನಾಯಿತಿಯನ್ನು ಪಡೆದಿದೆ.

ಕಂಪನಿಯ ಲೆಕ್ಕಪುಸ್ತಕ, ಕಾಗದಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ಕಂಪನಿಯು ನಿರ್ವಹಿಸಿರುವ ಇತರ ದಾಖಲೆಗಳು, ಸೆಕ್ರೇಟೇರಿಯಲ್ ಪರಿಶೋಧನೆಯ ಸಮಯದಲ್ಲಿ ಕಂಪನಿ, ಕಂಪನಿಯ ಅಧಿಕಾರಿಗಳು, ಕಾರ್ಯಭಾರಿಗಳು, ಅಧಿಕೃತ ಪ್ರತಿನಿಧಿಗಳು ಒದಗಿಸಿರುವ ಮಾಹಿತಿಗಳ ಬಗ್ಗೆ ನಡೆಸಿದ ನನ್ನ ವರದಿಯನ್ನು ಆಧರಿಸಿ, ನನ್ನ ಅಭಿಪ್ರಾಯದ ಪ್ರಕಾರ, 2017ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷದ ಪರಿಶೋಧನೆಯ ಸಮಯದಲ್ಲಿ, ಕಂಪನಿಯು ಕೆಳಗೆ ತಿಳಿಸಿರುವ ಶಾಸನಬದ್ಧ ಅವಕಾಶಗಳನ್ನು ಪಾಲಿಸಿದೆ, ಹಾಗೂ ಈ ಮುಂದೆ ಸಲ್ಲಿಸಿರುವ ವರದಿಗೆ ಒಳಪಟ್ಟಂತೆ, ಆ ಮಟ್ಟಿಗೆ ಸೂಕ್ತ ನಿಗಮ ವ್ಯವಹರಣೆ ಹಾಗೂ ಅನುಸರಣಾ ಯಾಂತ್ರಿಕತೆಯ ಕಾರ್ಯಪ್ರಕ್ರಿಯೆಯನ್ನು ಹೊಂದಿದೆ.

ಕೆಳಕಂಡ ಅವಕಾಶಗಳ ಪ್ರಕಾರ, 2017ರ ಮಾರ್ಚ್, 31ಕ್ಕೆ ಮುಕ್ತಾಯಗೊಂಡ ಆರ್ಥಿಕ ವರ್ಷಕ್ಕೆ ಕಂಪನಿಯು ನಿರ್ವಹಿಸಿರುವ ಲೆಕ್ಕಪುಸ್ತಕ, ಕಾಗದಪತ್ರಗಳು, ನಡಾವಳಿ ಪುಸ್ತಕ, ನಮೂನೆ, ಮಂಡಿತ ಸಲ್ಲಿಕೆಗಳು ಹಾಗೂ ನಿರ್ವಹಿತ ಇತರ ದಾಖಲೆಗಳನ್ನು ತಪಾಸಣೆಗೊಳಪಡಿಸಿದ್ದೇವೆ:

(i) ಕಂಪನಿ ಕಾಯ್ದೆ,2013(ಕಾಯ್ದೆ) ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು

(ii) ಒಪ್ಪಂದಗಳ ಕಾಯ್ದೆ

(iii) ಸೆಕ್ಯುರಿಟೀಸ್ ಒಪ್ಪಂದಗಳು(ನಿಬಂಧನೆಗಳು)ಕಾಯ್ದೆ,1956 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು–ಅನ್ವಯಿಸುವುದಿಲ್ಲ.

(iv) ಠೇವಣಿದಾರ ಕಾಯ್ದೆ,1966 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಬಂಧನೆಗಳು ಮತ್ತು ಉಪನಿಯಮಗಳು–ಅನ್ವಯಿಸುವುದಿಲ್ಲ.

(v) ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಹಾಗೂ ಬಾಹ್ಯ ವಾಣಿಜ್ಯ ಸಾಲ ಪಡೆಯುವಿಕೆಯ ಮಟ್ಟಿಗೆ ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ,1999 ಹಾಗೂ ಅದರಡಿಯಲ್ಲಿ ರೂಪಿಸಿರುವ ನಿಯಮಗಳು–ಅನ್ವಯಿಸುವುದಿಲ್ಲ.

(vi) ವಿದ್ಯುಚ್ಛಕ್ತಿ ಕಾಯ್ದೆ 2003 ಹಾಗೂ ಅದರಡಿಯಲ್ಲಿ ರೂಪಿಸಿದ ನಿಯಮಗಳು ಹಾಗೂ ನಿರ್ದಿಷ್ಟವಾಗಿ ವಾರ್ಷಿಕ ಪ್ರದರ್ಶನ ವಿಮರ್ಶೆ (APR) ಕವಿನಿ ಆಯೋಗದನ್ವಯ ನಿಯಂತ್ರಣ ವ್ಯವಸ್ಥೆ.

(vii) ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳ ನಿರ್ಮಾಣ ಮತ್ತು ತಾಂತ್ರಿಕ ಮಾರ್ಗಗಳ ತಾಂತ್ರಿಕ ಗುಣಮಟ್ಟ) ನಿಯಮಗಳು, 2010.

(viii) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸರಬರಾಜು ಹಾಗೂ ಸುರಕ್ಷತೆ ಸಂಬಂಧವಾದ ಕ್ರಮಗಳು) ನಿಬಂಧನೆಗಳು, 2010 (2015ರಲ್ಲಿ ತಿದ್ದುಪಡಿ ಮಾಡಿರುವಂತೆ)

(ix) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ (ವಿದ್ಯುತ್ ಸ್ಥಾವರಗಳು ಹಾಗೂ ವಿದ್ಯುತ್ ಮಾರ್ಗಗಳ ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಗಳ ಸುರಕ್ಷಾ ಅಗತ್ಯತೆಗಳು) ನಿಬಂಧನೆಗಳು, 2011.

(x) ಭಾರತೀಯ ವಿದ್ಯುಚ್ಛಕ್ತಿ ಜಾಲ ಸಂಹಿತೆ ನಿಬಂಧನೆಗಳು, 2010.

(xi) ವಿದ್ಯುತ್ ಸಂರಕ್ಷಣೆ ಕಾಯ್ದೆ, 2011.

(xii) ಅರಣ್ಯ(ಸಂರಕ್ಷಣೆ) ಕಾಯ್ದೆ, 1980.

ಕಂಪನಿಗೆ ಅನ್ವಯವಾಗುವ ಇತರ ಅನ್ವಯಿಸುವ ಕಾಯ್ದೆಗಳು, ಕಾನೂನುಗಳು, ನಿಯಮಗಳು, ನಿಯಮಾವಳಿಗಳು, ಮಾರ್ಗದರ್ಶಿ ಸೂತ್ರಗಳು ಮತ್ತು ಕೆಳಗಿನ ಪ್ರಮುಖ ಗುಂಪುಗಳು ಅಡಿಯಲ್ಲಿ ವರ್ಗೀಕರಿಸಲಾದ ಅನುಸರಣೆಗಳನ್ನು ಖಾತರಿಪಡಿಸುವ ಸಲುವಾಗಿ ಕಂಪನಿಯಿಂದ ಸ್ಥಾಪಿಸಲಾದ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ನಾನು ಪರಿಶೀಲಿಸಿದ್ದೇನೆ.

1. ಗಾಳಿ (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1961
2. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974
3. ನೀರು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಸೆಸ್ ಕಾಯ್ದೆ, 1977
4. ಪರಿಸರ (ರಕ್ಷಣೆ) ಕಾಯ್ದೆ, 1986
5. ಗ್ರಾಹಕ ರಕ್ಷಣೆ ಕಾಯ್ದೆ, 1986
6. ಅಪ್ರೆಂಟಿಸ್ ಕಾಯ್ದೆ, 1961
7. ಕಾರ್ಖಾನೆಗಳು 1948 ಮತ್ತು ನಿಯಮಗಳು
8. ಕೈಗಾರಿಕ ವಿವಾದಗಳ ಕಾಯ್ದೆ, 1947
9. ಮಾತೃತ್ವ ಸೌಲಭ್ಯ ಕಾಯ್ದೆ (ಇಎಸ್ಐ ಕಾಯ್ದೆಯ ವ್ಯಾಪ್ತಿಯ ಹೊರಗಿನ ಮಹಿಳಾ ನೌಕರರಿಗೆ ಅನ್ವಯಿಸುತ್ತದೆ)
10. ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013

11. ಒಪ್ಪಂದದ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕಾಯ್ದೆ, 1970, ಒಪ್ಪಂದದ ಕಾರ್ಮಿಕ (ನಿಯಂತ್ರಣ ಮತ್ತು ನಿರ್ಮೂಲನೆ) ಕರ್ನಾಟಕ ನಿಯಮಗಳು 1974

12. ಬೋನಸ್ ಪಾವತಿ ಕಾಯ್ದೆ, 1965

13. ವೇತನ ಪಾವತಿ ಕಾಯ್ದೆ, 1936

14. ಕಾರ್ಮಿಕರ ಪರಿಹಾರ ಕಾಯ್ದೆ, 1923

15. ಕವಿನಿ ಆಯೋಗ (ಸಾಮಾನ್ಯ ಮತ್ತು ನೀತಿ ಪ್ರಕ್ರಿಯೆಗಳ) ನಿಯಮಗಳು, 2000

16. ಕವಿನಿ ಆಯೋಗ (ಪರವಾನಗಿ) ನಿಯಮಗಳು, 2000

17. ಕವಿನಿ ಆಯೋಗ (ಶುಲ್ಕ) ನಿಯಮಗಳು, 2016

18. ಕವಿನಿ ಆಯೋಗ (ದರಪಟ್ಟಿ) ನಿಯಮಗಳು, 2000

19. ಕವಿನಿ ಆಯೋಗ (ವಿದ್ಯುಚ್ಛಕ್ತಿ ಸರಬರಾಜಿನ ವೆಚ್ಚವನ್ನು ಮರುಪಡೆದುಕೊಳ್ಳುವುದು) ನಿಯಮಗಳು, 2004

20. ಕವಿನಿ ಆಯೋಗ (ವಿದ್ಯುತ್ ಸರಬರಾಜು) ಕೋಡ್, 2004

21. ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ ಕೋಡ್, 2005

22. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಸೇವಾ ನಿಯಮಗಳು.

23. ಕರ್ನಾಟಕ ರಾಜ್ಯದ ವಿತರಣಾ ಪರವಾನಗೆದಾರರ ವಿದ್ಯುತ್ ಸರಬರಾಜು ನಿಯಮಗಳು, (ಗೆಜೆಟ್ ಅಧಿಸೂಚನೆ ದಿನಾಂಕ:17.06.2006 )

24. ಕವಿನಿ ಆಯೋಗದ ಅಧಿಸೂಚನೆ ಸಂಖ್ಯೆ: KERC/COS/D/07/10 Dated:01.07.2016.

ನಾನು ಈ ಕೆಳಗಿನವುಗಳ ಅನುಪಾಲನೆಯನ್ನು ಸಹ ಪರಿಶೀಲಿಸಿದ್ದೇನೆ.

1. ಐ.ಸಿ.ಎಸ್.ಐ. ಹೊರಡಿಸಿರುವ ಸೆಕ್ರೆಟೇರಿಯಲ್ ನಿರ್ದಿಷ್ಟತೆಗಳು.

2. ಷೇರು ಪೇಟೆಯಲ್ಲಿ ನೊಂದಾಯಿಸಲು ಕಂಪನಿಯು ಮಾಡಿಕೊಂಡ ಒಪ್ಪಂದ ರಾಷ್ಟ್ರೀಯ ಸ್ಟಾಕ್ ಎಕ್ಸ್ಚೇಂಜ್ ಮತ್ತು ಮುಂಬೈ ಸ್ಟಾಕ್ ಎಕ್ಸ್ಚೇಂಜ್ ನಿಯಮಿತಗಳೊಂದಿಗೆ ಅನ್ವಯಿಸುವುದಿಲ್ಲ.

3. ಸೆಕ್ಯುರಿಟೀಸ್ ಮತ್ತು ಇಂಡಿಯಾ ಎಕ್ಸ್ಚೇಂಜ್ ಬೋರ್ಡ್ (ಲಿಸ್ಟಿಂಗ್ ರೆಗ್ಯುಲೇಷನ್ಸ್ ಮತ್ತು ಡಿಸ್ಕ್ಲೋಸರ್ ಅವಶ್ಯಕತೆಗಳು) ನಿಯಮಗಳು, 2015– ಅನ್ವಯಿಸುವುದಿಲ್ಲ.

ನನ್ನ ಪರಿಶೀಲನೆಯ ಸಮಯದಲ್ಲಿ, ವಿವಿಧ ಅನ್ವಯಿತ ಕಾನೂನು ನಿಯಮಗಳನ್ನು ಪಾಲಿಸುವುದನ್ನು ಖಚಿತಪಡಿಸಿಕೊಂಡು ಅನುಷ್ಠಾನಗೊಳಿಸಲು ಅಗತ್ಯವಾದ ಕಾರ್ಯಪ್ರಕ್ರಿಯೆ ಹಾಗೂ ವ್ಯವಸ್ಥೆಗಳಿದ್ದು, ಮೇಲೆ ಸೂಚಿಸಿರುವ ಕಾಯ್ದೆ, ನಿಯಮಗಳು, ನಿಬಂಧನೆಗಳು, ಮಾರ್ಗದರ್ಶಕಗಳು, ನಿರ್ದಿಷ್ಟತೆಗಳು, ಇತ್ಯಾದಿಗಳ ಅವಕಾಶವನ್ನು ಕಲ್ಪಿಸಿದೆಯೇ ಎಂದು ತಿಳಿಸುತ್ತೇನೆ. ಈ ಕೆಳಗಿನವುಗಳನ್ನು ಹೊರತುಪಡಿಸಿ.

"ಇತರೆ ಕಾನೂನುಗಳ ಬಗ್ಗೆ, ಕಂಪನಿಯು ಸುಸ್ಥಾಪಿತ ಸರ್ಕಾರಿ ಕಂಪನಿಯಾಗಿದೆ ಮತ್ತು ಸಾಮಾನ್ಯವಾಗಿ, ನೇಮಕಾತಿ, ಪದೋನ್ನತಿ, ರಜೆ ಇತರೆ ಮತ್ತು ಖರೀದಿಗಳ ನಿಯಮಗಳನ್ನು ಒಳಗೊಂಡಂತೆ ಇತರೆ ಕಾನೂನುಗಳ ನಿಬಂಧನೆಗಳು ಸರಿಯಾಗಿ ಅನುಸರಣೆ ಮಾಡಲಾಗಿದೆ.

ನಾನು ಹಣಕಾಸು ಕಾನೂನುಗಳಾದ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ ಕಾನೂನುಗಳ ಅನುಸರಣೆ ಪರಿಶೀಲಿಸಿರುವುದಿಲ್ಲ ಏಕೆಂದರೆ ಅದು ಶಾಸನ ಬದ್ಧ ಲೆಕ್ಕ ಪರಿಶೋಧಕರ ಮತ್ತು ಇತರೆ ವೃತ್ತಿ ಪರರಿಂದ ಪರಿಶೀಲನೆಗೆ ಒಳಪಟ್ಟಿರುತ್ತದೆ.

**ನಾನು ವರದಿಯನ್ನು ಮುಂದುವರಿಸಿ ತಿಳಿಸುವುದೇನೆಂದರೆ** ಕಂಪನಿಯ ನಿರ್ದೇಶಕ ಮಂಡಳಿಯನ್ನು ಯುಕ್ತ ರೀತಿಯಲ್ಲಿ ರಚಿಸಲಾಗಿದೆ. ಕಂಪನಿಯು ಈ ಕೆಳಕಂಡ ಸಮಿತಿಗಳನ್ನು ರಚಿಸಿದೆ.

1. ಖರೀದಿ ಸಮಿತಿ
2. ಪರಿಶೋಧನ ಸಮಿತಿ
3. ನಿಗಮ ಸಾಮಾಜಿಕ ಹೊಣೆಗಾರಿಕೆ ಸಮಿತಿ

ಮಂಡಳಿ ಸಭೆಗಳು ನಡೆಯುವ ದಿನಾಂಕ, ಕಾರ್ಯಸೂಚಿ, ಕಾರ್ಯಸೂಚಿ ಸಂಬಂಧವಾದ ವಿವರವಾದ ಟಿಪ್ಪಣಿಗಳು ಇವುಗಳ ಸಹಿತವಾದ ಸಭೆ ಸೂಚನೆಯ ವಿವರವನ್ನು ಎಲ್ಲ ನಿರ್ದೇಶಕರುಗಳಿಗೆ ಮುಂಚಿತವಾಗಿಯೇ ಕಳುಹಿಸಲಾಗಿದೆ. ನಿರ್ದೇಶಕರುಗಳು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಅನುಕೂಲಕರವಾಗಿಸಲು, ಮತ್ತಷ್ಟು ಮಾಹಿತಿ ಪಡೆಯುವಿಕೆ, ಕಾರ್ಯಸೂಚಿಯಲ್ಲಿನ ಮಾಹಿತಿಗಳ ಸ್ಪಷ್ಟೀಕರಣ ಸಂಬಂಧವಾದ ವ್ಯವಸ್ಥಿತ ಏರ್ಪಾಡು ಇದೆ.

ನಿರ್ದೇಶಕರ ಮಂಡಳಿಯ ಮತ್ತು ಉಪ ಸಮಿತಿಯ ಸಭಾ ನಡುವಳಿಗಳನ್ನು ಯುಕ್ತ ರೀತಿಯಲ್ಲಿ ದಾಖಲಿಸಿದೆ.

**ನಾನು ವರದಿಯನ್ನು ಮುಂದುವರಿಸುತ್ತಾ ತಿಳಿಸುವುದೇನೆಂದರೆ** ಕಂಪನಿಯ ಗಾತ್ರ ಹಾಗೂ ಕಾರ್ಯಾಚರಣೆಗೆ ಅನುಸಾರವಾಗಿ, ಅನ್ವಯಿತ ಕಾನೂನುಗಳು, ನಿಯಮಗಳು, ನಿಬಂಧನೆಗಳು ಹಾಗೂ ಮಾರ್ಗದರ್ಶನ'ಗಳ ಪಾಲನೆ ಸಂಬಂಧವಾಗಿ, ಕಂಪನಿಯಲ್ಲಿ ಸಾಕಷ್ಟು ಪ್ರಮಾಣದ ವ್ಯವಸ್ಥೆ ಹಾಗೂ ಕಾರ್ಯಪ್ರಕ್ರಿಯೆಗಳಿವೆ ಎಂದು ವರದಿ ಮಾಡುತ್ತಾಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಂದ ಇತರೆ ಅನ್ವಯವಾಗುವ ಕಾನೂನುಗಳ ಅನುಸರಣೆಯ ಪ್ರಮಾಣಪತ್ರಗಳನ್ನು ಪಡೆಯಲಾಗಿದೆ.

**ಸಹಿ**
**ಎಸ್.ವಿಶ್ವನಾಥನ್**
ಕಂಪನಿ ಕಾರ್ಯದರ್ಶಿಗಳು

ಎಫ್‌ಸಿಎಸ್ ಸಂಖ್ಯೆ: 5284
ಸಿಪಿ ಸಂಖ್ಯೆ: 5284

ಸ್ಥಳ: ಬೆಂಗಳೂರು
ದಿನಾಂಕ: 22.11.2017

ಲಗತ್ತು: ಅನುಬಂಧ–ಎ

**ಅನುಬಂಧ– ಎ**

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಸದಸ್ಯರಿಗೆ,

ಸಮ ದಿನಾಂಕದ ನಮ್ಮ ವರದಿಯನ್ನು ಈ ಪತ್ರದೊಂದಿಗೆ ಪರಾಮರ್ಶಿಸುವುದು.

1. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ನಿರ್ವಹಣೆಯು ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ನಾನು ನಡೆಸಿದ ಪರಿಶೋಧನೆಯಲ್ಲಿ ಒಳಪಡಿಸಿದ ಈ ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳ ಬಗ್ಗೆ ಅಭಿಪ್ರಾಯವನ್ನು ಸೂಚಿಸುವುದಷ್ಟೇ ನನ್ನ ಜವಾಬ್ದಾರಿಯಾಗಿರುತ್ತದೆ.

2. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿನ ಅಂಶಗಳ ನಿಖರತೆಯ ಬಗ್ಗೆ ಯುಕ್ತ ಖಚಿತತೆಯನ್ನು ಪಡೆದುಕೊಳ್ಳಲು ಯುಕ್ತವಾದ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳನ್ನು ಅನುಸರಿಸಿದ್ದೇನೆ. ಸೆಕ್ರೆಟೇರಿಯಲ್ ದಸ್ತಾವೇಜು ದಾಖಲೆಗಳಲ್ಲಿ ನಿಖರ ಅಂಶಗಳನ್ನು ಬಿಂಬಿಸಿರುವುದನ್ನು ಖಚಿತಪಡಿಸಿಕೊಳ್ಳಲು ಪರೀಕ್ಷಾ ಆಧಾರದ ಮೇಲೆ ಪರಿಶೀಲನೆಯನ್ನು ನಡೆಸಲಾಯಿತು. ನಾನು ಅನುಸರಿಸಿದ ಯುಕ್ತ ಪರಿಶೋಧನಾ ಆಚರಣೆ ಹಾಗೂ ಪ್ರಕ್ರಿಯೆಗಳು ನನ್ನ ಅಭಿಪ್ರಾಯ ಸಲ್ಲಿಕೆಗೆ ಯುಕ್ತ ಆಧಾರಗಳಾಗಿವೆ ಎಂದು ನಂಬಿದ್ದೇನೆ.

3. ಕಂಪನಿಯ ಲೆಕ್ಕಪತ್ರಗಳು ಹಾಗೂ ಆರ್ಥಿಕ ನಿರೂಪಣಾ ಪಟ್ಟಿಗಳ ಯುಕ್ತತೆ ಹಾಗೂ ನಿಖರತೆಯನ್ನು ನಾನು ಪರಿಶೀಲಿಸಿರುವುದಿಲ್ಲ.

4. ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು ಹಾಗೂ ಮಹತ್ವ ಸಂಭವಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವೆಡೆಯಲ್ಲೆಲ್ಲಾ ವ್ಯವಸ್ಥಾಪಕ ಮಂಡಳಿಯ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

5. ನಿಗಮದ ಅವಕಾಶಗಳು ಹಾಗೂ ಇತರ ಅನ್ವಯಿತ ಕಾನೂನು, ನಿಯಮಗಳು, ನಿಬಂಧನೆಗಳು, ನಿರ್ದಿಷ್ಟತೆಗಳನ್ನು ವ್ಯವಸ್ಥಾಪಕ ಮಂಡಳಿಯು ಪಾಲಿಸತಕ್ಕದ್ದು. ನನ್ನ ಪರಿಶೀಲನೆಯು ಪರೀಕ್ಷಾ ಆಧಾರದಂತೆ ಕಾರ್ಯಪ್ರಕ್ರಿಯೆಯನ್ನು ಪರಿಶೀಲಿಸುವುದಕ್ಕೆ ಸೀಮಿತವಾಗಿತ್ತು.

6. ಸೆಕ್ರೆಟೇರಿಯಲ್ ಪರಿಶೋಧನಾ ವರದಿಯು, ಭವಿಷ್ಯದಲ್ಲಿ ಕಂಪನಿಯ ಕಾರ್ಯಸಾಧ್ಯತೆಯನ್ನು ಖಚಿತಪಡಿಸುವ ಅಥವಾ ವ್ಯವಸ್ಥಾಪಕ ಮಂಡಳಿಯು ಕಂಪನಿಯ ವ್ಯವಹರಣೆಗಳನ್ನು ಪರಿಣಾಮಕಾರಿಯಾಗಿ ಅಥವಾ ದಕ್ಷತಾಬದ್ಧವಾಗಿ ನಡೆಸಿರುವ ಸಂಬಂಧವಾಗಿಲ್ಲ.

**ಸಹಿ**
**ಎಸ್.ವಿಶ್ವನಾಥನ್**
ಕಂಪನಿ ಕಾರ್ಯದರ್ಶಿಗಳು

ಎಫ್‌ಸಿಎಸ್ ಸಂಖ್ಯೆ: 5284
ಸಿಪಿ ಸಂಖ್ಯೆ: 5284

ಸ್ಥಳ: ಬೆಂಗಳೂರು
ದಿನಾಂಕ: 22.11.2017

**ಕಂಪನಿ ಕಾಯ್ದೆ 2013ರ ಪ್ರಕರಣ 143(6) (ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇದರ 31ನೇ ಮಾರ್ಚ್ 2017ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಹಾಗೂ ಲೆಕ್ಕಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಅಭಿಪ್ರಾಯಗಳು.**

ಕಂಪನಿ ಕಾಯ್ದೆ 2013ರ ಅಡಿಯಲ್ಲಿ ನಿಗದಿಪಡಿಸಿರುವ ಆರ್ಥಿಕ ಕಾರ್ಯನೀತಿ ಚೌಕಟ್ಟಿನ ಪ್ರಕಾರ, 31ನೇ ಮಾರ್ಚ್ 2017ಕ್ಕೆ ಅಂತ್ಯಗೊಂಡಂತೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಾರ್ಷಿಕ ಆರ್ಥಿಕ ನಿರೂಪಣೆಯ ಲೆಕ್ಕಪತ್ರ ಪಟ್ಟಿಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಕಂಪನಿಯ ವ್ಯವಸ್ಥಾಪಕ ಮಂಡಳಿಯದ್ದಾಗಿದೆ. ಕಾಯ್ದೆಯ ಪ್ರಕರಣ 139(5) ಮತ್ತು 139(7)1 ರ ಅಡಿಯಲ್ಲಿ ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರಿಂದ ನೇಮಿಸಲ್ಪಟ್ಟಿರುವ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಾಯ್ದೆಯ ಪ್ರಕರಣ 143(10)ರಲ್ಲಿ ನಿಗದಿಪಡಿಸಿರುವ ಪರಿಶೋಧನೆ ಮತ್ತು ಖಚಿತ ಗುಣಮಟ್ಟಗಳ ಪ್ರಕಾರ, ಈ ಆರ್ಥಿಕ ನಿರೂಪಣೆ ಮತ್ತು ಲೆಕ್ಕಪತ್ರ ಪಟ್ಟಿಗಳ ಮೇಲೆ, ಸ್ವಾಯತ್ತ ಪರಿಶೋಧನೆ ನಡೆಸಿ ಕಾಯ್ದೆಯ ಪ್ರಕರಣ 143ರ ಅಡಿಯಲ್ಲಿ ಅಭಿಪ್ರಾಯ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಪರಿಶೋಧನಾ ಕಾರ್ಯವನ್ನು ಸದರಿ ಶಾಸನಬದ್ಧ ಲೆಕ್ಕಪರಿಶೋಧಕರು ಪೂರ್ಣಗೊಳಿಸಿದ್ದಾರೆಂದು ದಿನಾಂಕ 06.09.2017ರ ಪರಿಶೋಧನಾ ವರದಿಯ ಮೂಲಕ ನಿರೂಪಿಸಲ್ಪಟ್ಟಿದೆ.

ಕಂಪನಿ ಕಾಯ್ದೆಯ ಪ್ರಕರಣ 143(6)(ಬಿ) ಅಡಿಯಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 31ನೇ ಮಾರ್ಚ್ 2017ರ ಅವಧಿಗೆ ಮುಕ್ತಾಯಗೊಂಡ ಆರ್ಥಿಕ ನಿರೂಪಣೆ ಮತ್ತು ಲೆಕ್ಕಪತ್ರಗಳ ಕುರಿತು ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ ಪೂರಕ ಪರಿಶೋಧನೆ ನಡೆಸಿದ್ದೇನೆ. ಶಾಸನಬದ್ಧ ಲೆಕ್ಕಪರಿಶೋಧಕರ ಪರಿಶೋಧಿತ ಕಾರ್ಯನಿರೂಪಣಾ ಮಾಹಿತಿಗಳನ್ನು ಪರಾಮರ್ಶಿಸದೆ ಹಾಗೂ ಕೇವಲ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿ ಸಿಬ್ಬಂದಿಯೊಡನೆ ನಡೆಸಿದ ವಿಚಾರಣೆ ಹಾಗೂ ಕೆಲವು ಆಯ್ದ ಲೆಕ್ಕಪತ್ರ ದಾಖಲೆಗಳ ಪರಿಶೀಲನೆ ಮೂಲಕ ವೈಯಕ್ತಿಕವಾಗಿ ಈ ಪೂರಕ ಲೆಕ್ಕಪರಿಶೋಧನಾ ಕಾರ್ಯವನ್ನು ನಿರ್ವಹಿಸಲಾಗಿದೆ.ನನ್ನ ಪೂರಕ ಲೆಕ್ಕಪರಿಶೋಧನೆಯನ್ನಾಧರಿಸಿ, ನನ್ನ ಗಮನಕ್ಕೆ ಬಂದಿರುವ ಗಮನಾರ್ಹ ವಿಷಯಗಳನ್ನು ಕಾಯ್ದೆಯ ಪ್ರಕರಣ 143(6)(ಬಿ) ಅಡಿಯಲ್ಲಿ ಮುಖ್ಯಾಂಶಗಳನ್ನಾಗಿಸಬಯಸುತ್ತೇನೆ ಮತ್ತು ಇವುಗಳು ಹಣಕಾಸಿನ ಹೇಳಿಕೆಗಳು ಮತ್ತು ಸಂಬಂಧಿತ ಲೆಕ್ಕಪರಿಶೋಧನಾ ವರದಿಯ ಉತ್ತಮ ತಿಳುವಳಿಕೆಯನ್ನು ಸಕ್ರಿಯಗೊಳಿಸಲು ನನ್ನ ದೃಷ್ಟಿಯಲ್ಲಿ ಅಗತ್ಯವಾಗಿದೆ.

**ಲಾಭದ ಮೇಲಿನ ಅಭಿಪ್ರಾಯಗಳು:**

1. **ಲಾಭ ಮತ್ತು ನಷ್ಟದ ಖಾತೆ**

**ತೆರಿಗೆಯ ಮುಂಚಿನ ಲಾಭ: ರೂ.1915.08 ಕೋಟಿ.**

ಕಂಪನಿಯ ಪ್ರಸ್ತಾವನೆಯನ್ನಾಧರಿಸಿ (21.07.2017)ಕರ್ನಾಟಕ ಸರ್ಕಾರವು ತನ್ನ ಸರ್ಕಾರಿ ಆದೇಶ ದಿನಾಂಕ: 31.07.2017 ರಲ್ಲಿ ಈ ಕೆಳಗೆ ನಮೂದಿಸಿದ ಕಂಪನಿಯ ಬಾಕಿಯನ್ನು (ಪಾವತಿಗಳು/ಸ್ವೀಕೃತಿಗಳು)ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾಯಿಸಲು ಆದೇಶಿಸಿದೆ.

1. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಗೆ ಪಾವತಿಸಬೇಕಾದ ಭಾಗಶ: ಬಡ್ಡಿ ಬಾಕಿ ಮೊತ್ತ ರೂ.467.52 ಕೋಟಿಗಳು.
2. ಕೆ.ಪಿ.ಸಿ.ಎಲ್. ಗೆ ಪಾವತಿಸಬೇಕಾದ ವಿದ್ಯುತ್ ಖರೀದಿ ವೆಚ್ಚ ರೂ.888.89; ಮತ್ತು
3. ಕರ್ನಾಟಕ ಸರ್ಕಾರದಿಂದ ಸ್ವೀಕಾರಾರ್ಹವಾದ ಹಿಂದಿನ ಆರ್.ಇ. ಸಬ್ಸಿಡಿ ಮೊತ್ತ ರೂ.986.50 ಕೋಟಿ.

ಸರ್ಕಾರಿ ಆದೇಶದ ಪ್ರಕಾರ, ಮೇಲಿನ ಬಾಕಿಯನ್ನು ವರ್ಗಾವಣೆ ಮಾಡಿದ ಮೇಲೆ ನಿವ್ವಳ ವ್ಯತ್ಯಾಸವನ್ನು ಪ್ರತ್ಯೇಕ ಖಾತೆಯಲ್ಲಿ ಲೆಕ್ಕಹಾಕಬೇಕು 'ನಿವ್ವಳ ಮೌಲ್ಯಕ್ಕೆ ಪ್ರಸ್ತಾವಿತ ಹೊಂದಾಣಿಕೆ'. ಮೇಲೆ ತಿಳಿಸಿರುವ ಬಾಕಿಗಳನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾವಣೆ ಮಾಡುವಾಗ, ಕಂಪನಿಯು ಎರಡು ವಹಿವಾಟುಗಳನ್ನು ರವಾನಿಸಿತು ಅವುಗಳೆಂದರೆ; (i) ವಿದ್ಯುತ್ ಖರೀದಿ ವೆಚ್ಚ ಮತ್ತು (ii) 'ನಿವ್ವಳ ಮೌಲ್ಯಕ್ಕೆ ಪ್ರಸ್ತಾವಿತ ಹೊಂದಾಣಿಕೆ' ಖಾತೆ

ಮೂಲಕ ಸ್ವೀಕಾರಾರ್ಹವಾದ ಆರ್.ಇ. ಸಬ್ಸಿಡಿ, ಆದಾಗ್ಯೂ, ಹಿಂದಿನ ವರ್ಷಗಳಲ್ಲಿ ಖರ್ಚು ಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾದ ಪ್ರಸ್ತಾವನೆಯಲ್ಲಿ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017ರ ಷರತ್ತುಗಳ ಎದುರಾಗಿ ಆದಾಯದ ಬಡ್ಡಿ ಬಾಕಿ ಮೊತ್ತ ರೂ. 467.52 ಕೋಟಿಯನ್ನು ವರ್ಗಾವಣೆ ಮಾಡಲಾಗಿದೆ. ಕೆ.ಪಿ.ಸಿ.ಎಲ್. ಗೆ ಪಾವತಿಸಬೇಕಾಗಿರುವ ವಿದ್ಯುತ್ ಖರೀದಿ ವೆಚ್ಚವನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸ್ವೀಕರಿಸಬೇಕಾಗಿರುವ ಆರ್.ಇ. ಸಬ್ಸಿಡಿಯನ್ನು ಹಿಂದಿನ ವರ್ಷಗಳಲ್ಲಿ ಆದಾಯ ಮತ್ತು ಖರ್ಚು ಎಂದು ಪ್ರತ್ಯೇಕವಾಗಿ ಲೆಕ್ಕಹಾಕಲಾಗಿದೆ, ಇದೇ ಸ್ವರೂಪದ ಲೆಕ್ಕಪತ್ರ ಉಪಚಾರವು ಎಲ್ಲ ಮೂರೂ ವ್ಯವಹಾರಗಳಿಗೆ ನೀಡಬಹುದಾಗಿದೆ, ಈ ಕೆಳಗಿನವುಗಳ ಕಾರಣದಿಂದಾಗಿ ಇದೇ ಸ್ವರೂಪದ ವ್ಯವಹಾರಗಳಿಗೆ ವಿಭಿನ್ನ ಸ್ವರೂಪದ ಲೆಕ್ಕಪರಿಶೋಧಕ ಉಪಚಾರದಿಂದ ರೂ.97.71 ಕೋಟಿಯಷ್ಟು ಲಾಭದ ಮೇಲುಗೈ ಸಾಧಿಸಿತು.

ಹಿಂದಿನ ವರ್ಷಗಳಿಗೆ ಸಂಬಂಧಿಸಿದಂತೆ ಕೆ.ಪಿ.ಸಿ.ಎಲ್. ನ ವಿದ್ಯುತ್ ಖರೀದಿ ವೆಚ್ಚವಾದ ರೂ.888.79 ಕೋಟಿಗಳಷ್ಟು ಆದಾಯವನ್ನು ಇರುವುದಕ್ಕಿಂತ ಕಡಿಮೆ ತೋರಿಸಿ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017 ಯನ್ನಾಧರಿಸಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ವರ್ಗಾಯಿಸಲಾಗಿದೆ. ಕಂಪನಿಯು ಇದನ್ನೇ ಹಿಂದಿನ ವರ್ಷಗಳಲ್ಲಿ ಖರ್ಚುಗಳನ್ನಾಗಿ ಲೆಕ್ಕ ಹಾಕಿರುವುದರಿಂದ ಮತ್ತು ಅದನ್ನೇ ಈ ವರ್ಷಾವಧಿಯಲ್ಲಿ ವರ್ಗಾವಣೆ ಮಾಡಿರುವುದರಿಂದ, ಇದನ್ನು ವರ್ಷಾವಧಿಯಲ್ಲಿ ಆದಾಯವೆಂದು ಲೆಕ್ಕ ಹಾಕಬಹುದಾಗಿತ್ತು.

- ಇದೇ ಸರ್ಕಾರಿ ಆದೇಶ ದಿನಾಂಕ: 31ನೇ ಜುಲೈ, 2017 ರ ಮೇಲೆ ಎಸ್ಕಾಂಗಳಿಗೆ ವರ್ಗಾವಣೆಗೊಂಡ ಸರ್ಕಾರದಿಂದ ಸ್ವೀಕಾರಾರ್ಹ ಆರ್.ಇ. ಸಬ್ಸಿಡಿಯು 986.50 ಕೋಟಿಗಳಷ್ಟು ಇರುವುದಕ್ಕಿಂತ ಕಡಿಮೆ ತೋರಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಕಂಪನಿಯು ವಿದ್ಯುತ್ ಖರೀದಿ ವೆಚ್ಚಗಳಿಗೆ ಎದುರಾಗಿ ಇದನ್ನೇ ಆದಾಯವೆಂದು ಲೆಕ್ಕಹಾಕಲಾಗಿದೆ, ಎಸ್ಕಾಂಗಳಿಗೆ ಅದನ್ನು ವರ್ಗಾಯಿಸಿದ ವರ್ಷಗಳ ನಂತರ ಇದನ್ನು ಖರ್ಚು ಎಂದು ಲೆಕ್ಕ ಹಾಕಬಹುದಾಗಿತ್ತು.

**2. ಹಿಂದಿನ ವರ್ಷಗಳಲ್ಲಿ ಪ್ರಸ್ತುತಿ ಮತ್ತು ಬಹಿರಂಗಪಡಿಸಿರುವ ಅಂಶಗಳ ಮೇಲೆ ಅಭಿಪ್ರಾಯ.**

**ಹಿಂದಿನ ಅವಧಿಯ ಜಮೆಗಳು/ಶುಲ್ಕಗಳು: ರೂ.98.57 ಕೋಟಿ (ಪ್ರಸಕ್ತ ವರ್ಷ 2016-17) ಮತ್ತು ರೂ.29.46 ಕೋಟಿ (ಹಿಂದಿನ ವರ್ಷ 2015-16ರ ತುಲನಾತ್ಮಕ ಅಂಕಿಅಂಶಗಳು)**

ಮೇಲಿನ ವಿವರವು ಹಿಂದಿನ ಅವಧಿಗೆ ಆದಾಯವನ್ನು ತಲುಪಿದ ನಂತರ ಹಿಂದಿನ ವ್ಯವಹಾರಗಳನ್ನು ಪ್ರತಿನಿಧಿಸುತ್ತದೆ ಮತ್ತು ಪ್ರಸಕ್ತ ವರ್ಷದ ಪ್ರತ್ಯೇಕ ಸಾಲಿನ ಅಂಶದಲ್ಲಿ ಅದನ್ನು ಲಾಭ ಮತ್ತು ನಷ್ಟ ವಿವರಣ ಪಟ್ಟಿಯಲ್ಲಿ ಚಿತ್ರಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಪ್ರತ್ಯೇಕ ಸಾಲಿನ ಅಂಶವಾಗಿ ಚಿತ್ರಿಸಲಾಗಿರುವುದನ್ನು ಕಂಪನಿಗಳ ಕಾಯಿದೆ 2013ರ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ (IND-AS) ಕಾಂಪ್ಲೈಂಟ್ ಸ್ಟೇಟ್‌ಮೆಂಟ್ಸ್ ನ ಷೆಡ್ಯೂಲ್ III ರಲ್ಲಿ ಸೂಚಿಸಲಾಗಿರುವ ಲಾಭ ಮತ್ತು ನಷ್ಟ ವಿವರಣ ಪಟ್ಟಿಯ ಸಾಲಿನಲ್ಲಿ ಇರುವುದಿಲ್ಲ.

ಮುಂದುವರೆದು, ಕಂಪನಿಯು ಇಂಡ್-ಎ.ಎಸ್.8 ಪ್ರಕಾರ ಎಲ್ಲ ಹಿಂದಿನ ಅವಧಿಯ ಅಂಶಗಳನ್ನು ಪುನ: ಸ್ಥಾಪಿಸಲಾಗಿದೆ ಎಂದು ಟಿಪ್ಪಣಿ ಸಂಖ್ಯೆ 1.6 ರಲ್ಲಿ ಬಹಿರಂಗಪಡಿಸಿದೆ. ಆದಾಗ್ಯೂ, ಕಂಪನಿಯು ಹಿಂದಿನ ಅವಧಿ 2000-01 ರಿಂದ 2015-16 ಕ್ಕೆ ಸಂಬಂಧಿಸಿದ ಐಟಂಗಳನ್ನು ಹಿಂದಿನ ಅವಧಿಗಳ ಅಂಕಿ-ಅಂಶಗಳನ್ನು ಪುನ:ಸ್ಥಾಪಿಸದೆ ಪ್ರಸಕ್ತ ಸಾಲಿನಲ್ಲಿ ಚಿತ್ರಿಸಿದೆ. ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) 8ರ ಕಂಡಿಕೆ 49ರ ಅಡಿಯಲ್ಲಿ ಅಗತ್ಯವಿದ್ದರೂ, ಅದನ್ನು ಮಾಡಲು ಸಾಧ್ಯವಿಲ್ಲವೆನ್ನುವುದು ವಾಸ್ತವಾಂಶ ಮತ್ತು ಅದನ್ನು

ಭಾರತ ನಿಯಂತ್ರಕರು ಹಾಗೂ ಮಹಾಲೇಖಪಾಲರ ಪರವಾಗಿ
ಸಹಿ
**(ಬಿಜಿತ್ ಕುಮಾರ್ ಮುಖರ್ಜಿ)**
ಪ್ರಧಾನ ಲೆಕ್ಕಪರಿಶೋಧಕರು
ಆರ್ಥಿಕ ಮತ್ತು ರೆವಿನ್ಯೂ ವಲಯ ಪರಿಶೋಧನೆ
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ: 03.11.2017

## ಆಯವ್ಯಯ ಪಟ್ಟಿ 31.03.2017 ರಂದು ಇದ್ದಂತೆ

(ಮೊಬಲಗು ರೂ.ಗಳಲ್ಲಿ)

| ಕ್ರ ಸಂ | ವಿವರಗಳು | ಟಿಪ್ಪಣಿ ಸಂಖ್ಯೆ. | ಲೆಕ್ಕ ಸಂಕೇತ | 31-03-2017 ರಂದು ಇದ್ದಂತೆ | | 31-03-2016 ರಂದು ಇದ್ದಂತೆ | | 1-04-2015 ರಂದು ಇದ್ದಂತೆ | |
|---|---|---|---|---|---|---|---|---|---|
| I | **ಆಸ್ತಿಗಳು** | | | | | | | | |
| 1 | **ಪ್ರಸಕ್ತವಲ್ಲದ ಆಸ್ತಿಗಳು** | | | | | | | | |
| (a) | ಸ್ಥಾವರ ಸ್ವತ್ತು ಮತ್ತು ಸಲಕರಣೆ | 2 | 10,12 &16.2 | 9038 69 90 448 | | 8726 46 25 948 | | 8399 94 47 554 | |
| (b) | ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು | 3 | 14 & 15 | 3162 16 60 077 | | 2135 55 87 793 | | 1714 91 62 053 | |
| (c) | ಇತರೆ ಸ್ಪರ್ಶಾತೀತ ಆಸ್ತಿಗಳು | 4 | 18 | - | | - | | 8 80 200 | |
| (d) | ಆರ್ಥಿಕ ಆಸ್ತಿಗಳು | | | | | | | | |
| | (i) ಇತರೆ | 5 | 25 to 27 & 28 | 682 18 94 389 | | 1671 48 77 851 | | 1696 00 56 733 | |
| (e) | ಇತರೆ ಪ್ರಸಕ್ತವಲ್ಲದ ಆಸ್ತಿಗಳು | 6 | 17,25,26,27,28, 28.4 to 28.9 & 31 to 37 | 116 29 16 708 | 12999 34 61 622 | 11 69 21 669 | 12545 20 13 261 | 11 00 98 960 | 11821 96 45 500 |
| | **ಪ್ರಸಕ್ತ ಆಸ್ತಿಗಳು** | | | | | | | | |
| (a) | ದಾಸ್ತಾನು | 7 | 22&16.1 | 61 70 49 858 | | 67 32 57 704 | | 89 32 12 636 | |
| (b) | ಆರ್ಥಿಕ ಸ್ವತ್ತುಗಳು | | | | | | | | |
| | (i) ವ್ಯವಹಾರದ ಸ್ವೀಕೃತಿಗಳು | 8 | 23 & 28.1 | 730 85 65 403 | | 351 00 44 122 | | 219 05 39 844 | |
| | (ii) ನಗದು ಮತ್ತು ನಗದಿಗೆ ಸಮಾನವಾದದ್ದು | 9 | 20 & 24 | 196 36 37 435 | | 76 59 87 197 | | 90 47 80 525 | |
| | (iii) ಇತರೆ ಬ್ಯಾಂಕ್ ಉಳಿಕೆಗಳು | 10 | 24.8 & 20.2 | 80 05 05 215 | | 72 66 43 260 | | 63 27 04 718 | |
| | (iv) ಸಾಲಗಳು | 11 | 25 & 27 | 3 37 61 053 | | 4 54 56 722 | | 3 57 60 301 | |
| | (v) ಇತರೆ ಆರ್ಥಿಕ ಆಸ್ತಿಗಳು | 12 | 28 | 204 50 67 181 | | 178 51 36 086 | | 141 43 06 739 | |
| (c) | ಇತರೆ ಪ್ರಸಕ್ತ ಆಸ್ತಿಗಳು | 13 | 16,28.1 to 28.9 | 1 09 12 814 | 1277 94 98 959 | 1 32 69 095 | 751 97 94 186 | 1 36 15 160 | 608 49 19 923 |
| | **ಒಟ್ಟು ಆಸ್ತಿಗಳು** | | | | **14277 29 60 581** | | **13297 18 07 448** | | **12430 45 65 423** |
| | **ಸ್ವಾಮ್ಯ & ಹೊಣೆಗಾರಿಕೆಗಳು** | | | | | | | | |
| | ಸ್ವಾಮ್ಯ | | | | | | | | |
| (a) | ಸ್ವಾಮ್ಯ ಷೇರು ಬಂಡವಾಳ | 14 | 52.301 | 2075 32 25 000 | | 2075 32 25 000 | | 2075 32 25 000 | |
| (b) | ಇತರೆ ಸ್ವಾಮ್ಯ | 15 | 55 to 58 | 1988 55 76 481 | | 691 92 15 986 | | 426 80 72 758 | |
| | **ಒಟ್ಟು ಸ್ವಾಮ್ಯ** | | | | **4063 88 01 481** | | **2767 24 40 986** | | **2502 12 97 758** |
| | **ಪ್ರಸಕ್ತವಲ್ಲದ ಹೊಣೆಗಾರಿಕೆಗಳು** | | | | | | | | |
| (a) | ಆರ್ಥಿಕ ಹೊಣೆಗಾರಿಕೆಗಳು | | | | | | | | |
| | (i) ಸಾಲಗಳು | 16 | 51 to 54 | 4365 17 06 962 | | 4206 20 75 273 | | 4295 52 47 965 | |
| (b) | ಅವಣಿಕೆಗಳು | 17 | 44 | 200 76 50 917 | | 168 54 52 710 | | 314 46 93 904 | |
| (c) | ಮುಂದೂಡಿದ ತೆರಿಗೆ ಹೊಣೆ (ನಿವ್ವಳ) | 18 | 46.802 | 483 72 97 748 | | 274 28 98 876 | | 274 28 98 876 | |
| (d) | ಇತರೆ ಪ್ರಸಕ್ತವಲ್ಲದ ಹೊಣೆಗಾರಿಕೆ | 19 | 42 to 53 | 1687 16 48 261 | 6736 83 03 888 | 1675 92 01 057 | 6324 96 27 916 | 1670 20 96 002 | 6554 49 36 747 |
| | **ಪ್ರಸಕ್ತ ಹೊಣೆಗಾರಿಕೆಗಳು** | | | | | | | | |
| (a) | ಆರ್ಥಿಕ ಹೊಣೆಗಾರಿಕೆಗಳು | | | | | | | | |
| | (i) ಸಾಲಗಳು | 20 | 51 to 54 | - | | - | | 110 00 00 000 | |
| | (ii) ವ್ಯವಹಾರದ ಪಾವತಿಗಳು | 21 | 41 | 710 78 17 343 | | 2068 33 41 039 | | 1967 72 66 731 | |
| | (iii) ಇತರೆ ಆರ್ಥಿಕ ಹೊಣೆಗಾರಿಕೆಗಳು | 22 | 46.9 | 674 15 64 893 | | 663 38 31 691 | | 643 58 64 726 | |
| (b) | ಇತರೆ ಪ್ರಸಕ್ತ ಹೊಣೆಗಾರಿಕೆಗಳು | 23 | 42 to 46 | 1109 48 11 468 | | 712 72 48 916 | | 473 06 51 512 | |
| (c) | ಅವಣಿಕೆಗಳು | 24 | 42,44,46 | 712 27 19 707 | | 760 53 16 900 | | 174 88 84 501 | |
| (d) | ಪ್ರಸ್ತುತ್ತ ಆದಾಯ ತೆರಿಗೆ ಹೊಣೆಗಾರಿಕೆಗಳು (ನಿವ್ವಳ) | 25 | 46.8 | 269 89 41 801 | 3476 58 55 212 | | 4204 97 38 546 | 4 56 63 448 | 3373 83 30 918 |
| | **ಒಟ್ಟು ಸ್ವಾಮ್ಯ ಮತ್ತು ಹೊಣೆಗಾರಿಕೆಗಳು** | | | | **14277 29 60 581** | | **13297 18 07 448** | | **12430 45 65 423** |

ಗಮನಾರ್ಹ ಲೆಕ್ಕಪತ್ರ ನೀತಿಗಳು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು1-38

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

**ಬಿ.ಪಿ.ರಾವ್ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116

ಸಹಿ/-
**(ಜಾವೇದ್ ಅಖ್ತರ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**(ಅದಿತಿ ರಾಜ)**
ನಿರ್ದೇಶಕರು (ಹಣಕಾಸು)

ಸಹಿ/-
**(ಬಿ.ಸತೀಶ್ ರಾವ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/-
**.(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/-
**(ಆರ್.ಶ್ರೀಧರ್)**
ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ:06.09.2017

## 31.03.2017ರ ವರ್ಷಾಂತ್ಯದ ಲಾಭ ಮತ್ತು ನಷ್ಟ ಲೆಕ್ಕ

(ಮೊಬಲಗು ರೂ.ಗಳಲ್ಲಿ)

| ಕ್ರ ಸಂ. | ವಿವರಗಳು | ಟಿಪ್ಪಣಿ ಸಂಖ್ಯೆ. | ಲೆಕ್ಕ ಸಂಕೇತ | 31 ಮಾರ್ಚ್ 2017 ರ ವರ್ಷಾಂತ್ಯಕ್ಕೆ ಇದ್ದಂತೆ | 31 ಮಾರ್ಚ್ 2016 ರ ವರ್ಷಾಂತ್ಯಕ್ಕೆ ಇದ್ದಂತೆ |
|---|---|---|---|---|---|
| I | ಕಾರ್ಯಚರಣೆಯಿಂದ ಬಂದ ಕಂದಾಯ (ವಿದ್ಯುತ್ ಪ್ರಸರಣ ಕಾರ್ಯದಿಂದ) | 26 | 61 & 62 | 3204 96 95 210 | 2717 90 59 848 |
| II | ಇತರೆ ಆದಾಯ | 27 | 62 | 175 30 55 493 | 157 52 95 516 |
| | **III ಒಟ್ಟು ಆದಾಯ (I+II)** | | | **3380 27 50 703** | **2875 43 55 364** |
| | **ವೆಚ್ಚ** | | | | |
| | 1. ಸಿಬ್ಬಂದಿ ವೆಚ್ಚಗಳು | 28 | 75 | 686 55 53 417 | 676 62 31 215 |
| | 2. ದುರಸ್ತಿ ಮತ್ತು ನಿರ್ವಹಣೆ | 29 | 74 | 191 90 10 312 | 153 21 01 882 |
| | 3. ಆಡಳಿತಾತ್ಮಕ ಮತ್ತು ಇತರೆ ವೆಚ್ಚಗಳು | 30 | 76 | 91 18 86 455 | 70 39 01 789 |
| | 4. ಹಣಕಾಸು ವೆಚ್ಚಗಳು | 31 | 78 | 382 25 75 597 | 441 93 15 544 |
| | 5. ಸವಕಳ ಮತ್ತು ಋಣಮುಕ್ತತೆ ವೆಚ್ಚಗಳು | 32 | 77 | 663 76 78 344 | 635 17 43 389 |
| | 6. ಇತರೆ | 33 | 77, 79 & 80 | 15 61 59 756 | 106 36 90 422 |
| | **ಒಟ್ಟು ವೆಚ್ಚಗಳು (IV)** | | | **2031 28 63 881** | **2083 69 84 241** |
| | ಕೂಡುವುದು/ ಕಳೆಯುವುದು ಹಿಂದಿನ ಅವಧಿಯ ವೆಚ್ಚಗಳು ಅಥವಾ ಜಮೆಗಳು | 34 | | 98 57 13 505 | -29 45 66 953 |
| | **ವಿಶೇಷ ಮತ್ತು ಅಸಾಧಾರಣ ಅಂಶಗಳು ಮತ್ತು ತೆರಿಗೆ ಮುಂಚಿನ ಲಾಭ (III - IV + V)** | | | **1447 56 00 327** | **762 28 04 170** |
| | ಅಸಾಧಾರಣ ಅಂಶಗಳು | 35 | 62 | 467 52 06 691 | -532 74 80 780 |
| | ಲಾಭ/ನಷ್ಟ ತೆರಿಗೆಯ ಮುಂಚೆ | | | **1915 08 07 018** | **229 53 23 390** |
| | ಪ್ರಸಕ್ತ ತೆರಿಗೆ | 36,37 | 81.1, 81.201 | 618 44 46 521 | 51 41 80 164 |
| | ಪ್ರಸಕ್ತ ವರ್ಷದ ಲಾಭ/ನಷ್ಟ | | | **1296 63 60 497** | **178 11 43 226** |
| | ಇತರ ಸಮಗ್ರ ಆದಾಯ | | | | |
| | ಎ.(1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರುಹಂಚಿಕೊಳ್ಳದ ವಸ್ತುಗಳು | | | | |
| | ಎ.(2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ | | | | |
| | ಬಿ.(1) ಲಾಭ ಮತ್ತು ನಷ್ಟದ ಲೆಕ್ಕಕ್ಕೆ ತರುವಾಯ ಮರುಹಂಚಿಕೊಳ್ಳುವ ವಸ್ತುಗಳು | | | | |
| | ಬಿ.(2) ಮೇಲೆ ತಿಳಿಸಿರುವುದರ ಮೇಲೆ ಆದಾಯ ತೆರಿಗೆ | | | | |
| | **ವರ್ಷದ ಒಟ್ಟು ಇತರೆ ಸಮಗ್ರ ಆದಾಯ/ನಷ್ಟ (ನಿವ್ವಳ ತೆರಿಗೆ)** | | | **1296 63 60 497** | **178 11 43 226** |
| | **ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆ** | | | | |
| | ಷೇರಿನ ಮುಖ ಬೆಲೆ: 1,000/-- | | | | |
| | ಮುಖ ಬೆಲೆ | | | 624.79 | 85.82 |
| | ಗುಣ ತಗ್ಗಿದ | | | 594.15 | 84.41 |
| | **ಪ್ರತಿ ಸ್ವಾಮ್ಯ ಷೇರಿನ ಮೇಲಿನ ಗಳಿಕೆಯನ್ನು ಲೆಕ್ಕಿಸಲು ಸರಾಸರಿ ತೂಕದ ಮೇಲಿನ ಸ್ವಾಮ್ಯ ಷೇರುಗಳು** | | | | |
| | ಮುಖ ಬೆಲೆ | | | 2 07 53 225 | 2 07 53 225 |
| | ಗುಣ ತಗ್ಗಿದ | | | 2 18 23 225 | 2 11 00 438 |

ಗಮನಾರ್ಹ ಲೆಕ್ಕಪತ್ರ ನೀತಿಗಳು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು1-38

ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

**ಬಿ.ಪಿ.ರಾವ್ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116

ಸಹಿ/-
**(ಜಾವೇದ್ ಅಖ್ತರ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**(ಅದಿತಿ ರಾಜ)**
ನಿರ್ದೇಶಕರು (ಹಣಕಾಸು)

ಸಹಿ/-
**(ಬಿ.ಸತೀಶ್ ರಾವ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/-
**,(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/-
**(ಆರ್.ಶ್ರೀಧರ್)**
ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ: 06.09.2017

## 31 ನೇ ಮಾರ್ಚ್ 2016 ರ ವರ್ಷದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಾಸದ ತಖ್ತೆ

(ಮೊಬಲಗು ರೂ.ಗಳಲ್ಲಿ)

| ವಿವರಗಳು | ಈಕ್ವಿಟಿ ಷೇರು ಬಂಡವಾಳ | ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ | ಮೀಸಲು ಮತ್ತು ಹೆಚ್ಚುವರಿ | | ಇತರ ಸಮಗ್ರ ಆದಾಯ | ಒಟ್ಟು |
|---|---|---|---|---|---|---|
| | | | ಬಂಡವಾಳ ಮೀಸಲು | ಉಳಿಸಿದ ಗಳಿಕೆ | | |
| ಪ್ರಾರಂಭಿಕ ಶಿಲ್ಕು (01/04/2015) | 2075 32 25 000 | 20 00 00 000 | 7 45 46 563 | 399 35 26 197 | - | 426 80 72 760 |
| ಸೇರಿಸಿ : ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ | - | 87 00 00 000 | - | - | - | 87 00 00 000 |
| ಸೇರಿಸಿ: ಉಳಿಸಿದ ಗಳಿಕೆಗೆ ವರ್ಗಾವಣೆ | - | - | - | 178 11 43 226 | - | 178 11 43 226 |
| ಒಟ್ಟು | 2075 32 25 000 | 107 00 00 000 | 7 45 46 563 | 577 46 69 423 | - | 691 92 15 986 |
| ಕಳೆಯಿರಿ: ಬಂಡವಾಳದ ವೆಚ್ಚದ ಕಡೆಗೆ ಕೊಡುಗೆ ಮತ್ತು ಅನುದಾನಗಳಿಗೆ ವರ್ಗಾಹಿಸುವಿಕೆ | - | - | - | - | - | - |
| ಅಂತ್ಯಕ್ಕೆ ಶಿಲ್ಕು (31/03/2016) | 2075 32 25 000 | 107 00 00 000 | 7 45 46 563 | 577 46 69 423 | - | 691 92 15 986 |

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

ಮಂಡಳಿಯ ನಿರ್ದೇಶಕರ ಪರವಾಗಿ

**ಬಿ.ಪಿ.ರಾವ್ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116

ಸಹಿ/–
**(ಬಿ.ಸತೀಶ್ ರಾವ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸಹಿ/–
**(ಜಾವೇದ್ ಅಖ್ತರ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಅದಿತಿ ರಾಜ)**
ನಿರ್ದೇಶಕರು (ಹಣಕಾಸು)

ಸಹಿ/–
**.(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ಆರ್.ಶ್ರೀಧರ್)**
ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು
ದಿನಾಂಕ:06.09.2017

# 31ನೇ ಮಾರ್ಚ್, 2017 ರ ವರ್ಷದ ಇತರೆ ಸ್ವಾಮ್ಯದಲ್ಲಿನ ವ್ಯತ್ಯಸದ ತಖ್ತೆ

(ಮೊಬಲಗು ರೂ.ಗಳಲ್ಲಿ)

| ವಿವರಗಳು | ಈಕ್ವಿಟಿ ಷೇರು ಬಂಡವಾಳ | ಹಂಚಿಕೆಯಾಗದೆ ಇರುವ ಷೇರುಗಳ ಅರ್ಜಿಯ ಹಣ | ಮೀಸಲು ಮತ್ತು ಹೆಚ್ಚುವರಿ | | ಇತರೆ ಸಮಗ್ರ ಆದಾಯ | ಒಟ್ಟು |
|---|---|---|---|---|---|---|
| | | | ಬಂಡವಾಳ ಮೀಸಲು | ಉಳಿಸಿದ ಗಳಿಕೆ | | |
| ವರದಿ ಅವಧಿಯ ಆರಂಭಿಕ ಶಿಲ್ಕು (01-04-2016) | 2075 32 25 000 | 107 00 00 000 | 7 45 46 563 | 577 46 69 423 | - | 691 92 15 986 |
| ಸೇರಿಸಿ : ಉಳಿಸಿದ ಗಳಿಕೆಗೆ ವರ್ಗಾವಣೆ | – | - | - | 1296 63 60 495 | - | 1296 63 60 495 |
| ವರದಿ ಅವಧಿಯ ಅಂತ್ಯಕ್ಕೆ ಶಿಲ್ಕು (31-03-2017) | 2075 32 25 000 | 107 00 00 000 | 7 45 46 563 | 1874 10 29 918 | - | 1988 55 76 481 |

ಜತೆಗೂಡಿದ ಟಿಪ್ಪಣಿಗಳು ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿದೆ
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ

**ಬಿ.ಪಿ.ರಾವ್ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್ಆರ್ಎನ್ : 003116

ಸಹಿ/-
**(ಬಿ.ಸತೀಶ್ ರಾವ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸ್ಥಳ: ಬೆಂಗಳೂರು
ದಿನಾಂಕ:06.09.2017

ಮಂಡಳಿಯ ನಿರ್ದೇಶಕರ ಪರವಾಗಿ

ಸಹಿ/-
**(ಜಾವೇದ್ ಅಖ್ತರ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
**(ಅದಿತಿ ರಾಜ)**
ನಿರ್ದೇಶಕರು (ಹಣಕಾಸು)

ಸಹಿ/-
**(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/-
**(ಆರ್.ಶ್ರೀಧರ್)**
ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ

## 31 ಮಾರ್ಚ್–2017ರ ಅಂತ್ಯಕ್ಕೆ ನಗದು ಹರಿವಿನ ಪಟ್ಟಿ

(ಮೊಬಲಗು ರೂ.ಗಳಲ್ಲಿ)

| | ವಿವರಗಳು | 31 ಮಾರ್ಚ್–2017 ರ ವರ್ಷಾಂತ್ಯಕ್ಕೆ ಇದ್ದಂತೆ | 31 ಮಾರ್ಚ್–2016 ರ ವರ್ಷಾಂತ್ಯಕ್ಕೆ ಇದ್ದಂತೆ |
|---|---|---|---|
| I | **ಕಾರ್ಯಚರಣೆಯಿಂದ ಬಂದ ನಗದು ಹರಿವು** | | |
| | ತೆರಿಗೆಯ ಪೂರ್ವ ಲಾಭ/ನಷ್ಟ | 1915 08 07 018 | 229 53 23 390 |
| | **ಹೊಂದಾಣಿಕೆಗಳು** | | |
| i | ಸವಕಳ ಮತ್ತು ಋಣಮುಕ್ತತೆ ವೆಚ್ಚ | 663 76 78 344 | 635 17 43 389 |
| ii | ಹಿಂದಿನ ವರ್ಷದ ಹೆಚ್ಚುವರಿ ಹವಣಿಕೆಗಳನ್ನು ಹಿಂಪಡೆಯುವುದು | -2 11 26 925 | -53 16 77 103 |
| iii | ಗ್ರಾಹಕರ ದೇಣಿಗೆಯಿಂದ ನಿರ್ಮಿತಗೊಂಡ ಆಸ್ತಿಯ ಮೇಲಿನ ಸವಕಳ | -33 32 53 084 | -37 58 15 277 |
| iv | ಉಗ್ರಾಣ ಕೊರತೆಗೆ ಹವಣಿಕೆ | - 60 50 249 | - 23 55 952 |
| v | ದಾಸ್ತಾನುಗಳ ಮಾರಾಟದಿಂದ ಬಂದ ಲಾಭ | - 25 80 632 | - 8 25 771 |
| vi | ನಿರುಪಯುಕ್ತ ಸಾಮಾಗ್ರಿಗಳ ಮಾರಾಟದಿಂದ | - 8 72 615 | - 5 54 738 |
| vii | ಬಿಡುಗಡೆ ಹೊಂದಿದ ಆಸ್ತಿಗಳ ಮಾರಾಟದಿಂದ ಬಂದ ಆದಾಯ | -7 31 26 289 | -2 66 96 243 |
| viii | ಇತರೆ ಸ್ವೀಕೃತಿಗಳ ತೊಡೆದ ಹಾಕಿರುವುದು ಮತ್ತು ವಿಶೇಷ ಅಂಶಗಳು | -457 45 77 574 | 533 62 16 455 |
| ix | ಬಡ್ಡಿಯಿಂದ ಬಂದ ಆದಾಯ | -2 69 42 634 | -1 55 99 942 |
| x | ಆರ್ಥಿಕ ವೆಚ್ಚಗಳು | 382 25 75 597 | 441 93 15 544 |
| | ಕಾರ್ಯನಿರತ ಬಂಡವಾಳದ ಬದಲಾವಣೆಗೆ ಮುಂಚಿನ ಕ್ರಿಯಾತ್ಮಕ ಲಾಭ/ನಷ್ಟ | **2457 25 30 957** | **1744 90 73 752** |
| | ಕಾರ್ಯಚರಣೆಯಿಂದ ಬದಲಾವಣೆ ಹೊಂದಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳು | | |
| i | ಸ್ವೀಕೃತಿಗಳಲ್ಲಿ ಹೆಚ್ಚಳ/ಕಡಿಮೆ | -379 85 21 281 | -131 95 04 278 |
| ii | ದಾಸಾನುಗಳಲ್ಲಿ ಹೆಚ್ಚಳ/ಕಡಿಮೆ | 6 22 58 095 | 21 60 20 224 |
| iii | ಇತರೆ ಸ್ವೀಕೃತಿಗಳಲ್ಲಿ ಹೆಚ್ಚಳ/ಕಡಿಮೆ | 1324 05 70 719 | -724 93 79 249 |
| iv | ಪ್ರಸಕ್ತ ಹೊಣೆಗಾರಿಕೆಗಳಲ್ಲಿ ಹೆಚ್ಚಳ/ಕಡಿಮೆ | -952 69 34 560 | 891 75 06 252 |
| v | ಸಾಲಗಳಲ್ಲಿ ಹೆಚ್ಚಳ/ಕಡಿಮೆ | 1 16 95 669 | 19 50 62 550 |
| | **ಕಾರ್ಯಾಚರಣೆಯಿಂದ ಉದ್ಭವಿಸಿದ ನಗದು** | **2456 15 99 599** | **1820 87 79 251** |
| | ಕಳೆಯಿರಿ: ಪಾವತಿಸಿದ ಆದಾಯ ತೆರಿಗೆ) | -139 12 24 086 | -58 40 40 965 |
| | **ಕಾರ್ಯಾಚರಣೆಯಿಂದ ಬಂದ ನಿವ್ವಳ ಹಣದ ಒಳ ಹರಿವು (ಎ)** | **2317 03 75 513** | **1762 47 38 286** |
| II | **ಹೂಡಿಕೆ ಚಟುವಟಿಕೆಗಳಂದ ಹಣದ ಹರಿವು** | | |
| i | ಪಿಪಿಇ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಬದಲಾವಣೆ | -1933 99 85 062 | -1186 24 74 831 |
| ii | ಬ್ಯಾಂಕ್ ಠೇವಣಿಗಳಂದ (3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳು | | |
| | ನಿವ್ವಳ ಲಾಭ/ನಷ್ಟ | -7 38 61 955 | -9 39 38 542 |
| iii | ಬಡ್ಡಿಯಿಂದ ಆದಾಯ | 2 69 42 634 | 1 55 99 942 |
| | **ಹೂಡಿಕೆಯ ಚಟುವಟಿಕೆಗಳಂದ ನಿವ್ವಳ ಹಣದ ಒಳ ಹರಿವು (ಬಿ)** | **-1938 69 04 383** | **-1194 08 13 431** |
| III | **ಆರ್ಥಿಕ ಚಟುವಟಿಕೆಗಳಂದ ಹಣದ ಹರಿವು** | | |
| i | ಷೇರು ಬಂಡವಾಳ/ ಷೇರು ಸೇರ್ಪಡೆಗಳಲ್ಲಿ ಬದಲಾವಣೆ | - | 87 00 00 000 |
| i | ಬಂಡವಾಳ ಕಾಮಗಾರಿಗಳಗಾಗಿ ಪಡೆದ ದೇಣಿಗೆ ಮತ್ತು ಅನುದಾನ | 33 32 53 084 | 13 68 42 635 |
| ii | ಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | 159 55 72 412 | -87 53 98 488 |
| iii | ಅಸುರಕ್ಷಿತ ಸಾಲಗಳಲ್ಲಿನ ಬದಲಾವಣೆಗಳು | - 59 40 723 | -111 77 74 204 |
| iv | ಆರ್ಥಿಕ ಮತ್ತು ಇತರೆ ಖರ್ಚುಗಳು | -450 87 05 665 | -483 63 88 126 |
| | ಆರ್ಥಿಕ ಚಟುವಟಿಕೆಗಳಂದ ನಿವ್ವಳ ನಗದು ಒಳ ಹರಿವು (ಸಿ) | **-258 58 20 892** | **-582 27 18 183** |
| | ನಿವ್ವಳ ಬದಲಾವಣೆ ನಗದು ಮತ್ತು ನಗದಿಗೆ ಸರಿಸಮಾನವಾದುದು (ಎ+ಬಿ+ಸಿ) | 119 76 50 238 | -13 87 93 328 |
| | ಕೂಡಿರಿ: ಆರಂಭಿಕ ನಗದು ಮತ್ತು ನಗದಿಗೆ ಸರಿಸಮಾನವಾದುದು 01.04.2016 ರಂತೆ | 76 59 87 197 | 90 47 80 525 |
| | ಮುಕ್ತಾಯ ನಗದು ಮತ್ತು ನಗದಿಗೆ ಸರಿಸಮಾನವಾದುದು 31.03.2017ರಂತೆ | **196 36 37 435** | **76 59 87 197** |

**ಟಿಪ್ಪಣಿ(1)** ಹಣ ಚಲಾವಣೆ ವಿವರಣೆಯ ಅನುಬಂಧವನ್ನು ಪರೋಕ್ಷ ವಿಧಾನದಲ್ಲಿ ಲೆಕ್ಕ ಪದ್ಧತಿ–3 ""ಹಣ ಚಲಾವಣೆ ವಿವರಣೆಗಳು"" ಪ್ರಕಾರ ಪರೋಕ್ಷ ವಿಧಾನದಲ್ಲಿ ಸಿದ್ಧಪಡಿಸಲಾಗಿದೆ.

**ಟಿಪ್ಪಣಿ(2)** ನಿಗಮದ ಉಪಯೋಗಕ್ಕೆ ಲಭ್ಯತೆವಿಲ್ಲದ ರೂ.26,19,115/– ಗಳನ್ನು ಪಿಂಚಣಿ ಭದ್ರತಾ ನಿಧಿಗೆ ಮೀಸಲಿಡಲಾಗಿದೆ ಹಾಗೂ ರೂ.5,750/– ಗಳನ್ನು ಕುಟುಂಬ ಹಿತ ನಿಧಿಗೆ ಮೀಸಲಿಡಲಾಗಿದೆ. ನಗದು ಮತ್ತು ನಗದು ಸಮಾನವಾದ ರೂ.3,74,27,424/– ಗಳನ್ನು ಅಲ್ಪವಧಿ ಓಪನ್ ಆಕ್ಸೆಸ್ಸ್ ಗ್ರಾಹಕರಿಂದ ಯು.ಐ ಚಾರ್ಜ್‌ಗೆ ಪಡೆಯಲಾಗಿದ್ದು ಸದರಿ ಮೊತ್ತವನ್ನು ವಿಸಕಾಂಗಳೊಂದಿಗೆ ಪಾವತಿಸುವುದು/ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದೆ.

ಗಮನಾರ್ಹ ಲೆಕ್ಕಪತ್ರ ನೀತಿಗಳು ಲೆಕ್ಕಪತ್ರಗಳ ಮೇಲೆ ಟಿಪ್ಪಣಿಗಳು1–38
ಸಮ ದಿನಾಂಕದ ನಮ್ಮ ವರದಿಯ ಪ್ರಕಾರ
**ಬಿ.ಪಿ.ರಾವ್ ಪರವಾಗಿ**
ಸನ್ನದಿತ ಲೆಕ್ಕಿಗರು
ಎಫ್‌ಆರ್‌ಎನ್ : 003116

ಸಹಿ/–
**(ಬಿ.ಸತೀಶ್ ರಾವ್)**
ಪಾಲುದಾರರು
ಸದಸ್ಯತ್ವ ಸಂಖ್ಯೆ. 024559

ಸ್ಥಳ: ಬೆಂಗಳೂರು
ದಿನಾಂಕ: 06.09.2017

ಮಂಡಳಿಯ ನಿರ್ದೇಶಕರ ಪರವಾಗಿ

ಸಹಿ/–
**(ಜಾವೇದ್ ಅಖ್ತರ್)**
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**(ಅದಿತಿ ರಾಜಾ)**
ನಿರ್ದೇಶಕರು (ಹಣಕಾಸು)

ಸಹಿ/–
**.(ರೂತ್.ಜಿ.ಮಿರಜ್‌ಕರ್)**
ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಸಹಿ/–
**(ಆರ್.ಶ್ರೀಧರ್)**
ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ

## ಟಿಪ್ಪಣಿ: 1 ಕಂಪನಿಯ ಅವಲೋಕನ ಮತ್ತು ಗಮನಾರ್ಹ ಲೆಕ್ಕ ಪದ್ಧತಿ ನೀತಿಗಳು

1.1: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂಬುದು ಸಾರ್ವಜನಿಕ ನಿಯಮಿತ ಕಂಪನಿಯಾಗಿದ್ದು, ಭಾರತದಲ್ಲಿ ನೆಲೆಸಿದೆ ಮತ್ತು ಸಂಘಟಿತವಾಗಿದೆ. ಇದು ಕರ್ನಾಟಕದ ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ.

ಕವಿಪ್ರನಿನಿಯು ಎಸ್ಕಾಂಗಳಿಗೆ ಹಾಗೂ ಮುಕ್ತ ಪ್ರವೇಶ ಗ್ರಾಹಕರಿಗೆ ಮತ್ತು ಇತರರಿಗೆ ವಿದ್ಯುತ್ ಪ್ರಸರಣ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿದೆ.

1.2: ಆರ್ಥಿಕ ಪತ್ರ ಸಿದ್ಧಪಡಿಸುವಿಕೆಗೆ ಆಧಾರಗಳು

ಎ. ಆರ್ಥಿಕ ಪಟ್ಟಿಗಳನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS) ಅನುಗುಣವಾಗಿ, ಐತಿಹಾಸಿಕ ವೆಚ್ಚ (Ind-AS ನಿಂದ ಕಡ್ಡಾಯಗೊಳಿಸಿದಂತಹ ನ್ಯಾಯಾಯುತ ಮೌಲ್ಯ ಅನ್ವಯಿಸುವ ಕಡೆ) ದಡಿಯಲ್ಲಿ ಗೋಯಿಂಗ್ ಕನಸರ್ನ್ ತತ್ವವನ್ನು ಸಂಚಯದ ಆಧಾರದ ಮೇಲೆ ಮತ್ತು ಕಂಪನಿಗಳ ಅಧಿನಿಯಮ, 2013 ('ಅಧಿನಿಯಮ') ಮತ್ತು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪ್ರಾವಧಾನಗಳ ಸ್ಥೂಲ ಒಪ್ಪಿಗೆಯ ಮೇರೆಗೆ ಸಿದ್ಧಪಡಿಸಲಾಗುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015ರ ನಿಯಮ 3ರೊಂದಿಗೆ ಓದಲಾದಂತೆ ಮತ್ತು ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ತಿದ್ದುಪಡಿ ನಿಯಮಗಳು, 2016ರಂತೆ, ಅಧಿನಿಯಮದ ಪ್ರಕರಣ 133ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಬಿ. 31.03.2016ಕ್ಕೆ ಅಂತ್ಯಗೊಂಡಂತಹ ಅವಧಿಯ ಆರ್ಥಿಕ ಪಟ್ಟಿಗಳನ್ನು ಕಂಪನಿಗಳ (ಲೆಕ್ಕಪತ್ರ) ನಿಯಮಗಳು, 2014ರ (ಹಿಂದಿನ ಭಾರತೀಯ ಜಿಎಎಪಿ) ನಿಯಮ 7ರೊಂದಿಗೆ ಓದಲಾದಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚಯದ 133ರಡಿಯಲ್ಲಿ ಅಧಿಸೂಚಿತವಾದ ಲೆಕ್ಕಪತ್ರ ಮಾನದಂಡಗಳಿಗನುಗುಣವಾಗಿ ಸಿದ್ಧಪಡಿಸಲಾಗಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆಯ ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯವು ಅಧಿಸೂಚಿಸಿದಂತೆ, ಕಡ್ಡಾಯ ಅವಶ್ಯಕತೆಗನುಸಾರವಾಗಿ, ಕಂಪನಿಯು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳ) ನಿಯಮಗಳು, 2015ರಡಿಯಲ್ಲಿ ಅಧಿಸೂಚಿತವಾದಂತೆ ಭಾರತೀಯ ಲೆಕ್ಕಪತ್ರ ಮಾನದಂಡಗಳ (Ind-AS 101– ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳ ಅಳವಡಿಕೆ) ಅನುಗುಣವಾಗಿ 31.03.2017ಕ್ಕೆ ಅಂತ್ಯವಾಗುವ ವರ್ಷಕ್ಕೆ ತನ್ನ ಆರ್ಥಿಕ ಪಟ್ಟಿಗಳನ್ನು ಸಿದ್ಧಪಡಿಸಿದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳಲ್ಲಿ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಪುನಃಸ್ಥಾಪಿಸಿ ಮಂಡಿಸಲಾಗಿದೆ.ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳಿಂದ ಕಡ್ಡಾಯಗೊಳಿಸಿದಂತೆ, ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಆರ್ಥಿಕ ಪಟ್ಟಿಗಳಲ್ಲಿನ ತುಲನಾತ್ಮಕ ಅಂಕಿಗಳನ್ನು ಸಹ ತಿಳಿಸಲಾಗಿದೆ. ಮೊದಲನೇ ಬಾರಿಗೆ ಭಾರತೀಯ ಲೆಕ್ಕಪತ್ರ ಮಾನದಂಡಗಳನ್ನು ಅಳವಡಿಸಿಕೊಂಡಿರುವುದರಿಂದ, ಮೊದಲನೇ ದಿನಾಂಕದಿಂದ (ವ್ಯವಹಾರದ ಮೊದಲ ದಿನಾಂಕವಾದ 1ನೇ ಏಪ್ರಿಲ್, 2015ನ್ನು ಪರಿವರ್ತನ ದಿನಾಂಕವೆಂದು ಪರಿಗಣಿಸಿದೆ) ತುಲನಾತ್ಮಕ ಬ್ಯಾಲೆನ್ಸ್ ಶೀಟನ್ನು ಭಾರತೀಯ ಲೆಕ್ಕಪತ್ರ ಮಾನದಂಡಗಳಡಿ ಸಿದ್ಧಪಡಿಸಲಾಗಿದೆ.

ಸಿ. ಹೊಸದಾಗಿ ಹೊರಡಿಸಿದ ಲೆಕ್ಕಪತ್ರ ಮಾನದಂಡವು ಎಲ್ಲಿ ಪ್ರಾರಂಭಿಕವಾಗಿ ಅಳವಡಿಸಿಕೊಳ್ಳಲಾಗಿದೆಯೋ ಅಥವಾ ಇಲ್ಲಿಯವರೆಗೆ ಬಳಕೆಯಲ್ಲಿದ್ದ ಲೆಕ್ಕಪತ್ರ ನೀತಿಯಲ್ಲಿ ಬದಲಾವಣೆ ಅದೃಶ್ಯವಿರುವ, ಚಾಲ್ತಿಯಲ್ಲಿರುವ ಲೆಕ್ಕಪತ್ರ ಮಾನದಂಡಗಳಿಗೆ ಪುನರಾವರ್ತನೆಯಾಗಿದೆಯೋ ಅಂತಹ ಸ್ಥಳಗಳನ್ನು ಬಿಟ್ಟು ಉಳಿದಿರುವೆಡೆಗಳಲ್ಲಿ ಭಾರತೀಯ ಲೆಕ್ಕಪತ್ರ ನೀತಿಗಳನ್ನು ಸ್ಥಿರವಾಗಿ ಅನ್ವಯಿಸಲಾಗಿದೆ.

ಡಿ. ನಿಗಮದ ಕಾರ್ಯಾಚರಣೆ ಕಾಲಕವನ್ನು 12 ತಿಂಗಳುಗಳ ಅವಧಿಯದ್ದೆಂದು ಗೊತ್ತುಪಡಿಸಿಕೊಂಡು, ಆಸ್ತಿಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಆಸ್ತಿಗಳೆಂದೂ, ಹೊಣೆಗಾರಿಕೆಗಳನ್ನು ಪ್ರಸಕ್ತ ಹಾಗೂ ಪ್ರಸಕ್ತೇತರ ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

**1.3 ಅಂದಾಜು ಪಟ್ಟಿಗಳ ಉಪಯೋಗ:**

ಭಾರತೀಯ ಲೆಕ್ಕಪತ್ರ ಮಾನದಂಡಗಳಿಗೆ ಅನುಗುಣವಾಗಿ ಆರ್ಥಿಕ ಪಟ್ಟಿಗಳ ಸಿದ್ಧಪಡಿಸುವಿಕೆಗಾಗಿ ಆಡಳಿತ ಮಂಡಳಿಯು ಅಂದಾಜುಪಟ್ಟಿಗಳನ್ನು, ತೀರ್ಪುಗಳನ್ನು ಮತ್ತು ಊಹೆಗಳನ್ನು ಮಾಡಬೇಕಾಗುತ್ತದೆ. ಈ ಅಂದಾಜುಪಟ್ಟಿಗಳು, ತೀರ್ಪುಗಳು ಮತ್ತು ಊಹೆಗಳು ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಯನ್ನು ಸ್ವತ್ತು ಮತ್ತು ಹೊಣೆಗಾರಿಕೆಗಳ ವರದಿಯಾದ ಪ್ರಮಾಣವನ್ನು, ಆರ್ಥಿಕ ಪಟ್ಟಿಗಳ ದಿನಾಂಕದಂದು ಪ್ರಕಟಗೊಂಡ ಸ್ಥಿರ ಸ್ವತ್ತುಗಳ ಮತ್ತು ಹೊಣೆಗಾರಿಕೆಗಳನ್ನು ಆ ಅವಧಿಯಲ್ಲಿ ವರದಿಯಾದ ತೆರಿಗೆಗಳು ಮತ್ತು ವೆಚ್ಚಗಳ ಮೊತ್ತವನ್ನು ಭಾದಿಸುತ್ತವೆ. ಲೆಕ್ಕಪತ್ರ ನೀತಿಗಳ ಅನ್ವಯಿಸುವಿಕೆಗೆ ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳು ಒಳಗೊಂಡಂತೆ ಕ್ಲಿಷ್ಟ ಲೆಕ್ಕಪತ್ರ ಅಂದಾಜು ಮತ್ತು ಆರ್ಥಿಕ ಪಟ್ಟಿಗಳಲ್ಲಿನ ಊಹೆಗಳ ಬಳಕೆ ಅವಶ್ಯವಾಗಿರುತ್ತದೆ. ಲೆಕ್ಕಪತ್ರ ಅಂದಾಜುಗಳ ಕಾಲದಿಂದ ಕಾಲಕ್ಕೆ ಬದಲಾವಣೆಯಾಗಬಹುದು. ನೈಜ ಪರಿಣಾಮಗಳು ಆ ಅಂದಾಜುಗಳಗಿಂತ ವಿಭಿನ್ನವಾಗಿರುತ್ತವೆ. ಆಡಳಿತ ಮಂಡಳಿಯು ಅಂದಾಜುಗಳ ಸುತ್ತ ಇರುವ ಪರಿಸ್ಥಿತಿಗಳಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದರಿಂದ ಅಂದಾಜುಗಳಲ್ಲಿ ಸಮಂಜಸ ಬದಲಾವಣೆಗಳಾಗುತ್ತಿವೆ. ಬದಲಾವಣೆಗಳನ್ನು ಮಾಡಲಾದ ಅವಧಿಯಲ್ಲಿ ಅಂದಾಜುಗಳಲ್ಲಿನ ಬದಲಾವಣೆಗಳು ಆರ್ಥಿಕ ಪಟ್ಟಿಗಳಲ್ಲಿ ಬಿಂಬಿತವಾಗುತ್ತವೆ ಮತ್ತು ಅವುಗಳ ಪರಿಣಾಮಗಳು ಆರ್ಥಿಕ ಪಟ್ಟಿಗಳಲ್ಲಿ ಟಿಪ್ಪಣಿಗಳಲ್ಲಿ ತಿಳಿಯಪಡಿಸುತ್ತವೆ.

ಲೆಕ್ಕಶೀರ್ಷಿಕೆ "ಸಾಮಗ್ರಿಗಳ ಸರಬರಾಜಿನಲ್ಲಿ ಹಕ್ಕುಬಾಧ್ಯತೆ" ಮತ್ತು "ಸಂಡ್ರಿ ಕ್ರೆಡಿಟರ್ಸ್/ನಿಯಂತ್ರಣ ಲೆಕ್ಕಪತ್ರ"ದಡಿಯಲ್ಲಿ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, ಯಾವುದೇ ಕ್ಲೇಮು ಮಾಡಿಲ್ಲದ ಹಕ್ಕುಬಾಧ್ಯತೆ/ಚಾಲ್ತಿಯಲ್ಲಿರುವ ಹಕ್ಕುಬಾಧ್ಯತೆಗಳು, ಯಾವುದೇ ವಿವಾದವಿಲ್ಲದೇ 10 ವರ್ಷಗಳಿಗೂ ಮೀರಿದ ಅವಧಿಗೆ ಪ್ರಸ್ತುತ ಆರ್ಥಿಕ ವರ್ಷವು ಮುಕ್ತಾಯದಲ್ಲಿದ್ದಂತೆ ಲೆಕ್ಕಪತ್ರ ಪುಸ್ತಕಗಳಲ್ಲಿ ಇರುವುದು ಮುಂದುವರಿದರೆ, ಅವುಗಳನ್ನು ಇತರೆ ಆದಾಯಕ್ಕೆ ವರ್ಗಾಯಿಸಲಾಗುವುದು.

**1.4 ದಾಸ್ತಾನುಗಳ ಮೌಲ್ಯೀಕರಣ:**

ಎ. ದಾಸ್ತಾನುಗಳನ್ನು ಕಡಿಮೆ ಮೌಲ್ಯ ಅಥವಾ ನಿವ್ವಳ ಸಿದ್ಧಿತ ಮೌಲ್ಯದಂತೆ ಮೌಲ್ಯೀಕರಿಸಲಾಗುತ್ತದೆ.ಮೌಲ್ಯವನ್ನು ಸರಾಸರಿ ದರದ ಆಧಾರದಂತೆ ಗೊತ್ತುಪಡಿಸಲಾಗುತ್ತದೆ.

ಬಿ. ದಾಸ್ತಾನುಗಳ ಮೌಲ್ಯವು ದಾಸ್ತಾನನ್ನು ಪ್ರಸ್ತುತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸಿ. ನಿರುಪಯುಕ್ತತೆ ಅನುಮೋದನಾ ಸಮಿತಿಯಿಂದ ನಿರುಪಯುಕ್ತ/ಬಳಕೆಯಲ್ಲಿಲ್ಲದ ಎಂದು ಗುರುತಿಸಿರುವ ದಾಸ್ತಾನುಗಳ ಮೌಲ್ಯವನ್ನು, ನಿಗದಿತ ದರಪಟ್ಟಿಯಲ್ಲಿ ಲಭ್ಯವಿದ್ದಲ್ಲಿ, ನಿರುಪಯುಕ್ತ ದರದಂತೆ ಹಾಗೂ ಲಭ್ಯವಿಲ್ಲದ ಪ್ರಕರಣಗಳಲ್ಲಿ ಅಂತಹ ದಾಸ್ತಾನಿನ ಮೌಲ್ಯವನ್ನು, ಮೂಲ ಮೌಲ್ಯದ ಶೇಕಡಾ ೯೦ರ ದರದ ಪ್ರಕಾರ ಇಳಿತಗೊಳಿಸಿ, ಉಳಿದ ಶೇಕಡಾ 10ರಷ್ಟನ್ನು ಅವುಗಳನ್ನು ಕಳಚುವವರೆಗೂ ಉಳಿಸಿಕೊಳ್ಳಲಾಗುತ್ತದೆ.

ಡಿ. ಬಳಕೆಯಲ್ಲಿಲ್ಲದ ಸ್ವತ್ತುಗಳ ತಗ್ಗಿದ ಮೌಲ್ಯದ ಮೇಲೆ ೮೦%ರಷ್ಟು ದರದಂತೆ, ಬಳಕೆಯಲ್ಲಿಲ್ಲದ/ನಿರುಪಯುಕ್ತ ಸ್ವತ್ತುಗಳ ಮೇಲೆ, ನಿರ್ಧಿಷ್ಟವಲ್ಲದ ಆಧಾರದ ಮೇಲೆ ಅವಕಾಶ ಕಲ್ಪಿಸಲಾಗಿದೆ.

**1.5 ನಗದು ಹರಿವಿನ ವಿವರಣಾ ಪಟ್ಟಿ:**

ನಗದು ಹರಿವುಗಳನ್ನು ಪರೋಕ್ಷ ವಿಧಾನವನ್ನು ಉಪಯೋಗಿಸಿ ವರದಿ ಮಾಡಲಾಗುತ್ತದೆ, ಆ ಮೂಲಕ ಆ ಅವಧಿಯ ಲಾಭವನ್ನು ನಗದು –ರಹಿತ ಸ್ವರೂಪದ ವ್ಯವಹಾರಗಳ ಪರಿಣಾಮಗಳಿಗೆ, ಯಾವುದೇ ಮೂಂದೂಡಲ್ಪಡದ ಬಹುದಾದ ಅಥವಾ ಹಿಂದಿನ ಅವಧಿಯ ಸಂಚಯನಗಳು ಅಥವಾ ಮುಂದಿನ ಅವಧಿಯ ಕಾರ್ಯ ಚಟುವಟಿಕೆಗಳ ನಗದು ರಸೀದಿ ಅಥವಾ ಪಾವತಿಗಳ ಮತ್ತು ಆದಾಯದ ಬಾಬ್ತುಗಳು ಅಥವಾ ವೆಚ್ಚಗಳು ನಗದು ಹರಿವಿನ ಹೂಡಿಕೆ ಅಥವಾ ಬಂಡವಾಳ ಪೂರೈಕೆಯೊಂದಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಹೊಂದಿರುತ್ತದೆ. ಕಂಪನಿಯ ಕಾರ್ಯಚಟುವಟಿಕೆ, ಹೂಡಿಕೆ ಮತ್ತು ಬಂಡವಾಳ ಪೂರೈಕೆಯ ಚಟುವಟಿಕೆಗಳನ್ನು ನಗದು ಹರಿವಿನ ಪಟ್ಟಿಯಲ್ಲಿ ಪ್ರತ್ಯೇಕಿಸಲಾಗಿದೆ.

**1.6 ಹಿಂದಿನ ಅವಧಿಯ ಬಾಬ್ತುಗಳು:**

**ಕಂಪನಿಯು,– ಹಿಂದಿನ ಅವಧಿಯ ಗಣನೀಯವಾದ ತಪ್ಪುಗಳನ್ನು ಅವಿಷ್ಕಾರಗೊಂಡಾಗ ಅವುಗಳನ್ನು ಪೂರ್ವಾನ್ವಯವಾಗಿ ಮೊದಲ ಆರ್ಥಿಕ ವಿವರಣಾ ಪಟ್ಟಿಯ ಅನುಮೋದನೆ ನೀಡುವಾಗ ಈ ಕೆಳಕಂಡಂತೆ ಸರಿಪಡಿಸಲಾಗುವುದು**.

ಎ) ತಪ್ಪು ಸಂಬವಿಸಿದ ಅವಧಿಯ/ಅವಧಿಗಳ ಹಿಂದಿನ ಅವಧಿಗಳ ತುಲನಾತ್ಮಕ ಮೊತ್ತಗಳನ್ನು ಪುನಃ ಮಂಡಿಸುವುದು ಅಥವಾ

ಬಿ) ಮಂಡಿಸಿದ ಅವಧಿಗಿಂತ ಬಹಳ ಮುಂಚೆ ಒಂದು ವೇಳೆ ತಪ್ಪು ಸಂಭವಿಸಿದ್ದರೆ, ಮಂಡಿಸಿದ ಹಿಂದಿನ ಅವಧಿಯ ಸ್ವತ್ತುಗಳೂ, ಬಾಧ್ಯತೆಗಳು ಮತ್ತು ಸ್ವಾಮ್ಯಗಳ ಪ್ರಾರಂಭಿಕ ಉಳಿಕೆಗಳನ್ನು ಪುನ: ಮಂಡಿಸುವುದು.

**1.7 ಆದಾಯ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ**

ಪ್ರಸ್ತುತ ಅವಧಿ ಮತ್ತು ಹಿಂದಿನ ಅವಧಿಗಳ ಪ್ರಸ್ತುತ ಆದಾಯ ತೆರಿಗೆಯನ್ನು ಪಾವತಿಸಲು ನಿರೀಕ್ಷಿಸಿದ ಅಥವಾ ತೆರಿಗೆ ಪ್ರಾಧಿಕಾರಗಳಿಂದ ವಸೂಲು ಮಾಡಲಾದ ಮೊತ್ತದಿಂದ ಕಂಡು ಹಿಡಿಯಲಾಗುತ್ತದೆ.ಆದಾಯ ತೆರಿಗೆ ವೆಚ್ಚವು ಪ್ರಸ್ತುತ ಮತ್ತು ಮುಂದೂಡಲ್ಪಟ್ಟ ತೆರಿಗೆಯನ್ನು ಒಳಗೊಂಡಿರುತ್ತದೆ.ಆದಾಯ ತೆರಿಗೆ ವೆಚ್ಚವು ನಿವ್ವಳ ಬೆಲೆಯಲ್ಲಿ ನೇರವಾಗಿ ಗುರುತಿಸಿದ ಬಾಬ್ತುಗಳಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಹೊರತುಪಡಿಸಿ, ಲಾಭ ಮತ್ತು ನಷ್ಟದ ತಃಖ್ತೆಯ ನಿವ್ವಳಲಾಭದಿಂದ ಕಂಡುಹಿಡಿಯಲಾಗುತ್ತದೆ.ನೇರವಾಗಿ ಗುರುತಿಸಿದ ಬಾಬ್ತುಗಳಲ್ಲಿ ಇತರ ಸಮಗ್ರ ಆದಾಯದಿಂದ ಕಂಡುಹಿಡಿಯಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಸ್ವತ್ತುಗಳೂ ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ನಡುವೆ ಉದ್ಭವಿಸುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ಆರ್ಥಿಕ ತಃಖ್ತೆಗಳಲ್ಲಿ ಅವುಗಳನ್ನು ತರಲಾದ ಮೊತ್ತಗಳಿಗೆ ಸಂಬಂಧಿಸಿ, ಕಂಡುಹಿಡಿಯಲಾಗುತ್ತದೆ.ವರದಿ ಮಾಡುವ ಪ್ರತೀ ದಿನಾಂಕದಂದು ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳನ್ನು ಪುನರ್ ಪರಿಶೀಲನೆ ಮಾಡಲಾಗುತ್ತದೆ ಮತ್ತು ಅದನ್ನು ಸಂಬಂಧಪಟ್ಟ ತೆರಿಗೆ ಲಾಭವನ್ನು ಅರಿಯುವ ಸಂಭವವಿಲ್ಲ ಎಂಬುವಷ್ಟರ ಮಟ್ಟಿಗೆ ಕಡಿಮೆಗೊಳಸಲಾಗುತ್ತದೆ. ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಅಧಿನಿಯಮಿತಗೊಂಡ ಅಥವಾ ಬ್ಯಾಲೆನ್ಸ್ ಶೀಟ್‌ನ ದಿನಾಂಕದಿಂದ ಸ್ವತಂತ್ರವಾಗಿ ಅಧಿನಿಯಮಿತಗೊಂಡ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಉಪಯೋಗಿಸಿಕೊಂಡು ಲೆಕ್ಕಮಾಡಲಾಗುತ್ತದೆ ಮತ್ತು ಇವುಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳನ್ನು ಯಾವ ವರ್ಷಗಳಲ್ಲಿ ವಸೂಲಿ ಮಾಡಬೇಕೆಂದು ಅಥವಾ ಇತ್ಯರ್ಥಪಡಿಸಬೇಕೆಂದು ಅಂದುಕೊಳ್ಳಲಾಗಿದೆಯೋ ಆ ವರ್ಷಗಳಲ್ಲಿನ ಕಂದಾಯ ಪಾವತಿಸಬೇಕಾದ ಆದಾಯಕ್ಕೆ ಅನ್ವಯಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತುಗಳು ಮತ್ತು ಬಾಧ್ಯತೆಗಳ ಮೇಲಿನ ತೆರಿಗೆ ದರಗಳಲ್ಲಿನ ಅಧಿನಿಯಮಿತಿ ಬದಲಾವಣೆಗಳ ಪರಿಣಾಮ ಅಥವಾ ಸ್ವತಂತ್ರ ಅಧಿನಿಯಮಿತಿ ದಿನಾಂಕವನ್ನು ಒಳಗೊಂಡ ಅವಧಿಯಲ್ಲಿನ ಆದಾಯ ಅಥವಾ ವೆಚ್ಚವೆಂದು ಗುರುತಿಸಲಾಗುತ್ತದೆ.ಭವಿಷ್ಯದಲ್ಲಿ ಲಭ್ಯವಾಗುವ ಮುಂದೂಡಲ್ಪಟ್ಟ ಆದಾಯ ತೆರಿಗೆ ಸ್ವತ್ತನ್ನು ಎಷ್ಟರಮಟ್ಟಿಗೆ ಕಂಡುಹಿಡಿಯಲಾಗುತ್ತದೆಯೆಂದರೆ ತೆರಿಗೆ ಕಟ್ಟಬೇಕಾದ ಲಾಭ ಭವಿಷ್ಯದಲ್ಲಿ ದೊರೆಯುವ ಸಂಭವವಿರುತ್ತದೆ.ಇದಕ್ಕೆ ಪ್ರತಿಯಾಗಿ

ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸಿಕೊಳ್ಳಬಹುದು.

ಕಂಪನಿಯು, ನ್ಯಾಯಯುತವಾಗಿ ಕಂಡುಹಿಡಿಯಲಾದ ಮೊತ್ತಗಳನ್ನು ಪರಿಗಣಿಸುವಲ್ಲಿ ನಿರ್ಬಂಧಿತ ಅಧಿಕಾರವನ್ನು ಹೊಂದಿದ್ದು, ಪ್ರಸ್ತುತ ತೆರಿಗೆ ಸ್ವತ್ತುಗಳು ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳನ್ನು ತುಂಬಿಕೊಡುತ್ತದೆ ಮತ್ತು ಅದನ್ನು ನಿವ್ವಳ ಆಧಾರದಲ್ಲಿ ಇತ್ಯರ್ಥ ಪಡಿಸಲು ಅಥವಾ ಸ್ವತ್ತನ್ನು ನಗದೀಕರಿಸುವುದು ಮತ್ತು ಬಾಧ್ಯತೆಯನ್ನು ಏಕಕಾಲದಲ್ಲಿ ಇತ್ಯರ್ಥಪಡಿಸಲು ಉದ್ದೇಶಿಸುತ್ತದೆ.

**1.8 ಆಸ್ತಿ ಸ್ಥಾವರ ಮತ್ತು ಉಪಕರಣಗಳು(ಪಿಪಿಇ)**

ಎ. ಕಂಪನಿಯು ಎಲ್ಲಾ ಆಸ್ತಿ ಸ್ಥಾವರ ಮತ್ತು ಉಪಕರಣಗಳನ್ನು ಗುರುತಿಸಿಲೆಕ್ಕಹಾಕಲು ವೆಚ್ಚ ಪದ್ಧತಿಯ ಮಾದರಿಯನ್ನು ಅನುಸರಿಸುತ್ತಿದೆ. ಪಿಪಿಇಗಳ ಮೌಲ್ಯೀಕರಣದಲ್ಲಿ ಸಂಚಿತ ಸವಕಳಿ ಹಾಗೂ ದುರ್ಬಲಗೊಂಡಿರುವ ಆಸ್ತಿಗಳನ್ನು ಕಳೆದು ತೋರಿಸಲ್ಪಡುತ್ತದೆ.ಪಿಪಿಇ ಮೌಲ್ಯ ಪರಿಗಣಿಸಲು ಖರೀದಿ ವೆಚ್ಚ ,ಸಾಲದ ವೆಚ್ಚ ಮತ್ತು ಪಿಪಿಇಯನ್ನು ಆ ಸ್ಥಳಕ್ಕೆ ಮತ್ತು ಸ್ಥಿತಿಗೆ ತರುವ ವೆಚ್ಚಗಳನ್ನು ಮತ್ತು ನೇರವಾಗಿ ಹೊರಿಸಬಹುದಾದ ವೆಚ್ಚವನ್ನು ಆಡಳಿತ ಮಂಡಳಿಯು ಉದ್ದೇಶಿಸಿರುವ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗುವಂತೆ ಮಾಡುವುದು ಅದರ ಅಗತ್ಯವಾಗಿರುತ್ತದೆ.

ಬಿ. ಬೃಹತ್ ಕಾಮಗಾರಿ ವಿಭಾಗದ ಸಿಬ್ಬಂದಿ ವೆಚ್ಚ ಮತ್ತು ಸವಕಳಿ ವೆಚ್ಚಗಳು ನೇರವಾಗಿ ಸದರಿ ವಿಭಾಗದಲ್ಲಿ ನಿರ್ವಹಿಸಿದ ಬಂಡವಾಳ ಕಾಮಗಾರಿಗಳಿಗೆ ಸಂಬಂಧಪಟ್ಟಿರುತ್ತದೆ. ಗುತ್ತಿಗೆದಾರರಿಗೆ ನೀಡಿದ ಕಾಮಗಾರಿಯನ್ನು ನಿಗಧಿತ ಅವಧಿಗಿಂತ ಮುಂಚಿತವಾಗಿ ಪೂರ್ಣಗೊಳಿಸಿದಲ್ಲಿ ಗುತ್ತಿಗೆದಾರರಿಗೆ ನೀಡುವ ಪ್ರೋತ್ಸಾಹ ಧನವನ್ನು ಸದರಿ ಬಂಡವಾಳ ಕಾಮಗಾರಿಯ ವೆಚ್ಚಕ್ಕೆ ಸೇರಿಸಿಕೊಳ್ಳಲಾಗುತ್ತದೆ.

ಸಿ. ಕ.ವಿ.ನಿ. ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ನಿಗಮವು ಅಧೀನಪಡಿಸಿಕೊಂಡಿರುವ ಮೂರನೇ ಪಕ್ಷಕಾರರಿಂದ ಒದಗಿಸಲ್ಪಟ್ಟಿರುವ ಆಸ್ತಿಗಳನ್ನು ವಾಸ್ತವಿಕ ಮೌಲ್ಯದ ಅನುಪಸ್ಥಿತಿಯಲ್ಲಿ, ನಿಗಮವು ಅನುಮೋದಿಸಿರುವ ಅಂದಾಜು ಮೌಲ್ಯದ ಪ್ರಕಾರ ಲೆಕ್ಕಪುಸ್ತಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಡಿ. ಭೂ ವೆಚ್ಚವು ಸ್ವಾಧೀನ ವೆಚ್ಚ (ಹೆಚ್ಚು ಪರಿಹಾರ ಸೇರಿದಂತೆ), ಅರಣ್ಯೀಕರಣಕ್ಕಾಗಿ ಮತ್ತು ಸಾಮಾಜಿಕ ಅರಣ್ಯೀಕರಣಕ್ಕಾಗಿ ಯೋಜನೆಗಳಿಂದ ಬಾಧಿತರಾದ ಸ್ಥಳೀಯ ಜನರು/ಕುಟುಂಬಗಳಿಗೆ ನೀಡಲಾದ ಪರಿಹಾರವನ್ನು ಒಳಗೊಂಡಿರುತ್ತದೆ.

ಇ. ಆಯವ್ಯಯ ಪಟ್ಟಿಯ ದಿನಾಂಕದಂದು ಬಾಕಿ ಉಳಿದಿರುವ ಪಿಪಿಇಗೆ ಸಂಬಂಧಿಸಿದ ಮುಂಗಡಗಳನ್ನು ಇತರ ಪ್ರಸಕ್ತವಲ್ಲದ ಆಸ್ತಿಗಳಡಿಯಲ್ಲಿ ಬಂಡವಾಳ ಮುಂಗಡಗಳೆಂಬಂತೆ ವರ್ಗೀಕರಿಸಲಾಗುತ್ತದೆ.ಬಳಕೆಗೆ ಸಿದ್ಧವಾಗುವ ಮುಂಚಿನ ಸ್ವತ್ತುಗಳ ಬೆಲೆಯನ್ನು 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ'ಯಡಿಯಲ್ಲಿ ತೋರಿಸಲಾಗುತ್ತದೆ.

ಎಫ್. ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳು ಸದರಿ ವೆಚ್ಚದಿಂದ ಪಿಪಿಇಯ ಭವಿಷ್ಯದಲ್ಲಿ ಆರ್ಥಿಕ ಲಾಭವನ್ನು ಹೆಚ್ಚಿಸುವಂತಿದ್ದಲ್ಲಿ ಸದರಿ ವೆಚ್ಚವನ್ನು ವಿಶ್ವಾಸನೀಯವಾಗಿ ಲೆಕ್ಕ ಹಾಕಬಹುದಾದಾಗ ಮಾತ್ರ ಸದರಿ ಪಿಪಿಇಗೆ ಸಂಬಂಧಿಸಿದ ತರುವಾಯ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು.

ಜಿ. ರಿಪೇರಿಗಳು ಮತ್ತು ನಿರ್ವಹಣಾ ವೆಚ್ಚಗಳು ಉಂಟಾದಾಗ ಅವುಗಳನ್ನು ಲಾಭಗಳು ಮತ್ತು ನಷ್ಟಗಳ ತಃಖ್ತೆಯಲ್ಲಿ ಅಂಗೀಕರಿಸಲಾಗುತ್ತದೆ.

ಎಚ್. ಪಿಪಿಇಯ ಯಾವುದೇ ಒಂದು ಬಾಬ್ತು ಮತ್ತು ಆರಂಭಿಕವಾಗಿ ಅಂಗೀಕರಿಸಲಾದ ಯಾವುದೇ ಪ್ರಮುಖ ಭಾಗವು ವಿಲೇವಾರಿ ಆಧಾರದ ಮೇಲೆ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಭವಿಷ್ಯದಲ್ಲಿ ಯಾವುದೇ ಆರ್ಥಿಕ ಲಾಭಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೆ, ಅದನ್ನು ಅಂಗೀಕರಿಸುವುದಿಲ್ಲ. ಸ್ವತ್ತನ್ನು ಅಮಾನ್ಯ –ಗೊಳಸುವುದರಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟ (ನಿವ್ವಳ ವಿಲೆ ಹುಟ್ಟುವಳಿ ಮತ್ತು ಸ್ವತ್ತಿನ ಸಾಗಣೆ ಮೊತ್ತದ ವ್ಯತ್ಯಾಸವನ್ನು ಲೆಕ್ಕ ಹಾಕಲಾಗುತ್ತದೆ)ವೂ ಸಹ, ಸ್ವತ್ತನ್ನು ಅಂಗೀಕರಿಸದೇ ಇದ್ದಾಗ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಸೇರುತ್ತದೆ.

ಐ. ಆಸ್ತಿ ಸ್ಥಗಿತಗೊಳಿಸುವ ಪ್ರಸ್ತುತ ವೆಚ್ಚವನ್ನು ಆಸ್ತಿ ಅಂದಾಜು ವೆಚ್ಚದ ಮೌಲ್ಯದಲ್ಲಿ ಪರಿಗಣಿಸಿ ಪಿ.ಪಿ.ಇ.ಗೆ ಆಸ್ತಿ ಸ್ಥಗಿತಗೊಳಿಸುವ ವೆಚ್ಚವನ್ನು ಬಂಡವಾಳೀಕರಣ ಮಾಡಲಾಗುವುದಿಲ್ಲ.

ಜೆ. **Ind ASಗೆ ಬದಲಾವಣೆ:**

**IND-AS**ಗೆ ಬದಲಾವಣೆಯಾಗುವಾಗ, ಕಂಪನಿಯು ದಿನಾಂಕ 1ನೇ ಏಪ್ರಿಲ್, 2015ರಲ್ಲಿದ್ದಂತೆ, ಹಾಗೂ ಹಿಂದಿನ **GAAP**ಯನುಸಾರ ಲೆಕ್ಕ ಹಾಕಿದಂತೆ ತನ್ನ ಆಸ್ತಿ ಸ್ಥಾವರ ಮತ್ತು ಉಪಕರಣಗಳ ಮುಂದುವರಿಯುವ ಮೌಲ್ಯವನ್ನು ಆರಿಸಿಕೊಂಡಿದ್ದು ಮತ್ತು ಆ ಮುಂದುವರಿಸಿದ ಮೌಲ್ಯವನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳ ಭಾವಿತ ವೆಚ್ಚವೆಂದು ಪರಿಗಣಿಸಿ ಉಪಯೋಗಿಸಿಕೊಳ್ಳಲಾಗುವುದು.

**1.9 ಸವಕಳಿ:–**

ಎ. ಕೇಂದ್ರೀಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಗೊತ್ತುಪಡಿಸಿರುವ ಪ್ರಕಾರ ಹಾಗೂ ಕ.ವಿ.ನಿ. ಆಯೋಗವ ಕಾಲಕಾಲಕ್ಕೆ ಅಳವಡಿಸಿಕೊಳ್ಳುವ ಪ್ರಕಾರ ಸವಕಳಿಯನ್ನು ನೇರ ಲೆಕ್ಕಾಚಾರದ ಪದ್ಧತಿಯಂತೆ ವಿಧಿಸಲಾಗುತ್ತದೆ. ಸಿಇಆರ್‌ಸಿಯನುಸಾರ, ಸವಕಳಿ ದರಗಳು ಈ ಕೆಳಗಿನಂತಿವೆ:

| ಕ್ರ. ಸಂ. | ವಿವರಗಳು | ಸವಕಳಿ ದರಗಳು |
|---|---|---|
| 1. | ಕಟ್ಟಡಗಳು ಮತ್ತು ರಸ್ತೆಗಳು | 3.34% |
| 2. | ಆಂತರಿಕ ವೈರಿಂಗ್, ಆಪ್ಟಿಕ್ ಫೈಬರ್, ಸಂವಹನ ಸಾಮಾಗ್ರಿಗಳು, ಪೀಠೋಪಕರಣಗಳು ಮತ್ತು ಅಳಡಿಕೆಗಳು, ಕ್ಯಾಲ್ಕುಲೇಟರ್‌ಗಳು, ಟೈಪ್‌ರೈಟರ್‌ಗಳು, ನಗದು ರಿಜಿಸ್ಟ್ರೆಕ್ಸ್ ಯಂತ್ರಗಳು, ನಗದು ಪೆಟ್ಟಿಗೆ, ಡ್ಯೂಪ್ಲಿಕರ್‌ಗಳು, ಜೆರಾಕ್ಸ್ ಮತ್ತು ಕಾಪಿಯರ್ ಯಂತ್ರಗಳು | 6.33% |
| 3. | ಟ್ರಕ್‌ಗಳು, ಟೆಂಪೋಗಳು, ಟ್ರಕ್ಕರ್‌ಗಳು, ಬಸ್‌ಗಳು, ಜೀಪ್‌ಗಳು, ವ್ಯಾನ್‌ಗಳು, ಮೋಟಾರ್ ಕಾರ್‌ಗಳು ಮತ್ತು ಇತರೆ ವಾಹನಗಳು | 9.50% |
| 4. | ಕಂಪ್ಯೂಟರ್‌ಗಳು ಮತ್ತು ಅಂತಹ ಇತರ ಐಟಿ ಸಾಮಗ್ರಿಗಳು | 15.00% |
| 5. | ಮರದ ರಚನೆಗಳಂತಹ ತಾತ್ಕಾಲಿಕ ರಚನೆ | 100.00% |
| 6. | ಮೇಲೆ ಸೇರಿಸಿರದ ಇತರ ಎಲ್ಲಾ ಸ್ವತ್ತುಗಳು | 5.28% |

ಬಿ. ಆಸ್ತಿಗಳ ಮೌಲ್ಯದ ಶೇ.90ರ ವರೆಗೆ ದರದಲ್ಲಿ ಸವಕಳಿಯನ್ನು ಸಂಚಿತಪಡಿಸಿಕೊಂಡು, ಉಳಿದ ಶೇ.10ರಷ್ಟನ್ನು ಉಳಿಕೆ ಮೌಲ್ಯವೆಂದು ಉಳಿಸಿಕೊಳ್ಳಲಾಗುತ್ತದೆ.

ಸಿ. 1.4.2007ರಿಂದ ಸೇರ್ಪಡೆಯಾದ ಆಸ್ತಿಗಳಿಗೆ, ಸೇರ್ಪಡೆಯಾದ ತಿಂಗಳಿನಿಂದಲೇ ಸವಕಳಿಯನ್ನು ಒದಗಿಸಲಾಗಿದೆ. 31.3.2007ರವರೆಗೆ ಸೇರ್ಪಡೆಯಾದ ಆಸ್ತಿಗಳಿಗೆ, ತದನಂತರದ ವರ್ಷದಿಂದ ಸವಕಳಿಯನ್ನು ಒದಗಿಸಲಾಗಿದೆ.

ಡಿ. ವಿಸರ್ಜಿಸಿದ/ಕಳಚಿದ ಆಸ್ತಿಗಳ ಸವಕಳಿಯನ್ನು, ಹಿಂದಿನ ತಿಂಗಳವರೆಗೆ ಒದಗಿಸಲಾಗಿದೆ.

ಈ. ರೂ.500/-ವರೆಗಿನ ಪ್ರತಿಯೊಂದು ಆಸ್ತಿಯ ಸವಕಳಿಯನ್ನು, ಅಂತಹ ಆಸ್ತಿಯನ್ನು ಬಳಕೆಗೆ ತಂದ ವರ್ಷದಲ್ಲಿ ಪೂರ್ಣ ಪ್ರಮಾಣದಲ್ಲಿ ಒದಗಿಸಲಾಗಿದೆ.

ಎಫ್. (i) ಭೋಗ್ಯಾಧಾರಿತ ಸ್ಥಳಗಳಲ್ಲಿನ ಸಿವಿಲ್ ನಿರ್ಮಾಣ ರಚನೆಗಳನ್ನು ಹೊರತುಪಡಿಸಿದ ಇತರ ಆಸ್ತಿ, ರಚನೆಗಳ ಸವಕಳಿಯನ್ನು, ಭೋಗ್ಯಾಧಾರಿತ ಅವಧಿ ಅಥವಾ ಅಂತಹ ಆಸ್ತಿ, ರಚನೆಗಳ ಬಾಳಿಕೆ ಅವಧಿಯಲ್ಲಿನ ಶೇಕಡಾ90ರ ಪ್ರಮಾಣದಂತೆ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

(ii) ಸಿವಿಲ್ ನಿರ್ಮಾಣ ರಚನೆಗಳ ಸವಕಳಿಯನ್ನು ಬಾಳಿಕೆ ಅವಧಿಯಲ್ಲಿನ ಶೇಕಡಾ 100ರ ಪ್ರಮಾಣಾದಂತೆ, ಅಥವಾ ಭೋಗ್ಯಾಧಾರಿತ ಅವಧಿ, ಇವೆರಡರಲ್ಲಿ ಯಾವುದು ಮೊದಲೋ, ಅದರಂತೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗುತ್ತದೆ.

ಜಿ. ಕಾರ್ಯವಿಮುಕ್ತಿಗೊಳಿಸಿದ ಆಸ್ತಿಗಳ(ಬಳಕೆಯಲ್ಲಿಲ್ಲದ ಆಸ್ತಿಗಳು) ಹಾಗೂ ದುರಸ್ತಿಗಾಗಿ ಬಿಡುಗಡೆಗೊಳಿಸಿದ ಆಸ್ತಿಗಳ ಸವಕಳಿಯನ್ನು, ಅಂತಹ ಆಸ್ತಿಗಳ ಇಳಿತಗೊಂಡ ಮೌಲ್ಯದ ಮೇಲೆ ಸಾಮಾನ್ಯ ದರದ ಪ್ರಕಾರ ಒದಗಿಸಲಾಗಿದೆ.

ಹೆಚ್. ಠೇವಣಿ ವಂತಿಗೆ ಹಾಗೂ ಗ್ರಾಹಕ ನಿರ್ಮಿತ ಆಸ್ತಿಗಳು, ಅನುದಾನಿತ ಆಸ್ತಿಗಳ ಸವಕಳಿಯನ್ನು, ವಂತಿಗೆ/ಅನುದಾನದ ಮೂಲಕ ಸ್ವಾಧೀನಪಡಿಸಿಕೊಂಡ ಆಸ್ತಿಗಳಿಗೆ ಒದಗಿಸಿದ ಸವಕಳಿಯ ಪ್ರಮಾಣದಂತೆ ಆದಾಯವೆಂದು ಹೊಂದಾಣಿಕೆ ಮಾಡಲಾಗಿದೆ.

ಐ. ವಿಲೇವಾರಿಯ ಬಗೆಗಿನ ಲಾಭ ಮತ್ತು ನಷ್ಟಗಳನ್ನು ಮಾರಾಟ ಹುಟ್ಟುವಳಿಗಳನ್ನು ಸಾಗಣೆ ಮೊತ್ತದೊಂದಿಗೆ ಹೋಲಿಸಿ ಕಂಡುಹಿಡಿಯಲಾಗುವುದು. ಇವುಗಳು ಇತರ ಲಾಭ/(ನಷ್ಟ)ಗಳೊಳಗೆ ಲಾಭ ಅಥವಾ ನಷ್ಟದಲ್ಲಿ ಸೇರುತ್ತವೆ.

**1.10 ಕಂದಾಯ ಮಾನ್ಯತೆ:**

ಎ. ಸ್ವಾಮ್ಯ ಹಾಗೂ ಇತರ ತತ್ಸಂಬಂಧ ವಿಷಯಾಂಶಗಳ ಮೇಲೆ ಫಲಿತವಾಗಿರುವ ಅಂದಾಜು ಗಳಿಕೆಯನ್ನು ಆಧರಿಸಿ ಗೊತ್ತುಪಡಿಸಿಕೊಂಡಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ. ಆಯೋಗ), ಕಾಲಕಾಲಕ್ಕೆ ತನ್ನ ಬಹುವಾರ್ಷಿಕ ವಿದ್ಯುತ್ ದರದಲ್ಲಿ ಅಧಿಸೂಚಿಸುವ ವಿದ್ಯುತ್ ದರಗಳಂತೆ ಸಂಚಿತ ಆಧಾರದ ಪ್ರಕಾರ ವಿದ್ಯುತ್ ಪ್ರಸರಣೆಯ ಕಂದಾಯವನ್ನು ಮಾನ್ಯಗೊಳಿಸಲಾಗುತ್ತದೆ.

ಬಿ. ದಕ್ಷಿಣ ಪ್ರಾಂತೀಯ ವಿದ್ಯುತ್ ಸಮಿತಿಯು ಪ್ರಕಟಪಡಿಸುವ ಪ್ರಾಂತೀಯ ವಿದ್ಯುಚ್ಛಕ್ತಿ ಲೆಕ್ಕವನ್ನು ಆಧರಿಸಿದ ಸಂಚಿತ ಆಧಾರದ ಪ್ರಕಾರ ಅಂತರ ರಾಜ್ಯ ವಿದ್ಯುತ್ ಸಾಗಣೆ ಶುಲ್ಕದ ಕಂದಾಯವನ್ನು ಗೊತ್ತುಪಡಿಸಿಕೊಳ್ಳಲಾಗುತ್ತದೆ.

ಸಿ. ಕಾರ್ಯಾನುಷ್ಠಾನಗೊಂಡ ಕಾಮಗಾರಿಗಳು/ ಕ.ವಿ.ನಿ.ಆಯೋಗವು ಹೊರಡಿಸಿರುವ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ನಿಬಂಧನೆಗಳ ಅಡಿಯಲ್ಲಿ, ಮೂರನೇ ಪಕ್ಷಕಾರರು ನೀಡಿದ ವಂತಿಗೆಯಿಂದ ನಿರ್ಮಿಸಿ ನಿಗಮದ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು, ಅವುಗಳ ಪೂರ್ಣ ಮೌಲ್ಯದ ಪ್ರಕಾರ ಲೆಕ್ಕಪುಸ್ತಕದಲ್ಲಿ ಒಳಪಡಿಸಲಾಗಿದೆ. ಬಂಡವಾಳ ಅನುದಾನ/ನಿರ್ದಿಷ್ಟ ಆಸ್ತಿಗಳಿಗೆ ಸಂಬಂಧಿಸಿದ ಅನುದಾನ ಹಾಗೂ ಬಂಡವಾಳ ಆಸ್ತಿಗಳ ವೆಚ್ಚದ ಪ್ರಯುಕ್ತ ಗ್ರಾಹಕರಿಂದ ಕೊಡುಗೆ ಇವುಗಳನ್ನು ಆಸ್ತಿಗಳ ಮೌಲ್ಯದ ವೆಚ್ಚದಿಂದ ಕಡಿಮೆಗೊಳಿಸಿಲ್ಲ, ಆದರೆ ಮುಂದೂಡಲ್ಪಟ್ಟ ಆದಾಯವೆಂದು ಪರಿಗಣಿಸಿ, "ವಂತಿಗೆ ಮತ್ತು ಬಂಡವಾಳ ಆಸ್ತಿಗಳ ನಿಮಿತ್ತ ಅನುದಾನ"ವೆಂದು ವರ್ಗೀಕರಿಸಿ, ನಂತರದಲ್ಲಿ

ವಂತಿಗೆ/ಅನುದಾನದಿಂದ ಗಳಿಸಿದ ಆಸ್ತಿಗಳಿಗೆ ಕಲ್ಪಿಸುವ ಸವಕಳಿಗೆ ಸಮನಾದ ಆದಾಯ ಎಂದು ಹೊಂದಾಣಿಕೆ ಮಾಡಲಾಗಿದೆ.

ಡಿ. ನಗದು ಆಧಾರದಲ್ಲಿ ಲೆಕ್ಕಿಕರಿಸುವ ಮೇಲ್ವಿಚಾರಣ ಶುಲ್ಕಗಳು, ಪರಿಶೀಲನ ಶುಲ್ಕಗಳು, ಪರೀಕ್ಷ ಶುಲ್ಕಗಳು, ಅರ್ಥ್ ಮ್ಯಾಟ್ ವಿನ್ಯಾಸ ಶುಲ್ಕಗಳು ಮತ್ತು ಮಂಡಪ ಕೀಪರ್ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಇತರೆ ಸೇವೆಗಳಂದ ಬಂದ ಆದಾಯಗಳನ್ನು ಕಂಪನಿಯು ಪೂರ್ಣಗೊಂಡ ಹಂತದ ಆಧಾರದ ಅನ್ವಯ ಲೆಕ್ಕೀಕರಿಸಲಾಗುತ್ತಿದೆ.

ಇ. ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ವಿಧಾನವನ್ನು ಬಳಸಿ, ಕಂಡು ಹಿಡಿಯಲಾಗುವುದು.

**1.11 ಗುತ್ತಿಗೆಗಳು**

**ಗುತ್ತಿಗೆದಾರರಾಗಿ**

ಕಂಪನಿಯು ಸ್ವತಂತ್ರವಾಗಿ ಮಾಲೀಕತ್ವದ ಎಲ್ಲಾ ಹೊಣೆಗಳನ್ನು ಮತ್ತು ಪ್ರತಿಫಲಗಳನ್ನು ಪಡೆದಿರುವ ಗುತ್ತಿಗೆಗಳನ್ನು ಆರ್ಥಿಕ ಗುತ್ತಿಗೆಗಳೆಂದು ವರ್ಗೀಕರಿಸಲಾಗುವುದು.ಸ್ವಾಧೀನ ಪಡಿಸಿಕೊಂಡಾಗ ಅಂತಹ ಸ್ವತ್ತುಗಳನ್ನು ನ್ಯಾಯಯುತ ಮೌಲ್ಯ ಅಥವಾ ಗುತ್ತಿಗೆಯ ಪ್ರಾರಂಭದಲ್ಲಿ ಕಡಿಮೆ ಗುತ್ತಿಗೆ ಪಾವತಿಯ ಪ್ರಸ್ತುತ ಮೌಲ್ಯದ ಆಧಾರಿತ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಮೂಲಧನವನ್ನಾಗಿ ಪರಿವರ್ತಿಸಲಾಗುವುದು.

ಕಾರ್ಯಪ್ರವೃತ್ತ ಗುತ್ತಿಗೆಗಳಡಿಯಲ್ಲಿನ ಗುತ್ತಿಗೆ ಪಾವತಿಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುತ್ತಿಗೆಯ ಅವಧಿಯ ಮೇಲೆ ನೇರಗೆರೆ ಆಧಾರಿತವಾದ ವೆಚ್ಚವೆಂಬಂತೆ ಅಂಗೀಕರಿಸಲಾಗುವುದು.

ಗುತ್ತಿಗೆ ಸ್ವತ್ತುಗಳಿಗೆ ಮಾಡಲಾದ ಅಭಿವೃದ್ಧಿ ವೆಚ್ಚವನ್ನು ಸ್ವತ್ತಿನ ಉಳಿದ ಗುತ್ತಿಗೆಯ ಅವಧಿಯಲ್ಲಿ ಸಮಾನ ಕಂತಿನಲ್ಲಿ ತೀರಿಸಲಾಗುವುದು.

**ಗುತ್ತಿಗೆ ನೀಡುವವರಾಗಿ**

ಕಂಪನಿಯು ಗುತ್ತಿಗೆ ನೀಡುವವರಾಗಿದ್ದಾಗ, ಗುತ್ತಿಗೆ ಪ್ರಾರಂಭವಾದಾಗಿನಿಂದ, ಗುತ್ತಿಗೆ ಆದಾಯವನ್ನು, ನಿರೀಕ್ಷಿತ ಹಣದುಬ್ಬರ ವೆಚ್ಚ ಏರಿಕೆಗಳನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರದೊಂದಿಗೆ, ಅಲ್ಲಿಯೇ ಹೆಚ್ಚಳು ರಚನೆಗೊಂಡಿಲ್ಲದ ಹೊರತಾಗಿ, ನೇರಗೆರೆ ಆಧಾರದ ಮೇಲೆ ಆದಾಯವೆಂದು ಅಂಗೀಕರಿಸಲಾಗುವುದು.

**1.12 ಅನುದಾನ ಲೆಕ್ಕೀಕರಣ :–**

ಎ) ಅನುದಾನವನ್ನು ಪರಿಗಣಿಸುವಲ್ಲಿ ಎಲ್ಲಾ ಸಂಯೋಜಿತ ಷರತ್ತುಗಳನ್ನು ಅನುಸರಿಸಲಾಗುತ್ತಿದೆ ಎಂಬ ಯುಕ್ತ ಆಶ್ವಾಸನೆ ಇದ್ದಾಗ ಅನುದಾನವನ್ನು ಪರಿಗಣಿಸಿ ಅಂಗೀಕರಿಸಲಾಗುತ್ತಿದೆ. ಆದಾಯ ಸಂಬಂಧಿಸಿದ ಅನುದಾನವನ್ನು ಉದ್ದೇಶಿಸಲಾಗಿರುವ ಸಂಬಂಧಿತ ವೆಚ್ಚಕ್ಕೆ ಖರ್ಚು ಮಾಡಲಾದ ಅವಧಿಗಳ ವ್ಯವಸ್ಥಿತ ಆಧಾರದ ಅನ್ವಯ ಆದಾಯವೆಂದು ಪರಿಗಣಿಸಿ ಅಂಗೀಕರಿಸಲಾಗಿರುತ್ತದೆ.ಒಂದು ಆಸ್ತಿಗೆ ಸಂಬಂಧಿಸಿದ ಅನುದಾನವನ್ನು ಸಂಬಂಧಿಸಿದ ಆಸ್ತಿಯ ನಿರೀಕ್ಷಿತ ಉಪಯುಕ್ತ ಬಳಕೆಯ ಮೇಲಿನ ಆದಾಯದ ಅವಧಿಯ ಸಮಾನ ಮೊತ್ತಕ್ಕೆ ಪರಿಗಣಿಸಿ ಅಂಗೀಕರಿಸಲಾಗುತ್ತದೆ.

ಬಿ) ತೆರಿಗೆ/ಸಂಯುಕ್ತ ಅನುದಾನಗಳನ್ನು ಅವುಗಳಿಗೆ ಲಗತ್ತಿಸಿದ ಬಾಧ್ಯತೆಗಳನ್ನು ಪೂರೈಸಿದ ಮೇಲೆ ಆದಾಯವೆಂದು ಪರಿಗಣಿಸಬೇಕು ಮತ್ತು ಅದನ್ನು ಸ್ವೀಕರಿಸುವುದು ನಿರ್ದಿಷ್ಟವಾದ ಮೇಲೆ ಆದಾಯವೆಂದು ಪರಿಗಣಿಸುವುದು.

**1.13 ಉದ್ಯೋಗಿ ಸೌಲಭ್ಯಗಳು:**

**ಎ. ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳು:**

ಅಲ್ಪಾವಧಿಯ ಉದ್ಯೋಗಿ ಸೌಲಭ್ಯಗಳಾದ ವೇತನ, ಕೂಲಿ ಮತ್ತು ಇತರೆ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದಲ್ಲಿನ ಲಾಭ ಮತ್ತು ನಷ್ಟದ ತಖ್ತೇಯಲ್ಲಿ ರಿಯಾಯಿತಿ ನೀಡದ ಮೊತ್ತದ ಆಧಾರದಲ್ಲಿ ವೆಚ್ಚವೆಂದು ಪರಿಗಣಿಸಿ ಅಂಗೀಕರಿಸಲಾಗುತ್ತದೆ. ಸದರಿ ಅಲ್ಪಾವಧಿಯ ಸೌಲಭ್ಯಗಳನ್ನು ಸೇವೆ ಸಲ್ಲಿಸಿದ ವರ್ಷದ ಅವಧಿಗೆ ಅಂಗೀಕರಿಸಿ ಸಂಬಂದಿಸಿದ ಅವಧಿಯ ಲಾಭ ಮತ್ತು ನಷ್ಟ ತಖ್ತೇಯಲ್ಲಿ ಲೆಕ್ಕೀಕರಿಸಲಾಗಿದೆ.

**ಬಿ. ಉಪದಾನ ಪಿಂಚಣಿ ಯೋಜನೆ**

ದಿನಾಂಕ 01.04.2006ರಂದು ಅಥವಾ ನಂತರ ನಿಗಮದಲ್ಲಿ ಕೆಲಸಕ್ಕೆ ಸೇರಿರುವ ಉದ್ಯೋಗಿಗಳು **"ನೂತನ ವ್ಯಾಖ್ಯಾನಿತ ಉಪದನ ಪಿಂಚಣಿ ಯೋಜನೆ"** ಹಾಗೂ ಕಂಪನಿಯು, ಸಂಬಳದ ಮೇಲೆ ಪಾವತಿಸುವ/ಒದಗಿಸುವ ನಿರ್ದಿಷ್ಟ ದರದ ಕೊಡುಗೆಯ ಯೋಜನೆಗೆ ಒಳಪಡುತ್ತಾರೆ.

**ಸಿ. ವ್ಯಾಖ್ಯಾನಿಸಿದ ಪ್ರಯೋಜನಗಳ ಯೋಜನೆಗಳು**

ದಿನಾಂಕ 31.3.2006 ರವರೆಗೆ ಕೆಲಸಕ್ಕೆ ಸೇರಿದ ಉದ್ಯೋಗಿಗಳನ್ನು ಒಳಪಡುವ ವಿವರಿತ ಉಪದಾನ ಹಾಗೂ ಪಿಂಚಣಿ ಸೌಲಭ್ಯ ನಿಮಿತ್ತದ ವೆಚ್ಚವನ್ನು, IND-AS-19ರ ಪ್ರಕಾರ ಕಾಲಕಾಲಕ್ಕೆ ಕ.ವಿ.ಪ್ರ.ನಿ.ನಿ. ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ನ್ಯಾಸವು (ಕೆ.ಇ.ಪಿ.ಜಿ.ಟಿ) ಸೂಚಿಸುವ ವಾಸ್ತವಿಕ ಮೌಲ್ಯಮಾಪನವನ್ನು ಆಧರಿಸಿದ ದರ/ಮೊಬಲಗಿನ ಪ್ರಕಾರ ಒದಗಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಇ. ರಜೆ ನಗದೀಕರಣ**

ದೀರ್ಘಾವಧಿ ಸೌಲಭ್ಯ: ಗಳಿಕೆ ರಜೆ ನಗದೀಕರಣವನ್ನು ಯೋಜಿತ ಯೂನಿಟ್ ಕ್ರೆಡಿಟ್ ಕ್ರಮಬದ್ಧತೆ ಲೆಕ್ಕಾಚಾರದ

ಪ್ರಕಾರ ವಾಸ್ತವಿಕ ಮೌಲ್ಯಾಧಾರದಂತೆ ಗೊತ್ತುಪಡಿಸಿಕೊಂಡು IND-AS-19 ಯು ಅಗತ್ಯಪಡಿಸುವಂತೆ ಪ್ರತಿ ಆರ್ಥಿಕ ವರ್ಷಾಂತ್ಯದಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಇ. ಕುಟುಂಬ ಹಿತ ನಿಧಿ:–**

'ನೌಕರರ ಕುಟುಂಬ ಹಿತ ನಿಧಿ' ಯೋಜನೆಯನ್ನು ದಿನಾಂಕ: 01.07.1978 ರಿಂದ ಜಾರಿಗೆ ಬರುವಂತೆ ಪಂಚಯಿಸಲಾಗಿದೆ. ಪ್ರತಿಯೊಬ್ಬ ನೌಕರನಿಂದ 200/– ರೂ.ಗಳನ್ನು ಕಡಿತಗೊಳಿಸಿ, ಈ ನಿಧಿಗೆ ಸಂದಾಯ ಮಾಡಲಾಗುತ್ತದೆ. ನೌಕರನು ಸೇವಾವಧಿಯಲ್ಲಿದ್ದಾಗಲೇ ಮರಣ ಹೊಂದಿದ್ದರೆ, ಅವನು ಕನಿಷ್ಠ 12 ತಿಂಗಳುಗಳು ಮಾತ್ರ 2,400/– ಹಣವನ್ನು ಸಂದಾಯ ಮಾಡಿದ್ದರೆ, ಅವನ ನ್ಯಾಯಸಮ್ಮತ ಉತ್ತರಾಧಿಕಾರಿಗೆ ರೂ.2,00,000/–ಗಳನ್ನು ನೀಡಲಾಗುತ್ತದೆ. ಯೋಜನೆಯನುಸಾರ, ಕಂಪನಿಯು, ನೌಕರರ ಸಾವು/ನಿವೃತ್ತಿಯಾದ ಪಕ್ಷದಲ್ಲಿ, ಯೋಜನೆಯ ಷರತ್ತುಗಳನುಸಾರವಾಗಿ ಈ ನಿಧಿಗೆ ಕೊಡುಗೆ ನೀಡುತ್ತದೆ. ವಿಮಾ ಕಂತಿನ ಸಂಪಾದನೆಗಳು ಅಥವಾ ನಷ್ಟಗಳನ್ನು ಅವುಗಳು ಕಂಡುಬರುವ ಅವಧಿಯ ಇತರೆ ಸಮಗ್ರ ಆದಾಯದಲ್ಲಿ ಗುರುತಿಸಲಾಗುತ್ತದೆ ಹಾಗೂ ವಾಸ್ತವಿಕ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಬಿಂಬಿಸಲಾಗಿದೆ.

**ಎಫ್. ಪಿಂಚಣಿ ಸುರಕ್ಷಾ ನಿಧಿ:**

"ಕೆಇಬಿ ಪಿಂಚಣಿದಾರರ ಕುಟುಂಬ ಲಾಭ/ಸುರಕ್ಷಾನಿಧಿ"ಯನ್ನು ದಿನಾಂಕ:08.10.1998ರಂದು ಸ್ಥಾಪಿಸಲಾಯಿತು. ಈ ಯೋಜನೆಯ ಅನುಸಾರ, ಪ್ರತಿಯೊಬ್ಬ ಪಿಂಚಣಿದಾರ/ಕುಟುಂಬ ಪಿಂಚಣಿದಾರ ಈ ನಿಧಿಗೆ 100/–ಗಳ ಮಾಸಿಕ ದೇಣಿಗೆಯನ್ನು ನೀಡಬೇಕು. ನಿಧಿಯ ಸದಸ್ಯ ಕನಿಷ್ಠ 12 ತಿಂಗಳುಗಳಿಗೆ ದೇಣಿಗೆ ನೀಡಿ ನಂತರ, ತೀರಿಕೊಂಡಾಗ ನಾಮನಿರ್ದೇಶಿತ/ರಿಗೆ ನಿಧಿಯಿಂದ ಒಟ್ಟು ಹಣವಾದ 30,000 ರೂ.ಗಳನ್ನು ನೀಡಲಾಗುತ್ತದೆ. ಕಂಪನಿಯು ಈ ನಿಧಿಗೆ ಯಾವುದೇ ದೇಣಿಗೆಯನ್ನು ನೀಡುವುದಿಲ್ಲ.

## 1.14 ವಿದೇಶಿ ವಿನಿಮಯ ವ್ಯವಹಾರಗಳು

**ಎ. ಕಾರ್ಯಪ್ರವೃತ್ತ ವಿನಿಮಯ**

ಕಂಪನಿಯ ಕಾರ್ಯಪ್ರವೃತ್ತ ಕರೆನ್ಸಿಯೆಂದರೆ ಭಾರತೀಯ ರೂಪಾಯಿ, ಈ ಆರ್ಥಿಕ ಪಟ್ಟಿಗಳನ್ನು ಭಾರತೀಯ ರೂಪಾಯಿಗಳಲ್ಲಿ ನೀಡಲಾಗುತ್ತದೆ.

**ಬಿ) ವ್ಯವಹಾರಗಳು ಮತ್ತು ಬದಲಾವಣೆಗಳು**

ವಿದೇಶಿ ಕರೆನ್ಸಿ ವರ್ಗದ ಆರ್ಥಿಕ ಸ್ವತ್ತುಗಳು ಮತ್ತು ಬಾಧ್ಯತೆಗಳನ್ನು ಬ್ಯಾಲೆನ್ಸ್ ಶೀಟ್ ದಿನಾಂಕದಲ್ಲಿರುವಂತೆ ಪರಿಣಾಮಕಾರಿಯಾಗಿ ಯುಕ್ತ ಕಾರ್ಯ ಪ್ರವೃತ್ತ ಕರೆನ್ಸಿಗೆ ಬದಲಾಯಿಸಲಾಗುವುದು. ಈ ಇಂತಹ ಬದಲಾವಣೆಗಳಿಂದ ದೊರೆಯುವ ಲಾಭಗಳು ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಪಟ್ಟಿಯಲ್ಲಿ ನಿವ್ವಳ ಲಾಭದಲ್ಲಿ ಸೇರಿಸಲಾಗುವುದು.

ವಿದೇಶಿ ಕರೆನ್ಸಿ ಬದಲಾವಣೆಯಿಂದ ಇತ್ಯರ್ಥಗೊಳಿಸಿದ ವ್ಯವಹಾರಿಕ ಲಾಭ ಅಥವಾ ನಷ್ಟಗಳನ್ನು, ವ್ಯವಹಾರವು ಇತ್ಯರ್ಥವಾದ ಅವಧಿಯಲ್ಲಿನ ನಿವ್ವಳ ಲಾಭವನ್ನು ಕಂಡುಹಿಡಿಯುವುದರಲ್ಲಿ ಪರಿಗಣಿಸ'ಲಾಗುತ್ತದೆ. ಕಂದಾಯ, ವೆಚ್ಚ ಮತ್ತು ವಿದೇಶಿ ಕರೆನ್ಸಿ ವರ್ಗಗಳಲ್ಲಿರುವ ಹಣದ ಹರಿವಿನ ಬಾಬ್ತುಗಳನ್ನು ವ್ಯವಹಾರ ನಡೆಸಿದ ದಿನಾಂಕದಂದು ಜಾರಿಯಲ್ಲಿರುವ ಬಂದಿರುವಂತೆ ವಿನಿಮಯ ದರವನ್ನು ಉಪಯೋಗಿಸಿಕೊಂಡು ಯುಕ್ತ ಕಾರ್ಯಪ್ರವೃತ್ತ ಕರೆನ್ಸಿಗಳಿಗೆ ಬದಲಾವಣೆ ಮಾಡಬೇಕು.

## 1.15 ಸಾಲದ ವೆಚ್ಚಗಳು

ನಿರ್ಮಿತ/ಅರ್ಜಿತ ಅರ್ಹತಾದಾಯಕ ಆಸ್ತಿಗಳಿಗೆ ಸಂಬಂಧಿಸಿದ ಸಾಲದ ವೆಚ್ಚಗಳನ್ನು, ಅಂತಹ ಆಸ್ತಿಗಳ ಮೌಲ್ಯದ ಭಾಗವೆಂದು ಬಂಡವಾಳೀಕರಿಸಲಾಗುತ್ತದೆ. ಅರ್ಹತಾದಾಯಕ ಆಸ್ತಿ ಎಂದರೆ, ಉದ್ದೇಶಿತ ಬಳಕೆಗಾಗಿ ಸಿದ್ಧವಾಗಲು ಸಾಕಷ್ಟು ಅವಶ್ಯಕ ಅವಧಿಯನ್ನು ತೆಗೆದುಕೊಳ್ಳುವಂತಹದ್ದು.

ಸಾಲ ಪಡೆಯುವ ವೆಚ್ಚಗಳೆಂದರೆ ತನ್ನ ಉದ್ದೇಶಿತ ಉಪಯೋಗಕ್ಕೆ ಸಿದ್ಧವಾಗಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸ್ವತ್ತಿನ ವೆಚ್ಚದ ಭಾಗವಾಗಿ ಬಂಡವಾಳವಾಗುವ ಅರ್ಹದಾಯ ಸ್ವತ್ತಿನ ಆರ್ಜನೆ, ನಿರ್ಮಾಣ, ತಯಾರಿಕೆಗೆ ನೇರವಾಗಿ ಕಾರಣವಾಗುವ ಯೋಗ್ಯವಾದ ವೆಚ್ಚಗಳು, ಕಂಪನಿಯು ಅಂತಹ ಖರ್ಚಿನ ಮೇಲೆ ಉಂಟಾಗುವ ವೆಚ್ಚಕ್ಕೆ ಬಂಡವಾಳೀಕರಣದ ದರವನ್ನು ಅನ್ವಯಿಸುವುದರ ಮೂಲಕ ಮೂಲಧನೀಕರಣಕ್ಕೆ ಅರ್ಹವಾದ ಸಾಲಪಡೆಯುವ ವೆಚ್ಚದ ಮೊತ್ತವನ್ನು ಕಂಡುಹಿಡಿಯಲಾಗುತ್ತದೆ. ಮೂಲಧನೀಕರಣದ ದರವನ್ನು ಅರ್ಹದಾಯಕ ಸ್ವತ್ತಿನ ಖರೀದಿಗೆ ನಿರ್ದಿಷ್ಟವಾಗಿ ಮಾಡಲಾದ ಸಾಲ ಪಡೆಯುವಿಕೆಯನ್ನು ಹೊರತುಪಡಿಸಿ, ಆ ಅವಧಿಯಲ್ಲಿ ಬಾಕಿಯಿರುವ ಕಂಪನಿಯ ಸಾಲಗಳಿಗೆ ಅನ್ವಯಿಸುಬಹುದಾದ ಸಾಲ ವೆಚ್ಚದ ಅಂದಾಜು ದರವನ್ನು ಆಧರಿಸಿ ಕಂಡುಹಿಡಿಯಲಾಗುವುದು. ಕಂಪನಿಯು ಆ ಅವಧಿಯಲ್ಲಿ ಬಂಡವಾಳೀಕರಣಗೊಳಿಸುವ ಸಾಲದ ವೆಚ್ಚದ ಮೊತ್ತವು ಅವಧಿಯಲ್ಲಿ ಉಂಟಾಗುವ ಸಾಲದ ವೆಚ್ಚದ ಮೊತ್ತವನ್ನು ಮೀರಬಾರದು. ಇತರ ಎಲ್ಲಾ ಸಾಲದ ವೆಚ್ಚಗಳನ್ನು, ಅವುಗಳು ಸಂಭವಿಸದ ಅವಧಿಯಲ್ಲಿ ಖರ್ಚು ಮಾಡಲಾಗುವುದು.

## 1.16 ಪ್ರತೀ ಷೇರಿನ ಸಂಪಾದನೆ

**ಪ್ರತೀ ಷೇರಿನ ಮೂಲ ಸಂಪಾದನೆ**

ಪ್ರತೀ ಷೇರಿನ ಮೂಲ ಸಂಪಾದನೆಯನ್ನು ಆರ್ಥಿಕ ವರ್ಷದ ಅವಧಿಯಲ್ಲಿ ಬಾಕಿಯಿರುವ ಸ್ವಾಮ್ಯ ಷೇರುಗಳ ವೇಯಿಟೆಡ್

ಸರಾಸರಿ ಸಂಖ್ಯೆಯಿಂದ ಕಂಪನಿಯ ಸ್ವಾಮ್ಯ ಷೇರುದಾರರಿಗೆ ಆರೋಪಯೋಗ್ಯವಾದ ಲಾಭವನ್ನು ಭಾಗಿಸುವುದರಿಂದ ಲೆಕ್ಕ ಹಾಕಲಾಗುತ್ತದೆ.

**ಪ್ರತೀ ಷೇರಿನ ಗುಣ ತಗ್ಗಿದ ಸಂಪಾದನೆ**

ಪ್ರತೀ ಷೇರಿನ ಗುಣತಗ್ಗಿದ ಸಂಪಾದನೆಯು ಎಲ್ಲಾ ಗುಣತಗ್ಗಿದ ಸಾಮರ್ಥ್ಯ ಸ್ವಾಮ್ಯ ಷೇರುಗಳ ಬದಲಾವಣೆಯನ್ನು ಪರಿಭಾವಿಸಿ, ಬಾಕಿಯಿರುವ ಆರ್ಥಿಕ ಸ್ವಾಮ್ಯ ಷೇರುಗಳು ಒಳಗೊಂಡಂತೆ, ಸ್ವಾಮ್ಯ ಷೇರುಗಳ ವೇಹಿಟೆಡ್ ಸರಾಸರಿ ಸಂಖ್ಯೆ ಮತ್ತು ಅನಂತರದ ಆದಾಯದ ಬಡ್ಡಿಯ ತೆರಿಗೆಯ ಪರಿಣಾಮ ಮತ್ತು ಗುಣತಗ್ಗಿದ ಸಾಮರ್ಥಿಕ ಸ್ವಾಮ್ಯ ಷೇರುಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತೀ ಷೇರಿನ ಮೂಲ ಸಂಪಾನದಯ ನಿರ್ಧರಣೆಯಲ್ಲಿ ಉಪಯೋಗಿಸುವ ಸ್ವಾಮ್ಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಲಾಗುತ್ತದೆ.

**1.17 ಪಿ.ಪಿ.ಇ. ಮತ್ತು ಸ್ಪರ್ಶಾತೀತಆಸ್ತಿಗಳ' ದುರ್ಬಲತೆ: (Impairment of PPE and Intangible Assets)**

ಕಂಪನಿಯ ಸ್ವತ್ತುಗಳನ್ನು ಮುಂದುವರಿಸುವ ಮೊತ್ತದ ಯಾವುದೇ ದುರ್ಬಲತೆಯ ಸೂಚನೆಗಳಿವೆಯೇ ಎಂಬುದನ್ನು ನಿರ್ಧರಿಸಲು ಪ್ರತಿ ಆಯವ್ಯಯ ದಿನಾಂಕದಲ್ಲಿ ಪಿ.ಪಿ.ಇ.ಗಳ ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಮುಂದುವರಿಸು ಮೌಲ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಯಾವುದೇ ಸೂಚನೆಗಳು ಅಸ್ತಿತ್ವದಲ್ಲಿದ್ದಲ್ಲಿ, ಸ್ವತ್ತುಗಳನ್ನು ಮರುಪಡೆದುಕೊಳ್ಳುವ ಮೊತ್ತವನ್ನು ಅಂದಾಜಿಸಲಾಗಿದೆ. ಆಸ್ತಿಯನ್ನು ಸಾಗಿಸುವ ಮೊತ್ತವು ಮರುಪಡೆದುಕೊಳ್ಳುವ ಮೊತ್ತವನ್ನು ಮೀರಿದ ಸಂದರ್ಭಗಳಲ್ಲಿ ದುರ್ಬಲ ನಷ್ಟವನ್ನು ಗುರುತಿಸಲಾಗುತ್ತದೆ. ಮರುಪಡೆಯಬಹುದಾದ ಮೊತ್ತವು ನಿವ್ವಳ ಮಾರಾಟ ದರ ಮತ್ತು ಅವುಗಳ ಬಳಕೆಯ ಮೌಲ್ಯಕ್ಕಿಂತ ಹೆಚ್ಚಾಗಿದೆ. ಸೂಕ್ತ ರಿಯಾಯಿತಿ ಅಂಶದ ಆಧಾರದ ಮೇಲೆ ಅವುಗಳ ಪ್ರಸ್ತುತ ಮೌಲ್ಯಕ್ಕೆ ಭವಿಷ್ಯದ ನಗದು ಹರಿವುಗಳನ್ನು ರಿಯಾಯಿತಿ ಮಾಡುವ ಮೂಲಕ ಬಳಕೆಯಲ್ಲಿರುವ ಮೌಲ್ಯವನ್ನು ನಿಗದಿ ಮಾಡಲಾಗುತ್ತದೆ. ಹಿಂದಿನ ಲೆಕ್ಕಪತ್ರ ಅವಧಿಗಳಲ್ಲಿ ಒಂದು ಸ್ವತ್ತಿಗಾಗಿ ಗುರುತಿಸಲ್ಪಟ್ಟ ದುರ್ಬಲ ನಷ್ಟವು ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ ಅಥವಾ ಕಡಿಮೆಯಾಗಬಹುದೆಂಬ ಸೂಚನೆಯಿರುವಾಗ, ದುರ್ಬಲ ನಷ್ಟದ ಅಂತಹ ಹಿಮ್ಮುಖವು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲ್ಪಟ್ಟಿದೆ.

**1.18 ಅವಕಾಶಗಳು, ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರುಆಸ್ತಿಗಳು:**

(ಎ) ಹಿಂದಿನ ವ್ಯವಹರಣೆಗಳ ನಿಮಿತ್ತ ನಿಗಮವು ಪ್ರಸಕ್ತ ಹೊಣೆಗಾರಿಕೆಗಳನ್ನು ಹೊಂದಿರುವ ಪ್ರಯುಕ್ತ ಆ ನಿಮಿತ್ತವಾಗಿ ಅವಕಾಶವನ್ನು ಸಮ್ಮತಿಸಲಾಗಿದ್ದು, ಅಂತಹ ಹೊಣೆಗಾರಿಕೆಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಸಂಪನ್ಮೂಲದ ಲಭ್ಯತೆಯು ಅವಶ್ಯವಾಗಿದ್ದು, ಆ ಮಟ್ಟಿಗೆ ಒಂದು ಭರವಸಾಪೂರ್ವಕ ಅಂದಾಜನ್ನು ಒದಗಿಸಬಹುದಾಗಿರುತ್ತದೆ. ಆಸ್ತಿ-ಹೊಣೆ ಪಟ್ಟಿ ದಿನಾಂಕದಂದಿಗೆ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಅಗತ್ಯವಾಗುವಂತೆ ಅತ್ಯುತ್ತಮ ಅಂದಾಜನ್ನು ಆಧರಿಸಿ ಅವಕಾಶವನ್ನು ಗೊತ್ತುಪಡಿಸಲಾಗಿದೆ. ಇವನ್ನು ಪ್ರತಿ ಆಸ್ತಿ-ಹೊಣೆ ಪಟ್ಟಿ ದಿನಾಂಕದಂದು ಪರಿಶೀಲನೆಗೊಳಪಡಿಸಿ, ವ್ಯವಸ್ಥೆಯ ಪ್ರಸಕ್ತ ಅಂದಾಜನ್ನು ಬಿಂಬಿಸಲು ಹೊಂದಾಣಿಕೆ ಮಾಡಲಾಗುತ್ತದೆ.

(ಬಿ) ಸಾದಿಲ್ವಾರು ಹೊಣೆಗಾರಿಕೆಗಳನ್ನು ಆರ್ಥಿಕ ನಿರೂಪಣಾ ಪಟ್ಟಿಯಲ್ಲಿ ಬಿಂಬಿಸಿಲ್ಲ, ಆದರೆ ಟಿಪ್ಪಣಿಗಳಲ್ಲಿ ಬಿಂಬಿಸಲಾಗಿದೆ. ಹಿಂದಿನ ಘಟನೆಗಳಿಂದ ಉಂಟಾದ ಸಂಭವನೀಯ ಬಾಧ್ಯತೆ ಸಾದಿಲ್ವಾರು ಹೊಣೆಗಾರಿಕೆಯಾಗಿದೆ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ದಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದು ಗುರುತಿಸಿರುವುದಿಲ್ಲ, ಏಕೆಂದರೆ (1) ಆರ್ಥಿಕ ಪ್ರಯೋಜನಗಳನ್ನು ಹೊಂದುವಂತಹ ಸಂಪನ್ಮೂಲಗಳ ಹೊರಹರಿವು ಬಾಧ್ಯತೆಯನ್ನು ಇತ್ಯರ್ಥಗೊಳಿಸಲು ಅಗತ್ಯವಿರುತ್ತದೆ ಎಂಬುದು ಸಂಭಾವ್ಯವಲ್ಲ ಅಥವಾ (2) ಹೊಣೆಗಾರಿಕೆಯ ಪ್ರಮಾಣವನ್ನು ಸಾಕಷ್ಟು ವಿಶ್ವಾಸಾರ್ಹತೆಯಿಂದ ಅಳೆಯಲಾಗುವುದಿಲ್ಲ.

(ಸಿ) ಸಾದಿಲ್ವಾರು ಆಸ್ತಿಗಳ ಹಿಂದಿನ ಕಾರ್ಯಕ್ರಮಗಳಿಂದ ಉದ್ಭವಿಸುವ ಒಂದು ಸಂಭವನೀಯ ಆಸ್ತಿ ಮತ್ತು ಇವುಗಳ ಅಸ್ತಿತ್ವವನ್ನು ಸಂಪೂರ್ಣವಾಗಿ ಘಟಕದ ನಿಯಂತ್ರಣದಲ್ಲಿರದ ಭವಿಷ್ಯದ ಒಂದು ಅಥವಾ ಹೆಚ್ಚು ಅನಿರ್ಧಿಷ್ಟ ಘಟನೆಗಳ ಘಟಿಸುವಿಕೆಯಿಂದ ಮಾತ್ರ ದೃಢೀಕರಿಸಲಾಗುತ್ತದೆ ಅಥವಾ ಹಿಂದಿನ ಘಟನೆಗಳಿಂದ ಉದ್ಭವಿಸಿದ ಪ್ರಸ್ತುತ ಬಾಧ್ಯತೆ, ಆದರೆ ಅದನ್ನು ಆರ್ಥಿಕ ವಿವರನಾ ಪಟ್ಟಿಯಲ್ಲಿ ಗುರುತಿಸಿರುವುದಿಲ್ಲ, ಆರ್ಥಿಕ ಪ್ರಯೋಜನಗಳ ಒಳಹರಿವು ಸಾಧ್ಯವಾದಾಗ ಸಾದಿಲ್ವಾರು ಆಸ್ತಿಗಳ ವಿವರಗಳನ್ನು ಟಿಪ್ಪಣಿಗಳಲ್ಲಿ ಬಹಿರಂಗಗೊಳಿಸಲಾಗುತ್ತದೆ.

(ಡಿ) ಸಾದಿಲ್ವಾರು ಹೊಣೆಗಾರಿಕೆಗಳು ಮತ್ತು ಸಾದಿಲ್ವಾರು ಆಸ್ತಿಗಳನ್ನು ಹಣಕಾಸು ವಿವರಣ ಪಟ್ಟಿಯಲ್ಲಿ ಸೂಕ್ತವಾಗಿ ಬಹಿರಂಗಪಡಿಸಲು/ಗುರುತಿಸಲು ನಿರಂತರವಾಗಿ ಮೌಲ್ಯಮಾಪನ ಮಾಡಲಾಗುತ್ತದೆ.

**1.19 ಸ್ಪರ್ಶಾತೀತ ಆಸ್ತಿಗಳು**

ಸ್ಪರ್ಶಾತೀತ ಆಸ್ತಿಗಳ ವೆಚ್ಚವು ಸಂಚಿತ ಋಣಮುಕ್ತತೆಯನ್ನು ಕಳೆದ ಮತ್ತು ನಿವ್ವಳ ದುರ್ಬಲತೆ ಯಾವುದಾದರೂ ಇದ್ದರೆ ಸಮೀಕರಿಸಿ ತೋರಿಸಿದೆ. ನಿರೀಕ್ಷಿತ ಭವಿಷ್ಯದ ಆರ್ಥಿಕ ಪ್ರಯೋಜನಗಳನ್ನು ಕಂಪನಿಗೆ ಹರಿಯುವ ಸಾಧ್ಯತೆ ಇದ್ದಲ್ಲಿ ಸ್ಪರ್ಶಾತೀತ ಮತ್ತು ಅದರ ವೆಚ್ಚವನ್ನು ವಿಶ್ವಾಸಾರ್ಹವಾಗಿ ಮಾಪನ ಮಾಡಬಹುದು ಎಂದಾದಲ್ಲಿ ಆಸ್ತಿಗಳನ್ನು ಗುರುತಿಸಲಾಗುತ್ತದೆ. ಸ್ಪರ್ಶಾತೀತ ಆಸ್ತಿಗಳನ್ನು (ಪರವಾನಗಿಯ ಒಪ್ಪಂದದಡಿ ಹಕ್ಕುಗಳನ್ನು ಒಳಗೊಂಡಿದೆ ಮತ್ತು ತಂತ್ರಾಂಶ ಪರವಾನಗಿಗಳನ್ನು) ನೇರ ಸಾಲಿನ ವಿಧಾನದಲ್ಲಿ ಮೂರು ವರ್ಷಗಳಿಗೊಮ್ಮೆ ಋಣಮುಕ್ತತೆ ಮಾಡಲಾಗುತ್ತದೆ.

**1.20 ಆರ್ಥಿಕ ಸಾಧನಗಳು:**

ಒಂದು ಆರ್ಥಿಕ ಸಾಧನವು ಒಂದು ಘಟಕದ ಆರ್ಥಿಕ ಆಸ್ತಿಯ ಉಗಮವಾಗಿಸುವ ಒಂದು ಒಪ್ಪಂದ ಮತ್ತು ಆರ್ಥಿಕ

ಹೊಣೆಗಾರಿಕೆ ಅಥವಾ ಮತ್ತೊಂದು ಘಟಕದ ಸ್ವಾಮ್ಯ ಸಾಧನವಾಗಿದೆ.

ಹಣಕಾಸಿನ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳು ಸರಿದೂಗಿಸಲ್ಪಟ್ಟಿವೆ ಮತ್ತು ನಿವ್ವಳ ಮೊತ್ತ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಗುರುತಿಸಲಾದ ಮೊತ್ತವನ್ನು ಸರಿದೂಗಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಸ್ವತ್ತುಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸಲು ಉದ್ದೇಶಿಸಿದೆ.

ಆರ್ಥಿಕ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗೀಕರಣವನ್ನು ಕಂಪನಿಯು ಆರಂಭದಲ್ಲಿ ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಗಳಿಗಾಗಿ ಯಾವುದೇ ಮರುವರ್ಗೀಕರಣವನ್ನು ಮಾಡಲಾಗುವುದಿಲ್ಲ ಇದನ್ನು FVTOCI ನಲ್ಲಿ ಸ್ವಾಮ್ಯ ಸಾಧನಗಳನ್ನಾಗಿ ವರ್ಗೀಕರಿಸಲಾಗಿದೆ ಮತ್ತು ಆರ್ಥಿಕ ಆಸ್ತಿಗಳು/ಹೊಣೆಗಾರಿಕೆಗಳನ್ನು FVTPL ನಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸಿದೆ. ಆದ್ಯಾಗ್ಯೂ, ಇತರ ಆರ್ಥಿಕ ಆಸ್ತಿಗಳನ್ನು ಕಂಪನಿಯ ವ್ಯಾಪಾರಿ ಮಾದರಿಯಲ್ಲಿ ಬದಲಾವಣೆಯಾದ ಸಂದರ್ಭದಲ್ಲಿ ಮರುವರ್ಗೀಕರಿಸಬಹುದಾಗಿದೆ. ಕಂಪನಿಯು ಆರ್ಥಿಕ ಆಸ್ತಿಗಳನ್ನು ಮರುವರ್ಗೀಕರಿಸಿದಾಗ, ಅಂತಹ ಮರುವರ್ಗೀಕರಣಗಳನ್ನು ಮುಂದಿನ ವರದಿ ಅವಧಿಯ ಮೊದಲ ದಿನದಿಂದ ನಿರೀಕ್ಷಿತವಾಗಿ ಮಾಡಲಾಗುತ್ತದೆ. ಕಂಪನಿಯು ಹಿಂದೆ ಗುರುತಿಸಲಾದ ದುರ್ಬಲತೆ ಗಳಿಕೆಗಳು ಅಥವಾ ನಷ್ಟಗಳನ್ನೊಳಗೊಂಡಂತೆ ಯಾವುದೇ ಗಳಿಕೆಗಳು, ನಷ್ಟಗಳನ್ನು ಪುನರಾವರ್ತಿಸುವುದಿಲ್ಲ.

ಎ. **ಆರ್ಥಿಕ ಸ್ವತ್ತುಗಳು/ಆಸ್ತಿಗಳು**

ಆರ್ಥಿಕ ಸ್ವತ್ತುಗಳು ಸ್ವಾಮ್ಯ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಗಳು, ವ್ಯಾಪಾರ ಸ್ವೀಕೃತಿಗಳು, ನಗದು ಮತ್ತು ನಗದು ಸಮಾನ ಮತ್ತು ಇತರ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತವೆ.

ಆ ಹಣಕಾಸಿನ ಸ್ವತ್ತುಗಳು ಮತ್ತು ಅದರ ಒಪ್ಪಂದದ ನಗದು ಹರಿವಿನ ಗುಣಲಕ್ಷಣಗಳನ್ನು ನಿರ್ವಹಿಸಲು ವ್ಯವಹಾರ ಮಾದರಿ (ಅಂದರೆ) ವ್ಯವಹಾರಗಳ ಸ್ವಭಾವವನ್ನು ಅವಲಂಬಿಸಿ, ಆರ್ಥಿಕ ಸ್ವತ್ತುಗಳನ್ನು ಮೊದಲಿಗೆ ನ್ಯಾಯೋಚಿತ ಮೌಲ್ಯದಲ್ಲಿ ಅಳೆಯಲಾಗುತ್ತದೆ ಮತ್ತು ತದನಂತರ ಈ ಕೆಳಗಿನವುಗಳಲ್ಲಿ ಅಳತೆ ಮತ್ತು ವರ್ಗೀಕರಣ ಮಾಡಲಾಗುತ್ತದೆ.

ಎ) ಋಣಮುಕ್ತತೆಯ ವೆಚ್ಚ; ಅಥವಾ

ಬಿ) ಇತರ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ (Fair Value Through Other Comprehensive Income (FVTOCI) ); ಅಥವಾ

ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL) ಮಿತವ್ಯಯದ ವೆಚ್ಚವು ಪ್ರಾರಂಭದಲ್ಲಿ ಗುರುತಿಸಲಾದ ನ್ಯಾಯೋಚಿತ ಮೌಲ್ಯದ ವ್ಯವಹಾರ ವೆಚ್ಚದ ಹೊರೆಯ ಮೊತ್ತವನ್ನು ಹೆಚ್ಚು ಕಡಿಮೆ ಪ್ರತಿನಿಧಿಸುತ್ತದೆ.

IND-AS ವಹಿವಾಟಿನ ದಿನಾಂಕದಂದು ಕಂಪನಿಯು ಆರ್ಥಿಕ ಸ್ವತ್ತುಗಳ ವರ್ಗೀಕರಣ ಮತ್ತು ಮಾಪನ ಉದ್ದೇಶಕ್ಕಾಗಿ ಸತ್ಯ ಮತ್ತು ಸನ್ನಿವೇಶಗಳನ್ನು ಮೌಲ್ಯಮಾಪನ ಮಾಡಿದೆ. ಆ ಪ್ರಕಾರವಾಗಿ, ಆ ಹಣಕಾಸಿನ ಆಸ್ತಿಗಳನ್ನು ಹೊರತುಪಡಿಸಿ ಅದರ ಒಪ್ಪಂದದ ನಿಶ್ಚಿತ ದಿನಾಂಕಗಳಲ್ಲಿ ನಿರ್ದಿಷ್ಟ ನಗದು ಹರಿವು ಹೆಚ್ಚಳವಾಗಿಸುವುದನ್ನು ಹೊರತುಪಡಿಸಿ ಹಣಕಾಸಿನ ಆಸ್ತಿಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಮಾಪನ ಮಾಡಲಾಗುತ್ತದೆ, ಕೇವಲ ಅಸಲು ಮತ್ತು ಬಡ್ಡಿಯ ಮೇಲಿನ ಪಾವತಿಗಳನ್ನು ಮಾತ್ರ ಪ್ರತಿನಿಧಿಸುವದನ್ನು ವ್ಯವಹಾರದ ಮಾದರಿಯನ್ನು ಅವಲಂಬಿಸಿ ಈ ಕೆಳಗೆ ವಿವರಿಸಿದಂತೆ ಅಳೆಯಲಾಗುತ್ತದೆ.

| ವರ್ಗೀಕರಣ | ವ್ಯವಹಾರ ಮಾದರಿ |
|---|---|
| ಋಣಮುಕ್ತತೆಯ ವೆಚ್ಚ | ಕಂಪನಿಯ ಉದ್ದೇಶವು ಒಪ್ಪಂದದ ನಗದು ಹರಿವುಗಳನ್ನು ಅವಧಿ ಮುಕ್ತಾಯ/ಪರಿಪಕ್ವದ ದಿನಾಂಕದ ವರೆಗೆ ಹಿಡಿದಿಟ್ಟುಕೊಳ್ಳುವುದು ಮತ್ತು ಸಂಗ್ರಹಿಸುವುದು ಆಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಂಪನಿಯು ತನ್ನ ಒಪ್ಪಂದದ ಪರಿಪಕ್ವತೆಯ ಮುಂಚೆ ಅದರ ನ್ಯಾಯಯುತ ಮೌಲ್ಯ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧನಗಳನ್ನು ಮಾರಾಟ ಮಾಡಲು ಉದ್ದೇಶಿಸುವುದಿಲ್ಲ. |
| FVTOCI | ಕಂಪನಿಯ ಉದ್ದೇಶವು ತನ್ನ ಒಪ್ಪಂದದ ನಗದು ಹರಿವುಗಳನ್ನು ಅವಧಿ ಸಂಗ್ರಹಿಸುವುದು ಮತ್ತು ಆರ್ಥಿಕ ಸ್ವತ್ತುಗಳನ್ನು ಮಾರಾಟ ಮಾಡುವುದಾಗಿದೆ. |

ಅಂಗಸಂಸ್ಥೆಗಳ ಸ್ವಾಮ್ಯ ಹೂಡಿಕೆಯನ್ನು ಸಾಗಿಸುವ ವೆಚ್ಚದಲ್ಲಿ ತೆಗೆದುಕೊಳ್ಳಲಾಗುತ್ತದೆ (ಅಂದರೆ) ಹಿಂದಿನ GAAP ನ ಮುಂದುವರಿದ ವೆಚ್ಚವನ್ನು IND-ASಪರಿವರ್ತನೆಯ ದಿನಾಂಕದಂದು ಇತರ ಸ್ವಾಮ್ಯ ಹೂಡಿಕೆಗಳ FVTOCI ದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಬದಲಾವಣೆಯನ್ನು ಅಳೆಯಲು ಕಂಪನಿಯು ಆರಂಭಿಕ ಗುರುತಿಸುವಿಕೆ ಸಮಯದಲ್ಲಿ ಒಂದು ಮಾರ್ಪಡಿಸಲಾಗದ ಆಯ್ಕೆಯನ್ನು ಬಳಸಿದೆ. ಅದರ ಪ್ರಕಾರವಾಗಿ, ಕಂಪನಿಯು ತನ್ನ ಆರ್ಥಿಕ ಸ್ವತ್ತುಗಳ ಮಾಪನಕ್ಕಾಗಿ ಈ ಕೆಳಗಿನಂತೆ ವರ್ಗೀಕರಿಸುತ್ತದೆ.

| ವರ್ಗೀಕರಣ | ಆರ್ಥಿಕ ಸ್ವತ್ತುಗಳ ಹೆಸರು |
|---|---|
| ಋಣಮುಕ್ತತೆಯ ವೆಚ್ಚ | ವ್ಯಾಪಾರ ಸಂದಾಯಗಳು, ಸಾಲಗಳು ಮತ್ತು ಮುಂಗಡಗಳು, ಠೇವಣಿಗಳು, ಸ್ವೀಕರಿಸಬಹುದಾದ ಬಡ್ಡಿ, ತುಂಬದ ಆದಾಯ ಮತ್ತು ನಗದು ರೂಪದಲ್ಲಿ ವಸೂಲು ಮಾಡಬಹುದಾದ ಮುಂಗಡಗಳು. |
| FVTOCI | ಆರಂಭಿಕ ಗುರುತಿಸುವಿಕೆಯ ಸಮಯದಲ್ಲಿ ಒಂದು ಆಯ್ಕೆಯ ಚಲಾವಣೆಯಾಗಿ ಅಂಗಸಂಸ್ಥೆಗಳನ್ನು ಹೊರತುಪಡಿಸಿ ಕಂಪನಿಗಳಲ್ಲಿ ಸ್ವಾಮ್ಯ ಸಾಧನ. |
| FVTPL | ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ, ಮುಂದಿನ ವಿನಿಮಯ ಒಪ್ಪಂದಗಳು |

ನಗದು ಹರಿವುಗಳಿಗೆ ಒಪ್ಪಂದದ ಹಕ್ಕುಗಳ ಅವಧಿ ಮೀರಿದಾಗ ಅಥವಾ ಸದರಿ ಸ್ವತ್ತುಗಳನ್ನು ವರ್ಗಾವಣೆ ಮಾಡಿದಾಗ ಆರ್ಥಿಕ ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸಲಾಗಿದೆ (ಅಂದರೆ) ಆರ್ಥಿಕ ವಿವರಣ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮೂರನೆಯ ವ್ಯಕ್ತಿಯೊಂದಿಗೆ ಆರ್ಥಿಕ ಸ್ವತ್ತಿನಿಂದ ಉಂಟಾಗುವ ನಗದು ಹರಿವುಗಳನ್ನು ಸರಿದೂಗಿಸಲು ಸಹ ಕಂಪನಿಯು ಸ್ವತ್ತುಗಳನ್ನು ಅಮಾನ್ಯ (derecognize) ಗೊಳಿಸುತ್ತದೆ ಮತ್ತು ವರ್ಗಾವಣೆಯ ನಂತರ:

ಎ) ಆರ್ಥಿಕ ಸ್ವತ್ತಿನ ಗಮನಾರ್ಹ ಅಪಾಯ ಮತ್ತು ಪ್ರತಿಫಲಗಳು, ಅಥವಾ

ಬಿ) ಆರ್ಥಿಕ ಸ್ವತ್ತಿನ ನಿಯಂತ್ರಣ

ಆದಾಗ್ಯೂ, ಕಂಪನಿಯು ವರ್ಗಾವಣೆಗೊಂಡ ಆರ್ಥಿಕ ಸ್ವತ್ತು ಮತ್ತು ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಅದರ ಮುಂದುವರಿದ ಒಳಗೊಳ್ಳುವಿಕೆಯ ಮಟ್ಟಿಗೆ ಗುರುತಿಸುತ್ತದೆ, ಅವುಗಳನ್ನು ಅವುಗಳ ಹಕ್ಕುಗಳು ಮತ್ತು ಆರ್ಥಿಕ ಸ್ವತ್ತಿನ ಬಾಧ್ಯತೆಗಳ ಆಧಾರದ ಮೇಲೆ ಅಳೆಯಲಾಗುತ್ತದೆ.ಕಂಪನಿಯು ಅಮಾನ್ಯ ಅವಶ್ಯಕತೆಗಳನ್ನು ಭವಿಷ್ಯಾನ್ವಯವಾಗಿ ಅನ್ವಯಿಸಿದೆ.

ಅದರ ಆರ್ಥಿಕ ಸ್ವತ್ತು ಅಥವಾ ಅದರ ಭಾಗಶ:, ಸಾಗಿಸುವ ಮೊತ್ತದ ನಡುವಿನ ವ್ಯತ್ಯಾಸವನ್ನು ಗುರುತಿಸುವ ದಿನಾಂಕದಂದು ಅಳತೆ ಮಾಡಲಾಗುವುದು ಮತ್ತು ಯಾವುದೇ ಹೊಸ ಸ್ವತ್ತು ಸೇರಿದಂತೆ ಸ್ವೀಕರಿಸಿದ ಪ್ರತಿಫಲ (consideration)ವು ಯಾವುದೇ ಹೊಸ ಹೊಣೆಗಾರಿಕೆಯನ್ನು ಕಡಿಮೆ ಪಡೆಯುತ್ತದೆ ಎಂದು ಪರಿಭಾವಿಸಲಾದುದನ್ನು ಲಾಭ ಮತ್ತು ನಷ್ಟ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗುತ್ತದೆ.

ದುರ್ಬಲ ಉದ್ದೇಶಗಳಿಗಾಗಿ ಗಮನಾರ್ಹ ಆರ್ಥಿಕ ಸ್ವತ್ತುಗಳನ್ನು ಪ್ರತಿ ವರದಿಯ ದಿನಾಂಕದಂದು ವೈಯಕ್ತಿಕ ಆಧಾರದ ಮೇಲೆ ಪರೀಕ್ಷಿಸಲಾಗುತ್ತದೆ. ಇತರ ಹಣಕಾಸು ಸ್ವತ್ತುಗಳನ್ನು ಸಾಮೂಹಿಕವಾಗಿ ಗುಂಪಿನಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ, ಅದು ಇದೇ ಕ್ರೆಡಿಟ್ ಅಪಾಯದ ಗುಣಲಕ್ಷಣಗಳನ್ನು ಹಂಚಿಕೊಳ್ಳುತ್ತದೆ.ಈ ಪ್ರಕಾರವಾಗಿ ದುರ್ಬಲಗೊಳಿಸುವ ಪರೀಕ್ಷೆಯನ್ನು ಈ ಕೆಳಗಿನ ಆಧಾರದ ಮೇಲೆ ಪೂರ್ವಾನ್ವಯವಾಗಿ ಮಾಡಲಾಗುತ್ತದೆ.

| **ಆರ್ಥಿಕ ಸ್ವತ್ತುಗಳ ಹೆಸರು** | **ದುರ್ಬಲತೆ ಪರೀಕ್ಷಾ ವಿಧಾನ** |
|---|---|
| ವ್ಯಾಪಾರ ಸ್ವೀಕೃತಿಗಳು | ನಿರೀಕ್ಷಿತ ಕ್ರೆಡಿಟ್ ನಷ್ಟ ಮಾದರಿಯನ್ನು ಅನ್ವಯಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವು ಭವಿಷ್ಯದ ಆರ್ಥಿಕ ಪರಿಸ್ಥಿತಿಗಳ ಪ್ರಸ್ತುತ ಸ್ಥಿತಿಗತಿ ಮತ್ತು ಮುನ್ಸೂಚನೆಗಳನ್ನು ಪ್ರತಿಬಿಂಬಿಸುವ ಐತಿಹಾಸಿಕ ದರಗಳ ಆಧಾರದ ಮೇಲೆ ಅವಕಾಶವನ್ನು ಬಳಸಿಕೊಳ್ಳುವ ಮೂಲಕ ಸ್ವತ್ತುಗಳ ಜೀವಿತಾವಧಿ ಮೇಲೆ ನಿರೀಕ್ಷಿಸಲಾದ ಕ್ರೆಡಿಟ್ ನಷ್ಟವನ್ನು ಅಂದಾಜಿಸಲಾಗುವುದು. ಅದು ಉದ್ಯಮದ ಸ್ವರೂಪ, ಗ್ರಾಹಕರ ವಿಭಾಗ, ಹಿಂದಿನ ಕಾರಣ ಸ್ಥಿತಿ ಮತ್ತು ನಿರೀಕ್ಷಿತ ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಈ ಸ್ವತ್ತುಗಳಿಂದ ನಿರೀಕ್ಷಿಸಲಾದ ಲಾಭ ನಷ್ಟದ ಅಂದಾಜು ಮಾಡಲಾಗುವುದು. |
| ಇತರೆ ಹಣಕಾಸಿನ ಸ್ವತ್ತುಗಳು | ಕ್ರೆಡಿಟ್ ಅಪಾಯವು ಗಮನಾರ್ಹವಾಗಿ ಹೆಚ್ಚಾಗದೆ ಇದ್ದಲ್ಲಿ, 12 ತಿಂಗಳಿನ ಇಸಿಎಲ್ ಅನ್ನು ಹಾನಿಯ ನಷ್ಟಕ್ಕಾಗಿ ಪೂರೈಸುವುದು. ಅಂಗೀಕಾರದ ಪ್ರಾರಂಭದಿಂದ ಕ್ರೆಡಿಟ್ ಅಪಾಯದಲ್ಲಿ ಗಮನಾರ್ಹ ಬದಲಾವಣೆಯಾದಾಗ ಜೀವಿತಾವಧಿಯ ಪೂರ್ವನಿಯೋಜಿತ ಸಂಭವನೀಯತೆ ಆಧಾರದ ಮೇಲೆ ದುರ್ಬಳಕೆಯನ್ನು ಅಳೆಯಲಾಗುವುದು. ಆರಂಭಿಕ ಅಂಗೀಕಾರದಿಂದ ನಗದು ಲಾಭದ ಅಪಾಯದಲ್ಲಿ ಅಲ್ಲಿ ಧೀರ್ಘಕಾಲಿಕವಾಗಿ ಗಮನಾರ್ಹವಾಗಿ ಹೆಚ್ಚಳವಾಗಿರುವುದಿಲ್ಲ, ಒಂದು ವೇಳೆ, ನಂತರದ ಅವಧಿಯಲ್ಲಿ ಅಂತಹ ಪ್ರಕರಣದ ಲಾಭದ ಗುಣಮಟ್ಟದಲ್ಲಿ ಸುಧಾರಿಸುವುದು, ನಂತರ 12 ತಿಂಗಳಿನ ನಿರೀಕ್ಷಿತ ಲಾಭ ನಷ್ಟದ ಆಧಾರದ ಮೇಲೆ ನಷ್ಟದ ಹಾನಿ ಭರ್ತಿಯನ್ನು ಘಟಕವು ಹಿಂದಿರುಗಿಸುತ್ತದೆ. ಆದಾಗ್ಯೂ ಪಾವತಿಯಾಗದ ಆದಾಯವು ವ್ಯಾಪಾರದ ಕರಾರುಗಳಿರುವಂತೆ ಸಂಬಂಧದಲ್ಲಿ ನಷ್ಟದ ಪರೀಕ್ಷಾ ವಿಧಾನವನ್ನು ಬಳಸಿರುವುದು. |

ಬಿ) **ನಗದು ಮತ್ತು ತತ್ಸಮಾನಗಳು**: ನಗದು ಹರಿವಿನ ಲೆಕ್ಕವಿವರಣೆಯಲ್ಲಿ ಮಂಡಿಸುವುದರ ಉದ್ದೇಶಕ್ಕಾಗಿ, ನಗದು ಮತ್ತು ತತ್ಸಮಾನಗಳನ್ನೊಳಗೊಂಡು ಕೈಯಲ್ಲಿರುವ ನಗದು, ಬ್ಯಾಂಕಿನಲ್ಲಿ ಠೇವಣಿ ಇಡಲಾದ ನಗದಿನೊಂದಿಗೆ ಹಣಕಾಸು ಸಂಸ್ಥೆಗಳು ಆಹ್ವಾನಿಸುವ ಇತರೆಅಲ್ಪಾವಧಿ ಠೇವಣಿಗಳು, ಹೆಚ್ಚಿನ ಚಾಲ್ತಿ ಹೂಡಿಕೆಗಳೊಂದಿಗೆ ಮೂರು ತಿಂಗಳಿನ ಮೂಲ ಮುಕ್ತಾಯ ಅವಧಿ ಅಥವಾ ಅದಕ್ಕೂ ಕಡಿಮೆ ಇರುವುದನ್ನು ನಗದು ಹಣವಾಗಿ ಪರಿವರ್ತಿಸುವುದು ಮತ್ತು ಮೌಲ್ಯದಲ್ಲಿನ ಬದಲಾವಣೆಗಳ ಗಮನಾರ್ಹವಲ್ಲದ ಅಪಾಯಕ್ಕೊಳಪಟ್ಟಿರುತ್ತವೆ.

ಸಿ) **ವ್ಯವಹಾರದ ಸ್ವೀಕೃತಿಗಳು**: ವ್ಯವಹಾರ ಸ್ವೀಕೃತಿಯನ್ನು ಮೂಲತ ನ್ಯಾಯಯುತ ಬೆಲೆಯಲ್ಲಿ ಪರಿಗಣಿಸಲಾಗುತ್ತಿದ್ದು ತರುವಾಯ, ವ್ಯವಹಾರ ಸ್ವೀಕೃತಿಯನ್ನು ಪರಿಗಣಿಸುವಾಗ ತಗ್ಗಿದ ಬೆಲೆಯನ್ನು ಪರಿಣಾಮಕಾರಿ ಬಡ್ಡಿ ವಿಧಾನದನ್ವಯ, ದುರ್ಬಲತೆಯ ಅವಕಾಶಗಳನ್ನು ಕಡಿಮೆಗೊಳಿಸಿ ಬಿಂಬಿಸಲಾಗುವುದು.

### 1.21 ಆರ್ಥಿಕ ಹೊಣೆಗಾರಿಕೆಗಳು:

ಆರ್ಥಿಕ ಹೊಣೆಗಾರಿಕೆಗಳು, ಸಾಲಗಳು, ವ್ಯಾಪಾರ ಸಂದಾಯಗಳು, ಹಣಕಾಸು ಉತ್ಪನ್ನ ಸಾಧನಗಳು, (Derivative Financial Instruments) ಆರ್ಥಿಕ ಖಾತರಿ ಬಾಧ್ಯತೆಗಳು ಮತ್ತು ಇತರೆ ಆರ್ಥಿಕ ಹೊಣೆಗಾರಿಕೆಗಳನ್ನು ಒಳಗೊಂಡಿರುತ್ತವೆ.

ಕಂಪನಿಯು ಆರ್ಥಿಕ ಹೊಣೆಗಾರಿಕೆಗಳನ್ನು ಈ ಕೆಳಕಂಡಂತೆ ಮಾಪನ ಮಾಡಲಾಗುತ್ತದೆ.

| ಮಾಪನಾ ಆಧಾರ | ಆರ್ಥಿಕ ಹೊಣೆಗಾರಿಕೆಗಳ ಹೆಸರು |
|---|---|
| ಋಣಮುಕ್ತತೆಯ ವೆಚ್ಚ | ಸಾಲಗಳು, ವ್ಯಾಪಾರ ಸಂದಾಯಗಳು, ಹೊದಗಿಬಂದ ಬಡ್ಡಿ, ಭದ್ರತಾ ಠೇವಣಿ ಮತ್ತು ವ್ಯಾಪಾರಕ್ಕಲ್ಲದ ಇತರೆ ಹಣಕಾಸಿನ ಹೊಣೆಗಾರಿಕೆಗಳು |
| FVTPL | ಉತ್ಪನ್ನ ಒಪ್ಪಂದಗಳಾಗಿದ್ದ ವಿದೇಶಿ ವಿನಿಮಯ ಮುಂಗಡ ಒಪ್ಪಂದಗಳು ಹೆಡ್ಜ್ ಲೆಕ್ಕಪತ್ರ ನಿರ್ವಹಣೆ ಮತ್ತು IND-AS. 109 ಮತ್ತು ಇತರ ಆರ್ಥಿಕ ಹೊಣೆಗಾರಿಕೆಗಳಿಗೆ ಅರ್ಹತೆ ಹೊಂದಿರುವುದಿಲ್ಲ. |

ಆರ್ಥಿಕ ಹೊಣೆಗಾರಿಕೆಗಳನ್ನು ಅದು ಅಳಿಸಿದಾಗ ಮಾತ್ರ ಅಮಾನ್ಯಗೊಳಿಸ/ನಿರ್ಲಕ್ಷಿಸಲಾಗುತ್ತದೆ (ಅಂದರೆ) ಒಪ್ಪಂದದ ಪ್ರಕಾರ ಬಾಧ್ಯತೆಯು ನಿಗದಿತವಾದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಅವಧಿ ಮೀರಿದಾಗ.

ಹಣಕಾಸಿನ ಹೊಣೆಗಾರಿಕೆಗಳು ಅಥವಾ ಅದರ ಭಾಗವನ್ನು ಅಮಾನ್ಯ (derecognise) ಗೊಳಿಸಿದ ಮೇಲೆ, ಅಳಿಸಲಾದ ಅಥವಾ ಇನ್ನೊಂದು ಪಕ್ಷಕ್ಕೆ ವರ್ಗಾಯಿಸಲಾದ ಆರ್ಥಿಕ ಹೊಣೆಗಾರಿಕೆಗಳನ್ನು ಸಾಗಿಸುವ ಮೊತ್ತ ಮತ್ತು ನಗದು ಅಲ್ಲದ ಸ್ವತ್ತುಗಳ ವರ್ಗಾವಣೆ ಅಥವಾ ಭಾವಿಸಲಾದ ಹೊಣೆಗಳ ನಡುವಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಖ್ತೆ:ಯಲ್ಲಿ ಗುರುತಿಸಲಾಗಿದೆ.

### 1.22 ಆರ್ಥಿಕ ಸಾಧನಗಳನ್ನು ಸರಿದೂಗಿಸುವುದು

ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನಿವ್ವಳ ಮೊತ್ತವನ್ನು ಕಂಪನಿಯು ಕಾನೂನಾತ್ಮಕ ಹಕ್ಕನ್ನು ಹೊಂದಿರುವಾಗ ಮಾತ್ರ ಸರಿದೂಗಿಸಿ ಗುರುತಿಸಲಾದ ಮೊತ್ತವನ್ನು ಆಯವ್ಯಯ ಪಟ್ಟಿಯಲ್ಲಿ ಪ್ರಸ್ತುತ ಪಡಿಸಲಾಗುತ್ತದೆ ಮತ್ತು ನಿವ್ವಳ ಆಧಾರದ ಮೇಲೆ ನೆಲೆಗೊಳ್ಳಲು ಅಥವಾ ಆಸ್ತಿಗಳನ್ನು ಕೈಗೂಡಿಸಿಕೊಳ್ಳಲು ಹೊಣೆಗಾರಿಕೆಗಳನ್ನು ಏಕಕಾಲದಲ್ಲಿ ಇತ್ಯರ್ಥಗೊಳಿಸುವ ಉದ್ದೇಶವಿದ್ದಾಗ ಮಾತ್ರ ಸರಿದೂಗಿಸಲಾಗುತ್ತದೆ.

## ಟಿಪ್ಪಣಿ –2 ಆಸ್ತಿ, ಸ್ಥಾವರ ಮತ್ತು ಉಪಕರಣಗಳು

(ಮೊಬಲಗು ರೂ. ಗಳಲ್ಲಿ)

| | ಒಟ್ಟು ಆಸ್ತಿ | | | | | | ಸವಕಳಿ | | | | ನಿವ್ವಳ ಆಸ್ತಿ | |
|---|---|---|---|---|---|---|---|---|---|---|---|---|
| ವಿವರಗಳು | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2016 ರಂದು ಇದ್ದಂತೆ | ಸೇರ್ಪಡೆ | ಕಡಿತ/ ಹೊಂದಾಣಿಕೆ | 31ನೇ ಮಾರ್ಚ 2017 ರಂದು ಇದ್ದಂತೆ | ಲೆಕ್ಕ ಸಂಕೇತ | 01 ನೇ ಏಪ್ರಿಲ್ 2016 ರಂದು ಇದ್ದಂತೆ | ಸೇರ್ಪಡೆ | ಕಡಿತ/ ಹೊಂದಾಣಿಕೆ | 31ನೇ ಮಾರ್ಚ 2017 ರಂದು ಇದ್ದಂತೆ | 31ನೇ ಮಾರ್ಚ 2016 ರಂದು ಇದ್ದಂತೆ | 31ನೇ ಮಾರ್ಚ 2017 ರಂದು ಇದ್ದಂತೆ |
| ಭೂಮಿ ಮತ್ತು ಹಕ್ಕು | 10.1 | 194 42 37 629 | 88 41 53 471 | -1 11 83 704 | 281 72 07 396 | 12.1 | | | | | 194 42 37 629 | 281 72 07 396 |
| ಕಟ್ಟಡಗಳು | 10.2 | 523 78 04 304 | 40 85 01 904 | 1 73 06 058 | 566 36 12 266 | 12.2 | 1 52 32 20 765 | 17 88 22 482 | - 1 16 626 | 1 70 19 26 621 | 371 45 83 539 | 396 16 85 645 |
| ಹೈಡ್ರಾಲಿಕ್ಸ್ ವರ್ಕ್ಸ್ | 10.3 | 66 31 85 087 | 6 97 47 791 | 52 20 984 | 73 81 53 862 | 12.3 | 18 80 52 882 | 3 82 95 877 | | 22 63 48 759 | 47 51 32 205 | 51 18 05 103 |
| ಇತರೆ ಸಿವಿಲ್ ಕಾಮಗಾರಿಗಳು | 10.4 | 61 27 73 134 | 11 56 50 767 | - 68 76 996 | 72 15 46 905 | 12.4 | 11 52 00 482 | 2 25 81 560 | 3 560 | 13 77 85 602 | 49 75 72 652 | 58 37 61 303 |
| ಸ್ಥಾವರ ಮತ್ತು ಯಂತ್ರೋಪಕರಣಗಳು | 10.5 | 7414 55 42 609 | 433 15 53 709 | -32 65 33 002 | 7815 05 63 316 | 12.5 | 30 02 12 65 023 | 3 58 35 60 944 | -22 18 32 838 | 33 38 29 93 129 | 4412 42 77 586 | 4476 75 70 187 |
| ಮಾರ್ಗಗಳು ಮತ್ತು ಕೇಬಲ್ ಜಾಲ | 10.6 | 5756 46 35 944 | 408 51 07 797 | -1 74 21 099 | 6163 23 22 642 | 12.6 | 21 66 71 80 505 | 2 84 91 31 700 | -1 85 54 436 | 24 49 77 57 769 | 3589 74 55 439 | 3713 45 64 873 |
| ವಾಹನಗಳು | 10.7 | 8 41 49 054 | 20 74 356 | - 23 83 959 | 8 38 39 451 | 12.7 | 4 51 01 955 | 48 98 413 | - 21 45 565 | 4 78 54 803 | 3 90 47 099 | 3 59 84 648 |
| ಪೀಠೋಪಕರಣಗಳು | 10.8 | 18 31 36 352 | 86 31 256 | - 4 96 938 | 19 12 70 670 | 12.8 | 8 19 28 197 | 1 11 97 633 | - 18 06 319 | 9 13 19 511 | 10 12 08 155 | 9 99 51 159 |
| ಕಛೇರಿ ಸಲಕರಣೆಗಳು | 10.9 | 4 35 11 988 | 7 28 699 | - 35 151 | 4 42 05 536 | 12.9 | 2 12 36 892 | 20 38 817 | - 2 63 392 | 2 30 12 317 | 2 22 75 096 | 2 11 93 219 |
| **ಒಟ್ಟು** | | **14047 89 76 101** | **990 61 49 750** | **-34 24 03 807** | **15004 27 22 044** | | **5366 31 86 701** | **669 05 27 426** | **-24 47 15 616** | **6010 89 98 511** | **8681 57 89 400** | **8993 37 23 533** |
| ಹಿಂದಿನ ವರ್ಷ | | **13122 73 91 600** | **1042 02 67 206** | **-116 86 82 705** | **14047 89 76 101** | | **4759 66 79 535** | **642 35 25 669** | **-35 70 18 503** | **5366 31 86 701** | **8363 07 12 065** | **8681 57 89 400** |

* ಸಂಸ್ಥೆಯು ಅದರ ಎಲ್ಲಾ ಆಸ್ತಿ, ಸ್ಥಾವರ ಮತ್ತು ಉಪಕರಣಗಳು ಮತ್ತು ಸ್ಪರ್ಶಾತೀತ ಆಸ್ತಿಗಳನ್ನು ಹಿಂದಿನ ಗ್ಯಾಪ್ (GAAP) ಪ್ರಕಾರ ಅಳೆಯಲಾದ ಸಾಗಣೆ ಮೊತ್ತವನ್ನು ಪರಿಗಣಿಸಿ. ಇಂಡ್ ಎ ಎಸ್ ಗೆ ಪರಿವರ್ತನೆಯಾದ ದಿನಾಂಕದೊಂದು ಸದರಿ ಮೊತ್ತವನ್ನೆ ಪರಿಗಣಿಸಿ ಲೆಕ್ಕೀಕರಿಸಿದೆ.

**ಸ್ಥಿರ ಆಸ್ತಿಗಳು:**

**ಟಿಪ್ಪಣಿ 2.1– ಭೂಮಿ ದಾಖಲೆಗಳ ಸಮನ್ವಯ**

31.03.2017 ರಂದು ಇದ್ದಂತೆ ಅಂತ್ಯಕ್ಕೆ ಉಚಿತ ಹಿಡುವಳಿ ಭೂಮಿ ರೂ.281.72.07.396/– ಹಾಗೂ ಗುತ್ತಿಗೆ ಆಧಾರಿತ ಭೂಮಿ ರೂ.11,54,71,149/– ಗಳನ್ನು ಭೂ ದಾಖಾಲಾತಿ ಪತ್ರಗಳನ್ನು ಹಣಕಾಸಿನ ಹೇಳಿಕೆಗಳೊಂದಿಗೆ ಸಮನ್ವಯಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

**ಟಿಪ್ಪಣಿ 2.2– ಭೂಮಿ ಮತ್ತು ಹಕ್ಕು ದಾಖಲೆ ಪತ್ರ**

ಎ) ನಿಗಮವು ಒಟ್ಟು 7634 ಎಕರೆ 3 ಗುಂಟೆ 1278 ಭೂಮಿಯನ್ನು ಅಸ್ತಿಕರಣಗೊಳಿಸಿದೆ (ಇದರಲ್ಲಿ 80.46 ಎಕರೆ 635.84 ಗುಂಟೆ ಕವಿಪ್ರನಿನಿಗೆ ಉಡುಗೊರೆಯಾಗಿ ಬಂದಿರುವುದು ಒಳಗೊಂಡಿದೆ), 187 ಎಕರೆ 33 ಗುಂಟೆ ಅರಣ್ಯ ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿ, 822 ಎಕರೆ 26.80 ಗುಂಟೆ ಸರ್ಕಾರಿ ಜಮೀನು ಮತ್ತು 41 ಎಕರೆ 16.88 ಗಂಟೆ ಖಾಸಗಿಯವರಿಂದ ಗುತ್ತಿಗೆ ಪಡೆದಿರುವ ಭೂಮಿಯನ್ನು ಒಳಗೊಂಡಿದೆ. 1) ಹಕ್ಕು ಪತ್ರವನ್ನು ಒಳಗೊಂಡಂತೆ ಭೂ ದಾಖಲೆಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. 2) 1278 ಆವರಣದಲ್ಲಿ 832 ನಿವೇಶನಗಳಿಗೆ ಸಂಬಂಧಿಸಿದ ಸಂಪೂರ್ಣ ದಾಖಲಾತಿಗಳು ಲಭ್ಯವಿದೆ.ನಿಗಮವು ಸಂಬಂಧಿಸಿದ ಕಂದಾಯ ಇಲಾಖೆಯವರೊಂದಿಗೆ ಸಂಪರ್ಕದಲ್ಲಿದ್ದು ದಾಖಲಾತಿಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆಯು ಜಾರಿಯಲ್ಲಿದೆ. 3) 7634 ಎಕರೆಗಳಲ್ಲಿ 3 ಗುಂಟೆ ಭೂಮಿಯಲ್ಲಿ, 80 ಎಕರೆ67 ಗುಂಟೆ ಭೂಮಿಯನ್ನು ಇತರರು ಆಕ್ರಮಿಸಿಕೊಂಡಿರುತ್ತಾರೆ. ಭೂಮಿಯನ್ನು ಮರು ಸ್ವಾಧೀನಪಡಿಸಿಕೊಳ್ಳಲು ಕಾನೂನು ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಬಿ) ರೂ.281,72,07,396 / – ರ ಜಮೀನಿನಲ್ಲಿ ರೂ.15,21,39,031 / – ಜಮೀನಿನಲ್ಲಿ ಗುತ್ತಿಗೆ ಕೊಟ್ಟಿರುವ ಜಮೀನು ಸೇರಿದೆ (ಟಿಪ್ಪಣಿ 27.1 ನ್ನು ಗಮನಿಸಿ) ಸಿ) ರೂ.281,72,07,396 / – ರ ಜಮೀನಿನಲ್ಲಿ ಎಂ.ಇ.ಐ ಲೇಔಟ್‌ನಲ್ಲಿರುವ ಮತ್ತು ಮಂಡೂರ್ ನಲ್ಲಿರುವ ಕವಿಪ್ರನಿನಿಯ 66/11 ಕೆವಿ ಸ್ಟೇಷನ್ ಅನ್ನು ಕಟ್ಟಿದ್ದು ಕವಿಪ್ರನಿನಿಗೆ ಸದರಿ ಭೂಮಿಯು ಹಸ್ತಾಂತರವಾಗದೆ ಇರುವ ಜಮೀನು ಒಳಗೊಂಡಿರುತ್ತದೆ. ಸದರಿ ಜಮೀನಿನ ರೂ. 10,48,590/– ಡಿ) ರೂ. 6.67 ಕೋಟಿಗೆ ಜಮೀನನ್ನು ಕೆಐಎಡಿಬಿ ಯಿಂದ ಗುತ್ತಿಗೆ ಮತ್ತು ಕ್ರಯದ ಒಪ್ಪಂದದ ಮೇರೆಗೆ ದಿನಾಂಕ:13.10.2011 ರ ಪ್ರಕಾರ ನಿಡಲಾಗಿದೆ. ಗುತ್ತಿಗೆ ಅವಧಿಯು ಮುಗಿಯುವ ವೇಳೆಗೆ ಕವಿಪ್ರನಿನಿಯ ಹೆಸರಿಗೆ ನೊಂದಾಯಿಸಬೇಕಾಗಿದೆ. ಇ) ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ಮೆಸ್ಕಾಂನಿಂದ ಗುತ್ತಿಗೆ ಪಡೆಯಲಾದ ಬಿಜಾಯ್ ಮತ್ತು ಬ್ರಹ್ಮಾವರದಲ್ಲಿ ನಿರ್ಮಾಣ ಹಂತದಲ್ಲಿರುವ 2X10 ಎಂವಿಎ 110/11ಕೆವಿ ಸ್ಥಾವರ ಒಳಗೊಂಡಿದೆ. ಎಫ್) ಜಮೀನಿನ ವೆಚ್ಚದಲ್ಲಿ, ಅಜನಹಳ್ಳಿ, ಕೆಂಪಗಾಂಡನಹಳ್ಳಿ, ಕಲ್ಲುಬಾಲುಲು ಮತ್ತು ಇಂದ್ಲಾವದಿ ಪುರದಲ್ಲಿ 5,56,84,860/– ರೂಪಾಯಿಗಳಷ್ಟು ವಿವಿಧ ಭೂಮಿಯನ್ನು ಕರ್ನಾಟಕ ಸರ್ಕಾರದಿಂದ ಹಂಚಿಕೆ ಮಾಡಿರುವುದು ಒಳಗೊಂಡಿದೆ. ಮುಂದುವರೆದು ಸದರಿ ಭೂಮಿಗಳು ಉಪ ಕೇಂದ್ರಗಳ ನಿರ್ಮಾಣಕ್ಕೆ ಸೂಕ್ತವಲ್ಲ ಎಂದು ಕಂಡುಬಂದಿದ್ದು ಆದ್ದರಿಂದ ಅಂತಹಭೂಮಿಗೆ ಪಾವತಿಸಿದ ಮೊತ್ತವನ್ನು ಹಿಂಪಡೆಯಲುದಿನಾಂಕ:12/12/2012 ರ ಪತ್ರದಲ್ಲಿ ಜಿಲ್ಲಾಧಿಕಾರಿಗಳಿಗೆ ಬರೆಯಲಾಗಿದೆ. ಜಿ) ಭೂಮಿಯ ವೆಚ್ಚದಲ್ಲಿ, 252.23 ಎಕರೆ ಭೂಮಿಯನ್ನು ರೂ.53,79,70,746/– ಗಳನ್ನು ಪಾವತಿಸಿ ಕೆಐಎಡಿಬಿ ಯಿಂದ ದಿನಾಂಕ: 03.03.2017 ರ ಗುತ್ತಿಗೆ ಕರಾರು ಒಪ್ಪಂದದೊಂದಿಗೆ 99 ವರ್ಷಗಳ ಗುತ್ತಿಗೆ ಅವಧಿಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಮುಂದುವರೆದು ಕರ್ನಾಟಕ ಸರ್ಕಾರದ ಅಧಿ ಸೂಚನೆ ದಿನಾಂಕ: 09/03/2017 ಸಿಐ 15 ಎಸ್‌ಪಿಕ್ಯೂ 2017ರ ಪ್ರಕಾರ, ಗುತ್ತಿಗೆ ಅವಧಿಯನ್ನು ಮಾರ್ಪಡಿಸಿ ಗುತ್ತಿಗೆ ಮತ್ತು ಮಾರಾಟದ ಅವಧಿಯನ್ನು ಕನಿಷ್ಟ 2 ವರ್ಷಕ್ಕೆ ಮಾರ್ಪಡಿಸಿರುವುದರಿಂದ ಸದರಿ ಗುತ್ತಿಗೆ ಆಧಾರಿತ ಜಮೀನನ್ನು ಸದರಿ ಯೋಜನೆಯ ಸದುದ್ದೇಶಕ್ಕಾಗಿ ಬಳಸಿಕೊಂಡ ನಂತರ ಕರಾರನ್ನು ಮಾರ್ಪಡಿಸಿ ಖರೀದಿ ಪತ್ರವನ್ನು ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು.

**ಟಿಪ್ಪಣಿ 2.3–ಭೂಮಿ ಮತ್ತು ಕಟ್ಟಡಗಳು**

ಭೂಮಿ ಮತ್ತು ಕಟ್ಟಡಗಳು ವಿದ್ಯುತ್ ಉತ್ಪದನಾ ಕೇಂದ್ರಗಳನ್ನು ಒಳಗೊಂಡಿದೆ, ಆದರೆ ಪ್ರತಿಷ್ಠಾಪನೆಗಳನ್ನು ಹೊರತುಪಡಿಸಿದೆ ಭೂಮಿ ಮತ್ತು ಕಟ್ಟಡವನ್ನು ಕರ್ನಾಟಕ ಸರ್ಕಾರದಿಂದ ನೀಡಲ್ಪಟ್ಟ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಕವಿಪ್ರನಿನಿಯ ಪುನರ್ರಚನಾ ಕಾರ್ಯಕ್ರಮದ ಅನ್ವಯ ಲೆಕ್ಕಪತ್ರದಲ್ಲಿ ನಮೂದಿಸಲಾಗಿದೆ. ನಿಗಮದ ಹೆಸರಿಗೆಕೆಲವು ಆಸ್ತಿಗಳ (ರೂ.41,03,69,016/–) ವರ್ಗಾವಣೆಗಾಗಿ ಕೈಗೊಳ್ಳಬೇಕಾದ ನಿಯಮಾನುಸರಣೆಗಳು ಬಾಕಿ ಇರುತ್ತದೆ.

**ಟಿಪ್ಪಣಿ 2.4 – ಸ್ಥಾವರ ಮತ್ತು ಯಂತ್ರೋಪಕರಣಗಳು**

ಎ) ಸ್ಥಾವರ ಮತ್ತು ಯಂತ್ರೋಪಕರಣಗಳ ಮೊತ್ತದಲ್ಲಿ ರೂ.47,01,29,660/– ಗಳನ್ನು ಐಡಿಬಿಐ ನಿಂದ ಗುತ್ತಿಗೆ ಆಧಾರದಲ್ಲಿ ಪಡೆದ ಆಸ್ತಿಗಳ ಹೊರತುಪಡಿಸಿ. ಐಡಿಬಿಐ ನಿಂದ ಗುತ್ತಿಗೆ ಆಧಾರದಲ್ಲಿ ಪಡೆದ ಆಸ್ತಿಗಳ ಗುತ್ತಿಗೆ ಅವಧಿಯು ಮುಗಿಯುತ್ತಿದ್ದಂತೆ ಗುತ್ತಿಗೆ ಒಪ್ಪಂದವನ್ನು ಮುಕ್ತಾಯಗೊಳಿಸುವುದಕ್ಕಾಗಿ ಮತ್ತು ಆಸ್ತಿಗಳ ಮರು ಸ್ವಾಧೀನತೆಗಾಗಿ ಸಮಾಲೋಚನೆಗಳು ಮುಂದುವರೆದಿವೆ ಗುತ್ತಿಗೆ ದಾರನು ಆಸ್ತಿಗಳ ಮೇಲಿನ ಹಕ್ಕನ್ನು ವರ್ಗಾಯಿಸಲು ರೂ.1,12,50,000/– (ಎಸ್ಕಾಂಗಳ ಸ್ವಾಧೀನದಲ್ಲಿರುವ ರೂ.59,60,000/– ಮೌಲ್ಯದ ಆಸ್ತಿಗಳನ್ನು ಒಳಗೊಂಡಂತೆ) ಮೊತ್ತವನ್ನು ಕೇಳಿದ್ದಾರೆ ನಿಗಮವು ಈ ಪ್ರಸ್ತಾವನೆಗೆ ಇನ್ನು ಒಪ್ಪಿಗೆ ನೀಡಿರುವುದಿಲ್ಲ ಮೌಲ್ಯ ಇತ್ಯರ್ಥವಾದ ನಂತರ 31.12.2003 ರಿಂದ ಪ್ರಾಥಮಿಕ ಹಂತದ ಗುತ್ತಿಗೆ ಅವಧಿಯು ಮುಗಿದ ದಿನದಿಂದ ಬಂಡವಾಳೀಕರಣ ಮತ್ತು ಸವಕಳಿಗೆ ಸಂಬಂಧಪಟ್ಟಂತೆ ಸೂಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಕಂಪನಿಯು ಸದರಿ ಆಸ್ತಿಗಳ ಸದ್ಯದ ಮೌಲ್ಯವನ್ನು ಮೌಲ್ಯಾಧಾರಿತ ವರದಿಗಾರರಿಂದ ಪಡೆದುಕೊಂಡಿರುವುದಿಲ್ಲ. ಬಿ) ಆಸ್ತಿ ಅವಧಿಯ ಮುಕ್ತಾಯದ ನಂತರ ಕಂಪನಿಯು ಉಳಿಸಿಕೊಂಡಿರುವ ಆಸ್ತಿಗಳ ವೆಚ್ಚ ಮತ್ತು ಐಎನ್‌ಜಿ ವೈಶ್ಯ ಬ್ಯಾಂಕ್ (ಈಗ ಕೊಟಾಕ್ ಮಹೀಂದ್ರಾ ಬ್ಯಾಂಕ್) ಯಿಂದ ಹಿಡುವಳಿ ಆಸ್ತಿಯ ವೆಚ್ಚವನ್ನು ಒಳಗೊಂಡಿರುವುದಿಲ್ಲ ಮತ್ತು ಆಸ್ತಿಗಳು ಅವುಗಳ ಉಳಿದ ಮೌಲ್ಯವನ್ನು ತಲುಪಿದವು ಮತ್ತು ಹಿಂದಿನ ಕೆಇಬಿ ಅವಧಿಗೆ ಸಂಬಂಧಿಸಿವೆ

ಮತ್ತು ಅಂತಹ ಆಸ್ತಿಗಳ ನಿಖರವಾದ ಸ್ಥಳವು ಗುರುತಿಸಲ್ಪಡುವುದಿಲ್ಲ.

**ಟಿಪ್ಪಣಿ 2.5 –ಪಿಪಿಇ ನೋಂದಣಿ ಪುಸ್ತಕ**

ಎ) ಹಣಕಾಸು ಹೇಳಿಕೆಗಳಲ್ಲಿ ಹೇಳಲಾದ ಆಸ್ತಿಗಳ ಸಮಗ್ರ ವೆಚ್ಚಕ್ಕೆ ಸ್ಥಿರ ಆಸ್ತಿ ದಾಖಲೆಗಳನ್ನು ಸಮನ್ವಯಗೊಳಿಸುವ ಪ್ರಕ್ರಿಯೆಯನ್ನು ಆರಂಭಿಸಲು ಆಡಳಿತ ಮಂಡಳಿಯು ಪರಿಗಣಿಸುತ್ತಿದೆ. **ಬಿ) ಹಿಂದಿನ ವರ್ಷದಲ್ಲಿ ಕಾರ್ಯರಂಭಗೊಂಡ ಯೋಜನೆಗಳು ಮತ್ತು ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಣ/ಆಸ್ತಿಕರಣ** ಪ್ರಸಕ್ತ ವರ್ಷದಲ್ಲಿ ಬಂಡವಾಳೀಕರಣ/ಆಸ್ತಿಕರಣಗೊಳಿಸಿದ ರೂ.93,87,52,708/– ಗಳು ದಿನಾಂಕ:01.04.2016 ರ ಹಿಂದಿನ ಅವಧಿಯಲ್ಲಿ ಕಾರ್ಯರಂಭಗೊಂಡ ಯೋಜನೆಗಳಿಗೆ ಸಂಬಂಧಿಸಿದ್ದು ಮತ್ತು ಸದರಿ ಯೋಜನೆಗಳಿಗೆ ಸಂಬಂಧಿಸಿದ ಸವಕಳಿ ಮೊತ್ತ ರೂ.7,65,46,584/– ಗಳನ್ನು ಹಿಂದಿನ ಅವಧಿಯ ಅಂಶಗಳೆಂದು ಲೆಕ್ಕೀಕರಿಸಲಾಗಿದೆ (ಟಿಪ್ಪಣಿ ಸಂಖ್ಯೆ 34 ಗಮನಿಸಿ) **ಸಿ) ಪಿಪಿಇಗಳಿಗೆ ಓವರ್‌ಹೆಡ್ ಹಂಚಿಕೆ.** 1) ಪಿಪಿಇಗೆ ಹಾಕುವ ಸಿಬ್ಬಂದಿ ವೆಚ್ಚ ಮತ್ತು ಬಡ್ಡಿ ವೆಚ್ಚವನ್ನು ಆಸ್ತಿ ಆಧಾರಿತ ಹಂಚಿಕೆ ಮಾಡಲಾಗುವುದು. ಪಿಪಿಇಗೆ ಹಾಕಬೇಕಾಗಿದ್ದ ಕಾರ್ಯಚರಣೆಯ ವೆಚ್ಚವನ್ನು ಪ್ರಾಯೋಗಿಕ ಕಾರ್ಯಚರಣೆ ಮತ್ತು ಅಂತರ್ಗತ ಪ್ರಕೃತಿಯಿಂದಾಗಿ ಪ್ರತ್ಯೇಕ ಆಸ್ತಿ/ಉಪಕರಣಗಳ ಆಧಾರಿತ ಹಂಚಿಕೆ ಮಾಡಲಾಗಿರುವುದಿಲ್ಲ. ಇಂಡ್ ಎ ಎಸ್ 16 ರ ಅಡಿಯಲ್ಲಿ ಹೇಳಿದಂತೆ ಸಿಬ್ಬಂದಿ ವೆಚ್ಚದಲ್ಲಿ ಆಡಳಿತ ಓವರ್ ಹೆಡ್ಸ್ ಒಳಗೊಂಡಿರುವುದಿಲ್ಲ.

ಸ್ವಯಂ ನಿರ್ವಹಣಾ ಕಾರ್ಯಗಳ ಮೇಲೆ ಸಂಗ್ರಹಿಸಲಾದ ಮೇಲ್ವಿಚಾರಣೆಯ ಶುಲ್ಕದ ನಿವ್ವಳಸಂಸ್ಥೆಯು ಸ್ಥಾಪನೆ ವೆಚ್ಚದ ಬಂಡವಾಳವನ್ನು ಹೊಂದಿದೆ. ಡಿ) **ಆಸ್ತಿ ಹೂಡಿಕೆ ಬಂಡವಾಳ ಆಸ್ತಿಯಂತೆ ಬಾಡಿಗೆ ಆದಾಯವನ್ನು ಗಳಿಸುವ ಉದ್ದೇಶಕ್ಕಾಗಿ ಕಂಪನಿಯು ಪಿಪಿಇ ಅನ್ನು ವರ್ಗೀಕರಿಸಿರುವುದಿಲ್ಲ, ಏಕೆಂದರೆ ಅಂತಹ ಆಸ್ತಿಗಳ ಸಾಗಿಸುವ ಮೌಲ್ಯವು ಅತ್ಯಲ್ಪವಾಗಿರುತ್ತದೆ.**

## ಟಿಪ್ಪಣಿ–2ಎ ಆಸ್ತಿ, ಸ್ಥಾವರ ಮತ್ತು ಉಪಕರಣಗಳು

| ಆಸ್ತಿ ಗುಂಪು | ಲೆಕ್ಕ ಸಂಕೇತ | ಇಳಿತಗೊಂಡ ಆರಂಭಿಕ ಮೌಲ್ಯ | ಏರಿಕೆ ಅಥವಾ ಇಳಿಕೆ | ಸವಕಳಿ | ಇಳಿತಗೊಂಡ ಅಂತಿಮ ಮೌಲ್ಯ |
|---|---|---|---|---|---|
| ಸ್ಟಾಂಡ್ ಬೈ ಆಸ್ತಿಗಳು/ಬಿಡುಗಡೆಯಾದ ಮತ್ತು ಮನಃ ಬಳಸಬಹುದಾದ ಆಸ್ತಿಗಳ ಇಳಿತಗೊಂಡ ಮೌಲ್ಯ | 16.2 | 20 17 18 371 | -1 48 45 026 | 1 11 43 475 | 17 57 29 870 |
| ಪರಿವರ್ತಕಗಳನ್ನು ದುರಸ್ತಿಗಾಗಿ ಗುತ್ತಿಗೆದಾರರಿಗೆ/ ಸರಬರಾಜುದಾರರಿಗೆ ನೀಡಲಾಗಿದೆ. | 26.604 | 24 71 18 177 | 4 24 67 067 | 1 20 48 205 | 27 75 37 045 |
| | | 44 88 36 548 | 2 76 22 041 | 2 31 91 680 | 45 32 66 915 |

**ಟಿಪ್ಪಣಿ 2ಎ.1**

ಎ) ಇಳಿತಗೊಂಡ ಮೌಲ್ಯ ಒಟ್ಟು ರೂ.45.32.66.915/- ಗಳಷ್ಟು ಸ್ಟಾಂಡ್ ಬೈ ಆಸ್ತಿಗಳು/ಬಿಡುಗಡೆಯಾದ ಮತ್ತು ಮನಃ ಬಳಸಬಹುದಾದ ಆಸ್ತಿಗಳ/ಪರಿವರ್ತಕಗಳನ್ನು ದುರಸ್ತಿಗಾಗಿ ಗುತ್ತಿಗೆದಾರರಿಗೆ/ಸರಬರಾಜುದಾರರಿಗೆ ನೀಡಿರುವ ಮನಃ ಬಳಸಬಹುದಾದ ಆಸ್ತಿಗಳೆಂದು ಮೇಲೆ ತೋರಿಸಲಾಗಿದೆ ಮತ್ತು ಇಳತಗೊಂಡ ಮೌಲ್ಯದ ವಿಧಾನದಲ್ಲಿ ನಿರ್ಧರಿಸಿರುವ ದರಗಳ ಅನ್ವಯ ಸವಕಳಿಯನ್ನು ಮಾಡಲಾಗಿದೆ.

ಬಿ) ಅಂತಹ ಆಸ್ತಿಗಳನ್ನು ಕ್ರಮ ಬದ್ಧಗೊಳಿಸಿ ಮತ್ತು ಪಿಪಿಇಗೆ ಮನಃ ತಂದ ಮೇಲೆ ಇಳತಗೊಂಡ ಮೌಲ್ಯವನ್ನೇ ಪರಿಗಣಿಸಿ ನೇರ ಸಾಲಿನ ವಿಧಾನದಲ್ಲಿ ಸವಕಳಿಯನ್ನು ಮನಃ ಸ್ಥಾಪಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

**ಟಿಪ್ಪಣಿ 2ಬಿ–ಆಸ್ತಿ, ಸ್ಥಾವರ ಮತ್ತು ಉಪಕರಣಗಳ ಸಾರಾಂಶ**

| ವಿವರಗಳು | ಇಳತಗೊಂಡ ಆರಂಭಿಕ ಮೌಲ್ಯ | ಇಳತಗೊಂಡ ಅಂತಿಮ ಮೌಲ್ಯ |
|---|---|---|
| **ಟಿಪ್ಪಣಿ**2 | 8681 57 89 400 | 8993 37 23 533 |
| **ಟಿಪ್ಪಣಿ**2A | 44 88 36 548 | 45 32 66 915 |
| **ಒಟ್ಟು** | **8726 46 25 948** | **9038 69 90 448** |

**ಟಿಪ್ಪಣಿ: 3 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು**

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| 1 | ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು | 14 | 2291 97 75 393 | | 1435 89 11 354 | | 1157 27 26 076 | |
| | **ಉಪ ಮೊತ್ತ** | | | 2291 97 75 393 | | 1435 89 11 354 | | 1157 27 26 076 |
| 2 | ಬಂಡವಾಳ ಕಾಮಗಾರಿಗೆ ಸಂಬಂಧಿಸಿದ ಸಮಗ್ರ ಕಾರ್ಯ ಗುತ್ತಿಗೆದಾರರ ನಿಯಂತ್ರಣ ಲೆಕ್ಕ | 26.605 | 910 32 71 067 | | 713 68 21 220 | | 565 86 29 289 | |
| | **ಉಪ ಮೊತ್ತ** | | | 910 32 71 067 | | 713 68 21 220 | | 565 86 29 289 |
| 3 | ಕಳೆಯಿರಿ: ನಿರ್ಣಯ ಬಾಕಿ ಇರುವ ಬಂಡವಾಳ ಕಾಮಗಾರಿಗಳಿಗೆ ಸಂಬಂಧಿಸಿದ ಬ್ಯಾಂಕ್ ಖಾತ್ರಿ ನಗದೀಕರಣ ಹೊಂದಾಣಿಕೆ | 56.202 | -40 13 86 383 | -40 13 86 383 | -14 01 44 781 | -14 01 44 781 | -8 21 93 312 | -8 21 93 312 |
| | **ಮೊತ್ತ** | | | **3162 16 60 077** | | **2135 55 87 793** | | **1714 91 62 053** |

**ಟಿಪ್ಪಣಿ**3.1 : ಪ್ರಗತಿಯಲ್ಲಿರುವ ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳಲ್ಲಿ ಒಳಗೊಂಡಿರುವುದಿಲ್ಲ. ಸ್ವಯಂ ನಿರ್ವಹಣ ಕಾಮಗಾರಿಗಳು ಮತ್ತು ಠೇವಣಿ ವಂತಿಗೆ ಕಾಮಗಾರಿಗಳ ಜಂಟಿ ಸಾಮಾಗ್ರಿಗಳ ವಿವರಗಳೊಂದಿಗೆ ಕವಿಪ್ರನಿನಿಗೆ ಹಸ್ತಾಂತರಿಸಿದ ನಂತರ ಸದರಿ ಕಾಮಗಾರಿಗಳನ್ನು ಆಸ್ತಿ ಸ್ಥಾವರ ಮತ್ತು ಉಪಕರಣಗಳಾಗಿ ಪರಿಗಣಿಸಲಾಗುವುದು. ಸ್ವಯಂ ನಿರ್ವಹಣ ಕಾಮಗಾರಿಗಳಿಗೆ ಮತ್ತು ಠೇವಣಿ ವಂತಿಗೆ ಕಾಮಗಾರಿಗಳಿಗೆ ಸಂಬಂಧಿಸಿದ (ಪ್ರಗತಿಯಲ್ಲಿರುವ ಹಾಗೂ ಮುಕ್ತಾಯವಾದ ಕಾಮಗಾರಿಗಳು) ಸ್ಥಿತಿಯನ್ನು ಅರಿಯಲು ಪ್ರತ್ಯೇಕ ಸಮಗ್ರ ಮತ್ತು ವಿವರವಾದ ಮಾಹಿತಿಯುಳ್ಳ ಪುಸ್ತಕವನ್ನು ನಿರ್ವಹಿಸಲು ಆಡಳಿತ ಮಂಡಳಿಯು ಪರಿಗಣಿಸಿದೆ.

**ಟಿಪ್ಪಣಿ** 3.2 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳನ್ನು ಕಾರ್ಯರಂಭ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದ ನಂತರ ಆಸ್ತಿ ಸ್ಥಾವರ ಮತ್ತು ಉಪಕರಣವಾಗಿ ಬಂಡವಾಳಕರಿಸಲಾಗುವುದು.

**ಟಿಪ್ಪಣಿ**3.3 : ವರ್ಷದ ಕೊನೆಯಲ್ಲಿ ಬಂಡವಾಳ ವೆಚ್ಚವನ್ನು ಪರಿಗಣಿಸುವಲ್ಲಿ ಗುತ್ತಿಗೆದಾರರಿಂದ ಪೂರ್ಣಗೊಂಡ ಕಾಮಗಾರಿಗೆ ಪಡೆದ ಬಿಲ್ಲುಗಳನ್ನು ಮಾತ್ರ ಪರಿಗಣಿಸಿ ಲೆಕ್ಕೀಕರಿಸಲಾಗುವುದು.

**ಟಿಪ್ಪಣಿ** 3.4 : ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಮೊತ್ತದಲ್ಲಿ ರೂ.4,11,21,490/- ಕಾಮಗಾರಿಗಾಗಿ ನೀಡಿರುವ ಇನ್ನು ಉಪಯೋಗಿಸದೆ ಇರುವ ಸಾಮಾಗ್ರಿಗಳನ್ನು ಒಳಗೊಂಡಿದೆ.

**ಟಿಪ್ಪಣಿ: 4 ಇತರೆ ಸ್ಪರ್ಶಾತೀತ ಆಸ್ತಿಗಳು**

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | 31 ಮಾರ್ಚ್ 2016 ರಂದು ಇದ್ದಂತೆ | 01 ಏಪ್ರಿಲ್ 2015 ರಂದು ಇದ್ದಂತೆ |
|---|---|---|---|---|---|
| 1. | ಆಂತರಿಕ ಬಳಕೆಗಾಗಿ ಸಿದ್ಧಪಡಿಸಿ ತಯಾರಿಸಿದ ತಂತ್ರಾಂಶ | 18 | 35 20 800 | 35 20 800 | 35 20 800 |
| | ಕಳೆಯಿರಿ: ಈ ದಿನದವರೆಗೂ ಸವಕಳ | | - 35 20 800 | - 35 20 800 | - 26 40 600 |
| | ಮೊತ್ತ | | | | **8 80 200** |

## ಟಿಪ್ಪಣಿ: 5: ಇತರೆ ಪ್ರಸಕ್ತವಲ್ಲದ ಆಸ್ತಿಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| 1 | ಸಿಬ್ಬಂದಿಗೆ ಮುಂಗಡ-ಬಡ್ಡಿ ಸಹಿತ (ಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು) | 27.101 to 27.106 | 4 01 473 | | 4 24 907 | | 4 68 707 | |
| 2 | ಮುಂಗಡ ವರಮಾನ ತೆರಿಗೆ ಪಾವತಿ, ಇತರೆ ತೆರಿಗೆ ಪಾವತಿ, ಮೂಲದಲ್ಲಿ ತೆರಿಗೆ ಮುರಿದುಕೊಂಡಿರುವುದು. ಇತರೆ ತೆರಿಗೆ ಪಾವತಿ (ನಿವ್ವಳ ಹವಣಿಕೆ) (ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು) (ಟಿಪ್ಪಣಿ. 5.2 ಮತ್ತು 27.1 (iv) ಗಮನಿಸಿ) | 27.4 & 28.821 | 23 11 03 353 | | 28 50 82 764 | | 51 06 81 816 | |
| 3 | ನೌಕರರಿಂದ ವಸೂಲಾಗಬೇಕಾದ ಮೊತ್ತ | 28.401 | 3 57 09 274 | | 2 74 10 381 | | 3 13 79 859 | |
| 4 | ಗುತ್ತಿಗೆದಾರರಿಗೆ ಮುಂಗಡಗಳು | 28.411 | 13 582 | | 20 287 | | | |
| 5 | ಕರ್ನಾಟಕ ಸರ್ಕಾರದಿಂದ ಬರಬೇಕಾದ ಸಹಾಯಧನ/ಅನುದಾನ (ಟಿಪ್ಪಣಿ.21.1 ನ್ನು ಗಮನಿಸಿ) | 28.62 | | | 986 49 69 309 | | 986 49 69 309 | |
| 6 | ಬಂಡವಾಳ ಆಸ್ತಿಗಳ ನಷ್ಟ/ಹಾನಿಯಾದ ಹಕ್ಕು ಕೋರಿಕೆ | 28.74 | 1 50 863 | | 2 66 223 | | 2 66 223 | |
| 7 | ಇತರೆ ಸ್ವೀಕೃತಿಗಳು (ಟಿಪ್ಪಣಿ. 5.1ನ್ನು ಗಮನಿಸಿ) | 28.8 & 28.9 | 13 35 92 696 | | 15 34 88 494 | | 11 45 39 493 | |
| 8 | ಇತರರಲ್ಲಿರುವ ಠೇವಣಿಗಳು (ಟಿಪ್ಪಣಿ 5.6ನ್ನು ಗಮನಿಸಿ) (ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು) | 28.935 | 98 16 52 238 | | 94 44 09 416 | | 99 81 14 216 | |
| 9 | ಕವಿಪ್ರನಿನಿಯ ಸ್ಥಾವರಗಳಿಗೆ ವಿದ್ಯುತ್ ಸರಬರಾಜನ್ನು ಒದಗಿಸಲು ಎಸ್ಕಾಂ ಗಳಲ್ಲಿ ಮಾಡಿರುವಂತಹ ಭದ್ರತಾ ಠೇವಣಿ (ಸುರಕ್ಷಿತವಲ್ಲದ ಉತ್ತಮವಾದು ದೆಂದು ಮಾನ್ಯ ಮಾಡಿದ್ದು) | 28.936, 28.937 | 8 70 910 | | 4 06 070 | | 3 75 210 | |
| 10 | ಎಸ್ಕಾಂಗಳಿಂದ ಟಿಬಿಪಿಸಿಎಲ್ ಗೆ ಸ್ವೀಕೃತಿಯಾಗ ಬೇಕಾಗಿರುವ ಹೆಚ್ಚುವರಿ ನಿಖರ ಬೆಲೆ (ಟಿಪ್ಪಣಿ. 19.4ನ್ನು ಗಮನಿಸಿ) | 28.968 to 28.973 | 543 84 00 000 | | 543 84 00 000 | | 543 84 00 000 | |
| 11 | ಕ್ರೋಡೀಕೃತ ಸಾಲ ಖಾತೆ | 53.999 | | | | | 8 61 900 | |
| | **ಮೊತ್ತ** | | | **682 18 94 389** | | **1671 48 77 851** | | **1696 00 56 733** |

**ಟಿಪ್ಪಣಿ** 5.1 :ಸಿಂಗಾನಾಯಕನಹಳ್ಳಿ ಮತ್ತು ಸುಂಕದಕಟ್ಟೆ ಭೂಮಿಯ ಖರೀದಿಗೆ ಪಾವತಿಸಿದ ರೂ.6,62,13,820/- ರಷ್ಟು ಭೂ ಬೆಲೆ ಕಂದಾಯ ಇಲಾಖೆಯಿಂದ ಇನ್ನು ಸ್ವೀಕೃತಿಯಾಗಬೇಕಾಗಿದ್ದು ಸದರಿ ಮೊತ್ತವು ಇತರೆ ಸ್ವೀಕೃತಿಗಳಲ್ಲಿ ಒಳಗೊಂಡಿರುತ್ತದೆ.

**ಟಿಪ್ಪಣಿ** 5.2 :ರೂ.4,54,06,442/- ಗಳನ್ನು ಆದಾಯ ತೆರಿಗೆ ಇಲಾಖೆಗೆ ಪ್ರತಿ ರೋಧವಾಗಿ ಪಾವತಿಸಿದ್ದು (Under Protest) ಸದರಿ ಮೊತ್ತವು ವಿಳಂಭವಾಗಿ ಪಾವತಿಸಿದ ವಿದ್ಯುತ್ ಖರೀದಿಗೆ ಸಂಬಂಧಿಸಿದ ಬಡ್ಡಿಯ ಹವಣಿಕೆಗೆ ಸಂಬಂಧಿಸಿದ್ದು, ಮೌಲ್ಯಮಾಪನ ವರ್ಷ 2004-05, 2005-06 ಮತ್ತು 2006-07 ನೇ ಸಾಲಿಗೆ ಸಂಬಂಧಿಸಿರುತ್ತದೆ. ಸದರಿ ಮೊತ್ತವನ್ನು ಮುಂಗಡ' ಆದಾಯ ತೆರಿಗೆಯಲ್ಲಿ ಒಳಗೊಂಡಿರುತ್ತದೆ.

**ಟಿಪ್ಪಣಿ** 5.3 : ಕೋಣದಾಸಪುರದ ಸಬ್‌ಸ್ಟೇಷನ್ ( ಸಫಲ್ ಮಾರುಕಟ್ಟೆ ಕಾಂಪ್ಲೆಕ್ಸ್‌ನಲ್ಲಿ) ನಿರ್ಮಾಣಕ್ಕಾಗಿ 30ವರ್ಷಗಳ ಅವಧಿಗೆ ಗುತ್ತಿಗೆ ಅಧಾರದ ಮೇಲೆ ಜಮೀನನ್ನು ಪಡೆಯಲು ಪಾವತಿಸಿದ ರೂ.17.34 ಲಕ್ಷ ರೂ.ಗಳು ಇತರರೊಂದಿಗಿನ ಠೇವಣಿಯಲ್ಲಿ ಒಳಗೊಂಡಿರುತ್ತದೆ. ಸದರಿ ಗುತ್ತಿಗೆಯ ಕರಾರು ಪತ್ರವನ್ನು ಈವರೆಗೂ ಮಾಡಿಕೊಳ್ಳಲಾಗಿರುವುದಿಲ್ಲ.

**ಟಿಪ್ಪಣಿ** 5.4: 2012-13, 2013-14 ಮತ್ತು 2014-15 ನೇ ಸಾಲಿನ ಹಣಕಾಸಿನ ವರ್ಷಗಳಿಗಾಗಿ ಸಂಬಳದ ಮೇಲೆ ಟಿಡಿಎಸ್‌ನ ಅಲ್ಪಕಡಿತದ ಮೇಲೆ 31ನೇ ಮಾರ್ಚ್ 2017ಕ್ಕೆ ನೌಕರರಿಂದ ಮಾಡಲಾಗುವ ವಸೂಲಿಗಳಿಗೆ ಸಂಬಂಧಿಸಿದಂತೆ 2,69,06,746/- ರೂಪಾಯಿಗಳನ್ನು ಒಳಗೊಂಡಂತೆ ನೌಕರರಿಂದ ವಸೂಲಿ ಮಾಡಬಹುದಾದ ಹಣ. ಕಂಪನಿಯು ಐಎನ್‌ಆರ್ 95,41,540/- ರಷ್ಟು ಬಡ್ಡಿಯನ್ನೊಳಗೊಂಡಂತೆ ಐಎನ್‌ಆರ್ 3,64,48,286 ರಷ್ಟು ಮೊತ್ತದ ಕೊರತೆಗಾಗಿ ಆದಾಯ ತೆರಿಗೆ ಇಲಾಖೆಯಿಂದ ಮಂಡಿಸಿದ ಟಿಡಿಎಸ್ ಬೇಡಿಕೆಯನ್ನು 2016-17ರ ಅವಧಿಯಲ್ಲಿ ಇತ್ಯರ್ಥಗೊಳಿಸಲಾಗಿದೆ ಮತ್ತು ಬೇಡಿಕೆ ಹೆಚ್ಚಳದ ವಿರುದ್ಧ 20.01.2017ಮತ್ತು 28.02.2017ರಂದು ಮೇಲ್ಮನವಿಯನ್ನು ಮಾಡಿಕೊಂಡಿರುತ್ತದೆ. ಆ ವರ್ಷದ ಅವಧಿಯಲ್ಲಿನ ಬಡ್ಡಿ ಅಂಶವನ್ನು ಲಾಭ ಮತ್ತು ನಷ್ಟದ ಖಾತೆಗೆ ವಿಧಿಸಲಾಗುತ್ತದೆ. ಕಂಪನಿಯು ಮಾಸಿಕ ಆಧಾರದ ಮೇಲೆ ನೌಕರರಿಂದ ಹಣವನ್ನು ನಿರಂತರವಾಗಿ ವಸೂಲಿ ಮಾಡಲಾಗುವುದು, ಆದ್ಯಾಗ್ಯೂ, ಕಂಪನಿಯ ಪರವಾಗಿ ಮೇಲ್ಮನವಿಯನ್ನು ವಿಲೇವಾರಿ ಮಾಡಿದಲ್ಲಿ,ಅಂತಹ ದಿನಾಂಕದವರೆಗೆ ನೌಕರರಿಂದ ವಸೂಲಿಯಾದ ಹಣವನ್ನು ಮರುಪಾವತಿಗೊಳಿಸಲಾಗುವುದು.

**ಟಿಪ್ಪಣಿ** 5.5 :ದಾಸ್ತಾನುಗಳ' ಕೊರತೆಗೆ ಸಂಬಂಧಿಸಿದಂತೆ ರೂ.1,24,68,787/- ಗಳನ್ನು ನೌಕರರಿಂದ ವಸೂಲಾತಿ ಮಾಡಬೇಕಾದ ಮೊತ್ತದಲ್ಲಿ ಬಿಂಬಿಸಲಾಗಿದ್ದು ಸದರಿ ಮೊತ್ತವನ್ನು ನೌಕರರ ಭವಿಷ್ಯದ ಸಂಬಳಗಳಿಂದ /ಸೇವಾ ಸೌಲಭ್ಯಗಳಿಂದ ವಸೂಲಿ ಮಾಡುವುದಕ್ಕೆ ಪ್ರಸ್ತಾಪಿಸಲಾಗಿದೆ.

**ಟಿಪ್ಪಣಿ** 5.6: ಸದೇನಹಳ್ಳಿ, ಮಾರನಾಯಕನಹಳ್ಳಿ ಮತ್ತು ತಿಮ್ಮನಾಯಕನ ಹಳ್ಳಿಯಲ್ಲಿರುವ ಭೂಮಿ ಖರೀದಿಗೆ ಸಂಬಂಧಿಸಿದಂತೆ ರೂ.1,17,92,825 ಕೋಟಿ ರೂಪಾಯಿಗಳಷ್ಟು ಕರ್ನಾಟಕ ಸರ್ಕಾರಕ್ಕೆ ಭೂ ಠೇವಣಿಯನ್ನಾಗಿ ಸದರಿ ಮೊತ್ತವನ್ನು ಪಾವತಿಸಿದ್ದು ಸದರಿ ಮೊತ್ತವು ಇತರರೊಂದಿಗಿನ ಠೇವಣಿಯಲ್ಲಿ ಒಳಗೊಂಡಿರುತ್ತದೆ. ಮುಂದುವರೆದು ಸದರಿ ಭೂಮಿಯು ಉಪಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿಲ್ಲವೆಂದು ನಂತರದಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ, ಸಂದಾಯ ಮಾಡಿದ ಮುಂಗಡ ಹಣದ ಮರುಸಂದಾಯ/ ಹಿಂದಿರುಗಿಸಲು ಕಂಪನಿಯು ತನ್ನ ಪತ್ರದ ದಿನಾಂಕ 12.12.2012' ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ನಿವೇದನೆಯನ್ನು ಮಾಡಿಕೊಂಡಿರುತ್ತದೆ.

**ಟಿಪ್ಪಣಿ 5**.7 : ಇತರರೊಂದಿಗಿನ ಠೇವಣಿಯಲ್ಲಿ, 25 ಎಕರೆ ಭೂಮಿಯನ್ನು ರೂ.62,94,75,120/- ಗಳನ್ನು ಪಾವತಿಸಿ ಕೆಐಎಡಿಬಿ ಯಿಂದ ಗುತ್ತಿಗೆ ಕರಾರು ಒಪ್ಪಂದದೊಂದಿಗೆ 99 ವರ್ಷಗಳ ಗುತ್ತಿಗೆ ಅವಧಿಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಮುಂದುವರೆದು ಕರ್ನಾಟಕ ಸರ್ಕಾರದ ಅಧಿ ಸೂಚನೆ ದಿನಾಂಕ: 09/03/2017 ಸಿಐ 15 ಎಸ್‌ಪಿಕ್ಯೂ 2017ರ ಪ್ರಕಾರ, ಗುತ್ತಿಗೆ ಅವಧಿಯನ್ನು ಮಾರ್ಪಡಿಸಿ ಗುತ್ತಿಗೆ ಮತ್ತು ಮಾರಾಟದ ಅವಧಿಯನ್ನು ಕನಿಷ್ಟ 2 ವರ್ಷಕ್ಕೆ ಮಾರ್ಪಡಿಸಿರುವುದರಿಂದ ಸದರಿ ಗುತ್ತಿಗೆ ಆಧಾರಿತ ಜಮೀನನ್ನು ಸದರಿ ಯೋಜನೆಯ ಸದುದ್ದೇಶಕ್ಕಾಗಿ ಬಳಸಿಕೊಂಡ ನಂತರ ಕರಾರನ್ನು ಮಾರ್ಪಡಿಸಿ ಖರೀದಿ ಪತ್ರವನ್ನು ಮಾಡಿಕೊಳ್ಳಲು ಕ್ರಮ ವಹಿಸಲಾಗುವುದು.

## ಟಿಪ್ಪಣಿ:6 : ಇತರೆ ಪ್ರಸಕ್ತವಲ್ಲದ ಆಸ್ತಿಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| | **ಮುಂದೂಡಿದ ವೆಚ್ಚಗಳು** | | | | | | | |
| 1 | ಇನ್ನೂ ಮಂಜೂರಾಗದೆ ಇರುವ ಯೋಜನೆಗಳಿಗೆ ಸಂಬಂಧಿಸಿದ ಸರ್ವೇ/ ಕಾರ್ಯ ಸಾಧ್ಯತೆಯ ಅಧ್ಯಯನದ ಪೂರ್ವಭಾವಿ ವೆಚ್ಚಗಳು | 17.301 | | 12 51 31 893 | | 7 94 64 975 | | 4 72 75 754 |
| 2 | **ಆದಾಯ ತೆರಿಗೆ** | | | | | | | |
| | **ಮೌಲ್ಯ ಮಾಪನ ವರ್ಷ 2014-15ಕ್ಕೆ ಆದಾಯ ತೆರಿಗೆ ಇಲಾಖೆಯಿಂದ ಮರು ಪಾವತಿಯಾಗಬೇಕಾದ ಕಾರ್ಪೋರೇಟ್ ತೆರಿಗೆ** | 28.819 | | 2 40 37 352 | | | | |
| 3 | ನಿವ್ವಳ ಮೌಲ್ಯದ ಕಡೆಗೆ ಪ್ರಾಸ್ತಾವಿತ ಹೊಂದಾಣಿಕೆಗಳು (ಟಿಪ್ಪಣಿ 21.1 & 6.1ನ್ನು ಗಮನಿಸಿ) | 52.304 to 52.309 | | 97 70 78 513 | | | | |
| 4 | ಸರಬರಾಜುದಾರರಿಗೆ ಹಾಗೂ ಗುತ್ತಿಗೆದಾರರಿಗೆ ಮುಂಗಡಗಳು (ಸುರಕ್ಷಿತವಲ್ಲದ ಉತ್ತಮವಾದುದೆಂದು ಮಾನ್ಯ ಮಾಡಿದ್ದು) (ಟಿಪ್ಪಣಿ. 6.2ನ್ನು ಗಮನಿಸಿ) | 25 & 26 | 4 76 50 058 | | 3 74 56 694 | | 6 28 23 206 | |
| | ಕಳೆಯಿರಿ:ಕೆಟ್ಟ ಮತ್ತು ಸಂದೇಹಾಸ್ಪದ ಸಾಲಗಳ ಹವಣಿಕೆಯನ್ನು- ಸರಬರಾಜುದಾರ ಹಾಗೂ ಗುತ್ತಿಗೆದಾರ ಮುಂಗಡಗಳು | | 1 09 81 108 | 3 66 68 950 | | 3 74 56 694 | | 6 28 23 206 |
| | **ಮೊತ್ತ** | | | **116 29 16 708** | | **11 69 21 669** | | **11 00 98 960** |

**ಟಿಪ್ಪಣಿ**6.1 :ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಎನ್ 57 ಪಿಎಸ್‌ಆರ್ 2017 ದಿನಾಂಕ:31.07.2017 ರ ಪ್ರಕಾರ ಕವಿಪ್ರನಿನಿಯಿಂದ ವಿಸಕಂಗಳಿಗೆ (ಕರ್ನಾಟಕ ಸರ್ಕಾರದಿಂದ ಸ್ವೀಕೃತಿಯಾಗಬೇಕಾಗಿರುವ ಆರ್ ಇ ಸಬ್ಸಿಡಿ ಬಾಕಿ ಮತ್ತು ಕೆಪಿಸಿಎಲ್ ಗೆ ಪಾವತಿಸಬೇಕಾಗಿರುವ ವಿದ್ಯುತ್ ಖರೀದಿ ಬಾಕಿ) ಯ ವರ್ಗಾವಣೆಯಿಂದ ಲೆಕ್ಕೀಕರಿಸಲಾದ ನಿವ್ವಳ ಮೊತ್ತವು, ಪ್ರಸ್ತಾವಿತ ಹೊಂದಾಣಿಕೆಯಿಂದಾದ ನಿವ್ವಳ ಮೌಲ್ಯವನ್ನು ಪ್ರತಿನಿಧಿಸುತ್ತದೆ.

**ಟಿಪ್ಪಣಿ** 6.2 : ಸರಬರಾಜುದಾರರ ಮತ್ತು ಗುತ್ತಿಗೆದಾರರಿಗೆ ಮುಂಗಡವು ಬೇರೆ ಘಟಕಗಳೊಂದಿಗೆ ಕ್ರಮಬದ್ಧಗೊಳಸಬೇಕಾಗಿರುವ ರೂ.1,09,81,108 / – ಗಳನ್ನೂ ಒಳಗೊಂಡಿದೆ ಹಾಗೂ ಸದರಿ ಮೊತ್ತಕ್ಕೆ ಹವಣಿಕೆಯನ್ನು ಸಹ ಕಲ್ಪಿಸಲಾಗಿದೆ.

## ಟಿಪ್ಪಣಿ 7 : ಸರಕುಗಳ ವಿವರ

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| I | **ಸಾಮಗ್ರಿ ಮತ್ತು ಬಿಡಿಭಾಗಗಳು** | | | | | | | |
| 1 | ಬಳಕೆಯಲ್ಲಿಲ್ಲದ/ನಿರುಪಯುಕ್ತ ಆಸ್ತಿಗಳ ತಗ್ಗಿದ ಮೌಲ್ಯ | 16.1 | 12 90 89 906 | | 11 44 35 842 | | 14 58 89 141 | |
| 2 | ಕಳೆಯಿರಿ: ಬಳಕೆಯಲ್ಲಿಲ್ಲದ ಸಾಮಾಗ್ರಿಗಳ ಮೇಲೆ ಹವಣಿಕೆ | | 10 32 71 924 | 2 58 17 982 | 9 15 48 674 | 2 28 87 168 | 11 67 11 313 | 2 91 77 828 |
| 3 | ಉಗ್ರಾಣದ ದಾಸ್ತಾನು ಲೆಕ್ಕ | 22.610 | 59 10 14 499 | | 65 21 46 114 | | 86 57 44 177 | |
| | ಬಾಡಿಗೆ ಆಧಾರದಲ್ಲಿ ನೀಡಿದ ಸಾಮಾಗ್ರಿಗಳು | 22.732 | 11 437 | | | | | |
| | ಇನ್ನು ತಪಾಸಣೆಯಾಗದ ಬಾಕಿ ಇರುವ ಸಾಮಗ್ರಿಗಳು | 22.660 | 19 81 518 | | | | | |
| | **ಉಪ ಮೊತ್ತ** | | | **59 30 07 454** | | **65 21 46 114** | | **86 57 44 177** |
| II | **ಅಧಿಕವಾಗಿ ಕಂಡುಬಂದ ದಾಸ್ತಾನು / ಕೊರತೆ ಕಂಡುಬಂದ ದಾಸ್ತಾನು ತನಿಖೆಗೆ ಒಳಪಡಬೇಕಿರುವುದು** | | | | | | | |
| 1 | ಅಧಿಕವಾಗಿ ಕಂಡು ಬಂದ ದಾಸ್ತಾನು | 22.810 | -17 75 578 | | -17 75 578 | | -17 09 369 | |
| 2 | ದಾಸ್ತಾನಿನಲ್ಲಿ ಕಂಡುಬಂದ ಕೊರತೆ. | 22.820 | 1 44 69 443 | | 84 19 194 | | 60 63 242 | |
| | ಕಳೆಯಿರಿ: ದಾಸ್ತಾನು ಕೊರತೆಯ ಸಲುವಾಗಿ ಹವಣಿಕೆ | | -1 44 69 443 | | -84 19 194 | | -60 63 242 | |
| | **ಉಪ ಮೊತ್ತ** | | | **-17 75 578** | | **-17 75 578** | | **-17 09 369** |
| | **ಮೊತ್ತ** | | | **61 70 49 858** | | **67 32 57 704** | | **89 32 12 636** |

**ಟಿಪ್ಪಣಿ** 7.1 : ಸಾಮಗ್ರಿಗಳ ದಾಸ್ತಾನಿನಲ್ಲಿ ವಾಸ್ತವಿಕ ಬೆಲೆಯ 10% ಮೌಲ್ಯದಲ್ಲಿ ರೂ 72,16,460 / ಮೌಲ್ಯದ ನಿರುಪಯುಕ್ತ ಎಂದು ಗುರುತಿಸಲಾದ ಸಾಮಗ್ರಿಗಳು ಒಳಗೊಂಡಿವೆ (ಹಿಂದಿನ ವರ್ಷ ರೂ 30,63,293/–).

**ಟಿಪ್ಪಣಿ** 7.2 : ಸಾಮಗ್ರಿ ದಾಸ್ತಾನಿನಲ್ಲಿ ನಿಧಾನ/3 ವರ್ಷಕ್ಕೂ ಮೇಲ್ಪಟ್ಟು ಚಾಲನೆಯಲ್ಲಿಲ್ಲದ ಸಾಮಾಗ್ರಿಗಳ ಮೊತ್ತ ರೂ.12,04,46,641 / – ವರಗೂ ಒಳಗೊಂಡಿದೆ ( ಹಿಂದಿನ ವರ್ಷ ರೂ.13,35,22,433/–).

**ಟಿಪ್ಪಣಿ** 7.3 : ಡಬ್ಲ್ಯೂಡಿವಿ ಬಳಕೆಯಲ್ಲಿಲ್ಲದ / ನಿರುಪಯುಕ್ತ ಆಸ್ತಿಗಳ ಡಬ್ಲ್ಯು ಡಿವಿ ಮೊತ್ತದ80% ರಷ್ಟು ಪ್ರಮಾಣದಲ್ಲಿ ಆಡ್ಹಾಕ್ ಆಧಾರದ ಮೇಲೆ ಹವಣಿಕೆಗೆ ಅವಕಾಶ ಕಲ್ಪಿಸಲಾಗಿದೆ.

**ಟಿಪ್ಪಣಿ** 7.4 : ಬಂಡವಾಳದಬಿಡಿಭಾಗಗಳು /ಇನ್ನು ನಿರ್ಮಾಣವಾಗದ ಸಾಮಾಗ್ರಿಗಳನ್ನು ಕಾಮಗಾರಿಗೆ ನೀಡದಿರುವ ಸಾಮಾಗ್ರಿಗಳ ದಾಸ್ತಾನಿನಲ್ಲಿ ಒಳಗೊಂಡಿರುತ್ತದೆ.

## ಟಿಪ್ಪಣಿ 8 : ವ್ಯವಹಾರದ ಸ್ವೀಕೃತಿಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| I | **(ಅಸುರಕ್ಷಿತ ಮತ್ತು ಯೋಗ್ಯ)** | | | | | | | |
| 1 | **ಪ್ರಸರಣ ಶುಲ್ಕಗಳಿಗೆ ವ್ಯವಹಾರದ ಸ್ವೀಕೃತಿಗಳು** | | | | | | | |
| a) | ಬೆ.ವಿ.ಸ.ಕಂ (ಟಿಪ್ಪಣಿ. 8.2ನ್ನು ಗಮನಿಸಿ) | 23.101 | 97 41 91 638 | | 78 02 99 498 | | 1 26 17 347 | |
| b) | ಮ.ವಿ.ಸ.ಕಂ (ಟಿಪ್ಪಣಿ.. 8.2ನ್ನು ಗಮನಿಸಿ) | 23.102 | 39 93 21 784 | | 33 88 98 126 | | 19 32 53 915 | |
| c) | ಹು.ವಿ.ಸ.ಕಂ | 23.103 | 213 09 70 811 | | 117 08 68 799 | | 93 35 67 037 | |
| d) | ಗು.ವಿ.ಸ.ಕಂ | 23.104 | 137 84 63 506 | | 22 71 00 241 | | 20 60 52 699 | |
| e) | ಚಾ.ವಿ.ಸ.ಕಂ | 23.107 | 97 13 82 163 | | 65 14 95 763 | | 59 26 27 919 | |
| f) | ಪ್ರಸರಣ ಶುಲ್ಕ ಮತ್ತು ಮುಕ್ತ ಅವಕಾಶದ ವ್ಯವಸ್ಥೆ ನಿರ್ವಹಣಾ ಶುಲ್ಕಗಳಿಗೆ ವ್ಯವಹಾರದ ಸ್ವೀಕೃತಿಗಳ | 23.146 | | | 6 23 42 073 | | 1 35 66 165 | |
| 2 | **ಅಂತರ್‌ರಾಜ್ಯ ವಿದ್ಯುತ್ ಮಾರಾಟ ಬಾಕಿದಾರರು** | 23.6 | 13 27 208 | | 13 27 208 | | 13 27 208 | |
| | **ಉಪ ಮೊತ್ತ** | | | **585 56 57 110** | | **323 23 31 708** | | **195 30 12 290** |
| 3 | ವ್ಯವಹಾರ ಸ್ವೀಕೃತಿಗಳು ವಿದ್ಯುತ್ ಸಾಗಾಣಿಕೆ ಶುಲ್ಕ-ಇತರೆ ರಾಜ್ಯಗಳು (ಟಿಪ್ಪಣಿ 26.1 ಮತ್ತು. 8.3(ಎ) ಮತ್ತು 8.3(ಬಿ)ನ್ನು ಗಮನಿಸಿ)) | 28.12 | | 145 29 08 293 | | 27 77 12 414 | | 23 75 27 554 |
| | **ಮೊತ್ತ** | | | **730 85 65 403** | | **351 00 44 122** | | **219 05 39 844** |

**ಟಿಪ್ಪಣಿ 8.1 : ವ್ಯವಹಾರದ ಸ್ವೀಕೃತಿಗಳು**

| ವಿವರಗಳು | 2016-17 | 2015-16 | 2014-15 |
|---|---|---|---|
| 1) 6 ತಿಂಗಳಿಗೆ ಮೇಲ್ಪಟ್ಟು ಬಾಕಿ ಉಳಿದಿರುವ | 131 55 98 742 | 16 21 84 487 | 12 82 96 486 |
| 2) ಇತರೆ | 599 29 66 661 | 334 78 59 636 | 206 22 43 358 |

**ಟಿಪ್ಪಣಿ** 8.2 : ಬೆಸ್ಕಾಂ ಮತ್ತು ಮೆಸ್ಕಾಂಗಳಿಂದ ಪಡೆಯಬೇಕಾಗಿರುವ ಪ್ರಸರಣ ಶುಲ್ಕದಲ್ಲಿ ಬೆಸ್ಕಾಂ ಮತ್ತು ಮೆಸ್ಕಾಂ ಕಂಪನಿಯವರು ಪ್ರಸರಣ ಶುಲ್ಕವನ್ನು ಕವಿಪ್ರನಿನಿಗೆ ನಿಗಧಿತ ಅವಧಿಯಲ್ಲಿ ಪಾವತಿಸಿದ ಮೊತ್ತಕ್ಕೆ ರಿಯಾಯಿತಿಯನ್ನು ಪ್ರಸರಣ ಶುಲ್ಕದ ಬಿಲ್ಲಿನಲ್ಲಿ ಮೊತ್ತ ರೂ.41,98,15,087/- ಗಳನ್ನು ಕಡಿತ ಮಾಡಿ ಪಾವತಿಸಿದ್ದಾರೆ. ಕವಿಪ್ರನಿನಿಯು ಸದರಿ ರಿಯಾಯಿತಿಯು 2012 ರ ಪ್ರಸರಣ ಒಪ್ಪಂದದ ನಿಯಮಕ್ಕೆ ವಿರುದ್ಧವಾಗಿದೆ ಎಂದು ತಿಳಿಸಿ ಕವಿನಿ ಆಯೋಗದ ಮುಂದೆ ದಾವೆ/ಅರ್ಜಿಯನ್ನು ಸಲ್ಲಿಸಲಾಗಿದೆ. ಬೆಸ್ಕಾಂ ಮತ್ತು ಮೆಸ್ಕಾಂ ಕಂಪನಿಯು ರಿಯಾಯಿತಿಯ ಮೊತ್ತವನ್ನು ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡು ಪ್ರಸರಣ ಶುಲ್ಕದ ಬಿಲ್ಲಿನಲ್ಲಿ ಕಡಿತಗೊಳಿಸುತ್ತಿದೆ. ಸದರಿ ಕಡಿತಗೊಳಿಸಿದ ಮೊತ್ತವನ್ನು ಸ್ವೀಕೃತವಾಗಬೇಕಾದ ಪ್ರಸರಣ ಶುಲ್ಕದ ಮೊತ್ತದಲ್ಲಿ ಒಳಗೊಂಡಿರುತ್ತದೆ. ಕವಿನಿ ಆಯೋಗವು ದರ ಪಟ್ಟಿ ಆದೇಶ ದಿನಾಂಕ:11.04.2017 ರಲ್ಲಿ ರಿಯಾಯಿತಿಯ ಕುರಿತು ಕೆಪಿಟಿಸಿಎಲ್ ಮತ್ತು ಎಸ್ಕಾಂಗಳ ನಡುವೆ ಉಂಟಾದ 2012 ರ ಪ್ರಸರಣ ಒಪ್ಪಂದದನ್ವಯ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ನಿರ್ದೇಶನ ನೀಡಿದೆ ಬೆಸ್ಕಾಂ ಮತ್ತು ಮೆಸ್ಕಾಂಗಳು ಪ್ರಸರಣ ಶುಲ್ಕದಲ್ಲಿ ಕಡಿತ ಮಾಡಿದ ರಿಯಾಯಿತಿ ಮೊತ್ತವನ್ನು ಕವಿಪ್ರನಿನಿಗೆ ಪಾವತಿಸಬೇಕು.

**ಟಿಪ್ಪಣಿ** 8.3(ಎ) : ರೂ.66,29,54,947/- ವೀಲ್ಲಿಂಗ್ ಶುಲ್ಕ ಬಾಕಿ ದಿನಾಂಕ:31.03.2014 ರಂತೆ ಪಿಜಿಸಿಎಲ್ ಒಪ್ಪಂದದನ್ವಯ ಕಂಪನಿಯು ಇತರ ರಾಜ್ಯಗಳ ಪರವಾಗಿ ಎನ್‌ಎಲ್‌ಡಿಸಿ ಯಿಂದ ಪಡೆಯಲು ಅರ್ಹತೆ ಹೊಂದಿರುತ್ತದೆ. ದಿನಾಂಕ:01.04.2014 ರಿಂದ 31.03.2017 ರವರೆಗಿನ ಇತರೆ ರಾಜ್ಯಗಳಿಂದ ಪಡೆಯಬೇಕಾದ ವೀಲ್ಲಿಂಗ್ ಶುಲ್ಕವನ್ನು ಪ್ರಸ್ತುತವಾಗಿ ತಾತ್ಕಾಲಿಕ ಆಧಾರದ ಮೇಲೆ ಲೆಕ್ಕ ಹಾಕಲಾಗಿದೆ. ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗದ ಅನುಪಸ್ಥಿತಿಯಲ್ಲಿ ಕಂಪನಿಯು ಸಿಇಆರ್‌ಸಿ ಗೆ ಅರ್ಜಿಯನ್ನು ಸಲ್ಲಿಸಬೇಕಾಗಿದೆ ಮತ್ತು ಕಂಪನಿಯು ಪಿಜಿಸಿಎಲ್ ನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವುದು ಬಾಕಿ ಇರುವುದರಿಂದ, ವೀಲ್ಲಿಂಗ್ ಶುಲ್ಕವನ್ನು ಇತ್ಯರ್ಥ ಗೊಳಿಸುವ ವಿಧಾನವನ್ನು ಕೂಡ ತಿಳಿಸಲಾಗಿರುವುದಿಲ್ಲ. ಆದ್ದರಿಂದ ಎನ್‌ಎಲ್‌ಡಿಸಿ ಮತ್ತು ಇತರ ರಾಜ್ಯಗಳಿಂದ ವೀಲ್ಲಿಂಗ್ ಶುಲ್ಕದ ಬಾಕಿಯನ್ನು ನಿಖರವಾಗಿ ಬಾಕಿಯಿರುವ ಸ್ವೀಕೃತಿಯೆಂದು ಪರಿಗಣಿಸಲು ಕಷ್ಟ ಸಾಧ್ಯ.

**ಟಿಪ್ಪಣಿ** 8.3(ಬಿ): ವ್ಯವಹಾರ ಸ್ವೀಕೃತಿ ಮೊತ್ತ ರೂ.1,45,29,08,293/- ಗಳಲ್ಲಿ ಟಿಎನ್‌ಇಬಿನಿಂದ ದಿನಾಂಕ:31.03.2011 ರಿಂದ ಬಾಕಿ ಇರುವ ಮೊತ್ತ ರೂ.2,52,87,771/- ವೀಲ್ಲಿಂಗ್ ಶುಲ್ಕವು ಒಳಗೊಂಡಿರುತ್ತದೆ. (ಸದರಿ ವೀಲ್ಲಿಂಗ್ ಶುಲ್ಕವನ್ನು ಪೂಲಿಂಗ್ ಮತ್ತು ಹಂಚಿಕೆ ಆಧಾರದಲ್ಲಿ ಪರಿಗಣಿಸಲಾಗಿದೆ).

## ಟಿಪ್ಪಣಿ 9 : ನಗದು ಮತ್ತು ನಗದಿಗೆ ಸಮಾನವಾದದ್ದು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| I | ನಗದು ಮತ್ತು ನಗದಿಗೆ ಸಮಾನವಾದದ್ದು | | | | | | | |
| 1 | ಕೈಯಲ್ಲಿರುವ ನಗದು | 24.11 | 2 07 494 | | 50 058 | | 4 98 395 | |
| 2 | ಕೈ ಹಣ | 24.21 | 29 75 500 | | 29 09 500 | | 28 29 500 | |
| 3 | ಬ್ಯಾಂಕಿನಲ್ಲಿರುವ ಉಳಿಕೆ (ಟಿಪ್ಪಣಿ. 9.1 ಮತ್ತು. 9.2ನ್ನು ಗಮನಿಸಿ) | | 185 61 43 135 | | 72 85 08 282 | | 82 32 93 102 | |
| II | ಇತರೆ | | | | | | | |
| 1 | ಸರ್ಕಾರಿ ಖಜಾನೆ | 24.85 | 81 976 | | 81 976 | | 81 976 | |
| 2 | ಕೈಯಲ್ಲಿರುವ ಅಂಚೆ ಚೀಟಿಗಳು | 24.12 | 98 330 | | 1 63 002 | | 1 50 552 | |
| 3 | ಚಾಲನೆಯಲ್ಲಿರುವ ನಿಧಿ | 24.5, 24.6 | 10 41 31 000 | | 3 42 74 379 | | 7 79 27 000 | |
| | **ಮೊತ್ತ** | | | **196 36 37 435** | | **76 59 87 197** | | **90 47 80 525** |

**ಟಿಪ್ಪಣಿ** 9.1 : ರೂ.26,19,115/- ಪಿಂಚಣಿ ಭದ್ರತಾ ನಿಧಿ ಮೊತ್ತವು ಹಾಗೂ ರೂ.5,750/- ಕುಟುಂಬ ಹಿತ ನಿಧಿ ಮೊತ್ತವು ಬಾಂಕ್ಯಿನಲ್ಲಿರುವ ಉಳಿಕೆಯಲ್ಲಿ ಒಳಗೊಂಡಿರುತ್ತದೆ.

**ಟಿಪ್ಪಣಿ** 9.2 :ಅಲ್ಪಾವಧಿ ಒಪನ್ ಆಕ್ಸೆಸ್ ಗ್ರಾಹಕರಿಂದ ರೂ.3,74,27,424/-ಗಳನ್ನು ಯುಐ ಚಾರ್ಜಸ್ ಎಂದು ವಸೂಲಾತಿ ಮಾಡಿದ್ದು ಸದರಿ ಮೊತ್ತವನ್ನು ಎಸ್ಕಾಂ ಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಬಾಕಿ ಇದ್ದು ಸದರಿ ಮೊತ್ತವು ಬ್ಯಾಂಕ್ ಉಳಿಕೆಗಳಲ್ಲಿ ಒಳಗೊಂಡಿರುತ್ತದೆ.

## ಟಿಪ್ಪಣಿ 10 : ಇತರೆ ಬ್ಯಾಂಕ್ ಉಳಿಕೆಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| 1 | 3 ತಿಂಗಳ ಗಡುವಿನ ಮೇಲ್ಪಟ್ಟ ಠೇವಣಿಗಳು | 20.280 | 2 35 80 058<br>24.882 | | 2 00 56 439 | | 3 21 70 813 | |
| 2 | ನೌಕರರ ಕಲ್ಯಾಣ ನಿಧಿ (ಟಿಪ್ಪಣಿ 10.1 ನ್ನು ಗಮನಿಸಿ) | | 77 69 25 156 | | 70 65 86 821 | | 60 05 33 905 | |
| | **ಮೊತ್ತ** | | | **80 05 05 215** | | **72 66 43 260** | | **63 27 04 718** |

**ಟಿಪ್ಪಣಿ 10.1 : ಕುಟುಂಬ ಹಿತ ನಿಧಿ ಮತ್ತು ಪಿಂಚಣಿ ಭದ್ರತಾ ನಿಧಿಯ ವಿವರಗಳು**

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| 1 | ಕುಟುಂಬ ಹಿತ ನಿಧಿ | 44.143 | | 63 62 84 334 | | 58 17 09 864 | | 51 66 89 108 |
| 2 | ಪಿಂಚಣಿ ಭದ್ರತಾ ನಿಧಿ | 46.103 | | 12 36 00 000 | | 10 79 00 000 | | 8 38 44 797 |
| 3. | ಮೇಲ್ಕಂಡ ನಿಧಿಗಳ ಮೇಲಿನ ಸಂಚಿತ ಬಡ್ಡಿ | | 20.280, 28.210 | | 1 70 40 822 | | 1 69 76 957 | |
| | **ಮೊತ್ತ** | | | **77 69 25 156** | | **70 65 86 821** | | **60 05 33 905** |

## ಟಿಪ್ಪಣಿ 11 : ಸಾಲಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| | **ನಗದಾಗಿ/ಇತರೆ ನಮೂನೆಯಲ್ಲಿ ವಸೂಲಿ ಮಾಡಬಹುದಾದ ಮುಂಗಡಗಳು** | | | | | | | |
| 1 | **ಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು** | | | | | | | |
| | ಸಿಬ್ಬಂದಿಗೆ ಮುಂಗಡ-ಬಡ್ಡಿ ಸಹಿತ | 27.101 to 27.106 | 23 434 | | 43 800 | | 68 400 | |
| 2 | **ಅಸುರಕ್ಷಿತ ಉತ್ತಮವಾದುದೆಂದು ಮಾನ್ಯ ಮಾಡಿದ್ದು** | | | | | | | |
| | a) ಸಿಬ್ಬಂದಿಗೆ ಮುಂಗಡ -ಬಡ್ಡಿ ರಹಿತ | 27.201 to 27.210 | 2 45 73 104 | | 3 60 63 753 | | 2 70 47 763 | |
| | b) ಕವಿಪ್ರನಿನಿಯಿಂದ ಸರಬರಾಜು ದಾರರು/ಗುತ್ತಿಗೆದಾರರ ಪರವಾಗಿ ಪಾವತಿಸಲಾದ ತೆರಿಗೆ ಬಾಬ್ತಿಗಾಗಿ ವಸೂಲಿ ಮಾಡಬೇಕಾದ ಮೊತ್ತ | 25.502 | 91 64 515 | | 93 49 169 | | 86 44 138 | |
| | **ಮೊತ್ತ** | | | **3 37 61 053** | | **4 54 56 722** | | **3 57 60 301** |

## ಟಿಪ್ಪಣಿ 12 : ಇತರೆ ಪ್ರಸಕ್ತ ಆರ್ಥಿಕ ಆಸ್ತಿಗಳು

(ಮೊಬಲಗು ರೂಗಳಲ್ಲಿ)

| ಕ್ರ. ಸಂ | ವಿವರಗಳು | ಲೆಕ್ಕ ಸಂಕೇತ | 31 ಮಾರ್ಚ್ 2017 ರಂದು ಇದ್ದಂತೆ | | 31 ಮಾರ್ಚ್ 2016 ರಂದು ಇದ್ದಂತೆ | | 01 ಏಪ್ರಿಲ್ 2015 ರಂದು ಇದ್ದಂತೆ | |
|---|---|---|---|---|---|---|---|---|
| 1 | ಪ್ರಾಪ್ತವಾದ ಆದರೆ ಬಾಕಿ ಇರದ ಆದಾಯ-ನಿಧಿಯ ಹೂಡಿಕೆಗಳನ್ನು ಹೊರತುಪಡಿಸಿ | 28.3 | 24 03 972 | | 24 62 081 | | 25 40 962 | |
| 2 | ಸಿಬ್ಬಂದಿಯಿಂದ ವಸೂಲಾಗ ಬೇಕಾದ ಹಣ | 28.4 | 65 47 708 | | 59 13 571 | | 70 61 803 | |
| 3 | ಇತರೆ ಸ್ವೀಕೃತಿಗಳು – ಬೆ.ವಿ.ಸ.ಕಂ | 28.8 & 28.9, 28.125,28.926 | 47 98 44 002 | | 39 25 91 926 | | 40 65 71 124 | |
| 4 | ಇತರೆ ಸ್ವೀಕೃತಿಗಳು– ಮ.ವಿ.ಸ.ಕಂ | 28.8 & 28.9, 28.126 | 18 79 29 391 | | 17 00 78 023 | | 18 26 33 571 | |
| 5 | ಇತರೆ ಸ್ವೀಕೃತಿಗಳು– ಹು.ವಿ.ಸ.ಕಂ | 28.8 & 28.9, 28.127 | 32 22 88 121 | | 24 04 51 221 | | 21 96 43 780 | |
| 6 | ಇತರೆ ಸ್ವೀಕೃತಿಗಳು– ಗು.ವಿ.ಸ.ಕಂ | 28.8 & 28.9, 28.128 | 37 52 76 244 | | 35 93 96 224 | | 31 63 44 597 | |
| 7 | ಇತರೆ ಸ್ವೀಕೃತಿಗಳು– ಚಾ.ವಿ.ಸ.ಕಂ | 28.9 | 17 29 09 497 | | 15 63 49 185 | | 12 35 39 417 | |
| 8 | ಕ್ರೋಢೀಕೃತ ಸಾಲ ಖಾತೆ | 53.999 | | | 8 61 900 | | 17 25 000 | |
